# ಅಪರಂಜಿ

ತಿಳಿನಗೆಯ ಕಾರಂಜಿ

ಅಕ್ಟೋಬರ್ 2023

## ಅಪರಂಜಿಗೆ "ಚಾಲೀ(ಳೀ)ಸು!



ಬಿಡಿ ಪ್ರತಿ: ರೂ. 30/–

TEMPLE OF KNOWLEDGE

# ಪುಸ್ತಕವಿಲ್ಲದ ಕೋಣೆ ಆತ್ಮವಿಲ್ಲದ ದೇಹವಿದ್ದಂತೆ

ಬೀChiಯವರ ವಿಡಂಬನೆ ಹಾಸ್ಯದ ಮೂಲಕ ಮೌಲ್ಯಗಳು ಬೆಳೆಯುತ್ತದೆ ಹಾಗೂ ಬೀChi ಅವರ ಪುಸ್ತಕಗಳು ಪ್ರೇರಣೆ, ಸ್ಫೂರ್ತಿ ಮತ್ತು ಮನರಂಜನೆಯಿಂದ ತುಂಬಿವೆ ಸಕಾರಾತ್ಮಕ ಪರಿಣಾಮ ಬೀರುತ್ತದೆ.

**50 ಪುಸ್ತಕಗಳ ಪ್ಯಾಕ್**

ನಿಮಗಾಗಿ ಮತ್ತು ಇತರರಿಗೆ ಉಡುಗೊರೆಯಾಗಿ ನೀಡಲು ಈ ಅದ್ಭುತ ಪುಸ್ತಕಗಳ ಸಂಗ್ರಹವನ್ನು ಖರೀದಿಸಿ ಆಸಕ್ತ ಓದುಗರು, ಶಾಲೆಗಳು, ಕಾಲೇಜುಗಳು, ಕಾರ್ಪೊರೇಟ್‌ಗಳು, ವಿಶ್ವವಿದ್ಯಾನಿಲಯಗಳು ಮತ್ತು ಓದಲು ಆಸಕ್ತಿ ಹೊಂದಿರುವ ಇತರ ಸಂಸ್ಥೆಗಳಿಗೆ ಇದನ್ನು ಹಂಚಿಕೊಳ್ಳಿ. ಪುಸ್ತಕಗಳು ನಿಮ್ಮ ಮನೆ ಸೇರಲಿ ಹಾಗೂ ಬಂಧುಗಳಿಗೆ, ಸ್ನೇಹಿತರಿಗೆ ಕಾಣಿಕೆಯಾಗಿ ಎಲ್ಲಾ ಸಮಾರಂಭಕ್ಕೂ ಪುಸ್ತಕಗಳು ಉಡುಗೊರೆಯಾಗಿ ಕೊಡಬಹುದು.


**ಬೆಲೆ ರೂ7592 after discount ರೂ 6799 ಪ್ರತಿಗಳನ್ನು ಪಡೆಯಲು ಸಂಪರ್ಕಿಸಿ**

Pay 9845264304

**ಆಸಕ್ತರು ಸಂಪರ್ಕಿಸಿ : 080–29731414 ಮೊ : 9035302302**

## BEECHI PRAKASHANA

## ಬೀchi ಪ್ರಕಾಶನ,



### BOOKS AVAILABLE

- Kannada Books
- Banking Exam Books
- Biographies
- Business & Economics
- Children & Young Adult Books
- Comics
- Competitive Exam Books
- Engineering Entrance Exam
- Fiction & Non-Fiction Books
- Office Stationery
- ಕನ್ನಡ ಪುಸ್ತಕಗಳು
- Health & Family
- Humour
- Law
- Literature
- Medical Entrance
- Politics
- Reference Books
- Religion & Spirituality
- Romance
- Other Books

Email : admin@beechi.in | www.beechi.in | 9845264304

# Ravi Graphics
OFFSET PRINTERS

*Bringing colours alive*

*What we specialize into :*

- Books
- Brochures
- Catelogues
- Boxes
- Mono Cartons



53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com

Bag is everything

# bag factory
bagfactory.co.in

## Our Promise

- 100% recyclable paper bags & pouches
- Pan-India delivery
- Premium customisation for high-street brands




Reach us for your paper bag requirements

+91 89719 95599 | sales@bagfactory.co.in | bagfactory.co.in

Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2021-2023
**RNI NO. KAR-KAN/2005/15457**

www.mallige.com

NABH ACCREDITED · PATIENT SAFETY & QUALITY OF CARE

Certificate No.: MC-2068




Established in 1978 we are a multi-speciality, tertiary care hospital.

**CARING**
AND
**HEALING**

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor : M. SHIVAKUMAR
No. of Pages : 160+4 APARANJI KANNADA MONTHLY.

## ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 30/–
ವಾರ್ಷಿಕ ಚಂದಾ : ರೂ. 100/–
ಹತ್ತು ವರ್ಷದ ಚಂದಾ: ರೂ. 750/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 41
ಸಂಚಿಕೆ – 01
ಅಕ್ಟೋಬರ್–2023

## ಈ ಸಂಚಿಕೆಯಲ್ಲಿ...


| | | |
|---|---|---|
| ಮೊದಲ ಮಾತು | ಶಿವಕುಮಾರ್ | 3 |
| ಕಿಡಿ | ಪ್ರಕಾಶ್ | 4 |
| ನಮ್ಮನಮ್ಮಲ್ಲಿ | ಶಿವಕುಮಾರ್ | 5 |
| ಓ. ಎಂ. ಜಿ | ಲತಾ ಹೆಗಡೆ, ಹುಬ್ಬಳ್ಳಿ | 7 |
| ಎಣ್ಣೆ ಮಜ್ಜನವೂ........ | ಜಯಶ್ರೀ ದೇಶಪಾಂಡೆ | 10 |
| ಕಾಲೇಜ್ ರೀ ಯೂನಿಯನ್ | ನಂದಿನಿ ಕಾಪಡಿ, ಗೋವಾ | 13 |
| ನೀರ ಸಾಗರದಲ್ಲಿ...... | ಕವಿತ ಹೆಗಡೆ ಅಭಯಂ, ಹುಬ್ಬಳ್ಳಿ | 18 |
| ಸ್ನೇಹ ಸೌಭಾಗ್ಯ | ಎಂ. ಶಿವಕುಮಾರ್ | 22 |
| ಆಣಕುಗೀತೆ | ಎಚ್. ಡುಂಡಿರಾಜ್ | 29 |
| ಮುಗಿಲುಹಳ್ಳಿಯಲ್ಲಿ | ಅ.ರಾ.ಸೇ | 30 |
| ದೆಗಡಿಯಿದ್ದ ಬದ್ದಾದ | ಶ್ರೀವತ್ಸ ಜೋಶಿ, ಅಮೆರಿಕ | 33 |
| ಚಂದ್ರಯಾನ | ವ್ಯಂಗ್ಯಚಿತ್ರ | 38 |
| ಒಂದು ಪ್ರಲಾಪ | ಸಿ. ಆರ್. ಸತ್ಯ | 40 |
| ಗಾಳಕ್ಕೆ ಸಿಗದ | ಸುಮಾ ರಮೇಶ್ ಹಾಸನ | 42 |
| ಸಾಲಿಗ್ರಾಮ ಸ್ಪರ್ಶ | ಎಚ್. ಗೋಪಾಲಕೃಷ್ಣ | 45 |
| ಸಾಮರಸ್ಯ | ಟಿ.ಜಿ. ಪುಷ್ಪಲತ, ಶಂಕರಘಟ್ಟ | 49 |
| ಮಾರ್ಗದರ್ಶನದ | ಸಂಜಯ ಹಾವನೂರ, ಅಮೆರಿಕ | 55 |


ವ್ಯಂಗ್ಯ ಚಿತ್ರಗಳು : ಹೊರಪುಟ : ನಾಗನಾಥ್.
ಒಳಪುಟಗಳು : ಅಶೋಕ್ ಹೆಮ್ಮಿಗೆ, ನಾಗನಾಥ್, ರಘುಪತಿ ಶೃಂಗೇರಿ, ಮಂಜುನಾಥ್, ಆದರ್ಶ ಪೈ,

*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,*
*ಬೆಂಗಳೂರು – 560 003,* email: koravanjiaparanji@gmail.com ಮೊಬೈಲ್:9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560 068. ದೂರವಾಣಿ: 080–26688488.email:belururamamurthy@gmail.com

**For Online payment of ubscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ*



| | | |
|---|---|---|
| ನಕ್ಕು ನಲಿಸಿದ ಹಾಸ್ಯ ಚರ್ಕವರ್ತಿ | ಎಸ್. ಎಸ್. ಶ್ರೀಧರ ಮೂರ್ತಿ | 59 |
| ಕಲ್ಲಾಕೃತಿ | ಚಿತ್ರಾ ರಾಮಚಂದ್ರನ್ | 63 |
| ತರತರದ ಉಪಚಾರ | ಎಚ್. ಡುಂಡಿರಾಜ್ | 66 |
| ಬುದ್ಧಿವಂತರಿಗೆ | ಗೌತಮ | 70 |
| ಲಕ್ಷ್ಮಣ್ ಕಾರ್ಟೂನ್ಸ್ | | 72 |
| ಲಂಚ ಬ್ರೇಕ | ಬೇಲೂರು ರಾಮಮೂರ್ತಿ | 74 |
| ಮೇಘಾ ಲೋಕ | ಅಣಕು ರಾಮನಾಥ್ | 80 |
| ಹಕ್ಕಿ ಕಳ್ಳ ಹೊಕ್ಕಿ ಹೋದ್ನಾ | ವೈ.ಎನ್. ಗುಂಡೂರಾವ್ | 85 |
| ಪಕೋಡ ತಂದ ಭೀತಿ | ಡಾ. ಡಿ.ವಿ. ಗುರುಪ್ರಸಾದ್ | 89 |
| ಪೊರೆ ಕಳಚಿದಾಗ | ವಸುಮತಿ ಉಡುಪ, ಮೈಸೂರು | 92 |
| ಯಜಮಾನಂ ಭವತಿ | ಗಣೇಶ ಹೆಗಡೆ, ಮೈಸೂರು | 94 |
| ವ್ಯಂಗ್ಯಚಿತ್ರ ಗ್ಯಾಲರಿ | ಎಚ್. ಬಿ ಮಂಜುನಾಥ್ | 97 |
| ದಾರಿ ಯಾವುದಯ್ಯ | ಸಂಪಟೂರು ವಿಶ್ವನಾಥ್ | 98 |
| ಪರಿಹಾರವೇ ಸಮಸ್ಯೆಯಾದಾಗ | ಜಿ.ವಿ. ಅರುಣ | 101 |
| ಬದಲಾಗದ ಭಾಗ್ಯ | ಗಣೇಶ್. ಎಸ್. ಹೆಗಡೆ, ಶಿರಸಿ | 104 |
| ಸವಿನೆನಪಿನಲ್ಲೊಂದು | ಧಾರಿಣಿ ಮಾಯಾ | 108 |
| ಪಾದುಕಾ ಪುರಾಣ | ರಾಜೇಶ್ವರಿ ಹುಲ್ಲೇನಹಳ್ಳಿ | 111 |
| ಸಂದರ್ಶನ | ಡಾ. ಎ. ಭಾನು | 114 |
| ಮಹಿಳೆಯರ | ಇ.ಆರ್. ರಾಮಚಂದ್ರನ್,ಮೈಸೂರು | 116 |
| ದೊಡ್ಡವನಾದ ಮೇಲೆ | ಸಹನ ಪ್ರಸಾದ್ | 120 |
| ಪ್ರಾಣ ತಿನ್ನುವ..... | ಸೂರ್ಯನಾರಾಯಣ ಕೆದಿಲಾಯ | 122 |
| ವೀಕೆಂಡ್ ವಿಥ್ | ಕುಮುದಾ ಪುರುಷೋತ್ತಮ್ | 124 |
| ತುಂತುರು | ದಂನಆ | 127 |
| ಚಹಾ ಪುರಾಣ | ಗುಂಡೂರಾವ್ ದೇಸಾಯಿ ಮಸ್ಕಿ | 128 |
| ಎಂಕ್ಟನ ಯಶೋಗಾಥೆ | ಅರವಿಂದ ಜಿ. ಜೋಷಿ, ಮೈಸೂರು | 134 |
| ಒಡೆದ ಹಾಲು | ಸುಚಿತ್ರ ಹೆಗಡೆ, ಮೈಸೂರು | 137 |
| ಬಿಟ್ಟಿ ಭಾಗ್ಯದ | ಡಾ. ಸಿ.ಕೆ. ರೇಣುಕಾರ್ಯ, ಮೈಸೂರು | 139 |
| ಯಾರ ಹೋಲಿಕೆ | ನ. ರತ್ನ | 141 |
| ಜಡೆ ಎಳೆಯೋ | ಮಂಗಳ ಎಂ. ನಾಡಿಗ್ | 143 |
| ಅಬ್ಬಬ ಅಬ್ಬಬ | ಸುಮನಾ | 147 |
| ಬಾರಾ ಜಿಗಿದು ಬಾರಾ | ನಳಿನಿ ಟಿ. ಭೀಮಪ್ಪ, ಧಾರವಾಡ | 150 |
| ಮುಸುಕಿದೀ ಮಬ್ಬಿನಲ | ತುರುವೇಕೆರೆ ಪ್ರಸಾದ್ | 152 |




# ಮೊದಲ ಮಾತು

ಅಪರಂಜಿ ಕನ್ನಡದ ನಗೆರಸಿಕರನ್ನು ರಂಜಿಸುತ್ತಾ ನಾಲ್ಕು ದಶಕಗಳನ್ನು ಪೂರೈಸಿರುವ ಈ ಶುಭ ಮುಹೂರ್ತವನ್ನು ಸಂಭ್ರಮಿಸಲು ಹೊರತಂದಿರುವ ವಿಶೇಷ ಸಂಚಿಕೆ ನಿಮ್ಮ ಕೈಲಿದೆ. ಈ ಸಂಚಿಕೆಯ ತಯಾರಿಯಲ್ಲಿ ಲೇಖನಗಳನ್ನು ನೀಡಿ ಸಹಕರಿಸಿದ ಎಲ್ಲ ಬರಹಗಾರ ಬರಹಗಾರ್ತಿಯರಿಗೂ ಅಪರಂಜಿ ಆಭಾರಿ. ಅಂತೆಯೇ ಬಹು ಮುತುವರ್ಜಿಯಿಂದ ಅಕ್ಷರ ಜೋಡಣೆ ಮಾಡಿದ ಶ್ರೀ ರವಿಕುಮಾರ್ ಮತ್ತು ಅಚ್ಚುಕಟ್ಟಾಗಿ ಮುದ್ರಿಸಿರುವ ಶ್ರೀ ಭರತ್ ಅವರಿಗೆ ತುಂಬು ಹೃದಯದ ನಮನಗಳು. ಈ ವರ್ಷ ಈ ನಾಡು ಕಂಡ ಕನ್ನಡದ ಅಪ್ರತಿಮ ಹಾಸ್ಯ ನಟ **ಶ್ರೀ ನರಸಿಂಹರಾಜು** ಅವರ **ಜನ್ಮ ಶತಮಾನೋತ್ಸವ.** ಅವರ ಕುರಿತು ಒಂದು ಲೇಖನ ಬರೆದುಕೊಟ್ಟ ಶ್ರೀ **ಎನ್.ಎಸ್. ಶ್ರೀಧರಮೂರ್ತಿ** ಅವರಿಗೂ ಅಪರಂಜಿ ಆಭಾರಿ.

**ಅಕ್ಟೋಬರ್ ಏಳನೇ ತಾರೀಖು** ನಾವು ಹಮ್ಮಿಕೊಂಡಿರುವ **ಅಪರಂಜಿ 40ರ ಸಂಭ್ರಮಕ್ಕೆ** ಮತ್ತು ಅಪರಂಜಿ ಪತ್ರಿಕೆಗೆ ಜಾಹೀರಾತು ನೀಡಿ ಪೋಷಿಸಿಕೊಂಡು ಬಂದಿರುವ ಎಲ್ಲ ಜಾಹೀರಾತುದಾರರಿಗೂ ಮತ್ತು ಮುಕ್ತ ಮನಸಿನಿಂದ ದೇಣಿಗೆ ನೀಡಿರುವ ಎಲ್ಲ ಹಿತೈಷಿಗಳಿಗೂ ಆದರದ ಪ್ರಣಾಮಗಳು.

**–ಎಂ. ಶಿವಕುಮಾರ್**
ಸಂಪಾದಕರು





# ಅಪರಂಜಿ ಕಿಡಿ

● ಪ್ರಕಾಶ್

ಪಿ. ಓ. ಪಿ ಗಣೇಶ ಉಪಯೋಗಿಸಿದರೆ ಶಿಕ್ಷೆ !

ಪಾಪ ಗಣೇಶ !!

***

ರಾಜಕಾರಣಿಗಳಿಗೆ ವಿಶ್ವೇಶ್ವರಯ್ಯ ಮಾದರಿ

ಹೇಳಿಕೆ

ಅಜ–ಗಜಾಂತರ ಎಂದರೆ ಏನು ಅಂತ ಈಗ ಅರ್ಥವಾಯಿತು !!

***

"ಸನಾತನ" ಅಂತ ಹೇಳಲು ಯಾಕೋ ಒಂದು ಥರ ಭಯ ಆಗುತ್ತೆ !!

***

ಕಾರುಗಳಲ್ಲಿ, ಆರು ಏರ್‌ಬ್ಯಾಗ್ ನಿಯಮ ಕಡ್ಡಾಯವಿಲ್ಲ

ಮಾನ್ಯ ನಿತಿನ್ ಗಡ್ಕರಿ

ಯಮ –ಕಿಂಕರರು ನಸುನಕ್ಕರಂತೆ !

***

"ಭವ್ಯ ಭಾರತ ನಿರ್ಮಾಣಕ್ಕೆ ವಿದ್ಯಾರ್ಥಿಗಳ ಪಾತ್ರ ಮಹತ್ವದ್ದು"

ಹೇಳಿಕೆ

ನಮಗೂ ಹಾಗೇ ಅನ್ನಿಸುತ್ತೆ ಅಂತ ಅಪರಂಜಿ ತಲೆದೂಗಿದಳಂತೆ!!

***

ವಯೋ–ಮಿತಿ ಎಂಬದನ್ನೇ ಅರಿಯದ ರೋಹನ್ ಬೋಪಣ್ಣ ಅವರಿಗೆ

ಅಪರಂಜಿ ಅಭಿನಂದನೆಗಳು !!

***

ಹಿಂದಿ ಸಿನೆಮಾಗಳಲ್ಲಿ ಇನ್ನು ಮುಂದೆ "ಚಾಂದ್" ಅಂತ ಹಾಡುಗಳೆಲ್ಲ

ಇರುಲ್ಲ ಅಂತ, ಅಪರಂಜಿ ವ್ಯಥೆ ಪಟ್ಟಳಂತೆ

***

■

# "ನಮ್ಮ ನಿಮ್ಮಲ್ಲಿ"

ಎಂ. ಶಿವಕುಮಾರ್

"ಬನ್ನಿ, ಬನ್ನಿ. ನಮ್ಮ ಬರಹಗಾರ, ಬರಹಗಾರ್ತಿಯರು ಸೃಷ್ಟಿಸಿರುವ ಈ ಮಾಯಾ ಲೋಕಕ್ಕೆ ಸ್ವಾಗತ, ಸುಸ್ವಾಗತ."

"ಏನ್ಸಾರ್ ಇದೂ, ಈ ವಿಶಾಲವಾದ ಹುಲ್ಲುಗಾವಲು, ಅಲ್ಲಲ್ಲೇ ಪುಟ್ಟ ಪುಟ್ಟ ಕಾಟೇಜುಗಳು, ಏನಿವೆಲ್ಲಾ?"

"ಈಗ ತಾನೇ ಹೇಳಿದ್ನಲ್ಲ. ಮಾಯಾಲೋಕ. ನಿಮ್ಮ ಮನರಂಜನೆಗೆ ಅಂತ ನಮ್ಮ ಬಳಗದೋರು ಸೃಷ್ಟಿಸಿರೋದು. ಬನ್ನಿ ಒಂದೊಂದಾಗಿ ಹಲವನ್ನ ತೋರಿಸ್ತೇನೆ. ಆದರೆ ಒಂದು ಕಂಡೀಷನ್. ನಿಮ್ಮ ಪ್ರಶ್ನೆಗಳನ್ನೆಲ್ಲಾ ನಾನು ಉತ್ತರಿಸೋಕ್ಕೆ ಟೈಮಿಲ್ಲ. ಆಮೇಲೆ ನಿಧಾನವಾಗಿ ನೀವೇ ಬಂದು ಎಲ್ಲಾನೂ ಕೂಲಂಕುಷವಾಗಿ ನೋಡಿ ಅರ್ಥಮಾಡಿಕೋಬೇಕು. ಆಯ್ತಾ?

ಇಲ್ಲಿ ನೋಡಿ ಈ ಕೆಂಪು ಹೆಂಚಿನ ಕಾಟೇಜು. ಅದರ ಮುಂದೆ ಒಂದು ದೊಡ್ಡ ಕಟೌಟ್ ಇದೆಯಲ್ಲಾ ಅದು ಯಾರದ್ದೂ ಗೊತ್ತೇ?"

"ಇದೇನ್ಸಾರ್ ಹೀಗೆ ಕೇಳ್ತೀರಾ? ಕಳೆದ ಶತಮಾನದ ಖ್ಯಾತ ಹಾಸ್ಯ ನಟ ನರಸಿಂಹರಾಜು ಅಲ್ಲವೇ ಅವರು?"

"ಕರೆಕ್ಟ್. ನಕ್ಕು ನಲಿಸಿದ ಹಾಸ್ಯ ಚಕ್ರವರ್ತಿ ಅವರು. ಅವರ ಜೀವನದ ಅನೇಕ ಸ್ವಾರಸ್ಯಕರ ಮಾಹಿತಿ ಇಲ್ಲಿ ದೊರಕುತ್ತೆ"

"ಒಳಗೆ ಹೋಗೋಣವೇ?"

"ರೀ , ಮೊದಲೇ ಹೇಳಿದ್ನಲ್ಲ. ಇದು ಕ್ವಿಕ್ ಟೂರು. ಆಮೇಲೆ ನಿಧಾನವಾಗಿ ನೀವೇ ಬಂದು ಎಲ್ಲ ಸ್ವಾದಿಸಬಹುದು. ಈಗ ಈ ಕಾಟೇಜು ನೋಡಿ"

"ಸಾರ್ ಕಾಟೇಜಿನ ವೆರಾಂಡಾದಲ್ಲಿ ಯಾರೋ ಕೂತಿದಾರಲ್ಲ. ಮುಖಕ್ಕೆ ಮಾಸ್ಕು. ಪಕ್ಕದಲ್ಲಿ ಒಂದು ದೊಡ್ಡ ಸ್ಯಾನಿಟೈಸರ್ ಬಾಟಲ್ಲು. ಡ್ರೆಸ್  ನೋಡಿದ್ರೆ ಪೋಲೀಸ್‌ನೋರ ತರಾ ಕಾಣುತ್ತೆ "

"ಹೌದ್ರಿ. ಕರೋನಾಗೆ ಹೆದರಿಬಿಟ್ಟಿದ್ದಾರೆ. ಮೂರು ತಿಂಗಳಿಂದ ಹೊರಕ್ಕೇ ಕಾಲಿಡ್ತಾಯಿಲ್ಲ ಆಸಾಮಿ.  ಅವರನ್ನ ಆಮೇಲೆ ವಿಚಾರಿಸ್ಕೊಳ್ಳೋರಂತೆ. ಮುಂದೆ ನಡೀರಿ. ಅರೆ, ಯಾರೋ ಹೆಣ್ಮಗಳು ಗಾಬರಿಯಿಂದ ಓಡ್ಬರ್ತಿದಾಳೆ. ಏನಮ್ಮಾ ತಾಯಿ?  ಯಾಕೆ? ಏನಾಯ್ತು?"

"ಯಾವುದೋ ಚೇತನ ವರಾಂಡಾದಿಂದ ಒಳಕ್ಕೆ ಓಡಿತು. ಫ್ರಾಕ್ಷನ್ ಆಫ್ ಎ ಸೆಕೆಂಡ್‌ನಲ್ಲಿ. ಹಾವಿನಷ್ಟು...."

"ಆಕೇನ ಆಮೇಲೆ ವಿಚಾರಿಸಿಕೊಂಡು ಸಾಂತ್ವನ ಹೇಳುವಿರಂತೆ. ಮುಂದೆ ನಡೀರಿ"



"ಸಾರ್ ಈ ಕಾಟೇಜಿನಲ್ಲಿ ಒಬ್ಬ ಮಧ್ಯವಯಸ್ಕ. ಏನೋ ಯೋಚನೆಯಿಂದ ಪರದಾಡ್ತಾ ಇದ್ದಾನೆ. ಯಾಕಪ್ಪಾ ಗಾಬರಿ? ಏನು ಬೇಕಾಗಿತ್ತು?"

" ಸಾರ್ ಉಪ್ಪೂ, ಉಪ್ಪೂ, ಸ್ವಲ್ಪವೇ ಸ್ವಲ್ಪ ಆದ್ರೂ ಸಾಕು. ಉಪ್ಪು ಮಾತ್ರ ಬೇಕೇ

ಬೇಕು"

"ಇದೆಲ್ಲೋ ಸ್ಕ್ರೂ ಲೂಸ್ ಕೇಸು. ಮುಂದೆ ಹೋಗೋಣ"

"ಸಾರ್ ಅಲ್ನೋಡಿ ಆ ಕಲ್‌ಬೆಂಚ್ ಮೇಲೆ ಯಾರೋ ಈ ಬಿಸಿಲಿನಲ್ಲೂ ಶಾಲು ಹೊದ್ಗೊಂಡು ಕೂತಿದ್ದಾರೆ. ಹತ್ರ ಹೋಗೋಣ್ವೇ?"

"ಅವರು ನಮ್ಮ ರೆಸಿಡೆಂಟ್ ಫಿಲಾಸಫರ್ ಕಣ್ರೀ."

"ಸಾರ್ ಅವರ ಹತ್ರ ಹೋದ್ರೆ, ಅವರು" ದಿ ಗ್ರೇಟೆಸ್ಟ್ ಸೋರ್ಸ್ ಆಫ್ ಹ್ಯಾಪಿನೆಸ್ ....ಅಂತ ಹೇಳಿ ಸುಮ್ಮನಾಗಿಬಿಟ್ರು. "

"ಅವರು ಸ್ವಲ್ಪ ಹಾಗೇರಿ. ಸಸ್ಪೆನ್ಸ್ ಕ್ರಿಯೇಟ್ ಮಾಡ್ತಾರೆ. ಆಮೇಲೆ ಅವರ ಹತ್ರ ಬೇಕಾದ್ರೆ ಮಾತಾಡಿ"

"ಇದ್ಯಾರು ಸಾರ್. ಈ ಯುವತಿ? ಅಷ್ಟು ಸ್ಮಾರ್ಟಾಗಿ ಡ್ರೆಸ್ ಮಾಡ್ಕೊಂಡು ಯಾವುದೋ ಪುಸ್ತಕ ಓದ್ತಾ ವಾಕ್ ಮಾಡ್ತಾ ಇದಾರೆ?"

"ನೀವೇ ಕೇಳ್ರಿ"

"ಯಾರಮ್ಮಾ ನೀವು?"

"ನಾನೊಬ್ಬಳು ಹನಿಗವನ ಕವಯಿತ್ರಿ. ಈಗ ತಾನೇ ಒಂದು ಕವಿತೆ ಬರೆದೆ.

ಕೇಳಿತು ಮರಿಯನ್ನ ಅಮ್ಮ ಸೊಳ್ಳೆ,<br>
ಹೇಗಿತ್ತು ನಿನ್ನ ಹಾರಾಟ<br>
ಹಾಡಿನ ಜೊತೆಯ ತಿರುಗಾಟ<br>
ಮುದ್ದಾಗಿ ನುಡೀತು ಮರಿಸೊಳ್ಳೆ<br>
ಆಯ್ತೆಲ್ಲರಿಗೂ ನನ್ನ ಸಂಗೀತ ಇಷ್ಟ<br>
ಹೊಡೀತಿದ್ರು ಜನ ಚಪ್ಪಾಳೆ.....ಹೇಗಿದೆ?"

"ಸಾರ್ ಇದೇನ್ ವಿಚಿತ್ರ ಎಲ್ಲಾ ಕಡೆ ಬಿಸಿಲಿದ್ರೂ ಆ ಮರದ ಆಸುಪಾಸು ಮೋಡ ತುಂಬ್ಕೊಂಡ್ ಇದೆಯಲ್ಲಾ. ಊಟಿ ಕೂನೂರುಗಳಲ್ಲಿ ಮೋಡ ನೆಲದ ಮೇಲೆ ಬರೋದನ್ನ ನೋಡಿದ್ದೆ. ಇಲ್ಲೂ ಸಹಾ ಕಪ್ಪು ಬಿಳಿ ಮೋಡಗಳು ನರ್ತನ ಮಾಡ್ತಾ ಇವೆಯಲ್ಲಾ. "

"ಅದೇರೀ ಈ ಮಾಯಾಲೋಕದ ಸ್ವಾರಸ್ಯ. ನಿಧಾನವಾಗಿ ಇಲ್ಲಿ ಸುತ್ತಾಡಿದ್ರೆ ಎಲ್ಲಾ ಮರ್ಮಗಳೂ ತಾವಾಗಿಯೇ ಅರ್ಥ ಬಿಟ್ಕೊಡುತ್ವೆ."

"ಸಾರ್ ಅಲ್ಲಿ ದೂರದಲ್ಲಿರೋ ಭವನದ ಮುಂದೆ ಕಾಲೇಜ್ ರೀಯೂನಿಯನ್ ಅಂತ ಫಲಕ ಇದೆ. ಅದನ್ನ ಸ್ವಲ್ಪ ನೋಡೋಣವೇ?"

"ರೀ ಯಜಮಾನ್ರೆ, ಪಕ್ಕದ ಕಾಟೇಜಿನಿಂದ ಹಾಲು ಸೀದಿರೋ ವಾಸನೆ ಬರ್ತಾಯಿದೆ. ಓ ಮೈ ಗಾಡ್. ನಾನಿನ್ನು ಬರ್ತೀನೆ"

"ಸಾರ್ ಇನ್ನೋ ನೋಡೋಕ್ಕೆ ತುಂಬಾ ಕಾಟೇಜುಗಳಿವೆಯಲ್ಲಾ......"

"ನೀವೇ ಸಾವಧಾನವಾಗಿ ಎಲ್ಲಾನೂ ನೋಡ್ರಿ. ಹ್ಯಾಪಿ ಹಂಟಿಂಗ್"

■



# ಓ ಎಮ್ ಜೀ...!

ಲತಾ ಹೆಗಡೆ, ಹುಬ್ಬಳ್ಳಿ

ಈಗಂತೂ ಕಾರ್ಯಕ್ರಮಗಳ ಮಹಾಪೂರವೇ ಚಿತ್ರವಿಚಿತ್ರ ಹೆಸರಿನಲ್ಲಿ ಹರಿದು ಬಂದು ದೃಶ್ಯ ಮಾಧ್ಯಮವನ್ನು ಸಂಪೂರ್ಣವಾಗಿ ಆವರಿಸಿಬಿಟ್ಟಿದೆ. ಅದಕ್ಕೆ ತಕ್ಕಂತೆ ಆಕರ್ಷಕ ಹಣೆಪಟ್ಟಿಯೊಂದಿಗೆ ಅಸಂಖ್ಯ ಚಾನಲ್‌ಗಳೂ ಲಗ್ಗೆಯಿಟ್ಟು ಸಡ್ಡು ಹೊಡೆದದ್ದರಿಂದ ಪಾಪದ ಪ್ರೇಕ್ಷಕ/ಪ್ರೇಕ್ಷಕಿಯರದ್ದು ಯಾವುದನ್ನು ನೋಡುವುದು, ಯಾವುದನ್ನು ಬಿಡುವುದು ತಿಳಿಯದೇ ಚಾನಲ್ ಚಕಚಕನೆ ಬದಲಾಯಿಸುತ್ತಾ ಯಾವುದನ್ನೂ ಸರಿಯಾಗಿ ನೋಡದ ಅತೃಪ್ತ ಸ್ಥಿತಿಯ ತೊಳಲಾಟ. ಇನ್ನು ಥ್ಯಾಂಕ್‌ಲೆಸ್, ವೇತನಲೆಸ್ ಜಾಬಿನ ಜನ ಸಾಮಾನ್ಯೆಯರ ಪಟ್ಟವನ್ನಲಂಕರಿಸಿದ ನಮ್ಮಂತಹ ಗೃಹಿಣಿಯರ ಸ್ಥಿತಿಯಂತೂ ಭಗವಂತನಿಂದಲೂ ಸರಿಪಡಿಸಲಸಾಧ್ಯವಾಗಿ ವರ್ಣಿಸಲು ಪದಗಳಂತೂ ಚೌಕಟ್ಟಿಗೇ ಸಿಗುತ್ತಿಲ್ಲ! ಅದ್ಯಾಕಷ್ಟು ಓವರ್ ರಿಯಾಕ್ಟ್ ಮಾಡ್ತಿದ್ದೀರಿ ನಿಮ್ ಸ್ಥಿತಿಗೆ ಈಗೇನಾಗಿದೆ? ಇಪ್ಪತ್ತನಾಲ್ಕು ತಾಸೂ ಮನೆಯಲ್ಲಿ ಹಾಯಾಗಿರ್ತೀರಿ ಬೇಕಾದ್ದನ್ನು ಮೆಲ್ಲುತ್ತಾ,

ಎಮ್ಮೆಯಂತೆ ಮೆಲುಕುತ್ತಾ ಸುಖಾಸನದಲ್ಲಿ ಸುಖಾಸುಮ್ಮನೆ ಮೈಚೆಲ್ಲಿ ಮನಬಂದಂತಿದ್ದು ಮನಮಾನಿ ಮಾಡುವ ಲಲನೆಯರೇ, ಮನೆಗೆ ನೀವೇ ರಾಣಿ, ನಿಮಗೇತರ ದರ್ದು ಎನ್ನುತ್ತಿದ್ದೀರಾ? ಅಸಹನೆ ಬೇಡ ತಾಳಿ, ಹೇಳುತ್ತೇನೆ.

ಸೀರಿಯಲ್ ಹಾವಳಿಗಳ ಮಧ್ಯೆ ಮಟಮಟ ಮಧ್ಯಾಹ್ನ ಅಡುಗೆ ಮನೆಯ ಕೆಲಸದ ಪೀಕ್ ಅವರಿನಲ್ಲಿ ಅಡುಗೆ ತಯಾರಿ ಮಾಡುತ್ತಲೇ ಕನ್ನಡದ ರಂಗಿನ ಚಾನಲ್ಲಿನಲ್ಲಿ ಬರುವ ಅಡುಗೆ ಕಾರ್ಯಕ್ರಮ 'ಸಿಹಿರುಚಿ'ಯನ್ನು ನೋಡುತ್ತಾ ಬಲಿತ ಬಾಲಮುರಳಿಯ ಟಿಪ್ಸ್ ಕೂಡ ನೋಟ್ ಮಾಡಿಕೊಳ್ಳುವುದು; ಅದೇ ಸಮಯದಲ್ಲಿ 'ಕಾಂಚನ' ಚಾನಲ್ಲಿನಲ್ಲಿಯೂ ಬರುವ 'ಬಾಯಿ ಚಪ್ಪರಿಸೋ ಭೋಜನ' ವನ್ನೂ ನೋಡುತ್ತಾ ಮೊಟ್ಟೇ ತಲೆಯ ಚಂದ್ರಣ್ಣನ ಕಿವಿಮಾತನ್ನೂ ಆಲಿಸಿಕೊಂಡು ಚಕಚಕನೆ ಬರೆದುಕೊಳ್ಳುತ್ತಾ ಏಕಕಾಲಕ್ಕೆ ಮೂರ್ಮೂರು ಕಡೆ ನಿಭಾಯಿಸ್ತಿರೋದು ನಿಜಕ್ಕೂ ಸವಾಲೇ ಹೌದು, ಘನಕಾರ್ಯವೂ ಕೂಡ ಅಂಬೋದು ನಿಮ್ಮ ಮಸ್ತಿಷ್ಕಕ್ಕೆ ಸ್ವಲ್ಪಮಟ್ಟಿಗಾದರೂ ತಿಳೀತು ಅಂದ್ಕೋತೇನೆ. ನೀವೀಗ ಖಂಡಿತಾ ಉದ್ಗರಿಸ್ತೀರಿ ಎಂತಹಾ ಪ್ರತಿಭೆ ಏನ್ ಚಾಕಚಕ್ಯತೆ ನಿಜಕ್ಕೂ ನೀವೇ ಗ್ರೇಟ್ ಕಣ್ರೀ ಅಂತ. ಹೊಗಳಿದ್ದಕ್ಕೆ ತುಂಬಾನೇ ಥ್ಯಾಂಕ್ಸ್ ರೀ ನನ್ ಕಷ್ಟ ಅರ್ಥ ಆಯ್ತಲ್ಲ ಅಷ್ಟು ಸಾಕು. ಆದ್ರೆ ಇಷ್ಟಕ್ಕೇ ಪ್ರವರ ಮುಗೀತು ಅಂದ್ಕೋಬೇಡಿ, ವಿಶ್ವ ಮಹಿಳಾ ದಿನದಂದು ಹೊಸ ಚಾನಲ್ ಪ್ರಾರಂಭವಾಯ್ತಲ್ಲ ಅದೇ 'ನಾರೀ ನೀ ಕಸ್ತೂರಿ' ಅಂತ. ಅದರಲ್ಲಂತೂ ಬರುವ ಒಂದೊಂದು ಕಾರ್ಯಕ್ರಮಗಳೂ ಅದ್ಭುತ!

ಸ್ತ್ರೀಗೆಂದೇ ಹೇಳಿ ಮಾಡಿಸಿದಂತಿದ್ದು ಚುಂಬಕದಂತೇ ಸೆಳೆದಿವೆ. ಫೋನಿನಲ್ಲಿದ್ದಾಗ, ಮುಖತಃ ಭೇಟಿಯಾದಾಗ ಹಾಗೂ ವಿರಳವಾದ್ರೂ ಇನ್ನೂ ಉಸಿರಾಡ್ತಿರೋ ಕಟ್ಟೇ ಪುರಾಣದಲ್ಲೂ ದಿನಾಲೂ ಅದರದ್ದೇ ಚರ್ಚೆ. 'ನಾರೀ ಇಕೋ ಸ್ಯಾರೀ' ಮತ್ತು 'ಮುನಿದ ನಾರೀ ಬಲು ದುಬಾರೀ' ಜೊತೆಗೆ 'ನಾಜೂಕು ನಾರಿ' ಯಂತೂ ಮನೆಮನೆ ಮಾತಾಗಿ ಬೇರೇ ಗಾಸಿಪ್‌ಗಳೆಲ್ಲವೂ ಗತಕ್ಕೆ ಸರಿದದ್ದು ವಿಶೇಷ ಬೆಳವಣಿಗೆ ಅಲ್ದೇ ಮತ್ತೇನು? ಅಪರಾಹ್ನದ ನಂತ್ರ 'ಸೌಟು ಹಿಡಿದ ಜಾಣ ನಾರಿ' ಅಡುಗೆ



ಕಾರ್ಯಕ್ರಮವಂತೂ ಅನೇಕ ವೈಶಿಷ್ಟ್ಯಗಳಿಂದ ಮಹಿಳಾ ಮಣಿಗಳ್ಗೊಟ್ಟಿಗೆ ನಳಮಹಾರಾಜರೆಂದು ಬೀಗುತ್ತಿದ್ದ ಪುರುಷರನ್ನೂ ತನ್ನತ್ತ ಸೆಳೆದು ಜಯಭೇರಿ ಬಾರಿಸ್ತಿದೆ ಅಂತ ಸಮೀಕ್ಷೆಯ ಅಂಬೋಣ. ಬಿಳೀ ತೊಗಲಿನ ಎಂಕರಿಣಿಯ ದಿನಕ್ಕೊಂದು ರೀತಿಯ ಮೇಕಪ್, ಒಡವೆ, ತೊಡುಗೆ, ಹೇರ್‌ಸ್ಟೈಲ್ ಜನಪ್ರಿಯತೆಗೆ ಕಾರಣವಾದ್ರೂ ನನ್ನನ್ನು ಸೆಳೆದದ್ದು ಮಾತ್ರ ಪಟಪಟನೆ ಆಕೆಯಾಡುವ ಇಂಗ್ಲೀಷ್ ವಾಕ್ಯ ಮತ್ತದರಲ್ಲಿ ಆಗಾಗ ಆಗುತ್ತಿದ್ದ ಕನ್ನಡ ಪದಬಳಕೆ! ಅದಕ್ಕೂ ಮಿಗಿಲಾಗಿ ಮಾತುಮಾತಿಗೂ ಉದ್ಗರಿಸುತ್ತಿದ್ದ 'ಓಎಮ್‌ಜೀ!' ಪದ. ವಿವರ ಬಯಸ್ತಿದ್ದೀರಾ? ಸರಿ ಹಾಗಾದ್ರೆ, ಅಡುಗೆ ಕಾರ್ಯಕ್ರಮದ ಪಿನ್ ಟು ಪಿನ್ ವಿವರ ಕೊಡ್ತಿದ್ದೀನಿ ನೋಡಿ.

"ವೆಲ್ಕಂ ಟು ದ ಶೋ  ಓ ಮೈ ಗಾಡ್! ನೀವು ವೇರ್ ಮಾಡಿರೋ ಡ್ರೆಸ್ ಟೂ ಗುಡ್! ತುಂಬಾ ಸೂಟ್ ಆಗ್ತಿದೆ  ಬೈ ದಿ ಬೈ ಎಲ್ಲಿಂದ ಬರ್ತಿರೋದು?"

'ಕೆಂಗೇರಿ'

"ಓ ಮೈ ಗಾಡ್! ಕೆಂಗೇರಿಯಿಂದಾನಾ? ವೆರೀ ನೈಸ್  ನೀವು ವರ್ಕಿಂಗ್ ವುಮನ್ನೋ ಅಥ್ವಾ ಹೋಂ ಮೇಕರೋ?" 'ಗೃಹಿಣಿ ಮೇಡಂ'

"ಓ ಮೈ ಗಾಡ್! ಹೋಂ ಮೇಕರೇನ್ರೀ  ಓಕೇ  ಮನೇಲಿ ಯಾರೆಲ್ಲಾ ಇದ್ದೀರಾ?"

'ನಾನೂ, ನನ್ನ ಗಂಡ, ಮಗ, ಅತ್ತೆ–ಮಾವ' "ಓ ಮೈ ಗಾಡ್! ಜಾಯಿಂಟ್ ಫ್ಯಾಮಿಲೀ ! ರಿಯಲೀ ಗ್ರೇಟ್! ಸರೀಪ್ಪಾ ಕುಕ್ ಮಾಡ್ತಾ ನಿಮ್ ಬಗ್ಗೆ ಇನ್ನಷ್ಟು ತಿಳ್ಕೊಳ್ಳೋಣ ಓಕೇ? ಇವತ್ತು ನಮ್ ಶೋನಲ್ಲಿ ಯಾವ ಸ್ಪೆಷಲ್ ಡಿಶ್ ತೋರಿಸ್ತಿದ್ದೀರಿ?" 'ಮದ್ವೇ ಮನೇಲಿ ಮಾಡುವ ಪೈನಾಪಲ್ ಗೊಜ್ಜು'

"ಓ ಮೈ ಗಾಡ್! ಪೈನಾಪಲ್ ಗೊಜ್ಜೇ !? ವಾವ್ ! ತಡ್ಕೊಳ್ಳೋಕಾಗ್ತಿಲ್ಲ ಕಣ್ರೀ ಕ್ವಿಕ್ಕಾಗಿ ಸ್ಟಾರ್ಟ್ ಮಾಡೋಣ  ನಂಗಂತೂ ಅಡುಗೆ ಮಾಡೋದಂದ್ರೇನೇ ಒಂಥರಾ ಅಲರ್ಜಿ, ಆದ್ರೆ ತಿನ್ನೋಕ್ಯಾವ ಅಲರ್ಜಿಯೂ ಇಲ್ಲಾಪ್ಪಾ  ಅಂದ್ಹಾಗೇ ಇನ್ಗ್ರಿಡಿಯೆಂಟ್ಸು ಏನೇನ್ ಬೇಕು? ಪೈನಾಪಲ್ ಗೊಜ್ಜಂದ್ಮೇಲೆ ಪೈನಾಪಲ್ಲಂತೂ ಬೇಕು ಅಂದ್ಕೊತೀನಿ ಕರೆಕ್ಟಲ್ವೇ ನಾ ಹೇಳಿದ್ದು?"

ತನ್ನ ದಿವ್ಯ ಜ್ಞಾನಕ್ಕೆ ತಾನೇ ಪ್ರಶಂಸಿಸಿಕೊಂಡು ತಲೆ ಹಿಂದೆ ಹಾರಿಸಿ ನಕ್ಕ ರಭಸಕ್ಕೆ ಬಿಚ್ಚುಗೂದಲೂ ಎಗರೆಗರಿ ಸಾಥ್ ನೀಡಿದ್ದವು. ಗೊಜ್ಜು ತೋರಿಸೋಕೆ ಬಂದವ್ರು ಒಂದೊಂದಾಗಿ ಸಾಮಗ್ರಿ ತೋರಿಸ್ತಾ ಹೇಳ್ತಿದ್ದಂತೇ ಓ ಮೈ ಗಾಡ್!, ಸೋ ಸಿಂಪಲ್! ವಾವ್  ಉದ್ಗಾರಗಳ ಪದಪುಂಜ ಪುಂಖಾನುಪುಂಖವಾಗಿ ಕೆಂಪು ಬಳಿದ ಪುಟ್ಟಬಾಯಿಯಿಂದ ಮುದ್ದುಮುದ್ದಾಗಿ ಹೊರಬೀಳೋದನ್ನ ನೋಡೋಕಂತ್ಲೇ ನಾ ಚಾತಕ ಪಕ್ಷಿಯಂತೆ ಕೂತಿರ್ತಿದ್ದೆ.

"ವಾವ್! ಸ್ಮೆಲ್ಲಿಗೆ ಮೂಗೇನು ಬಾಡೀನೇ ಅರಳ್ತಿದೆ, ಬೇಗ್ ಮಾಡೀಪ್ಪಾ  ಓಕೆ, ನೀವು ಪೊಯಮ್ ಬರೀತೀರಿ  ಸಾಂಗೂ ಹೇಳ್ತೀರಿ ಅಂತ ಗೊತ್ತಾಯ್ತು  ಕುಕ್ ಮಾಡ್ತಾ ನಿಮ್ ಕಲಕ್ಷನ್ನಿಂದ ಹಾಗೇ ಒಂದ್ ಬಿಡೀಪ್ಪಾ "



'ಆಕಾಶದ ನೀಲಿಯಲ್ಲಿ  ಚಂದ್ರ ತಾರೆ ತೊಟ್ಟಿಲಲ್ಲಿ ' ಗೊಜ್ಜು ಗೊಟಾಯಿಸುತ್ತಾ ಹಾಡ್ದಾಗ ನಮ್ ಎಂಕರಿಣಿಯದ್ದೋ 'ಓ ಮೈ ಗಾಡ್ ! ವಾವ್ ! ಸೂಪರ್!' ಪದಪುಂಜಗಳ ಉದ್ಗಾರದ ಪಕ್ಕವಾದ್ಯ.

“ಓ ಮೈ ಗಾಡ್! ಅಮೇಜಿಂಗ್ ವಾಯಿಸ್! ಸಾಂಗು ಕೂಡ ತುಂಬಾ ಚೆನ್ನಾಗಿ ಬರ್ದಿದ್ದೀರಿ ಆದ್ರೆ ನಂಗರ್ಥ ಆಗ್ಲಿಲ್ಲ

ಬಿಡಿ (ಪೆದ್ದು ಮುಂಡೇದು!) ಓಕೇ, ಫೈನಲೀ ಗೊಜ್ಜು ಈಸ್ ರೆಡಿ ಅನ್ಸುತ್ತೆ” ’ಥ್ಯಾಂಕ್ಸ್ ಮೇಡಂ, ಆದ್ರೆ ಇದು ನಾ ಬರ್ದಿದ್ದಲ್ಲ, ಹೆಮ್ಮೆಯ ಕವಿ ಜಿ. ಎಸ್. ಶಿವರುದ್ರಪ್ಪ ಅವರ ಕವಿತೆ ’ “ಓ ಮೈ ಗಾಡ್! ಹೌದಾ? ಓಕೇ! ಲೀವಿಟ್, ನೌ ಐ ಕಾಂಟ್ ವೇಯಿಟ್ ಮಚ್ ಬೇಗ ಗೊಜ್ಜು ಕೊಡೀಪ್ಪಾ ” ಪೈನಾಪಲ್ ಬಿಲ್ಲೆಗಳಿಂದ ಅಲಂಕರಿಸಿ ಕೊಟ್ಟದ್ದನ್ನು ನೋಡುತ್ತಲೇ ಮತ್ತೆ ಓ ಮೈ ಗಾಡ್! ಉದ್ಗಾರ. “ರಿಯಲೀ ಸೂಪರಾಗಿದೆ ಕಣ್ರೀ ಓ ಮೈ ಗಾಡ್! ವೀಕ್ಷಕರೇ, ನೀವೂ ಇದನ್ನ ಒಂದ್ಸಲ ಟ್ರೈ ಮಾಡ್ಲೇಬೇಕು ಮೆಸೇಜ್ ಮಾಡಿ ಎಂಡ್ ಡೋಂಟ್ ಫರ್ಗೆಟ್ ಟು ಗೀವ್ ಫೀಡ್ ಬ್ಯಾಕ್ ಖಂಡಿತಾ ಮರೀಬೇಡೀಪ್ಪಾ ಓಕೇ ದಿಸೀಸ್ ವಿನ್ಸ್ (ವಿನುತಾ) ಸೈಲಿಂಗ್ ಆಫ್ ಸೀ ಯೂ ಆಲ್ ಟುಮಾರೋ ವಿತ್ ಅನದರ್ ಇಂಟರೆಸ್ಟಿಂಗ್ ಎಪಿಸೋಡ್ ಬೈ ಬೈ!” ಗೊತ್ತಾಯ್ತೇನ್ರೀ ನಾ ಫಿದಾ ಆಗಿದ್ದೇಕಂತ? ಧನ್ಯೋಸ್ಮಿ ಕಣ್ರೀ. ಅರೇ ! ಸೀದಿರೋ ವಾಸ್ನೇ ಬರ್ತಿದ್ಯಲ್ರೀ! ಅಯ್ಯಯ್ಯೋ, ಹಾಲು ಕಾಯೋಕೆ ಇಟ್ಟಿದ್ದೆ ಓ ಮೈ ಗಾಡ್! ■




ವರ್ಗಾವಣೆ ಆಗಿಲ್ಲವೇ?... ತುಂಬಾ ಸ್ಟ್ರಿಕ್ಟ್ ಆಫಿಸರ್ ಅಂತ ಹೆಸರು ಮಾಡಿ, ಅವರೇ ವರ್ಗಾವಣೆ ಮಾಡ್ತಾರೆ!!.



# ಎಣ್ಣೆಮಜ್ಜನವೂ ನಿಜ ಶ್ರಾವಣವೂ...

ಜಯಶ್ರೀ ದೇಶಪಾಂಡೆ

"ಕಲ್ಲು ಖಣಿಯಾಗು

ಕಬ್ಬಿಣ ಮಣಿಯಾಗು

ಅಗಸೀ ಮುಂದಿನ ಬೋರ್ಗಲ್ಲಾಗು"

–ನಮ್ಮ ಹಿರಿಯರು

***

ಭರತ ಭೂಮಿಯಲ್ಲಿ ಅಧಿಕಾಧಿಕ ಮಳೆ ಸುರಿಸಿ ದೇವತೆಗಳೂ ವಿಶ್ರಾಂತಿ ಪಡೆಯುವಷ್ಟು ಚಳಿ ತುಂಬಿದ ಅಧಿಕ ಮಾಸ, ಅದರಲ್ಲೂ ಶ್ರಾವಣವೇ ಅಧಿಕವಾಗಿ ಅಧಿಕೃತ ಶ್ರಾವಣಕ್ಕೆ ಕೊಂಚ ಕಾಯಿರಿ ಅಂದಾಗ ಆಲೋಚನೆಗಳಿಗೂ, ನೆನಪುಗಳಿಗೂ ಸ್ಮೃತಿಪೂರ ಬಂದ ಗಳಿಗೆಗಳಲ್ಲಿ ನನಗವಳ ನೆನಪು!

'ಈ ಬೆನ್ನು ಇದೆ ನೋಡು ಅದು ಪರದೇಶಿ' ಅನ್ನುತ್ತಿದ್ದಳು ಅಮ್ಮ, ಬೆನ್ನಿಗೆ ಹದವಾಗಿ ಕಾಯಿಸಿದ ಕೊಬ್ಬರಿ ಎಣ್ಣೆಯನ್ನು ಉಜ್ಜುತ್ತ ಈ ಮಾತು ಆಗೀಗ ಹೇಳುವವಳು. ಗುಳುಗುಳು ಅನಿಸುವ ಅವಳ ಆ ಕೈ ಬೆರಳಾಟದ ಜೊತೆಯಲ್ಲೇ ಎಣ್ಣೆಯ ಬಿಸುಪು, ಬೆನ್ನ ಹುರಿಗುಂಟ ಹನಿಹನಿಯಾಗಿ ಇಳಿದ ಎಣ್ಣೆ ಅವಳ ಅಂಗೈಯಗಲದ ಮಿದುವಿನಲ್ಲಿ ಒತ್ತಿಕೊಂಡು ನನ್ನ ಬೆನ್ನಿಡೀ ಹರಡುತ್ತ ಕೊಡ್ತಿದ್ದ ಸುಖಸ್ಪರ್ಶದೊಳಗೂ ಆ ಮಾತು ನನಗೆ ಅರ್ಥವಾಗುತ್ತಿರಲಿಲ್ಲ. ಎಲ್ಲಾ ಬಿಟ್ಟು ಬೆನ್ನೇ ಯಾಕೆ ಪರದೇಶಿಯಾಗಿದೆ? ಅದನ್ನು ಪರದೇಶಿ ಮಾಡಿದವರು ಯಾರು? ಯಾಕೆ? ಮಾಡುವುದಿದ್ದರೆ ಬೇರೆ ಯಾವುದಾದರೂ ಭಾಗವನ್ನು ಪರದೇಶಿ ಯಾಕೆ ಮಾಡಲಿಲ್ಲ. ಕೈಯೋ, ಕಾಲೋ, ಕೊನೆಗೆ ಒಂದು ಕಿರುಬೆರಳನ್ನೋ ಮಾಡಬಹುದಿತ್ತಲ್ಲ ಬೆನ್ನನ್ನು ಪರದೇಶಿ ಮಾಡಬೇಕೆಂದು ಇವರಿಗೆ ಯಾರು ಹೇಳಿದರು? ಇದೆಲ್ಲ ಯೋಚನೆಗೆ ಬಿದ್ದು ತಲೆಕೆಟ್ಟು ಹತ್ತೀಕಾಳಾದರೂ ಅವಳನ್ನೇ ಈ ಬಗ್ಗೆ ಪ್ರಶ್ನೆ ಕೇಳಬೇಕೆಂದು ನನ್ನ ಮೊದ್ದು ತಲೆಗೆ ಹೊಳೆದಿದ್ದು ತುಂಬ ತಡವಾಗಿ!

ಈ ಹಿನ್ನೆಲೆಗೆ ಬಾಲ್ಯವೇ ಕಾರಣ ಮತ್ತು ಆ ಬಾಲ್ಯದಲ್ಲಿ ಹಿರಿಯರು ನಮಗೆ ನಡೆಸಿರುತ್ತಿದ್ದ ಹತ್ತೆಂಟು ಅರೋಗ್ಯೋಪಚಾರಗಳೇ ಕಾರಣ.

ಇಂಥ ಬಿಸಿಯೆಣ್ಣೆ ತದಂತರದ ಮುಕ್ಕಾಲು ಹಂಡೆ ಅಥವಾ ನೀರು ಕಾಯಿಸುವ ತಾಮ್ರದ ಉದ್ದನೆಯ ಬಂಬಿನ ತುಂಬ ಮೂವತ್ತೆಂಟು ನಲವತ್ತು ಡಿಗ್ರಿಗೆ ಕಾದು ಮರಳುವ 'ನೀರೋಪಚಾರ'ದ ಅಭ್ಯಂಗ ಅಂದರೆ ಹಬ್ಬವೇ ಆಗಬೇಕೆಂದೇನಿರಲಿಲ್ಲ. ಭಾನುವಾರದ ರಜೆ, ಬೇಸಿಗೆ ಸೂಟಿ ಈ ಎಲ್ಲ ದಿನಗಳಲ್ಲೂ ಕಾದ ಸುಡುನೀರಿನ ತಲೆಸ್ನಾನ ನಮಗೆ ತಪ್ಪಿದ್ದೇ ಅಲ್ಲ.



ಹಜಾರದಲ್ಲಿ ಮಣೆಯಿಟ್ಟು ಅದರ ಮುಂದೆ ನೆಲಕ್ಕೆ ಎರಡೆಳೆ ರಂಗೋಲಿ ಹಾಕಿ ಪಕ್ಕದ ನೆಲಕ್ಕೆ ಐದು ಎಣ್ಣೆಯ ಬೊಟ್ಟಿಟ್ಟು ಅವಳು ನನ್ನನ್ನು ಕೂಡಿಸಿರುತ್ತಿದ್ದಳು. ರಂಗೋಲಿ ಅನ್ನೋದು ಸಾಮಾನ್ಯವಾಗಿ ಹಬ್ಬದ ದಿನಕ್ಕೆ ಸ್ಪೆಶಲ್.

ಬಿಸಿಯೆಣ್ಣೆಗೆ ಬೆಚ್ಚಿ ಆ ಮಣೆಯ ಮೇಲಿಂದ ಎದ್ದೋಡಿ ಹೋಗುವ

ಹವಣಿಕೆಯಲ್ಲಿರ್ತಿದ್ದ ನನ್ನ ತೋಳು ಹಿಡಿದು ಎಳೆದು ಕೂರಿಸಿ ತಲೆಗೆ ಸ್ನಾನ ಅಥವಾ ಎರಕೊಳ್ಳುವ, ಎರೆಯುವ ಮೊದಲು ಮಣೆ ರಂಗೋಲಿ, ಅದರ ಎದುರಿಡುವ ಐದು ಎಣ್ಣೆ ಬೊಟ್ಟುಗಳಿಗೆ ಅದು ಯಾಕೆ ಏನು ಅರ್ಥದ ಕತೆಯನ್ನು ಹೇಳುವಾಕೆ. ಆ ಕಥಾರೂಪದ ಮಾತಿನಲ್ಲಿ ಪಂಚಭೂತಗಳ ಪ್ರಸಕ್ತಿ ಬರ್ತಿತ್ತು. ಭೂಮಿ, ಅಗ್ನಿ, ವಾಯು, ಜಲ, ಆಕಾಶ ಎಲ್ಲ ಸೃಷ್ಟಿಗೂ ಒಂದು ಹನಿ ಎಣ್ಣೆಯ ಸ್ಪರ್ಶವಿಟ್ಟು ಆ ಸ್ನಿಗ್ಧತೆಯನ್ನುಂಡು ತಂಪಾಗಿ ಹರಸಿರೆಂದು ಕೇಳಿಕೊಳ್ಳುವ ಪದ್ಧತಿಯಂತೆ ಅದು. ನಮ್ಮ ಹಿರಿಯರಿಗೆ ಅದೆಷ್ಟು ಮುಂದಾಲೋಚನೆ?

ಬೆನ್ನಿಗಿಂತ ಮೊದಲು ನೆತ್ತಿ, ತಲೆ, ಕೈ ಕಾಲು ಎಲ್ಲದಕ್ಕೂ ಅಮ್ಮ ಬೆಚ್ಚಗಿನ ಎಣ್ಣೆ ಇಟ್ಟೇ ತಿಕ್ಕುತ್ತಿದ್ದಳು. ಬೆಳ್ಳಿ ಬಟ್ಟಲಿನಲ್ಲಿ ಹದವಾಗಿ ಕಾದು ಕೂತಿದ್ದ ಎಣ್ಣೆಯನ್ನು ಐದು ಬೆರಳ ತುಂಬ ಎತ್ತಿಕೊಂಡು ನೇರವಾಗಿ ನೆತ್ತಿಯ ಮಧ್ಯೆ, ಅದೇನೋ ಬ್ರಹ್ಮರಂಧ್ರ ಎಂದಿರುತ್ತದಂತಲ್ಲ ಆ ಜಾಗಕ್ಕೆ ಇಳಿಬಿಟ್ಟು "ಕಲ್ಲು ಖಣಿಯಾಗು ಕಬ್ಬಿಣ ಮಣಿಯಾಗು...ಅಗಸೀ ಮುಂದಿನ ಬೋರ್ಗಲ್ಲಾಗು" ಎನ್ನುತ್ತ ತಪತಪ ತಟ್ಟಿದರೆ ಅದೊಂದು ಬಗೆಯ ಸುಖವನ್ನು ಖಂಡಿತವಾಗಿ ನೀಡುತ್ತಿತ್ತು. ಈ 'ಕಲ್ಲು ಖಣಿ, ಕಬ್ಬಿಣ ಮಣಿ ಅಗಸೀ ಮುಂದಿನ ಬೋರ್ಗಲ್ಲು...'ಊಂ ಹೂಂ ಯಾವುದಕ್ಕೂ ಆಗ ಅರ್ಥ ತಿಳಿದಿರಲಿಲ್ಲ, ಒಮ್ಮೆ ಅವಳೇ ಹೇಳಿದ್ದಳು. ಅರ್ಥ ತಿಳಿದರದೊಂದು ಅದ್ಭುತವಾದ ಆಶೀರ್ವಾದ, ಕಲ್ಲು ಖಣಿ... ಖಣಿ ಅಂದರೆಗಣಿ, ಶಿಲೆಯಷ್ಟು ಗಟ್ಟಿತನ, ಕಬ್ಬಿಣ ಮಣಿ ಅಂದರೆ ಯಾರೂ ಸುಲಭಕ್ಕೆ ಕೆತ್ತಿ ಬಿಸಾಡದ ಗಡಸುತನ, ಅಗಸೀ ಮುಂದಿನ ಬೋರ್ಗಲ್ಲು ಅಂದರೆ ಶತ್ರುಗಳು ದಾಳಿ ಮಾಡಿ ನುಗ್ಗಿ ಬರುವಾಗ ಊರಮುಂದಿನ ಅಗಸೀ ಬಾಗಿಲನ್ನು ಒಡೆಯಲು ಮೊದಲು ಅದರ ಹೊರಗಿದ್ದ ಕಲ್ಲಿನ ಮೇಲೆ (ಅದೇ ಬೋರ್ಗಲ್ಲು) ಭಯಂಕರ ಶಕ್ತಿಯ ಸುತ್ತಿಗೆಯ ಪ್ರಹಾರ ಮಾಡುತ್ತಿದ್ದರಂತೆ, ಆ ಕಲ್ಲು ಎಂಥ ಪೆಟ್ಟುಗಳನ್ನಾದರೂ ತಾಳಿಕೊಳ್ಳುವಷ್ಟು ಘನವಾಗಿ, ಗಟ್ಟಿಯಾಗಿ ಇರ್ತಿತ್ತಂತೆ. ಹೀಗೆ ಜೀವನದಲ್ಲಿ ಬೀಳುವ ಏಟುಗಳನ್ನು ತಾಳಿಕೊಳ್ಳುವ ಗುಣ ನಮ್ಮಲ್ಲಿ ತುಂಬಿಕೊಂಡು ಅಗಸೀ ಮುಂದಿನ ಬೋರ್ಗಲ್ಲಿನ ಹಾಗೆ ಶಕ್ತಿ ಶಾಲಿ ಶರೀರವನ್ನು ಈ ಎಣ್ಣೆಯ ಲೇಪದಿಂದ ಪಡೆ..."

ನಮ್ಮ ಹಿರಿಯರ ಮನಸ್ಸಿನ ವೈಶಾಲ್ಯದ ಗರಿಮೆಯಲ್ಲವೇ ಇದು?

ತೈಲಲೇಪನದ ಕಾರ್ಯಕ್ರಮ ಮುಂದುವರಿದು ಎಣ್ಣೆಯ ಬಟ್ಟಲು ಇಂಚಿಂಚೇ ಖಾಲಿಯಾಗುತ್ತ ತನ್ನ ಘಮವನ್ನು ನನಗೆ ಸುತ್ತುತ್ತಲಿರ್ತಿತ್ತು.

ನೆತ್ತಿಯ ಕೂದಲಿನೊಳಗೆ ಎಣ್ಣೆ ಇಡುತ್ತ ಅವಳ ಬೆರಳು ಗುಂಡಗೆ ಸುತ್ತುತ್ತಿರುವಾಗ ಕೂದಲು ಒಮ್ಮೊಮ್ಮೆ ಅದರೊಂದಿಗೆ ಅಕಸ್ಮಾತ್ ಸಿಲುಕಿ ಸುರುಳಿಯಾಗಿ ಎಳೆದುಕೊಂಡು ಆದ ಆ ನೋವಿಗೆ ಘೋರೆಂದು ಕಿರುಚುವ ನಾನು ಎದ್ದು ಥೈ ಥಕ ಮಾಡ್ತಿದ್ದದ್ದು ಖರೆ. ಅದರಲ್ಲೂ ನೆತ್ತಿಗೆ ಸುರಿದ ಎಣ್ಣೆ ಜಾರುತ್ತ ಅಧೋಮುಖದಲ್ಲಿ ಒಂದಿಷ್ಟು ಇಳಿಯದೇ ಇದ್ದೀತೇ? ಆದರೆ ನನಗದು ಅಕ್ಕ ಪಕ್ಕಕ್ಕೆ ನದಿಯಾಗಿ ಹರಿದಂತೆ ಅನಿಸಿ ಕಣ್ರೆಪ್ಪೆ ದಾಟಿ ಒಂದೇ ಒಂದು ಹನಿ ಒಳಹೊಕ್ಕರೂ ಬೊಬ್ಬಿರಿಯುವಷ್ಟು ಕೋಪ ಉಕ್ಕೇರಿ, ಅದನ್ನು ತಣಿಸುವ ಹವಣಿಕೆಯಲ್ಲಿರ್ತಿದ್ದಳು ಅಮ್ಮ.



"ಬಿಸಿ ಎಣ್ಣೆಗೆ ನೆತ್ತಿ ತಂಪಾಗುತ್ತದೆ" ಅವಳು ಹೇಳಿದಾಗ ಬಿಸಿಯು ತಂಪನ್ನು ಹೇಗೆ ಉಂಟು ಮಾಡುತ್ತದೆ ಎಂಬ ಗೊಂದಲದಲ್ಲಿ ಬಿದ್ದು ಬಹುಶಃ ತಲೆ ಮೇಲೆ

ಬೀಸುವ ಗಾಳಿ ಎಣ್ಣೆಯನ್ನು ಬಹಳ ಬೇಗ ಆರಿಸಿ ಥಣ್ಣಗೆ ಮಾಡಿಬಿಡುತ್ತಿರಬೇಕು ಯಾಕೆಂದರೆ ತಲೆ ಯಾವಾಗಲೂ ಗಾಳಿಗೆ ತೆರೆದುಕೊಂಡಿರುತ್ತೆ ಎಂದು ನನ್ನೊಳಗೇ ಇದ್ದ ವಿಜ್ಞಾನದ ಜ್ಞಾನವನ್ನು ಪುನರುಚ್ಚಾರ ಮಾಡಿಕೊಳ್ಳುತ್ತ ನಾನೇ ಮೆಚ್ಚಿಕೊಂಡಿದ್ದು ಖರೆ!

ನೆತ್ತಿಗೆ ಬಿದ್ದ ಎಣ್ಣೆಯ ಸ್ನಿಗ್ಧತೆ ಕೂದಲಿನಡಿಯ ಚರ್ಮದಿಂದ ಹೀರಲ್ಪಟ್ಟು ದೇಹದ ನರನಾಡಿಗಳೆಲ್ಲದಕ್ಕೂ ಹಂಚಿಕೊಂಡು ಕಣ್ಣು-ಕಿವಿ ಇತ್ಯಾದಿಯಾಗಿ ಸಕಲ ಜ್ಞಾನೇಂದ್ರಿಯಗಳಿಗೆ ಆಗುವ ಟೆನ್ಶನ್ ಅನ್ನು ಕಡಿಮೆಗೊಳಿಸುವುದನ್ನೇ "ನೆತ್ತಿ ತಂಪಾಗುತ್ತೆ" ಎನ್ನುತ್ತಾರೆ ಎಂಬ ಸತ್ಯ ನನ್ನ ಮಕ್ಕಳ ನೆತ್ತಿಗೆ ಎಣ್ಣೆ ಒತ್ತುವಷ್ಟೊತ್ತಿಗೆ ತಿಳಿದು ಬಂದಿತ್ತು. ಮುಂದೆ ಮೈ ಕೈ ಕಾಲಿನ ಕೀಲುಗಳಿಗೆ ತಿಕ್ಕಿಕೊಳ್ಳುವ ನೋವಿನ ಎಣ್ಣೆ ತನ್ನ ಉಪಯುಕ್ತತೆಯ ಬಗ್ಗೆ ಇನ್ನಷ್ಟು ಪಾಠ ಹೇಳಿ ಬುದ್ಧಿ ಕಲಿಸಿತ್ತು.

ಬೆನ್ನು ಪರದೇಶಿಯೇ? ಯಾಕಾಗಬೇಕು? ಪರದೇಶಿ ಅಂದರೆ ಯಾರೋ ವಿದೇಶದವನೆಂದು ಆಗುವುದಿಲ್ಲವೇ? ಹೋಗಲಿ ನಿನಗೆ ಯಾರು ಹೇಳಿದರು ಬೆನ್ನು ಪರದೇಶಿಯೆಂದು? ಒಮ್ಮೆ ಪಟ್ಟು ಹಿಡಿದೆ. ಅವಳ ಕಣ್ಣುಗಳಲ್ಲಿ ನೀರು...ಸೆರಗಿನ ತುದಿಯಿಂದ ಒತ್ತಿಕೊಳ್ಳುತ್ತ.. "ಬೆನ್ನು ನಮ್ಮ ಹಿಂಭಾಗದಿಂದ ರಕ್ಷಣೆ ಕೊಡುವ ಭಾಗ ಪೋರೀ...ತೋಳಿಗೆ ಬೆನ್ನಿನ ಬೆಂಬಲವಿಲ್ಲದಿದ್ದರೆ ಏನೂ ಮಾಡಲಿಕ್ಕಾಗದು ತಿಳೀತೇ? ಅದರ ಮಹತ್ವ ಕಡಿಮೆಯಲ್ಲ.ದೇಹದ ಮುಂಭಾಗ ನಮಗೆ ಕನ್ನಡಿಯಲ್ಲಿ ಕಾಣಿಸುತ್ತದೆ. ಪ್ರತಿಯೊಂದು ಅಂಗವನ್ನೂ ನಮ್ಮ ಕೈಗಳು ಚಲಿಸಿ ಮುಟ್ಟುತ್ತವೆ. ತಟ್ಟುತ್ತವೆ. ನೋಯ್ದರೆ ನೀವುತ್ತ, ಆರೈಕೆ ಮಾಡಿಯಾವು. ಆದರೆ ಬೆನ್ನು ನೊಂದರೆ ತಟ್ಟಬಹುದೇನು? ನೀವಬಹುದೇನು ಹೇಳು? ಬೆನ್ನಿನ ಆರೈಕೆಗೆ ಇನ್ನೊಬ್ಬರ ಸಹಾಯ ಬೇಕೇ ಬೇಕು ಕಣೆ.. ಅದಕ್ಕೇ ಬೆನ್ನು ಪರದೇಶಿ ಅನ್ನಿಸಿಕೊಳ್ಳುತ್ತೆ. ಬೆನ್ನು ಗಟ್ಟಿ ಇದ್ದರೇನೇ ದೇಹಕ್ಕೆ ಬಲ..."

ಬೆರಗುವಡೆದಿತ್ತು ಮನಸು.."

ಆದರೂ "ನೀನು ಅತ್ತಿದ್ದು ಯಾಕಮ್ಮ? " ಒಳಗೊಳಗೇ ಸುತ್ತಿದ ಪ್ರಶ್ನೆ ಕೇಳಿದೆ.

"ಏನಿಲ್ಲ ತಮ್ಮನ ನೆನಪು" ಅಂದು ಮತ್ತೆ ಕಣ್ಣೊರೆಸಿಕೊಂಡು ತನ್ನ ತಾಯಿಯಿಲ್ಲದ ತವರು ಮನೆಯನ್ನು ನೆನೆಸಿಕೊಂಡಳು. ಅಣ್ಣತಮ್ಮಂದಿರು ಅಕ್ಕತಂಗಿಯರ ಬೆನ್ನು ಕಾಯುತ್ತಾರೆಂಬ ನಂಬಿಕೆ ಪ್ರಚಲಿತ ಇರುವುದು ಕೇಳಿದ್ದೆ, ಇಂದು ಅದೇಕೆ ನೆನಪು ಇವಳಿಗೆ ಇಷ್ಟೊಂದು ಕಾಡಿದೆ ಎಂದು ಯೋಚಿಸುತ್ತಿದ್ದಂತೆ ನೆನಪಾಯ್ತು ಹಬ್ಬಗಳ ಸಾಮ್ರಾಜ್ಯವನ್ನು ಹೊತ್ತು ತರ್ತೀನಿ ಅಂದು ಶ್ರಾವಣ ನಸುನಗುತ್ತದೆ.

ನಾಗರ ಪಂಚಮಿ, ಗೌರಿ, ಗಂಗೆ, ಶುಭ ಶುಕ್ರವಾರಗಳು, ಸ್ವರ್ಣಗೌರಿ... ರಕ್ಷಾಬಂಧನ.

ಬೆನ್ನು ತಟ್ಟಿ ಬೆಂಬಲದ ಆಶೀಷ ನೀಡುವ ಸೋದರನ ನೆನಪಾಗದಿದ್ದೀತೇ?

ಅಮ್ಮನ ಕೈ ಬೆರಳುಗಳು ನನ್ನ ಬೆನ್ನಿಗೆ ಎಣ್ಣೆಯಿಟ್ಟು ತೀಡುತ್ತಿದ್ದರೆ ಆ ಹಿತ ಮೈ ಮನಸ್ಸುಗಳನ್ನೆಲ್ಲ ಆವರಿಸಿತ್ತು.

■



# ಕಾಲೇಜ್ ರೀಯೂನಿಯನ್

**ನಂದಿನಿ ಕಾಪಡಿ, ಗೋವಾ**

ಮೆಡಿಕಲ್ ಕಾಲೇಜಿನ ರೀಯೂನಿಯನ್ ಕಾರ್ಯಕ್ರಮ 45 ವರ್ಷಗಳ ನಂತರ ಮೊದಲ ಬಾರಿಗೆ ನಡೆಯುವುದಿತ್ತು. 105 ಹಳೆಯ ವಿದ್ಯಾರ್ಥಿಗಳನ್ನು ಹುಡುಕಾಡಿ ಸಂಪರ್ಕಿಸಿ ಕಾರ್ಯಕ್ರಮ ಹಮ್ಮಿಕೊಳ್ಳುವುದು ಸುಲಭವಾಗಿರಲಿಲ್ಲ. ರಾಜ್ಯದ, ದೇಶದ, ದೇಶದ ಹೊರಗಿರುವ ಎಲ್ಲರೂ ಬರುವುದಾಗಲಿ ಮಾತು ಕೊಟ್ಟಾದ ಮೇಲೆ ಕಾರ್ಯಕ್ರಮ ನಡೆಸುವ ಕಮಿಟಿ ತಯಾರಾಯಿತು. ವಾಟ್ಸಪ್ ಗ್ರೂಪ್ ತಯಾರಾಗಿ ಎಲ್ಲರೂ ಹುಮ್ಮಸ್ಸಿನಿಂದ ಭಾಗವಹಿಸತೊಡಗಿದರು. ಮೊದಲಿಗೆ ಎಲ್ಲರಿಗೂ ತಮ್ಮ ತಮ್ಮ ವಿದ್ಯಾರ್ಥಿ ಸಮಯದ ಚಿತ್ರ ಮತ್ತು ಈಗಿನ ಚಿತ್ರ ಕಳಿಸಿ ಎಂದು ಕೋರಲಾಯಿತು. ಕೆಲವರು ಕಳಿಸಿದರು ಕೆಲವರು ಕಳಿಸಲಿಲ್ಲ. ಮುಖ ಮೈ ಬದಲಾಗಿದ್ದಲ್ಲದೆ ಅವರ ಈಗಿನ ಸ್ಥಿತಿ ಗತಿಗಳೂ ಬದಲಾಗಿದ್ದವು. ಯಾವ ಯಾವ ಪ್ರಾಧ್ಯಾಪಕರನ್ನು ಕರೆಯುವುದು ಎಂದು ಗೊತ್ತು ಮಾಡಿದ ಮೇಲೆ ಕಾರ್ಯಕ್ರಮ ಹೇಗೆ ನಡೆಯಬೇಕು ಎಂಬ ವಿಚಾರ ಧಾರೆ ಪ್ರಾರಂಭವಾಯಿತು. ಸಿನಿಮಾ ನಟರನ್ನು ಕರೆದರೆ ಹೇಗೆ, ಬೇಡ ಮಂತ್ರಿಗಳಿದ್ದರೆ ಚೆನ್ನ, ಹಾಸ್ಯಗಾರರು, ಗಾಯಕರು, ಒಟ್ಟಿನಲ್ಲಿ ವೈದ್ಯಕೀಯ ಜಗತ್ತಿನವರು ಬೇಡ. ಸುಂದರ ವಿದ್ಯಾರ್ಥಿ ಜೀವನ ನೆನಪಿಸಿಕೊಂಡು, ಎರಡು ದಿನ ಮತ್ತೆ ಅವೇ ದಿವಸಗಳನ್ನು ಮರುಕಳಿಸೋಣ ಎಂದು ಜಂಟಿ ಅಭಿಪ್ರಾಯವಾಯಿತು. ಸ್ಥಳ, ಹೋಟೆಲ್, ಎಲ್ಲರ ವೈಯುಕ್ತಿಕ ಪ್ರವಾಸ ಮಾಹಿತಿ ಎಲ್ಲವನ್ನೂ ಒಟ್ಟಾಯಿಸಿ ಕಾರ್ಯಕ್ರಮ ಭರ ಭರ ಬಂದೆ ಬಿಟ್ಟಿತು. ಸ್ಥಳ: ಸೂರ್ಯ ಕಾಂತಿ ಹಿಲ್ ರಿಸಾರ್ಟ್; ಹಿಂದಿನ ದಿನವೇ ಕೆಲವರ ಆಗಮನವಾಯಿತು. ಎಲ್ಲರೂ ನೋಡಲು ಬದಲಾಗಿದ್ದಾರೆ. ಯಾರಿಗೂ ಯಾರ ಗುರುತು ಸಿಗುತ್ತಿಲ್ಲ. ಆದರೆ ಕೆಲವೇ ಕ್ಷಣಗಳಲ್ಲ 45ವರ್ಷ ಕಾಲ ಕರಗಿ ಹೋಗಿ, ತಮ್ಮ ತಮ್ಮ ಮಿತ್ರರ ಹತ್ತಿರ ಮೊದಲಿನಂತೆ ನಗುತ್ತ ಮಾತಾಡುತ್ತಿದ್ದಾರೆ!

ಕಾರ್ಯಕ್ರಮದ ಹಿಂದಿನ ಸಂಜೆ; ಸುಂದರ್ ಮತ್ತು ಸುರೇಶ ಪೆಗ್ ಕುಡಿಯುತ್ತಾ, ಹೋಟೆಲಿನ ಬಾರಿನಲ್ಲಿ ಕುಳಿತಿದ್ದಾರೆ. ನಮ್ಮ ಮಿಸ್ ಇಂಡಿಯಾ ಬರುವಳು ತಾನೇ ? ವಾಟ್ಸಪ್ಪಲ್ಲಿ ಅವಳ ಒಂದೂ ಮೆಸೇಜ್ ಕಾಣಲಿಲ್ಲ ಎಂದು ತಮ್ಮ ಕ್ಲಾಸ್ ಮೇಟ್ ಪ್ರೀತಿಯ ಬಗ್ಗೆ ಮಾತನಾಡುತ್ತಿದ್ದಾರೆ. ಆಗಿನ ಕಾಲದಲ್ಲಿ ಪ್ರೀತಿ ವಿಶ್ವಸುಂದರಿಗಿಂತ ಸುಂದರಿ ! ಓದಿನಲ್ಲಿ ಸರಸ್ವತಿಯ ಶಿಷ್ಯೆ ! ಆಟದಲ್ಲಿ ಅದೂ ಟೇಬಲ್ ಟೆನಿಸ್ ನಲ್ಲಿ ಚಾಂಪಿಯನ್! ಸುಂದರ್ ಓದಿನಲ್ಲಿ ಮುಂದಾದರೆ ಸುರೇಶ ಆಟದಲ್ಲಿ ಮುಂದು. ಆದರೆ ಇಬ್ಬರನ್ನೂ ಹಿಂದೆ ಹಾಕುತ್ತಿದ್ದ ಪ್ರೀತಿಯ ಮೇಲೆ ಇಬ್ಬರಿಗೂ ಒಂದು ತರಹ ಮತ್ಸರ, ಆದರೆ ಏನೋ ಒಂದು ತರಹ ಮೋಹ ! ಮಿಸ್ ಇಂಡಿಯಾ ಎಂದು ಕರೆಸಿಕೊಳ್ಳುವ ಪ್ರೀತಿ ಪದವಿಯ ನಂತರ ಅಮೇರಿಕಾ ದೇಶಕ್ಕೆ ಹಾರಿಬಿಟ್ಟಿದ್ದಳು. ಆ ನಂತರ ಅವಳ ಬಗ್ಗೆ ಯಾರಿಗೂ ಮಾಹಿತಿ ಇರಲಿಲ್ಲ.

ಇತ್ತ ರೂಮ್ ನಂಬರ್ 102 ರಲ್ಲಿ ನಾಲ್ಕು ಸಹಪಾಠಿಗಳು ಚರ್ಚಿಸುತ್ತಿದ್ದಾರೆ. ಅನಂತನಿಗೆ ಬರಬೇಕಾದ ರ್‍ಯಾಂಕ್ ಶ್ಯಾಮನಿಗೆ ಬಂದದ್ದು ಹೇಗೆ ? ಶ್ಯಾಮನ ಚಿಕ್ಕಪ್ಪ ಆರೋಗ್ಯ ಸಚಿವರ ಕಾರ್ಯದರ್ಶಿ ಎಂದೇ ? ಹೆಡ್ ಒಫ್ ದಿ ಡಿಪಾರ್ಟ್ಮೆಂಟ್ ಮಾಡಿದ ಡಯಾಗ್ನೋಸಿಸ್ ತಪ್ಪು ಎಂದು ಅನಂತ್ ಹೇಳಿದ್ದರಿಂದಲೇ ? ಮೂರನೇ ವರ್ಷದಲ್ಲಿ ಹೇಳಿಕೊಟ್ಟ ಪಾಠವೆಲ್ಲ ಈಗ ಬದಲಾಗಿದೆಯಲ್ಲ ? ಆಗಿನ ಪಥ್ಯ



ಪುಸ್ತಕಗಳಿಗೆ ಬೆಲೆಯೇ ಇಲ್ಲವಲ್ಲ! ಗೂಗಲ್ ನೋಡಿಕೊಂಡು ಹೇಗೆ ತಮ್ಮ ಪೇಷಂಟ್ಗಳು ಕಾಡಿಸುತ್ತಾರೆ ! ಇತ್ಯಾದಿ ಇತ್ಯಾದಿ ಚರ್ಚೆ. ಪಾರ್ಕಿನ್‌ಸನ್ ರೋಗದ ಬಗ್ಗೆ ತಾವುಗಳು ಕಾಲೇಜಿನಲ್ಲಿ ಕಲಿತಿದ್ದು, ಈಗ ನೋಡುತ್ತಿರುವುದು, ಈಗಿನ ಟ್ರೀಟ್ಮೆಂಟ್ ಹೇಗೆ ಇದರ ಬಗ್ಗೆ ಚರ್ಚಿಸುತ್ತ ಸಂಜೆ ಕಳೆಯುತ್ತಾರೆ. ಪ್ರೀತಿ ನ್ಯೂರೋಲಜಿ ಕ್ಲಾಸಿನಲ್ಲಿ ಕೇಳುತ್ತಿದ್ದ ಪ್ರಶ್ನೆಗಳು ಆಗಿನ ಕಾಲಕ್ಕೆ ಉತ್ತರವಿಲ್ಲದವು. ಆದರೆ ಈಗ ಸಂಶೋಧನೆ ನಡೆದು ಅವಳ ಪ್ರತಿಯೊಂದು ಪ್ರಶ್ನೆಗೂ ಉತ್ತರ ಸಿಕ್ಕಿದೆ ಎಂದು ಜಗನ್ನಾಥ್ ಹೇಳುತ್ತಾನೆ. ಅಂದ ಹಾಗೆ ಪ್ರೀತಿ ಯಾವಾಗ ಬರುತ್ತಾಳೆ. ಅವಳೊಂದಿಗೆ ಈ ಬಗ್ಗೆ ಚರ್ಚೆ ನಡೆಸಬೇಕು ಎಂದು ಅಶೋಕ್ ಹೇಳುತ್ತಾನೆ. ಕ್ಲಾಸಿನ ಕುಡುಮಿಗಳು ಎಂದು ಹೆಸರು ತೆಗೆದುಕೊಂಡ ಈ ವಿದ್ಯಾರ್ಥಿಗಳು ಈಗ ದೊಡ್ಡ ತಜ್ಞರಾಗಿದ್ದಾರೆ !

ರೂಮ್ ನಂಬರ್ 204; ರಾಶಿ, ಪದ್ಮಿನಿ, ರಶೀದಾ, ಸಾವಿತ್ರಿ, ಲೂಸಿ ಒಟ್ಟಾಗಿ ನಗುತ್ತಿದ್ದಾರೆ ! ತಮ್ಮ ಸಹಪಾಠಿಗಳು ಒಂದನೇ ವರ್ಷದಲ್ಲಿ, ಎರಡನೇ ವರ್ಷದಲ್ಲಿ ಹಾಗೂ ಮೂರನೆಯ ವರ್ಷದ ಮೊದಲ ಭಾಗದಲ್ಲಿ ಮಾಡಿದ್ದ ಚೇಷ್ಟೆಗಳನ್ನ ನೆನಪು ಮಾಡಿಕೊಳ್ಳುತ್ತಿದ್ದಾರೆ. ಅಬ್ದುಲ್ ರಾತ್ರಿ ಡ್ಯೂಟಿ ರೂಮಿನಲ್ಲಿ ಗೊರಕೆ ಹೊಡೆಯುತ್ತ ಮಲಗಿದ್ದನ್ನು ನೋಡಿ ನರ್ಸುಗಳು ಮೇಲಿನವರಿಗೆ ಕಂಪ್ಲೇಂಟ್ ಕೊಟ್ಟಿದ್ದು, ರಾಜೇಶ್ ಮಕ್ಕಳಿನ ವಾರ್ಡಿನಲ್ಲಿ ತುಂಬಾ ಅಳುತ್ತಿದ್ದ ಮಗುವಿಗೆ ಮೆತ್ತಗೆ ಜಿಗುಟಿ ಕಣ್ಣುಬಿಟ್ಟಿದ್ದು, ಅನಂತ್ ಪ್ರೊಫೆಸರ್ ಮುಂದೆ ಬುದ್ಧಿವಂತಿಕೆ ತೋರಿಸಲು ಹೋಗಿ ಬೈಸಿಕೊಂಡದ್ದು, ಎಲ್ಲವನ್ನೂ ನೆನೆಸಿಕೊಳ್ಳುತ್ತಾರೆ. ಅಂದ ಹಾಗೆ ನಾಳೆ ಬೆಳಗಿನ ಕಾರ್ಯಕ್ರಮಕ್ಕೆ ಎಂತಹ ಸೀರೆ ಉಡುತ್ತೀಯ. ನೀನು ಈಗಲೂ ಹೈ ಹೀಲ್ಸ್ ಹೇಗೆ ಹಾಕಿ ಕೊಳ್ಳುತ್ತೀಯ, ನಿನ್ನ ಮಕ್ಕಳು ಏನು ಮಾಡುತ್ತಿದ್ದಾರೆ. ಈ ರೀತಿ ಒಂದೇ ಸಮನೆ ಮಾತನಾಡುತ್ತಿದ್ದಾರೆ ! ಪ್ರೀತಿ ಬರುತ್ತಾಳೆ ತಾನೇ ? ಯಾರಿಗೂ ಸೂಚನೆಯಿಲ್ಲ. ತಮ್ಮ ವಿದ್ಯಾರ್ಥಿ ಜೀವನದ ನಂತರ ಅವಳು ಮಾಯವಾಗಿದ್ದಳು ಅಮೆರಿಕಾದಲ್ಲಿರುವ ತಮ್ಮ ಸಹಪಾಠಿಗಳಿಗೂ ಅವಳ ಬಗ್ಗೆ ಏನೂ ಮಾಹಿತಿಯಿಲ್ಲ. ಮಧ್ಯ ಪ್ರದೇಶ ನಿಂದ ಬಂದಿದ್ದ ಅವಳ ಕುಟುಂಬದ ಬಗ್ಗೆ ಮುಂಬೈನಲ್ಲಿ ಯಾರಿಗೂ ಪರಿಚಯವಿದ್ದಿಲ್ಲ. ಹುಡಿಗಿಯರಿಗೂ ಪ್ರೀತಿ ಮೇಲೆ ಮತ್ಸರ ಆದರೆ ಸ್ನೇಹ ಕೂಡ! ಅವಳ ಸುಂದರ ಹಾಗೂ ಉದ್ದ ಜಡೆ, ಕಪ್ಪು ಕಣ್ಣುಗಳು, ನೀಳ ಮೂಗು, ಅವಳ ಉಡುಪುಗಳು, ಅವಳು ಕ್ಲಾಸಿನಲ್ಲಿ ಕೇಳುವ ಪ್ರಶ್ನೆಗಳು, ಸರಸರನೆ ಅಧ್ಯಾಪಕರ ಪ್ರಶ್ನೆಗೆ ಕೊಡುವ ಉತ್ತರಗಳು, ಅವಳು ಹುಡುಗರ ಜತೆಯಲ್ಲೇ ಬಾಸ್ಕೆಟ್ ಬಾಲ್ ಆಡುವ ಛಾತಿ, ಹೀಗೆ ಪ್ರೀತಿ ಕ್ಲಾಸಿನ ನಾಯಕಿ ಎಂದರೆ ಸುಳ್ಳಲ್ಲ ಎಂದು ಅವರೆಲ್ಲರ ಮತ ರಾತ್ರಿ ಊಟಕ್ಕೆ ಎಲ್ಲರೂ ಸೇರಿದರು. ಒಬ್ಬರನ್ನೊಬ್ಬರು ಗುರುತಿಸುತ್ತ ನಗುತ್ತ ಕಾಲ ಕಳೆದರು. ನರಪೇತಲ ನಾರಾಯಣ ಎನಿಸಿ ಕೊಳ್ಳುತ್ತಿದ್ದವರೆಲ್ಲರೂ ಸ್ಥೂಲ ಶರೀರ ದಿಂದ ಬೀಗುತ್ತಿದ್ದರೆ, ತಲೆ ತುಂಬಾ ಕೂದಲಿದ್ದವರು ಕೂದಲಿಲ್ಲವರಾಗಿದ್ದಾರೆ. ಕೆಲವರು ವಿಗ್ ಹಾಕಿಕೊಂಡೂ ಇದ್ದಾರೆ ! ಮಾರನೆಯ ದಿನ ಬೆಳಿಗ್ಗೆ ಪೂರ್ತಿ ಕ್ಲಾಸು ಒಂದಾಗುತ್ತದೆ ಎಂದು ಸಂಚಾಲಕ ಮಣಿ ಹೇಳುತ್ತಾರೆ. ರೋಲ್ ಕಾಲ್‌ನ ಕಾಪಿ ಕಾಲೇಜಿನಿಂದ ತಂದಿದ್ದೀನಿ. ಬೆಳಗ್ಗೆ ಉದ್ಘಾಟನೆಯ ಮೊದಲು ತೆಗೆದುಕೊಳ್ಳುವಾ ಎನ್ನುತ್ತಾನೆ ಬಲಬೀರ್ಸಿಂಗ್. ಬಹು ರಾತ್ರಿಯ ತನಕ ಎಲ್ಲರೂ ಮಾತನಾಡುತ್ತಾರೆ. ಪ್ರೀತಿ ಒಬ್ಬಳೇ ಬಂದಿಲ್ಲ. ಇನ್ನೆಲ್ಲರೂ ಇದ್ದಾರೆ ಎಂದು ಪದೇ ಪದೇ ಹೇಳಿಕೊಳ್ಳುತ್ತಾರೆ.



110 ವಿದ್ಯಾರ್ಥಿಗಳಿದ್ದ ಅವರ ಬ್ಯಾಚ್ 1975ರಲ್ಲಿ ಪಾಸಾಗಿ, ಎಲ್ಲರೂ ಚದುರಿ ಹೋಗಿದ್ದರು. ಉಚ್ಚ ಪ್ರಶಿಕ್ಷಣ ಕೆಲವರು ಪಡೆದರೆ, ಇನ್ನು ಕೆಲವರು ಪ್ರಾಕ್ಟಿಸ್

ಮಾಡುತ್ತಿದ್ದರು. ಎಲ್ಲರಿಗೂ ಈಗ ಇಳಿ ವಯಸ್ಸು. ವಯೋಧರ್ಮ ಯಾರನ್ನೂ ಬಿಟ್ಟಿರಲಿಲ್ಲ. ಆದರೆ 45 ವರ್ಷಗಳ ನಂತರ ಸಹಪಾಠಿಗಳು ಒಂದಾದಾಗ ವಯಸ್ಸು ಹಾರಿಹೋಗಿ ಎಲ್ಲರಿಗೂ ಯೌವನ ಮರುಕಳಿಸಿತ್ತು. ರಿಯೂನಿಯನ್ ಅಂದ ಮೇಲೆ ಅದೇ ತಾನೇ ಉದ್ದೇಶ? ಯಾರಿಗೂ ಹೆಂಡತಿ ಗಂಡಂದಿರ ಕಾಟವಿಲ್ಲ, ಮಕ್ಕಳು ದೊಡ್ಡವರಾಗಿ ಗೂಡು ಬಿಟ್ಟು ಹೋಗಿದ್ದಾರೆ! ಉದುರುತ್ತಿರುವ ಕೂದಲಿಗೆ ಬಣ್ಣ ಹಚ್ಚಿ, ಅತ್ಯಂತ ನವೀನ ಮಾದರಿಯ ಉಡುಪು ಧರಿಸಿ ಎಲ್ಲರೂ ಖುಷಿಯಾಗಿದ್ದರು.

ಹೋಟೆಲ್ಲಿನಲ್ಲಿ ಬಹುತೇಕ ಎಲ್ಲ ರೂಮುಗಳೂ ಇವರಿಗೇ ಕಾದಿರಿಸಲಾಗಿತ್ತು. ಒಂದೆರಡು ರೂಮುಗಳಲ್ಲಿ ಮಾತ್ರ ಬೇರೆ ಜನರಿದ್ದರು. ಸಂದೀಪ್ ರಾಯ್ ಮತ್ತು ಗೆಳೆಯರು ಮಾರನೆಯ ದಿನ, ತಮ್ಮ ಪ್ರೊಫೆಸರ್ ಕಪೂರವರು ಅನಾಟಮಿ ಪಾಠ ಹೇಗೆ ಕಲಿಸುತ್ತಿದ್ದರು ಮತ್ತು ಶಿಷ್ಯರು ಅವರ ಚೇಷ್ಟೆ ಹೇಗೆ ಮಾಡುತ್ತಿದ್ದರು ಎಂಬ ಹಾಸ್ಯ ನಾಟಕ ತಯಾರು ಮಾಡಿಕೊಂಡು ಬಂದಿದ್ದರು. ಗಿರಿಜಾ ತಮ್ಮ ಪುರುಷ ಸಹಪಾಠಿಗಳು ಮೆಟರ್ನಿಟಿ ವಾರ್ಡ್‌ನಲ್ಲಿ ಹೇಗೆ ಕೆಲಸ ತಪ್ಪಿಸಿಕೊಳ್ಳುತ್ತಿದ್ದರು ಎಂಬ ಲಘು ಭಾಷಣಕ್ಕೆ ಸಿದ್ಧವಾಗಿದ್ದರು. ಫಾರ್ಮಕಾಲಜಿ ಕ್ಲಾಸಿನಲ್ಲಿ ಹುಡುಗರು ಬೇಕಂತಲೇ ಯದ್ವಾ ತದ್ವಾ ಪ್ರಶ್ನೆ ಕೇಳಿ, ಕ್ಲಾಸಿನಿಂದ ಹೊರಹಾಕಿಸಿಕೊಂಡು ಸಿನಿಮಾ ನೋಡಲು ಹೋಗುತ್ತಿದ್ದ ಬಗ್ಗೆ ಸುರೇಶ ಮತ್ತು ರಮೇಶ್ ನಾಟಕ ಮಾಡುವವರಿದ್ದರು. ನಿರ್ಮಲಾ ಸಂಗೀತ ವಿದೂಷಕಿ. ಅವರ ಲಘು ಸಂಗೀತ, ಕಿಶನ್ ರಾಘವ್ ಇಂಗ್ಲಿಷ್ ಹಾಡುಗಳು ಮತ್ತು ಜಾರ್ಜ್ ಗಿಟಾರ್ ನುಡಿಸುತ್ತ ಹಾಡುವ ಅಂದಿನ ಕಾಲದ ಇಂಗ್ಲಿಷ್ ಹಾಡುಗಳು... ಹೀಗೆ ವಿವಿಧ ಕಾರ್ಯಕ್ರಮಗಳು ಇನ್ನೆರಡು ದಿನಗಳಲ್ಲಿ ನಡೆಯುವುದಿತ್ತು. ಅಂದ ಹಾಗೆ ಪ್ರೀತಿ ಬರುವಳೋ ಇಲ್ಲವೋ ? ಪ್ರತಿ ವಿಷಯದಲ್ಲೂ ಚುರುಕಾದ ಅವಳು ಸಹಪಾಠಿಗಳಿಗೆ, ಅಧ್ಯಾಪಕರಿಗೆ  ನಂತರ ರೋಗಿಗಳಿಗೆ ಅಚ್ಚು ಮೆಚ್ಚು. ಅನಂತ್ ಮತ್ತು ಅವಳಿಗೆ ಯಾವುದೋ ಡಯಾಗ್ನೋಸಿಸ್ ಬಗ್ಗೆ ಜಗಳವಾಗಿ, ವಿದ್ಯಾರ್ಥಿಗಳೆಲ್ಲಾ ಎರಡೂ ಪಕ್ಷಕ್ಕೆ ಸೇರಿ, ಭಾರೀ ಮಾತಿನ ಚಕಮಕಿ ಆಗಿ, ಕಡೆಗೆ ಪ್ರೊಫೆಸರ್ ಇಬ್ಬರೂ ಸರಿ ಎಂದು ತೀರ್ಮಾನ ಕೊಟ್ಟಾಗ ಎಲ್ಲರೂ ದುಡ್ಡು ಸೇರಿಸಿ ಕ್ಯಾಂಟೀನಿನಲ್ಲಿ ಬಿರಿಯಾನಿ ಪಾರ್ಟಿ ಮಾಡಿಕೊಂಡಿದ್ದರಲ್ಲ! ಅನಂತ್ ಸ್ವಲ್ಪ ಗರ್ವಿಷ್ಟ. ಪ್ರೀತಿಯ ಮೇಲೆ ಮತ್ಸರ ಕೂಡ.

ಕಡೆಯ ವರ್ಷದಲ್ಲಿ ಪ್ರೀತಿಗೆ 5 ಮೆಡಲ್ಲುಗಳು ಸಿಕ್ಕಿ ಇವನಿಗೆ 3 ಸಿಕ್ಕಾಗ ಸಿಟ್ಟಿನಿಂದ ಎಲ್ಲರಮೇಲೆ ಕೂಗಾಡಿದ್ದ. ಎರಡನೇ ವರ್ಷದಲ್ಲಿ ಸ್ವಾಮಿ ಪ್ರೀತಿಗೆ ಒಂದು ಲವ್ ಲೆಟರ್ ಕೊಡಲು ಹೋಗಿ, ಗಾಬರಿಯಿಂದ ಪತ್ರ ಕೆಳಗೆ ಬಿದ್ದು ರಾಜೀವನ ಕೈಗೆ ಸಿಕ್ಕು ಹುಡುಗರ ಹಾಸ್ಟೆಲ್ಲಿನಲ್ಲಿ ಭಾರೀ ಹಾಸ್ಯದ ವಿಚಾರವಾಗಿ, ಎಲ್ಲರೂ ಅವನನ್ನು ರೇಗಿಸಿ, ಸ್ವಾಮಿ ಊರಿಗೆ ಹೋಗಿದ್ದ! ಆಹಾ ಇಂತಹ ಸುಂದರ ನೆನಪುಗಳು! ಈಗ ಸ್ವಾಮಿ ದೇಶದ ಹೆಸರಾಂತ ಹೃದಯ ತಜ್ಞ! ಈಗಲೂ ಪ್ರೀತಿಗೆ ಲವ್ ಲೆಟರ್ ಕೊಡಬಹುದು. ಪರಿಸರ ಅನುಕೂಲವಾಗಿದೆ ಎಂಬ ಚರ್ಚೆ ನಡೆದುಕೊಂಡೇ ಹೋಯಿತು!

ಮಾರನೆಯ ದಿನ ಬಂದಿತು. ಕಾರ್ಯಕ್ರಮದ ಸಂಚಾಲಕ ಬಲಬೀರ್ ಸಿಂಗ್ ಎಲ್ಲರಿಗೂ ಸ್ವಾಗತ ಕೋರಿದರು..ಅಂದಿನ ಸಮಾರಂಭದ ಉದ್ಘಾಟನೆಗೆ ಬಂದಿದ್ದ ಸಚಿವರು ಇವರ ಕಾಲೇಜಿನಲ್ಲಿಯೇ ಸೇರಿ ಮೊದಲ್ನೇ ವರ್ಷವೇ ಬಿಟ್ಟುಹೋಗಿದ್ದವರು. ವೈದ್ಯನಾಗಲಿಲ್ಲ, ಆದರೆ ಆರೋಗ್ಯ ಮಂತ್ರಿಯಾದೆ ಎಂದು ಭಾಷಣ ಬಿಗಿದರು! ಕಾರ್ಯಕ್ರಮದ ಸಂಚಾಲಕ ಬಲಬೀರ್ ಸಿಂಗ್ ಎಲ್ಲರಿಗೂ ಸ್ವಾಗತ ಕೋರಿದರು.



ಕಾರ್ಯಕ್ರಮ ಸಾಂಪ್ರದಾಯಕವಾಗಿ ದೀಪ ಬೆಳಗಿ ಆರಂಭವಾಯಿತು. ಲಘು ಉಪಹಾರದ ನಂತರ ಮಂತ್ರಿಗಳು ಹೋದರು ! ಅಂದೇ ಬೆಳಗ್ಗೆ ಬಂದಿದ್ದ ವಿದ್ಯಾರ್ಥಿಗಳು ಎಲ್ಲರೊಂದಿಗೆ ಬೇರೆಯತೊಡಗಿದರು. ಪ್ರೀತಿ ಮಾತ್ರ ಬರಲಿಲ್ಲ!

ಬಲಬೀರ್ ಸಿಂಗ್ ಎಲ್ಲರನ್ನೂ ಕೂರಿಸಿ ರೋಲ್ ಕಾಲ್ ತೆಗೆದು ಒಂದೊಂದೇ ಹೆಸರು ಕೂಗಿದರು. 45 ವರ್ಷಗಳ ಹಿಂದೆ ಹೇಗೆ ಯಸ್ ಸರ್ ಎನ್ನುತ್ತಿದ್ದರೋ ಹಾಗೆಯೇ ಎಲ್ಲರೂ ನಗುತ್ತ ತಮ್ಮ ತಮ್ಮ ಹೆಸರು ಬಂದಾಗ ಯಸ್ ಸರ್ ಎಂದು ಕಿರುಚಿದರು. ಮಿಸ್ ಪ್ರೀತಿ ಬಜಾಜ್ ಎಂದು ಹೆಸರು ಕೂಗಿದಾಗ, ತುಂಬಾ ಹಿಂದಿನಿಂದ ಯಸ್ ಸರ್ ಎಂಬ ಉತ್ತರ ಕೇಳಿ ಎಲ್ಲರೂ ಚಕ್ಕನೆ ಹಿಂದೆ ನೋಡಿದರು. ಪ್ರೀತಿ ಎಲ್ಲೂ ಕಾಣಲಿಲ್ಲ. ಈಸ್ ದಿಸ್ ಸಂ ಜೋಕ್ ಎಂದು ಬಲಬೀರ್ ಸಿಂಗ್ ಕೇಳುತ್ತಲೇ ಸರ್, ನೋ ಜೋಕ್ ಎನ್ನುತ್ತಾ ವೀಲ್ ಚೇರ್‌ನಲ್ಲಿ ಕುಳಿತ ಮಹಿಳೆಯೊಬ್ಬರು ಮುಂದೆ ಬಂದರು. ವೀಲ್ ಚೇರ್ ತಳ್ಳುತ್ತಿದ್ದವರು ಒಬ್ಬ ಆಫ್ರಿಕಾ ಜನಾಂಗದ ಮಹಾಶಯರು !

ಎಲ್ಲರೂ ಅಚ್ಚರಿಯಿಂದ ನೋಡುತ್ತಿದ್ದಂತೆ ವೀಲ್ ಚೇರ್ ಸ್ಟೇಜಿನ ತನಕ ಬಂದ ಮೇಲೆ ಆ ಮಹಾಶಯರು ಮಹಿಳೆಯನ್ನು ಇಳಿಸಿದರು. ಎರಡೂ ತೋಳಿನಲ್ಲಿ ಕೈ ಆಸರೆಗಳು ! ಕಾಲುಗಳಿದ್ದ ಕಡೆ ಬ್ಲೇಡುಗಳು ! ಆಕೆಯನ್ನು ನಿಧಾನವಾಗಿ ಸ್ಟೇಜ್ ಹತ್ತಿಸಿ ಆ ಮಹಾಶಯರು ಆ ಮಹಿಳೆಯನ್ನು ಕುರ್ಚಿಯಲ್ಲಿ ಕೂರಿಸಿ ಕೆಳಗಿಳಿದರು !

ಆಗಿನ ಕಾಲದಲ್ಲಿ ಹೆಸರು ಮಾಡಿದ್ದ ರಾಜೇಶ್ ಖನ್ನಾ ಪಾತ್ರ ಮಾಡಿದ್ದ ಚಿತ್ರವೊಂದರಲ್ಲಿ ಬಂದಿದ್ದ ಡೈಲಾಗ್ ಹೇಳುತ್ತಾ ನಿಧಾನವಾಗಿ ನಗುತ್ತ ನಾನೇ ಪ್ರೀತಿ. ಭಗವದ್ಗೀತೆಯ ಮೇಲೆ ಆಣೆ ಮಾಡಿ ಹೇಳುತ್ತೇನೆ ಎಂದು ನಕ್ಕಾಗ, ಹಳೆಯ ಪ್ರೀತಿಯ ಧ್ವನಿ ಕೇಳಿ ಎಲ್ಲರೂ ಅಚ್ಚರಿಯಿಂದ ನೋಡತೊಡಗಿದರು. ಸ್ನೇಹಿತರೇ, ಎಲ್ಲರಿಗೂ ನಮಸ್ಕಾರ! ನೀವೆಲ್ಲ ಬರುವ ಮೊದಲೇ ನಾನು ಮತ್ತು ನನ್ನ ಪತಿ ಸ್ಟೀವ್ ಇಲ್ಲಿ ಬಂದೆವು. ನಿನ್ನೆ ಮೊನ್ನೆಯಿಂದ ನಿಮ್ಮ ಮುಂದೆಯೇ ಹಲವು ಬಾರಿ ನಾನು ಹಾದು ಹೋದೆ...ಯಾರೂ ನನ್ನನ್ನು ಗುರುತಿಸಲಿಲ್ಲ. ನನ್ನ ವಿದ್ಯಾರ್ಥಿ ಜೀವನ ನೆನಪು ನಿಮ್ಮೆಲ್ಲರ ಮಾತುಗಳಿಂದ ಸುಂದರವಾಗಿ ನನ್ನ ಹೃದಯವನ್ನು ಸವರಿದವು! ಥ್ಯಾಂಕ್ ಯು! ನನ್ನ ಬಗ್ಗೆ ನೀವೆಲ್ಲರೂ ತೋರಿಸಿದ ಕಾಳಜಿ ನೋಡಿ ಮನಃ ಪೂರ್ವಕವಾಗಿ ನಕ್ಕೆ ! ಸ್ಟೀವ್, ನನ್ನ ಸಹಪಾಠಿ ಸ್ವಾಮಿ ನಂಗೆ ಬರೆದಿದ್ದ ಲವ್ ಲೆಟರ್ ನಂಗೆ ಸಿಗಲೇ ಇಲ್ಲ ! ಸಿಕ್ಕಿದ್ದರೆ ಇಂದು ಕಾರ್ಯಕ್ರಮಕ್ಕೆ ತರುತ್ತಿದ್ದೆ ! ನಿಮ್ಮೆಲ್ಲರನ್ನು ನೋಡಿ, ನಿಮ್ಮ ಹರಟೆ ಮಾತುಗಳನ್ನು ಕೇಳಿ ಮನ ತುಂಬಿ ಬಂದಿದೆ. ನೀವೆಲ್ಲ ಸಾಧಿಸಿರುವ ಕಾರ್ಯದ ಬಗ್ಗೆ ಹೆಮ್ಮೆಯಾಗುತ್ತಿದೆ.! ಅಭಿನಂದನೆಗಳು!

ನಾನು ಅಮೆರಿಕಾಗೆ ಹೋದದ್ದು ಸ್ನಾತಕೋತ್ತರ ಪದವಿ ಪಡೆಯಲು. ಮೊದಲನೇ ವರ್ಷದಲ್ಲಿ ನಮ್ಮ ಗೆಳೆಯರ ಗುಂಪು ಸ್ವಿಟ್ಜರ್ಲ್ಯಾಂಡ್ ನಲ್ಲಿ ಚಳಿಗಾಲದಲ್ಲಿ ಐಸ್ ಸ್ಕೇಟಿಂಗ್ ಮಾಡೋಣವೆಂದು ನಿರ್ಧರಿಸಿದರು. ಅದರ ತರಬೇತಿಯನ್ನೂ ನಾನು ಕೆಲದಿನ ತೆಗೆದುಕೊಂಡ ನಂತರ ಐಸ್ ಸ್ಕೇಟಿಂಗ್ ಮಾಡಲು ಪ್ರಾರಂಭಿಸಿದೆ. ಎರಡು ದಿನಗಳು ಚೆನ್ನಾಗಿ ನಡೆದವು. ಆದರೆ ಮೂರನೇ ದಿನ ಹಿಂದಿನಿಂದ ಒಬ್ಬ ಹುಡುಗಿ ನಂಗೆ ಡಿಕ್ಕಿ ಹೊಡೆದಳು. ನನ್ನ ಸಮತೋಲನ ಹೋಗಿ, ಯದ್ವಾ ತದ್ವಾ ಜಾರುತ್ತ ವೇಗವಾಗಿ ಒಂದು ಬಂಡೆಗೆ ಬಡಿದು ಮೂರ್ಛೆ ಹೋದೆ. ಸ್ಮೃತಿ ಬಂದಾಗ ನಾನು ಆಸ್ಪತ್ರೆಯಲ್ಲಿದ್ದೆ. ಎರಡೂ ಕಾಲುಗಳು ಕತ್ತರಿಸಲ್ಪಟ್ಟಿದ್ದವು. ಅಷ್ಟಲ್ಲದೇ ಬೇರೆ ಬೇರೆ



ಎಲುಬುಗಳಲ್ಲೂ ಏಟಾಗಿ ನನ್ನ ದೇಹ ವಿಪರೀತವಾಗಿ ಗಾಯಗೊಂಡಿತ್ತು.

ಆಗ ನನ್ನ ಎದುರಿಗೆ ಒಬ್ಬ ದೇವ ದೂತ ಬಂದು ನಿಂತ. ಅವನೇ ಸ್ಟೀವ್. ನನಗಿಂತ ಸೀನಿಯರ್ ಆಗಿದ್ದವನು. ನನ್ನನ್ನು ಅಮೆರಿಕಾಗೆ ವಾಪಸು ಕರೆತಂದು ಹಾಸ್ಪಿಟಲ್ ಸೇರಿಸಿದ. ಅವನ ತಾಯಿ ಅದೇ ಹಾಸ್ಪಿಟಲ್‌ನಲ್ಲಿ ನರ್ಸ್ ಆಗಿದ್ದರು. ಅವರಿಬ್ಬರ ಉಪಚಾರದಿಂದ, ನಾನು ಮತ್ತೆ ನಿಲ್ಲಲು ಕಲಿತೆ. ಒಂದು ದಿನ್ ಸ್ಟೀವ್ ನಂಗೆ ಪ್ರೊಪೋಸ್ ಮಡಿದ. ನಾವಿಬ್ಬರೂ ಲಗ್ನವಾದೆವು. ಅವನ ಪದವಿ ಮುಗಿದ ತಕ್ಷಣ ನಾವಿಬ್ಬರೂ, ಆಫ್ರಿಕಾ ಖಂಡದಲ್ಲಿ ಯುದ್ಧ ಪ್ರದೇಶಗಳಲ್ಲಿ ವೈರಿಗಳಿಗಾಗಿ ಇರಿಸಿದ್ದ ಲ್ಯಾಂಡ್ ಮೈನ್‌ಗಳು ಸ್ಫೋಟವಾಗಿ ಬಹಳಷ್ಟು ಜನರು ಕೈ ಕಾಲುಗಳನ್ನು ಕಳೆದುಕೊಂಡಿದ್ದಾರೆ. ಅಂತಹವರಿಗೆ ಸೇವೆ ಮಾಡೋಣ ಎಂದು ಸೂಚಿಸಿದ. ನಾವಿಬ್ಬರೂ ಈಗ ಆಫ್ರಿಕಾದಲ್ಲಿ ನೆಲೆಸಿದ್ದೇವೆ. ಅಲ್ಲಿ ಜನರಿಗೆ ಆಸ್ಪತ್ರೆ ತೆಗೆದು, ಅವರಿಗೆ ಉಪಚಾರ ಮಾಡುತ್ತಿದ್ದೇವೆ. ಸ್ಟೀವ್ ಮೇಲೆ ಬಾ ! ನನ್ನ ಗೆಳೆಯ ಗೆಳತಿಯರನ್ನು ನೋಡು ಬಾ ಎಂದು ಪತಿಯನ್ನು ಕರೆದಳು! ಎಲ್ಲರ ಕಣ್ಣುಗಳು ಹನಿಗೂಡಿದ್ದವು.! ಆದರೆ ಪ್ರೀತಿಯ ಕಣ್ಣುಗಳಲ್ಲಿ ಹೊಳಪಿತ್ತು! ಅವಳ ಸಾಧನೆಯ ಮುಂದೆ ಬೇರೆ ಎಲ್ಲರ ಸಾಧನೆಯೂ ಕಳಪೆಯಾಗಿತ್ತು! ಮಿಸ್ ಇಂಡಿಯಾ ನಿಜವಾಗಿಯೂ ದೇಶವನ್ನು ಮುಂದೆ ತಂದಿದ್ದಳು! ಕ್ಲಾಸಿನ ನಿಜವಾದ ನಾಯಕಿಯ ಮುಂದೆ ಎಲ್ಲರೂ ತಲೆ ಬಾಗಿದರು. ಅವಳ ಜತೆ ಸ್ಪರ್ಧಿಸುತ್ತಿದ್ದ ಅನಂತ್ ಕೂಡ!

■



# ನೀರ ಸಾಗರದಲ್ಲಿ ನಡುರಾತ್ರಿ

ಕವಿತಾ ಹೆಗಡೆ ಅಭಯಂ, ಹುಬ್ಬಳ್ಳಿ

ಮಾರ್ಚ್ ತಿಂಗಳ ವಾರ್ಷಿಕ ಪರೀಕ್ಷೆ ಮುಗಿಯಿತು ಅಂದರೆ ಸಾಕು ಶಾಲೆಗೆ ಹೋಗುವ ಮಕ್ಕಳಿಗೆ ಬೇಸಿಗೆ ರಜೆಯ ಬ್ರಹ್ಮಾನಂದ. ಮಕ್ಕಳ ಹೆತ್ತವರಿಗೆ ಮಾತ್ರ ಘನ ಘೋರ ಕಷ್ಟ. ದೇವರ ತಲೆಗೆ ಪತ್ರೆ ಏರಿಸಿ ಕೃತಾರ್ಥರಾದ ಹಾಗೆ ಬೆಳಿಗ್ಗೆ ಮಕ್ಕಳನ್ನು ಶಾಲೆಗೆ ಸಾಗಹಾಕಿ ಶಿಕ್ಷಕರ ಮಡಿಲಿಗೆ ಅವರನ್ನು ಹಾಕಿಬಿಡುವ ನೆಮ್ಮದಿಗೆ ಸಾಟಿಯಿದೆಯೇ ಶಿವಾ? ಅಂಥಾ ಒಂದು ಅದ್ಭುತ ಸುಖವನ್ನು ದೋಚಿ ಇಪ್ಪತ್ತು ತಾಸೂ ಗದ್ದಲ ಹಾಕಿ ಮನೆಯಲ್ಲೇ ದೊಂಬರಾಟ, ನಾಟಕ, ಸಿನೆಮಾ, ಯಕ್ಷಗಾನ ತೋರಿಸುವ ಮಕ್ಕಳು ಎಂದರೆ ಮಾತಾಪಿತೃಗಳು ಮೆಟ್ಟಿಬೀಳುತ್ತಾರೆ.

ಶಾಲೆಯಲ್ಲಿ ಮೂವತ್ತು ನಲವತ್ತು ಮಕ್ಕಳು ಒಂದೇ ಶಿಕ್ಷಕರ ತಾಳಕ್ಕೆ ಸೂತ್ರದ ಬೊಂಬೆಯ ಹಾಗೆ ಕುಣಿದು ಬರುತ್ತಾರೆ. ಮನೆಯಲ್ಲಿ ಇಬ್ಬರೂ ಪಾಲಕರು ಜಮುನಾ ಸರ್ಕಸ್ ಮಾಡಿದರೂ ಒಬ್ಬ ಮಗುವನ್ನು ಮಾತು ಕೇಳಿಸಲು ಆಗುವುದಿಲ್ಲ ಎಂಬ ಯೂನಿವರ್ಸಲ್ ಟ್ರುಥ್ ಗೊತ್ತಿದ್ದೇ ಶಾಲೆ ಎಂದರೆ ಪೋಷಕರ ದೇವಾಲಯ! "ಯಾವ ಸಾಲಿ ಎಷ್ಟರ ಡೊನೇಷನ್ ಬೇಕರ ಕಿತಕೊಳ್ಳಲಿ, ಈ ಮಂಗ್ಯಾ ನನ್ ಮಕ್ಕಳ ಗೇಟೊಳಗ ತಗೊಂಡರ ಅಷ್ಟ ಸಾಕ್ರವ್ವ," ಅಂತ ಗುಟ್ಟು ಗುಟ್ಟಾಗಿ ಅಳಲು ತೋಡಿಕೊಳ್ಳುವ ಅಮ್ಮಂದಿರ ನೆಮ್ಮದಿಯನ್ನು ಖಾತ್ರಿಪಡಿಸುವ ಏಕೈಕ ತಾಣ ಶಾಲೆಗಳು.

"ಏ.. ಯದಕ್ ಸೂಟಿ ಕೊಟ್ಟಾರ ನಿಮಗ.... ಈ ಪರಿ ದಾಂಧಲಿ ಹಾಕಾಕ್ ಹತ್ತೀರಿ," ಎಂದು ಕೂಗಾಡುವ ಅಜ್ಜ ಅಜ್ಜಿಯರಿಗೂ ಇದು ಸ್ವರ್ಗದ ದಾರಿಯಲ್ಲಿನ ಒಂದೇ ತಂಗುದಾಣ.

ಇಂಥಾ ಶಾಲೆಗೆ ಬೇಸಿಗೆ ರಜೆ ಬಂದೇಬಿಟ್ಟಿತು. ಅಯ್ಯೋ! ದುರ್ವಿಧಿಯೇ.... ಇನ್ನೇನು ಮಾಡಲಿ? ಈ ಮಹಾ ಕಿಲಾಡಿ ಮಗಳನ್ನು ಮನೆಯಲ್ಲಿಟ್ಟುಕೊಂಡರೆ ನಾನೇ ಮಂಗನಾಟ ಮಾಡಬೇಕಲ್ಲ ಎಂಬ ನೋವಿನಲ್ಲಿ ಮುಳುಗಿ – ತೇಲಿ ಮಾಡುತ್ತಿದ್ದಾಗ ನನ್ನ ಗೆಳತಿಯೂ ಒಬ್ಬಳು ಇದೇ ದುಃಖದ ದೋಣಿ ನಡೆಸುತ್ತಾ ಇರುವುದು ಗೊತ್ತಾಯಿತು. ಇಬ್ಬರೂ ಸೇರಿ ಮಹಾ ಪ್ರಚಂಡರಂತೆ ದೀರ್ಘ ರಜೆಯಲ್ಲಿ ಮಂಗೇಜಿನ ಮಕ್ಕಳನ್ನು ಎಂಗೇಜ್ ಮಾಡುವ ಉಪಾಯಗಳನ್ನು ಫೋನಿನಲ್ಲೇ ಚರ್ಚಿಸಿ ಸೋತೆವು.

ಅಷ್ಟರಲ್ಲಿ ಮನೆಯ ಹತ್ತಿರದ ಪ್ರಿ ಸ್ಕೂಲೊಂದು ಒಂದು ತಿಂಗಳ ಸಮ್ಮರ್ ಕ್ಯಾಂಪ್ ಮಾಡುತ್ತಿದೆ ಅಂತ ಕೊಟ್ಟ ಜಾಹಿರಾತು ನೋಡಿ ಕಡುಬಿನ ಮೇಲೆ ತುಪ್ಪ ಸುರಿದು ಕೈಗೆ ಕೊಟ್ಟಂತಾಯ್ತು. ನಾನೂ ಗೆಳತಿಯೂ ಮರುದಿನವೇ ಅಡ್ಮಿಶನ್ ಮಾಡಿ "ಹುರ್ರೇ" ಎಂದು ಕೂಗಿ ಕುಣಿದೆವು. ಅಬ್ಬಾ! ಈ ಅಸಾಧ್ಯ ಪುಟಾಣಿಗಳನ್ನು ಒಂದು ತಿಂಗಳಾದರೂ ಕಂಟ್ರೋಲ್ ಮಾಡುವ ಕೈಗಳು ಸಿಕ್ಕಿದವಪ್ಪಾ ಎಂದು ನಲಿದೆವು.



ಮೂರು ದಿನಗಳ ನಂತರ ಕ್ಯಾಂಪ್ ಶುರುವಾಗುವುದಿದ್ದು ಪ್ರಚಂಡ ವೇಗದಲ್ಲಿ ಮಕ್ಕಳಿಗೆ ಬೇಕಾದ ಡ್ರೆಸ್ಸು, ಶೂಸು ಅದು ಇದು ಅಂತ ಅವರು ಒಂದು ಕೇಳಿದರೆ ಮೂರು ಅರೇಂಜ್ ಮಾಡಿ ನಿಟ್ಟುಸಿರಿಟ್ಟೆವು. ಅವಳು ದೂರದ ಊರಿನಲ್ಲಿ ಇರುವುದರಿಂದ ಅವಳ ಮಗಳನ್ನು ನಮ್ಮ ಮನೆಯಲ್ಲಿ ಬಿಡಲು ಬಂದಳು. ಅಂತೂ ಕ್ಯಾಂಪ್ ಶುರುವಾಯ್ತು.

ಕ್ಯಾಂಪಿನಿಂದ ಸಂಜೆ ಐದಕ್ಕೆ ಮನೆಗೆ ಬಂದ ಮಕ್ಕಳು ತೀರಾ ಸುಸ್ತಾಗುತ್ತಿದ್ದರು. ಹೊಟ್ಟೆ ತುಂಬ ತಿಂದು, ಕೊಟ್ಟ ಆಕ್ಟಿವಿಟಿ ಮುಗಿಸಿ ರಾತ್ರಿ ಊಟ ಮುಗಿಸಿ ಎಂಟಕ್ಕೆ ಮಲಗಿದರೆ ಬೆಳಗಿನವರಗೂ ಅಲ್ಲಾಡುತ್ತಿರಲಿಲ್ಲ. ಅಂತೂ ಮಿಷನ್ ಸಕ್ಸಸ್ಫುಲ್ ಎಂದು ಒಂದು ತಿಂಗಳ ಭಾರ ಕಳೆದ ಸೆಲೆಬ್ರೇಶನ್ ಕೂಡ ಗುಟ್ಟಾಗಿ ಮಾಡಿದೆವು. ಎರಡು ದಿನ ಅವಳು ನಮ್ಮ ಮನೆಯಲ್ಲಿದ್ದು ಮಗಳು ಅಡ್ಜಸ್ಟ್ ಆಗುವಳಾ ಎಂದು ನೋಡಿ ಅವತ್ತು ಹೊರಟುಹೋದಳು.

ಅದೇ ಸಂಜೆ ನನ್ನ ಗಂಡ ಕೂಡ ಏನೋ ತುರ್ತು ಕೆಲಸದ ಮೇಲೆ ಬೆಂಗಳೂರಿಗೆ ಹೊರಟುಹೋದರು. ಆದರೆ ಅದೇ ಸಂಜೆ ಒಂದಲ್ಲ ಎರಡು ಮಕ್ಕಳ ಜವಾಬ್ದಾರಿ ಮೈಮೇಲೆ ಬಂದಿದ್ದು ನೆನಪಾಗಿ ಸ್ವಲ್ಪ ಅಂಜಿಕೆಯಾದರೂ ಬೆಳಿಗ್ಗೆ ಬೇಗ ಎದ್ದು ಇಬ್ಬರನ್ನೂ ಸಾಗಿ ಹಾಕಿದರೆ ಕೆಲಸ ಮುಗಿಯಿತು ಎಂಬ ನೆಮ್ಮದಿಯಲ್ಲಿ ಮಲಗಿಕೊಂಡೆ.

ರಾತ್ರಿ ಯಾಕೋ ಎಚ್ಚರವಾಯಿತು. ಒಮ್ಮೆ ಬಾತ್ ರೂಮಿಗೆ ಹೋಗುವಾ ಎಂದು ಹೊದಿಕೆ ಸರಿಸಿ ಎರಡೂ ಕಾಲುಗಳನ್ನು ಮಂಚದಿಂದ ಕೆಳಗಿಟ್ಟೆ. ಅಯ್ಯೋ! ಕೆರೆಯಲ್ಲಿ ಕಾಲಿಟ್ಟ ಹಾಗಾಯಿತು. "ಅರೇ... ಇದೇನು ಕನಸಾ... ಅಥವಾ ರಿಯಲಿಟಿಯಾ?" ಎಂದುಕೊಳ್ಳುತ್ತ ಲೈಟು ಹಾಕಿದರೆ ಇಡೀ ಪಾದ ಮುಳುಗುವಷ್ಟು ನೀರು ಇಡೀ ರೂಮಿನ ತುಂಬಾ ನಿಂತಿತ್ತು!

ದೇವಾ! ಇದೇನಪ್ಪಾ ಎನ್ನುತ್ತಾ ರೂಮ್ ಕೆರೆಯಲ್ಲಿಯೇ ಹೆಜ್ಜೆಯ ಮೇಲೊಂದು ಹೆಜ್ಜೆಯನ್ನಿಟ್ಟು ಭಾಗ್ಯದ ಲಕ್ಷ್ಮಿಯ ಹಾಗೆ ಬಾತ್ರೂಮಿಗೆ ಹೋದರೆ ಅಲ್ಲಿ ಯಾವ ನಲ್ಲಿಯೂ ಸೋರುತ್ತಾ ಇರಲಿಲ್ಲ. 'ಅಯ್ಯೋ.. ಎಲ್ಲಿಂದ ಬಂತು ರೂಮು ತುಂಬ ನೀರು?' ಎಂಬ ಗಾಬರಿಯಲ್ಲಿ ರೂಮಿನಿಂದ ಹೊರಗೆ ಬಂದರೆ ಅಲ್ಲೂ ಕೆರೆಯೇ!

ಗೆಳತಿಯ ಮಗು ಮಲಗಿದ್ದ ಇನ್ನೊಂದು ಬೆಡ್ ರೂಮು, ಕಿಚನ್, ಹಾಲ್ ಎಲ್ಲಿ ನೋಡಿದರೂ ಪಾದಮಟ್ಟದ ನೀರು! ನಿಲ್ಲುವುದು ನಿಂತಿದೆ, ಎಲ್ಲೂ ಹೊರಗೆ ಹೋಗುತ್ತಲೇ ಇಲ್ಲ. ಹೋಗುವ ಮಾರ್ಗವೂ ಇಲ್ಲ. ಅದರಲ್ಲೂ ಒಂದು ಬಾತ್ ರೂಮ್ ಎತ್ತರದಲ್ಲಿದ್ದು ಅದರಲ್ಲಿ ನೀರು ಹರಿದುಹೋಗಲು ಸಾಧ್ಯವಿರಲಿಲ್ಲ. ಆದರೆ ಇನ್ನೊಂದು ಬಾತ್ ರೂಮ್ ನೆಲ ಮಟ್ಟದಲ್ಲಿದ್ದು "ಅದರಲ್ಲಿ ಹೋಗೇ ನೀರೇ" ಎಂದು ಬೇಡಿಕೊಳ್ಳೋಣ ಎಂದುಕೊಂಡರೆ ಮಧ್ಯೆ ಗ್ರಾನೈಟಿನ ಬಾಗಿಲ ಪಟ್ಟಿ ಅಣಕಿಸಿ ನಗುತ್ತಿತ್ತು.

ಫಸ್ಟ್ ಫ್ಲೋರಿನ ಮನೆ ತುಂಬಾ ತುಂಬಿದ್ದ ನೀರನ್ನು ಏನು ಮಾಡಬೇಕು? ಹೇಗೆ ಖಾಲಿ ಮಾಡಬೇಕು ಎಂದು ತಿಳಿಯದೆ ಕಂಗಲಾದೆ. ಅಯ್ಯೋ! ಪತಿ ದೇವರು ಎಂದು ಇದಕ್ಕೇ ಹೇಳಿರಬೇಕು. ಅವರೊಬ್ಬರು ಇದ್ದರೆ ಚಿಂತೆಯೇ ಇರಲಿಲ್ಲ. ನೋಡಿ ಗ್ರಹಚಾರ, ಇವತ್ತೇ ಒಂಟಿ ಜೀವವಾಗಿಬಿಟ್ಟೆ. "ಹೋದೆಯಾ ದೂರ.. ಓ ಜೊತೆಗಾರ..." ಎಂದು ಗೋಳಾಡಿದೆ. ಇನ್ನೊಬ್ಬರ ಸಹಾಯ ಇಲ್ಲದೆ ಇಷ್ಟು ದೊಡ್ಡ ಪ್ರಮಾಣದ ನೀರನ್ನು ಹೊರಗೆ ಹಾಕೋದು ಅಂದರೆ ಈ ಮಧ್ಯರಾತ್ರಿಯಲ್ಲಿ ಸುಲಭವೆ? ಬೆಳಗಾಗಲಿ ಎಂದು ಕೂತರೆ ಇನ್ನಷ್ಟು ನೀರು ತುಂಬಿದರೆ ಏನು ಮಾಡೋಣ?



ಮೊದಲು ಜಲ ಮೂಲವನ್ನು ಸಂಶೋಧನೆ ಮಾಡಲು ವಿಜ್ಞಾನಿಯ ರೂಪಧಾರಣೆ ಮಾಡಿದೆ. ಇಡೀ ಮನೆಯ ಸಂದಿಗೊಂದಿಗಳನ್ನೆಲ್ಲ ಹುಡುಕಿದರೂ ಎಲ್ಲೆಲ್ಲೂ ಒರತೆಯೇ ಇಲ್ಲ. ಮತ್ತೆ ನೀರು ತುಂಬುತ್ತಿರುವುದು ಹೇಗೆ? ಅಂತೂ ಅರ್ಧ

ತಾಸಿನ ನಂತರ ಮೂಲ ಸಿಕ್ಕಿತು. ಆಗ ಬಾಡಿಗೆ ಮನೆಯಲ್ಲಿದ್ದೆವು. ಹುಬ್ಬಳ್ಳಿಯಲ್ಲಿ ವಾರಕ್ಕೊಮ್ಮೆ ಕಾರ್ಪೊರೇಶನ್ ನೀರು ಬರುತ್ತಿತ್ತು. ಕಿಚನ್ ಸಿಂಕಿನಲ್ಲಿ ಎರಡು ನಲ್ಲಿಗಳಿದ್ದು ಒಂದು ಓವರ್ ಹೆಡ್ ನೀರಿಗೆ ಇನ್ನೊಂದು ಕಾರ್ಪೊರೇಶನ್ ನೀರು ಬಂದಾಗ ಡೈರೆಕ್ಟ್ ಆಗಿ ಬಿಟ್ಟುಕೊಳ್ಳಲು ಅಂತ. ಈ ನಲ್ಲಿಯ ಪೈಪ್ ಸಪರೇಟ್ ಇದ್ದು ಸ್ವಲ್ಪ ಸೋರುತ್ತಿತ್ತು! ಆ ನಲ್ಲಿ ಅನಗತ್ಯ ಎಂದು ಸದಾ ಬಂದ್ ಮಾಡಿ ಇಟ್ಟಿದ್ದನ್ನು ಪ್ರೀತಿಯ ಗೆಳತಿ ತುಸುವೇ ತಿರುಗಿಸಿ ಹೋಗಿದ್ದಳು. ಅವತ್ತು ರಾತ್ರಿಯೇ ಬಂತು ಕಾರ್ಪೊರೇಶನ್ ನೀರು! ಸೋರಿ ಸೋರಿ ಸೋತ ನಲ್ಲಿ ನೀರು ಕಿಚನ್ ಕ್ಯಾಬಿನೆಟ್ ದಾಟಿ ಹೊರಗಡೆ ಬಂದು "ಮನೆ ತುಂಬಿದ ಸೊಸೆ"ಯಾಗಿ ಮಾರ್ಪಟ್ಟಿತ್ತು.

ಎರಡೂ ಮಕ್ಕಳನ್ನು ಎಬ್ಬಿಸಿದರೆ ಹೆಲ್ಪ್ ಮಾಡಬಹುದು ಅನ್ನಿಸಿತು. ಮರುಕ್ಷಣವೇ ಅವರೇ ನೀರು ಕಂಡ ಹಾವಿನ ಹಾಗೆ ಪಚಾ ಪಚಾ ಅಂತ ಆಡಲು ಶುರು ಮಾಡಿಬಿಟ್ಟರೆ ಎಂಬ ಭಯಕ್ಕೆ ಸುಮ್ಮನೆ ಕಾರ್ಯಾಚರಣೆ ಶುರುಮಾಡಿದೆ. ಒಳ್ಳೇ ಫ್ಲಡ್ ಹಿಟ್ ಏರಿಯಾದಲ್ಲಿ ಸಿಕ್ಕಿಬಿದ್ದವಳ ಹಾಗಾಗಿತ್ತು ನನ್ನ ಕತೆ. ನೆರೆ ಹಾವಳಿಗೀಡಾದವರ ಬವಣೆಯ ಅರಿವು ನಿಧಾನಕ್ಕೆ ಆಗತೊಡಗಿತ್ತು.

ವ್ಯಾಕ್ಯೂಮ್ ಕ್ಲೀನರ್ ಹಚ್ಚಿ ಕಾಗೆ ಸ್ನಾದಲ್ಲಿ ನೀರು ಹೀರಿದ ಕತೆ ನೆನೆದು ಇನ್ನೇನು ಕೈ ಹಚ್ಚಬೇಕು, ಕರೆಂಟ್ ಢಮ್ ಎಂಬ ಶಬ್ದದೊಂದಿಗೆ ಮಾಯವಾಯ್ತು. ಓ ದೇವರೇ, ಕಣ್ಣೀರು ಕೆನ್ನೆಯ ಮೇಲಿಳಿಯಿತು. ಈಗೇನು ಮಾಡಲಿ ಎಂದು ಶೋಕಸಾಗರದಲ್ಲಿ ಮುಳುಗಿದರೆ ನೀರಿನ ಮಟ್ಟ ಹೆಚ್ಚಾಗಿಬಿಡುವ ಭಯದಿಂದ "ಕಂಟ್ರೋಲ್" ಎಂದು ನನಗೆ ನಾನೇ ಆರ್ಡರ್ ಕೊಟ್ಟುಕೊಂಡೆ.

ಕೆರೆಯಲ್ಲಿಯೇ ನಡೆದು ಚಾರ್ಜರ್ ಆದರೂ ಹಾಕೋಣ ಎಂದುಕೊಂಡರೆ ಅದಕ್ಕೆ ಒಂದು ಚೂರೂ ಚಾರ್ಜ್ ಇಲ್ಲದೆ ಇನ್ನಷ್ಟು ನಿರಾಸೆಯಾಯಿತು. ಅಂತೂ ಕ್ಯಾಂಡಲ್ ಹುಡುಕಿ ಹಚ್ಚಿದೆ. ಕಡೆಗೂ ನನ್ನ ಆ ಕ್ಯಾಂಡಲ್ ಲೈಟ್ ನೀರ್ ಪಾರ್ಟಿ ಜೋರಾಗಿ ಶುರುವಾಯಿತು. ಶುರುವಿನಲ್ಲಿ ಮೋಪ್ ನೀರಿನಲ್ಲಿ ಅದ್ದಿ ಬಕೆಟ್ಟಿಗೆ ಹಿಂಡಿದೆ. ನಾಲ್ಕು ಸಾರಿ ಹಿಂಡುವಷ್ಟರಲ್ಲಿ ಇದು ಯೂಸ್ಲೆಸ್ ಕೆಲಸ ಎಂದು ಗೊತ್ತಾಯ್ತು. ಹಳೇ ಕಾಲದಲ್ಲಿ ಕರಾವಳಿ, ಮಲೆನಾಡಿನ ಜನ ತೋಟಕ್ಕೆ ಅಡಿಕೆ ಹಾಳೆಯಲ್ಲಿ ನೀರು ತೋಕುತ್ತಿದ್ದುದು ನೆನಪಾಗಿ ಒಂದು ಮಗ್ ತಂದು ಬೆಡ್ ರೂಮಿನ ನೀರನ್ನು ಬಾತ್ ರೂಮಿಗೆ ತೋಕಿದೆ. ಹತ್ತು ಸಲಕ್ಕೆ ಕೈ ಸೋತು ಸತ್ತು ಹೋದ ಹಾಗಾಯ್ತು. ಮಗ್ ಬಿಸಾಕಿ ದೊಡ್ಡ ದೊಡ್ಡ ಬೆಡ್ ಶೀಟ್ ತಂದು ನೀರಿನ ಮೇಲೆ ಮೀನುಗಾರ ಬಲೆ ಎಸೆಯುವ ಹಾಗೆ ಎಸೆದೆ. ಪಚ್ ಅಂತ ನೀರು ಹಾರಿ ಗೋಡೆಗೂ ಅಭಿಷೇಕ ಭಾಗ್ಯ ದೊರಕಿತು. ಆದರೂ ನಾಲ್ಕು ದಪ್ಪ ಬೆಡ್ ಶೀಟ್ಗಳು ನೀರ ಮೇಲೆ ನಾವೆಯ ಹಾಗೆ ತೇಲುತ್ತಾ ಜಾರುತ್ತ ಓಡಾಡಿ ಮಜಾ ಕೊಟ್ಟವು.

"ದಾರಿ ಕಾಣದಾಗಿದೆ ರಾಘವೇಂದ್ರನೇ" ಹಾಡು ಕೂಡ ಪೂರ್ತಿಯಾಯ್ತು. ಏನೂ ಪ್ರೋಗ್ರೆಸ್ ಇಲ್ಲ! ನೀರಿನಲ್ಲಿ ನೆನೆದ ದಪ್ಪ ಬೆಡ್ ಶೀಟ್ಗಳು ಮೇಲೆ ಎತ್ತಲಿಕ್ಕೆ ಬಾರದೆ ಹೆಣಭಾರವಾಗಿದ್ದವು. "ತಪ್ಪಾ ಮಾಡಿದ ಮೇಲೆ, ನೀರು ಕುಡಿಯಲೇ ಬೇಕು... ಊ... ಊ..." ಎಂದು ಗೋಳಾಡುತ್ತ ಅವು ನಾಲ್ಕೂ ಬೆಡ್ ಶೀಟ್ಗಳನ್ನು ಹೇಗೋ ಕೊಲೆ ಮಾಡಿದ ಕ್ರಿಮಿನಲ್ ಹೆಣ ಎಳೆದು ಹಾಕುತ್ತಾನಲ್ಲ, ಹಾಗೇ ಎಳೆದು ಬಾಲ್ಕನಿಗೆ ತಳ್ಳಿದೆ. ಆ ಕತ್ತಲಲ್ಲಿ ಬಾಲ್ಕನಿ ಬಾಗಿಲು ತಾನೇ ತೆಗೆದುಕೊಂಡು ಬೆಡ್ ಶೀಟ್ ಹಾರಿ ಬಂದು ಬಿದ್ದದ್ದನ್ನು ಯಾರಾದರೂ ನೋಡಿದ್ದರೆ ಭೂತ ಎಂದು ಕಿರುಚಿ



ಪ್ರಜ್ಞಾಹೀನರಾಗುತ್ತಿದ್ದರು ಅಷ್ಟೇ.

ಈಗ ತೆಳ್ಳಗಿನ ಸಿಂಗಲ್ ಬೆಡ್ ಶೀಟ್ ಬಲೆ ಎಸೆದೆ. ಸ್ವಲ್ಪ ವರ್ಕ್ ಆಯಿತು. ನೀರಿನಲ್ಲಿ ಅದ್ದುವುದು, ಬಕೆಟ್ಟಿಗೆ ಹಿಂಡುವುದು... ಬಕೆಟ್ ತುಂಬಿದಾಗ ಬಾತ್ ರೂಮಿಗೆ ಸುರಿಯುವುದು ಶುರುವಾಯಿತು. ಹೂವಿನಂತೆ ಸಾಕಿದ್ದ ಗಂಡನನ್ನು ನೆನೆದು ಗೋಳಿಡುತ್ತಾ ಮಧ್ಯೆ ಮಧ್ಯೆ ಹೊಸ ಮೇಣದ ಬತ್ತಿ ಹಚ್ಚುತ್ತ ಹೊಸ ನೀರಾವರಿ ಕೆಲಸ ಮಾಡಿದೆ. ಗಂಡ ಒಬ್ಬನಿದ್ದಿದ್ದರೆ ಇಂಥಾ ಕಷ್ಟವೇ ಇರುತ್ತಾ ಇರಲಿಲ್ಲ ಎಂದು ನೊಂದೆ. ಅಂತೂ ಒಂದು ಹಂತಕ್ಕೆ ನೆಲದ ನೀರು ಖಾಲಿಯಾಗಿದೆ ಅನಿಸಿದಾಗ ಫಟ್ ಅಂತ ಕರೆಂಟು ಬಂತು! "ವಾಹ್ ದೇವರೇ! ನಿನ್ನ ಲೀಲೆಯೇ" ಎಂದು ಜೋರಾಗಿ ದೈವಸ್ತುತಿ (!) ಮಾಡಿ ಮೂತಿ ಮುರಿದೆ. ಇಡೀ ಮೈಯೆಲ್ಲಾ ಸಾಯುವಷ್ಟು ನೋವು.. ಒದ್ದೆ...ಮುದ್ದೆ. ಅಂತೂ ಫ್ರೆಶ್ ಆಗಿ ಕುಡಿದವಳ ಹಾಗೆ ತೂರಾಡುತ್ತ ಹಾಸಿಗೆಯ ಮೇಲೆ ಬಿದ್ದಾಗ ಬೆಳಿಗ್ಗೆ ಐದು ಗಂಟೆ! ಇನ್ನೊಂದು ತಾಸು ಮಲಗೋಣ, ಆಮೇಲೆ ಸಮ್ಮರ್ ಕ್ಯಾಂಪ್ ಮಕ್ಕಳ ತಿಂಡಿ ಊಟದ ವ್ಯವಸ್ಥೆ ಮಾಡೋಣ ಎಂದು ಕಣ್ಣು ಮುಚ್ಚಿಕೊಂಡೆ. ಹತ್ತು ನಿಮಿಷಕ್ಕೆ ಪತಿದೇವರ ಫೋನು....

ಗಣ ಗಣ ಗಂಟೆಯು ಬಾರಿಸಿತು... ಫೋನ್ ಎತ್ತಲು ಮಾತ್ರ ಸಾಧ್ಯವೇ ಆಗುತ್ತಿರಲಿಲ್ಲ. ಕೈಗಳು ನೀರು ಹಿಂಡಿ ಹಿಂಡಿ ಸುಲಿದು, ನೆನೆ ನೆನೆದು ಕೊಕ್ಕೆಯಾಗಿ ಹೋಗಿದ್ದವು! ಥರ ಥರ ನಡುಗುತ್ತಿದ್ದವು ಬೇರೆ. ಅಯ್ಯೋ... ಫೋನ್ ಎತ್ತುವುದು ಹೇಗೆ ಶಿವನೇ ಎನ್ನುತ್ತಾ ಹೇಗೋ ಎರಡೂ ನಡುಗುವ ಕೈಗಳಿಂದ ರಿಸೀವ್ ಮಾಡಿ ಆದ ಗೋಳನ್ನು ಹೇಳಿ ಅತ್ತು ಸಾಕಷ್ಟು ಸಿಂಪತಿ ಗಿಟ್ಟಿಸಿದ ಮೇಲೇ ಸ್ವಲ್ಪ ಸಮಾಧಾನವಾದದ್ದು.

ಅಂತೂ ಏಳು ಗಂಟೆಗೆ ಎದ್ದು ಮಕ್ಕಳನ್ನು ಎಬ್ಬಿಸಿ, ನಡುಗುವ ಕೈಲೇ ಏನೋ ತಿಂಡಿ ಮಾಡಿ ಕಳಿಸಿ, ಆಫೀಸ್ಗೆ ಹೊರಟೆ. ಹೋಗಿ ಹಾಫ್ ಡೇ ಹಾಕಿ ಬಂದೆ. ಇಡೀ ದಿನ ಕೈ ನಡುಕ ನಿಲ್ಲಲಿಲ್ಲ. ದೇವರೇ, ಈ ನಡುಕ ಎಂದು ನಿಂತೀತು ಎಂಬ ದಿಗಿಲಿನಲ್ಲೇ ಹೊತ್ತು ಕಂತಿತು.

ಆ ಕ್ಷಣಕ್ಕೆ ಇನ್ನೂ ಏನಾದರೂ ಮಾಡಬಹುದಿತ್ತೋ ಏನೋ? ನನಗಂತೂ ಯಾವ ಹ್ಯಾಕ್ ಕೂಡ ಗೊತ್ತಾಗಲಿಲ್ಲ. ಮರುದಿನ ಓನರ್ ಅಂಟಿಗೆ ಗೊತ್ತಾದಾಗ ತಕ್ಷಣವೇ ತನ್ನನ್ನು ಎಬ್ಬಿಸಬಾರದಿತ್ತಾ, ತಾನು ಹೆಲ್ಪ್ ಮಾಡುತ್ತಿರಲಿಲ್ಲವಾ ಎಂದು ಆಕ್ಷೇಪ ಮಾಡಿದಳು! ಹಿ ಹ್ಹಿ...ಹ್ಹಿ..ಅಂದೆ.

ಈಗ ಎಲ್ಲಾದರೂ ನೆರೆಹಾವಳಿಯಿಂದ ಮನೆಯೊಳಗೆ ನೀರು ಬಂದಿದ್ದನ್ನು ನೋಡಿದಾಗಲೆಲ್ಲ ಹೇಗೆ ನೀರು ಹೊರಗೆ ಹಾಕುತ್ತಾರೋ ಎಂದು ಒಮ್ಮೆಲೇ ಗಾಬರಿಗೊಳ್ಳುತ್ತೇನೆ. ನನ್ನನ್ನು ಕೆಲಸಕ್ಕೆ ತೆಗೆದುಕೊಳ್ಳಿ, ಮೋಸ್ಟ್ ಎಕ್ಸ್ಪೀರಿಯೆನ್ಸ್ಡ್ ಎಂದು ಕೂಗುವ ಆಸೆಯಾಗುತ್ತದೆ. ■

ಹೊಸ ಚಿತ್ರಗಳು ಶುಕ್ರವಾರದಂದೇ ಏಕೆ ಬಿಡುಗಡೆಯಾಗುತ್ತವೆ
ಚಿತ್ರ ನೋಡಿದವರು ಶನಿವಾರ ಭಾನುವಾರ ಸುಧಾರಿಸಿಕೊಳ್ಳಲೆಂದು.
–ರಾಮ್‌ಬಾಣ



# ಸ್ನೇಹ ಸೌಭಾಗ್ಯ

ಶಿವಕುಮಾರ್

ವಿಜಯ್ ಗೊತ್ತುಮಾಡಿದ್ದ ಊಬರ್ ಟ್ಯಾಕ್ಸಿ, ಮನೆಯ ಗೇಟಿನ ಮುಂದೆ ಬಂದು ನಿಂತಿತು. ವೆರಾಂಡಾದಲ್ಲಿದ್ದ ಸೂಟ್‌ಕೇಸ್, ಬ್ಯಾಗುಗಳನ್ನು ನಾನು ಎತ್ತಿ ಗಾಡಿಗೆ ಸಾಗಿಸಿದೆ. ನಮ್ಮ ಅತಿಥಿಗಳಾದ ಶ್ರೀಧರ್, ಮಯೂರ ಮತ್ತು ಅವರ ಮಗ ವಿಜಯ್, ಮೂರು ದಿನಗಳ ವಾಸ್ತವ್ಯದ ನಂತರ ಮಯೂಳ ಅಕ್ಕನ ಮಗ ಅನಂತುವಿನ ಮನೆಗೆ ಹೊರಟು ನಿಂತಿದ್ದರು. ಶ್ರೀಧರ, "ಮೂರು ದಿನಗಳು ಕಳೆದದ್ದೇ ಗೊತ್ತಾಗಲಿಲ್ಲ. ವಿ ಹ್ಯಾಡ್ ಎ ವೊಂಡರ್‌ಫುಲ್ ಟೈಮ್. ನಿನ್ನ ಇತರ ಪ್ರತಿಭೆಗಳ ಪಟ್ಟಿಗೆ ಅತಿಥಿ ಸತ್ಕಾರನೂ ಸೇರಿಸಬೇಕಾಗುತ್ತೆ ಶಿವು" ಅಂತ ಹೇಳುತ್ತಾ ಕೈ ಕುಲುಕಿದ. ಮಯೂಳ ಮುಖದಲ್ಲಿನ ಕೃತಜ್ಞತಾ ಭಾವ, ಮಾತುಗಳನ್ನು ಅನಗತ್ಯ ಮಾಡಿತ್ತು. "ಥ್ಯಾಂಕ್ಸ್ ಫಾರ್ ಎವೆರಿಥಿಂಗ್" ಎಂಬ ಆಕೆಯ ಮಾತಿನ ಪ್ರಾಮಾಣಿಕತೆ ನನ್ನ ಹೃದಯವನ್ನು ತಟ್ಟಿತು. ವಿಜಯ್, ನನ್ನನ್ನು ಅಪ್ಪಿಕೊಂಡು, "ಅಂಕಲ್ ಐ ಪ್ರಾಮಿಸ್ ಮೈಸೆಲ್ಫ್ ದಟ್ ಐ ವಿಲ್ ಕೀಪ್ ಇನ್ ಟಚ್ ವಿತ್ ಯು" ಅಂತ ಭಾವಪೂರ್ಣವಾಗಿ ಹೇಳಿದ. ಎಲ್ಲರೂ ಗಾಡಿಯಲ್ಲಿ ಕುಳಿತ ನಂತರ ಗಾಡಿ ಚಲಿಸಿತು. ಗೇಟನ್ನು ಮುಚ್ಚಿ, ನಾನು ಮನೆಯೊಳಕ್ಕೆ ಬಂದೆ. ಯಾವುದೋ ಒಂದು ಬಗೆಯ ಬೆಚ್ಚಗಿನ ಖಾಲಿತನ ಮನವನ್ನು ಆವರಿಸಿತ್ತು. ಬೇರಾವ ಕೆಲಸವನ್ನು ಮಾಡಲು ಮನಸ್ಸಾಗಲಿಲ್ಲ. ಸುಮ್ಮನೆ ವೆರಾಂಡದ ಸೋಫಾದ ಮೇಲೆ ಕುಳಿತು ಕಳೆದ ಮೂರು ದಿನಗಳ ಅಪ್ಯಾಯಮಾನವಾದ ಅನುಭವಗಳ ಸರಣಿ, ಶ್ರೀಧರನೊಂದಿಗಿನ ನನ್ನ ಸುದೀರ್ಘ ಗೆಳೆತನ, ದಶಕಗಳ ನಂತರದ ಈ ಭೇಟಿ, ಎಲ್ಲವನ್ನು ಸಾವಧಾನವಾಗಿ ಮೆಲಕು ಹಾಕಿದೆ.

ಐವತ್ತರ ದಶಕದ ಸುಮಾರು. ನಾವೆಲ್ಲಾ ಆಗ ಇಂಟರ್ ಮುಗಿಸಿ, ಕಾಲೇಜಿಗೆ ಪದಾರ್ಪಣ ಮಾಡಿದ್ದೆವು. ನಮ್ಮಲ್ಲಿ ಅರ್ಧಕ್ಕರ್ಧ ಜನ ಹುಡುಗರು ಸಿನಿಮಾ, ಗಿನಿಮಾ ಏನೂ ಅರೀದ ಹಸುಳೆಗಳು. ಪರಿಸ್ಥಿತಿ ಹೀಗಿದ್ದಾಗ ನಮ್ಮಂಥಾ ಕುಡುಮಿಗಳನ್ನೆಲ್ಲಾ ಕಂಟೋನ್‌ಮೆಂಟಿಗೆ ಕರೆದುಕೊಂಡು ಹೋಗಿ, ನಮಗೆಲ್ಲಾ ಹಾಲಿವುಡ್ ಚಿತ್ರಗಳ ರುಚಿ ತೋರಿಸಿದ ಕೀರ್ತಿ ಶ್ರೀಧರನಿಗೆ ಸಲ್ಲಬೇಕು. ಅವನನ್ನ ಮನೆಯಲ್ಲಿ ಚೀದಿ ಅಂತ ಕರೀತಾ ಇದ್ದರು. ಬಸವನಗುಡಿಯ ಸನ್ನಿಧಿ ರಸ್ತೆಯಲ್ಲಿ ಅವರ ಮನೆ. ಚೀದಿ ಬಲು ರಸಿಕ. ಹೊರವಾಗಿ ಬೆಳೆದಿದ್ದ ಕಪ್ಪು ಕೂದಲನ್ನು ಮೇಲಕ್ಕೆ ತೀಡಿ ಬಾಚ್ಕೋತಾ ಇದ್ದ. ನಾವೆಲ್ಲಾ ಕ್ರಾಪ್‌ಕಟ್‌ಗೆ ಹೋದಾಗ ಕತ್ತಿನ ಮೇಲೆಲ್ಲಾ ನುಣ್ಣಗೆ ಮೆಷಿನ್ ಓಡಿಸ್ಕೊಳ್ತಾ ಇದ್ವಿ. ಚೀದಿಗೆ ಮೆಷಿನ್ ಗಿಷಿನ್ ಆಗದು. ಬರೀ ಸಿಸರ್ಸ್ ಕಟ್ಟೇ ಆಗಬೇಕು ಅವನಿಗೆ. ಟಿಪ್ ಟಾಪಾಗಿ ಡ್ರೆಸ್ ಮಾಡಿಕೊಂಡು ಕ್ಲಾಸಿಗೆ ಬರ್ತಿದ್ದ. ನಾವೆಲ್ಲಾ ಇನ್ನೂ ಲತಾ ಮಂಗೇಶ್ಕರ್, ಮಹಮದ್ ರಫಿ ಅಂತ ಬಿನಾಕಾ ಗೀತ್‌ಮಾಲಾ ಕೇಳ್ಕೊಂಡು ಕೂತಿದ್ದಾಗ. "ಥೇ, ಮಂಕು ಮುಂಡೇವಾ, ಬಿನಾಕಾ ಹಿಟ್ ಪೆರೇಡ್ ಕೇಳ್ರೋ. ಕ್ಲಿಫ್ ರಿಛರ್ಡ್, ಟೋನಿ ಬ್ರಾಂಟ್ ಅವರ್ದೆಲ್ಲಾ ಸಾಂಗ್ಸ್ ಕೇಳ್ಬೋದು" ಅಂತ ಚೀದಿ ನಮಗೆ ಗೊತ್ತೇ ಇಲ್ಲದಿದ್ದ ಒಂದು ಹೊಸ ಪ್ರಪಂಚಾನ ನಮ್ಮ ಮುಂದೆ ಇಟ್ಟಿದ್ದ. ಇಂಗ್ಲಿಷ್ ಪಿಕ್ಚರ್ ನೋಡ್ದೆ ಇದ್ರೆ ಜೀವನ ನಿರರ್ಥಕ ಅಂತ ನಮ್ಮನ್ನೆಲ್ಲಾ ಕನ್‌ವಿನ್ಸ್ ಮಾಡಿ ಡೆಬೊರಾ ಕಾರ್, ಅನಿಟಾ ಎಕ್‌ಬರ್ಗ್ ಇವರುಗಳ ಸನ್ನಿಧಿಗೆ ನಮ್ಮನ್ನು ಕರೊದೊಯ್ದವನು ಸನ್ನಿಧಿ ರಸ್ತೆಯ ಚೀದಿ.



ಕಂಟೋನ್‌ಮೆಂಟಿನ ಥಿಯೇಟರುಗಳಲ್ಲಿ ಸಿನಿಮಾ ನೋಡುವುದೆಂದರೆ

ಶ್ರೀಧರನಿಗೂ ನನಗೂ ಇನ್ನಿಲ್ಲದ ಸಂಭ್ರಮ. ಅಲ್ಲಿನ ಮುಖ್ಯ ರಸ್ತೆಯಾಗಿದ್ದ ಸೌತ್ ಪೆರೇಡಿಗೆ ಆಗತಾನೇ ಮಹಾತ್ಮ ಗಾಂಧಿ ರಸ್ತೆ ಅಂತ ಹೆಸರಿಟ್ಟಿದ್ದರು. ಆ ದಿನಗಳಲ್ಲಿ ಇಲ್ಲಿ ಲಿಬರ್ಟಿ ಎಂಬ ಚಿತ್ರಮಂದಿರವಿತ್ತು. ಓಹ್! ಎಂತೆಂತಹ ಹೃದಯಸ್ಪರ್ಶಿ ಚಿತ್ರಗಳನ್ನು ನೋಡುವ ಭಾಗ್ಯವನ್ನು ಒದಗಿಸಿತ್ತು ಈ ಪವಿತ್ರಸ್ಥಳ. "ಬರ್ನಡೀನ್", "ಹೌ ಗ್ರೀನ್ ವಾಸ್ ಮೈ ವ್ಯಾಲಿ", "ಬಿಲ್ಲಿ ವೈಲ್ಡರನ "ಸ್ಟಲಾಗ್ 17", ಇವೆಲ್ಲವನ್ನು ನಾವು ಇಲ್ಲೇ ನೋಡಿದ್ದು. ಚಿತ್ರ ಮಂದಿರದ ಮಾಲಿಕಳು, ಅಖ್ತರ್ ಬೇಗಂ ಎಂಬ ಮಹಿಳೆ. ಲಿಪ್‌ಸ್ಟಿಕ್ ಹಚ್ಚಿಕೊಂಡು, ಜರಿ ಸೀರೆ ಉಟ್ಟು ಸಿನಿಮಾ ಹೊರಾಂಗಣದಲ್ಲಿ ಈಕೆ ತಿರುಗಾಡುತ್ತಿದ್ದಳು. ಸಿನಿಮಾಕ್ಕೆ ಟಿಕೆಟ್ ಖರೀದಿಸಿದ ನಂತರ ಚಿತ್ರ ಪ್ರಾರಂಭವಾಗುವುದಕ್ಕೆ ಮೊದಲು "ತ್ರೀ ಏಸಸ್" ಉಪಹಾರ ಮಂದಿರಕ್ಕೆ ಹೋಗಿ, ಅಲ್ಲಿ ಕುಳಿತು ಎಸ್‌ಪ್ರೆಸ್ಸೋ ಕಾಫಿಯನ್ನು ಕುಡಿಯುವುದು ನಮ್ಮ ಅಂದಿನ ದಿನಗಳ ಪರಿಪಾಠ. ಆ ದಿನಗಳಲ್ಲಿ, ಇಂತಹ ಸ್ವಲ್ಪ ಮೇಲ್ತರಗತಿಯ ಉಪಹಾರ ಮಂದಿರಗಳಲ್ಲಿ ಕಾಸು ಹಾಕಿ ಹಾಡು ಕೇಳುವ ಜೂಕ್‌ಬಾಕ್ಸ್ ಇಟ್ಟಿರುತ್ತಿದ್ದರು. ಈ ಜೂಕ್‌ಬಾಕ್ಸ್‌ಗೆ ನಾಲ್ಕಾಣೆ ಹಾಕಿ, ಒಬ್ಬ ನೀಗ್ರೋ ಗೊಗ್ಗರು ದನಿಯಲ್ಲಿ , "ನಂಬರ್ ಫಿಫ್ಟಿ ಫೋರ್, ದ ಹೌಸ್ ವಿತ್ ದ ಬ್ಯಾಂಬೂ ಡೋರ್, ಬ್ಯಾಂಬೂ ರೂಫ್ ಎಂಡ್ ಬ್ಯಾಂಬೂ ವಾಲ್, ಇಟ್ಸ್ ಈವನ್ ಗಾಟ್ ಎ ಬ್ಯಾಂಬೂ ಫ್ಲೋರ್", ಎಂದು ಒಂದು ಮನೆಗೆ ಉಪಯೋಗಿಸಿದ ಬೊಂಬಿನ ವಿವರಗಳನ್ನು ತಿಳಿಸುವ ಹಾಡನ್ನು ಕೇಳಿದರಂತೂ ಧನ್ಯತೆಯೊಂದಿಗೆ ಸಾರ್ಥಕತೆಯೂ ನಮ್ಮದಾಗಿರುತ್ತಿತ್ತು. ಆಗೊಮ್ಮೆ ಈಗೊಮ್ಮೆ, ನಮ್ಮಿಬ್ಬರ ಕಲೆಕ್ಟಿವ್ ಅದೃಷ್ಟ ಖುಲಾಯಿಸಿ, ಹಾಡು ಕೇಳುತ್ತಿದ್ದ ಸಮಯದಲ್ಲಿ ದೂರದ ಟೇಬಲ್ಲಿನಲ್ಲಿ ಹಲವು ಕಾಲೇಜ್ ತರುಣಿಯರು ನಮ್ಮಂತೆ ಕ್ಲಾಸಿಗೆ ಚಕ್ಕರ್ ಹೊಡೆದು ಬಂದು, ಕೂತು, ನಾವು ಹಾಕಿದ ಹಾಡನ್ನು ಆಸ್ವಾದಿಸುತ್ತಾ, ಗೋರಂಟಿ ಹಚ್ಚಿದ ನೀಳ ಕೈಬೆರಳುಗಳಲ್ಲಿ ಟೇಬಲ್ಲಿನ ಗಾಜಿನ ಮೇಲೆ. ಮೆಲ್ಲಗೆ ತಾಳ ಹಾಕಿದರಂತೂ, ನಾವು ಧನ್ಯತೆ, ಸಾರ್ಥಕತೆ, ಕೃತಕೃತ್ಯತೆ, ಬ್ರಹ್ಮಾನಂದ, ಸಚ್ಚಿದಾನಂದ, ಇವುಗಳನ್ನೆಲ್ಲಾ ಸೇರಿಸಿ ಭಟ್ಟಿ ಇಳಿಸಿದ ಒಂದು ಭಾವನಾ ವಿಶೇಷದಿಂದ ಮತ್ತರಾಗುತ್ತಿದ್ದೆವು.

ಇಂಜಿನಿಯರಿಂಗ್ ಪದವೀಧರರಾಗಿ ನಾವು ಕೆಲಸಕ್ಕೆ ಹುಡುಕಾಟ ಪ್ರಾರಂಭಿಸಿದಾಗ ಎಚ್.ಎಂ.ಟಿ. ಕಾರ್ಖಾನೆ ಆಗತಾನೆ ಪ್ರಾರಂಭವಾಗಿತ್ತು. ಶ್ರೀಧರ, ನಾನು ಮತ್ತು ಇನ್ನೂ ಹಲವು ಸಹಪಾಠಿಗಳು ಅಲ್ಲೇ ಕೆಲಸಕ್ಕೆ ಸೇರಿಕೊಂಡೆವು. ಒಂದೇ ಕಾಲೇಜಿನಲ್ಲಿ ಓದಿದ ನಂತರ ಒಂದೇ ಕಾರ್ಖಾನೆ ಸೇರಿದೆವೆಂದಮೇಲೆ ಕೇಳಬೇಕೆ? ನಮ್ಮೆಲ್ಲರ ಗೆಳೆತನ ಅವ್ಯಾಹತವಾಗಿ ಮುಂದುವರಿಯಿತು. ಶ್ರೀಧರ, ದಘೂತಿ ಯಂತ್ರಭಾಗಗಳ ವಿಭಾಗಕ್ಕೆ ಸೇರಿದ. ನಾನು ಯಂತ್ರ ವಿನ್ಯಾಸ ಇಲಾಖೆಗೆ ದಾಖಲಾದೆ. ಹದಿನೈದು ವರ್ಷಗಳ ದುಡಿತದ ನಂತರ ನಾನು ಸ್ವಂತ ಉದ್ಯಮ ನಡೆಸಲು ನಿರ್ಧರಿಸಿ ಕೆಲಸಕ್ಕೆ ರಾಜೀನಾಮೆ ನೀಡಿ ಪೀಣ್ಯದಲ್ಲಿ ಕಾರ್ಖಾನೆಯೊಂದನ್ನು ಪ್ರಾರಂಭಿಸಿದೆ. ಇದೇ ಸಮಯಕ್ಕೆ ಶ್ರೀಧರನಿಗೆ ಆಸ್ಟ್ರೇಲಿಯಾದಲ್ಲಿ ಎಚ್.ಎಂ.ಟಿ ಯಂತ್ರಗಳ ಮಾರಾಟ ವಿಭಾಗಕ್ಕೆ ವರ್ಗವಾಯಿತು. ಅಲ್ಲಿಂದ ಮುಂದೆ ನಮ್ಮಿಬ್ಬರ ಹಾದಿಗಳೂ ಕವಲೊಡೆದವು. ಎಲ್ಲೋ ಆಗೊಮ್ಮೆ , ಈಗೊಮ್ಮೆ ಶ್ರೀಧರ ಬೆಂಗಳೂರಿಗೆ ಬರುತ್ತಿದ್ದ. ಆಗ ನಾವೆಲ್ಲಾ ಸಹಪಾಠಿಗಳೂ ಒಟ್ಟಾಗಿ ಸೇರಿ ನಮ್ಮ ಜೀವಯಾತ್ರೆ ತಲುಪಿದ್ದ ವಿವಿಧ ಘಟ್ಟಗಳನ್ನು ಪರಸ್ಪರ ವಿನಿಮಯಮಾಡಿಕೊಳ್ಳುತ್ತಿದ್ದೆವು.



2019 ರ ವೇಳೆಗೆ ಶ್ರೀಧರ ನನ್ನೊಂದಿಗೆ ವಾಟ್ಸಪ್ ಸಂಪರ್ಕದಲ್ಲಿದ್ದ. ಅವನು ಆಗಾಗ ಕಳಿಸುತ್ತಿದ್ದ ವಿಡಿಯೋ ಕ್ಲಿಪ್‌ಗಳು ಬಹು ಸ್ವಾರಸ್ಯವಾಗಿರುತ್ತಿದ್ದವು. ಒಮ್ಮೆ ಒಂದು

ಡಿಸೆಂಬರ್ ದಿನ ಶ್ರೀಧರನಿಂದ ನನಗೊಂದು ಮೆಸೇಜ್ ಬಂತು.

"ಹಾಯ್ ಶಿವಕುಮಾರ್, ನಾವು ಬೆಂಗಳೂರಿಗೆ ಬಂದು ದಶಕಗಳೇ ಸರಿದಿವೆ. ಮಯೂ ಸಹಾ ಚೆನ್ನೈನಲ್ಲಿರುವ ತನ್ನ ಅಕ್ಕ ಭಾವರನ್ನು ಒಮ್ಮೆ ನೋಡಿಬರೋಣ ಅಂತ ಯೋಚಿಸುತ್ತಿದ್ದಾಳೆ. ಮುಂದಿನ 2020ನೇ ಡಿಸೆಂಬರ್ ಸಮಯದಲ್ಲಿ ಒಂದು ತಿಂಗಳ ಮಟ್ಟಿಗೆ ಪ್ರವಾಸ ಕೈಗೊಂಡು ಬೆಂಗಳೂರು, ಚೆನ್ನೈಗಳನ್ನು ಭೇಟಿಮಾಡುವ ಹಂಚಿಕೆ ನಮ್ಮದು. ಒಂದೇ ತೊಡಕೆಂದರೆ ಬೆಂಗಳೂರಿನಲ್ಲಿ ಈಗ ನಮಗೆ ಯಾರೂ ಬಂಧುಗಳಿಲ್ಲ. ವಾಸ್ತವ್ಯಕ್ಕೆ ನಿನ್ನ ಸಲಹೆ ಕೇಳಲು ಈ ಪತ್ರ ಬರೆಯುತ್ತಿದ್ದೇನೆ......" ಎಂಬ ಒಕ್ಕಣೆ ಇದ್ದ ಪತ್ರ ಅದು.

ನಾನು ತಕ್ಷಣ ಉತ್ತರಿಸಿದೆ. "ತೊಡಕಿನ ಪ್ರಶ್ನೆಯೇ ಇಲ್ಲ ಶ್ರೀಧರ, ನೀವಿಬ್ಬರೂ ನಮ್ಮ ಮನೆಯಲ್ಲೇ ತಂಗಬೇಕು. ಟಿಕೆಟ್ ಎಲ್ಲಾ ಬುಕ್ ಆದ ನಂತರ ಬರುವ ದಿನಾಂಕ ತಿಳಿಸು. ಮಿಕ್ಕದ್ದೆಲ್ಲಾ ನಾನು ನೋಡಿಕೊಳ್ಳುತ್ತೇನೆ"

ಶ್ರೀಧರ್ ದಂಪತಿಗಳು ಮತ್ತು ನಾನು 2020ರ ಡಿಸೆಂಬರನ್ನು ಬಹು ಉತ್ಸುಕತೆಯಿಂದ ಇದಿರು ನೋಡುತ್ತಿದ್ದೆವು. ಆದರೆ ಕೋವಿಡ್ ಮಹಾಮಾರಿಯ ಎಣಿಕೆಯೇ ಬೇರೆಯಾಗಿತ್ತು. ಅವರ ಪ್ರವಾಸ ರದ್ದಾಗಿತ್ತು.

2023 ಜೂನ್ ನಲ್ಲಿ ಶ್ರೀಧರ ನನಗೊಂದು ಮೆಸೇಜ್ ಕಳಿಸಿ, ಆಗಸ್ಟ್ ನಲ್ಲಿ ಮೂರವಾರಗಳ ಕಾಲ ಬೆಂಗಳೂರು ಪ್ರವಾಸಕ್ಕೆ ಟಿಕೆಟ್ ಬುಕ್ ಮಾಡಿರುವುದಾಗಿ ತಿಳಿಸಿದ. ಪತ್ರವ್ಯವಹಾರದ ನಂತರ ಆಗಸ್ಟ್ ಇಪ್ಪತ್ತರಂದು ಭಾನುವಾರ ಬೆಳಗ್ಗೆ ನಮ್ಮ ಮನೆಗೆ ಬರುವ ಕಾರ್ಯಕ್ರಮ ನಿರ್ಧಾರವಾಯಿತು.

*****

ಮೂವತ್ತು ವರ್ಷಗಳ ಅಂತರ ಮೂರು ನಿಮಿಷಗಳಲ್ಲಿ ಕರಗಿತು. " ಬೆಂಗಳೂರಿಗೆ ಹೊರಡುಕ್ಕೆ ಮೂರು ವಾರಗಳ ಮುಂಚೆ ಯಾವುದೋ ಯೋಗಾಸನ ಮಾಡುವಾಗ ಸೊಂಟ ಉಳುಕಿತು. ಇನ್ನು ಎರಡು ಮೂರು ತಿಂಗಳು ಹುಷಾರಾಗಿರಬೇಕೆಂದು ಡಾಕ್ಟರು ಹೇಳಿದ್ದಾರೆ. ಅದಕ್ಕೆ ವಿಜಯ್ ಸದಾಕಾಲ ನಮ್ಮೊಂದಿಗೇ ಇರಲು ನಿರ್ಧರಿಸಿ ನಮ್ಮೊಂದಿಗೆ ಬಂದಿದ್ದಾನೆ. ನಿಮ್ಮ ಮನೆಗೆ ನಾವು ಬರಲು ನಿರ್ಧರಿಸಿದಾಗ "ಅಲ್ಲಿಗೆ ನಾನು ಹೇಗೆ ಬರಲಿ? ನನ್ನನ್ನು ಕರೆದಿಲ್ಲವಲ್ಲ. ಅಂತ ಕೇಳಿದ. ನಾನು" ಆ ರೀತಿ ಕರೆಯೋದು ನಮ್ಮ ಸಂಸ್ಕೃತಿಯಲ್ಲೇ ಇಲ್ಲ. ನೀನು ಸುಮ್ಮನೆ ಬಾ. "ಅಂತ ಹೇಳಿ ಕರೆದುಕೊಂಡು ಬಂದೆ. ಈಗ ನೋಡು ಅವನೇ ನಿನ್ನ ಹತ್ರ ಎಷ್ಟೊಂದು ಮಾತಾಡ್ತಾ ಇದಾನೆ." ಅಂತ ಶ್ರೀಧರ ನಗಾಡಿದ.

ನಾವೆಲ್ಲರೂ ಡ್ರಾಯಿಂಗ್ ರೂಮಿನಲ್ಲಿ ಕುಳಿತು ಹರಟುತ್ತಿದ್ದೆವು. ಮಯೂ, ನನ್ನ ಅಕ್ಕನ ಮಗಳು ಪಾರ್ವತಿ ಸೃಷ್ಟಿಸಿದ್ದ ಕಾಫಿ ಟೇಬಲ್ ಪುಸ್ತಕ (ಇದರಲ್ಲಿ ನಮ್ಮ ಫ್ಯಾಮಿಲಿಯ ಎಲ್ಲರ ಚಿತ್ರಗಳಿವೆ) "ಅಜ್ಜಿ ಮನೆ" ಯನ್ನು ನೋಡುತ್ತಾ," ನಿಮ್ಮ ತಾಯಿ ಎಷ್ಟು ಲಕ್ಷಣವಾಗಿದ್ದಾರೆ!" ಅಂತ ಉದ್ಗರಿಸಿದಳು.



ಮಾತು ನಮ್ಮ ಎಚ್.ಎಂ.ಟಿ, ದಿನಗಳ ಕಡೆ ಹೊರಳಿತು.

ನಾನು, "ನಾವೆಲ್ಲಾ ಕೆಲಸಕ್ಕೆ ಸೇರಿದ ಹೊಸದು. ಶ್ರೀಧರ ಮತ್ತು ನಾನು ಇಬ್ಬರೂ ಇನ್ನೂ ಮದುವೆಯಾಗಿರದ ಯುವಕರು. ಮಾತುಕತೆ ಸದಾ ನಮ್ಮ ಭಾವಿ ಪತ್ನಿಯರ ವಿಷಯದ ಬಗ್ಗೆ ಸಾಗುತ್ತಿತ್ತು. ಒಮ್ಮೆ ಶ್ರೀಧರ, "ಯಾವುದಾದರೂ ತರುಣಿ

ನನ್ನನ್ನು ಒಪ್ಪಿ ಮದುವೆಯಾದರೆ, ನಾನು ಅವಳನ್ನ ಮಂದಾಸನದ ಮೇಲೆ ಪ್ರತಿಷ್ಠಾಪಿಸಿ ಪೂಜಿಸುವೆ "ಅಂತ ಒಂದು ಹೇಳಿಕೆ ಕೊಟ್ಟ. ಸಾಮಾನ್ಯವಾಗಿ ಇಂತಹ ಮಾತುಗಳಿಗೆ ನಾನು ಏನಾದರೊಂದು ಕುಹಕದ ಉತ್ತರ ಕೊಡುವುದು ವಾಡಿಕೆ. ಆದರೆ ಆ ದಿನ ಶ್ರೀಧರನ ದನಿಯಲ್ಲಿ ಎಷ್ಟು ಪ್ರಾಮಾಣಿಕತೆ ಇತ್ತೆಂದರೆ ನನಗೆ ಯಾವ ಉತ್ತರವೂ ತೋಚಲಿಲ್ಲ. ಓಹ್ ಎಂತಹ ಅನುಕರಣೀಯ ಪ್ರತಿಜ್ಞೆ ಅನ್ನಿಸಿದ್ದು ನಿಜ. ಇವತ್ತಿಗೂ ಶ್ರೀಧರನ ಬಗ್ಗೆ ಮೆಚ್ಚುಗೆಗೆ ಇದೂ ಒಂದು ಕಾರಣ" ಅಂತ ಹೇಳಿದೆ. ವಿಜಯ್, "ಅಂಕಲ್ ಹೌ ಡು ಯು ನೋ ದಟ್ ಹಿ ಹ್ಯಾಸ್ ಕೆಪ್ಟ್ ಅಪ್ ಹಿಸ್ ವರ್ಡ್?" ಅಂತ ನನ್ನನ್ನ ಪ್ರಶ್ನಿಸಿದ.

"ಲೋ, ವಿಜಯ್ ನಿಮ್ಮಪ್ಪ ಈಸ್ ಇನ್‌ಕೇಪಬಲ್ ಆಫ್ ಡೂಯಿಂಗ್ ಎನಿಥಿಂಗ್ ಎಲ್ಸ್." ಅಂತ ತಮಾಷೆಮಾಡಿದೆ.

*********

ಅಂದು ಸಂಜೆ ಶ್ರೀನಿವಾಸ್ ಮತ್ತು ಅಮೃತಾ ಮನೆಗೆ ಬಂದಿದ್ದರು. ಶ್ರೀನಿವಾಸ್ ಕೂಡ ನಮ್ಮ ಕಾಲೇಜ್ ಸಹಪಾಠಿ. ನಮ್ಮ ಗುಂಪಿನ ಮೊಟ್ಟಮೊದಲ ಲ್ಯಾಂಬ್ರೆಟ್ಟಾ ಮಾಲೀಕ. ನೀಲಿ ಬಣ್ಣದ ಫುಲ್‌ಸ್ಲೀವ್ಸ್ ಸ್ವೆಟರನ್ನ ಬೆನ್ನ ಮೇಲೆ ಹೊದ್ದಿ , ಅದರ ಕೈಗಳನ್ನ ಕತ್ತಿನ ಸುತ್ತ ಕಟ್ಟಿಕೊಂಡು ಕೂಲಿಂಗ್ ಗ್ಲಾಸ್ ಧರಿಸಿ ಅವನು ಕಾಲೇಜಿಗೆ ಬಂದನೆಂದರೆ ನಾವೆಲ್ಲಾ ನಿಬ್ಬೆರಗಾಗಿ ಅವನನ್ನೇ ನೋಡುತ್ತಿದ್ದೆವು. ಅಮೃತಾ ಅವನಿಗೆ ಅನುರೂಪಳಾದ ಪತ್ನಿ. ಇತ್ತೀಚೆಗೆ ದಿವಂಗತರಾದ, ಬೆಂಗಳೂರಿನ ರಾಮಕೃಷ್ಣಾಶ್ರಮದ ಸ್ವಾಮಿ ಹರ್ಷಾನಂದರ ಸಹೋದರಿ. ಹಿಂದೊಮ್ಮೆ ಅಮೃತಾ, ನನ್ನನ್ನು ಮತ್ತು ಮಂಗಳೆಯನ್ನು ಮನೆಗೆ ಕರೆದು ವಿಷ್ಣುಸಹಸ್ರನಾಮವನ್ನು ಓದಲು ಹೇಳಿದ್ದು ಇಂದಿಗೂ ನನ್ನ ನೆನಪಿನಲ್ಲಿದೆ. ಈ ಸಂಜೆ ಅವರು ಶ್ರೀಧರ್ ಮತ್ತು ಮಯೂರರನ್ನು ನೋಡಲು ಬಂದಿದ್ದರು. ಜೊತೆಯಲ್ಲಿ ಅನೇಕ ತಿಂಡಿ ತಿನಿಸುಗಳು. ದಶಕಗಳ ನಂತರದ ಭೇಟಿಯಲ್ಲಿ ಸಹಜವಾಗಿಯೇ ಮಾತುಗಳ ಮಹಾಪೂರವೇ ಹರಿದಿತ್ತು. ಹಳೆಯ ನೆನಪುಗಳು ಮನಸ್ಸಿನಲ್ಲಿ ಪ್ರಖರವಾಗಿವಷ್ಟು ಹೊಸ ನೆನಪುಗಳು ಇರುವುದಿಲ್ಲ.

ಅಲ್ಲದೆ, ಒಂದು ದಶಕದ ಹಿಂದೆ ಶ್ರೀನಿವಾಸ್ ದಂಪತಿಗಳು ಪ್ರಪಂಚ ಪರ್ಯಟನೆಗೆ ಹೊರಟಿದ್ದಾಗ, ದಾರಿಯಲ್ಲಿ ಆಸ್ಟ್ರೇಲಿಯಾಗೂ ಭೇಟಿ ನೀಡಿದ್ದರಂತೆ. ಆ ಸಂದರ್ಭದಲ್ಲಿ ಶ್ರೀಧರ್ ದಂಪತಿಗಳು ಅವರಿಗೆ ನೀಡಿದ್ದ ಆತಿಥ್ಯವನ್ನು ನೆನಪಿಸಿಕೊಂಡು ಅಮೃತಾ ಅದನ್ನೆಲ್ಲಾ ಕೃತಜ್ಞತೆಯಿಂದ ವಿವರಿಸುತ್ತಿದ್ದರು. ಮಾತುಕತೆ ಮುಗಿದು ಅವರು ವಿದಾಯ ಹೇಳಿದಾಗ ಸಂಜೆ ಏಳು ಘಂಟೆ ಆಗಿತ್ತು. ಹಳೆಯ ಹಾಲಿವುಡ್ ಸಿನಿಮಾಗಳ ಮಾತು ಬಂತು. ನನ್ನ ಬಳಿ ಇದ್ದ ಹಳೆಯ ಸಿನಿಮಾಗಳ ಕಲೆಕ್ಷನ್ನಿನಲ್ಲಿ ರಿಚರ್ಡ್ ಟಾಡ್ ಮತ್ತು ಆ್ಯನ್ ಬಾಕ್ಸ್ಟರ್ ಅಭಿನಯಿಸಿರುವ "ಚೇಸ್ ಎ ಕ್ರೂಕೆಡ್ ಷಾಡೋ" ಇರುವುದನ್ನು ತಿಳಿಸಿದೆ ಆ ಸಂಜೆ ಆ ವಿಂಟೇಜ್ ಮೂವಿಯನ್ನು ವೀಕ್ಷಿಸಿದ್ದನ್ನು ಎಂದಿಗೂ ಮರೆಯುವಂತಿಲ್ಲ.

******

ಅಂದು ಬೆಳಗ್ಗೆ ಶ್ರೀಧರ್ ಮತ್ತು ನಾನು ಬೆಳಗಿನ ಉಪಹಾರ ಮುಗಿಸಿ ಡ್ರಾಯಿಂಗ್ ರೂಮಿನಲ್ಲಿ ಕುಳಿತು ಹರಟುತ್ತಿದ್ದೆವು. ಮಯೂ ಹೊರಗಿನ ತೋಟದಲ್ಲಿ ವಾಕಿಂಗ್ ನಡೆಸಿದ್ದಳು. ವಿಜಯ್ ಗೆಳೆಯನೊಬ್ಬನನ್ನು ನೋಡಲು ಹೊರಕ್ಕೆ ತೆರಳಿದ್ದ. ಸುಮಾರು ಹೊತ್ತು ಹರಟಿದ ನಂತರ ಮಯೂ ಇನ್ನೂ ಒಳಕ್ಕೆ ಬರದಿರುವುದನ್ನು



ಶ್ರೀಧರ ಗಮನಿಸಿದ. "ಬಾರೋ, ನಾವೂ ತೋಟದಲ್ಲಿ ಸ್ವಲ್ಪ ಅಡ್ಡಾಡೋಣ. ಬಿಸಿಲು ಚೆನ್ನಾಗಿದೆ" ಎಂದು ಹೇಳಿ ಶ್ರೀಧರನೊಂದಿಗೆ ನಾನು ಮೆಟ್ಟಲಿಳಿದು ತೋಟಕ್ಕೆ ಬಂದೆ. ಅಷ್ಟು ಹೊತ್ತಿಗೆ ಮನೆಯ ಮುಂದಿನ ಗೇಟನ್ನು ತೆಗೆದು ಮಯೂ ಮತ್ತು ರತ್ನಮ್ಮ ಇಬ್ಬರೂ ಒಳಕ್ಕೆ ಕಾಲಿಟ್ಟರು.

"ಶ್ರೀಧರ್, ರತ್ನಮ್ಮ ಹತ್ತಿರದಲ್ಲಿ ತರಕಾರಿ ತರಲು ಹೊರಟಿದ್ದರು. ನಾನೂ ಅವರ ಜೊತೆ ಹೋದೆ. ಮನೆ ಹತ್ತಿರಾನೇ ತರಕಾರಿ ಅಂಗಡಿ. ಎಷ್ಟು ಫ್ರೆಷ್ ಆಗಿರೋ ತರಕಾರಿಗಳು ಅಂತೀಯಾ. ಹಾಗಲಕಾಯಿ, ಹುರುಳಿ ಕಾಯಿ, ಬದನೇ ಕಾಯಿ ಒಂದೊಂದೂ ಟಾಪ್ ಕ್ಲಾಸ್. ರತ್ನಮ್ಮ ಇವತ್ತು ಹಾಗಲಕಾಯಿ ಗೊಜ್ಜು ಮಾಡ್ತಾರೆ. ಅಕ್ಕಿ ರೊಟ್ಟಿ ಜೊತೆಗೆ ಚೆನ್ನಾಗಿರುತ್ತಂತೆ." ಅಂತ ಮಯೂ ಉತ್ಸಾಹದಿಂದ ಹೇಳಿದಳು. ಅನಂತರ ತೋಟದ ಒಂದೊಂದೇ ಗಿಡಗಳನ್ನು ನಾನು ತೋರಿಸಲು ಪ್ರಾರಂಭಿಸಿದೆ. "ಇದು ಬಾಟಲ್ ಬ್ರಷ್ ಮರ. 2003 ರಲ್ಲಿ ಹಾಕಿದ್ದು. ಎಷ್ಟು ಹೊರವಾಗಿ ಬೆಳೆದಿದೆ ನೋಡಿ. ಇವೆಲ್ಲಾ ವಿವಿಧ ಜಾತಿಯ ದಾಸವಾಳಗಳು. ಒಟ್ಟು ನಲವತ್ತು ಬಗೆ ಇದೆ ಇಲ್ಲಿ. ಇಲ್ಲಿ ನೋಡಿ ಇದು ಆ್ಯಂಥೂರಿಯಮ್..." ನನ್ನ ವಿವರಣೆಯನ್ನು ಶ್ರೀಧರ್ ದಂಪತಿಗಳು ಬಹು ಆಸಕ್ತಿಯಿಂದ ಕೇಳುತ್ತಿದ್ದರು. ಆಮೇಲೆ ಮಯೂ ಇತರ ಗಿಡಗಳನ್ನು ನೋಡುತ್ತಾ ಮನೆಯ ಪಕ್ಕಕ್ಕೆ ಹೋದಳು. ಸ್ವಲ್ಪ ಹೊತ್ತಿನ ನಂತರ ಹಿಂದಕ್ಕೆ ಬಂದು, "ಶಿವಕುಮಾರ್, ಅಲ್ಲಿ ಬಾಳೆ ಗಿಡದ ಪಕ್ಕದಲ್ಲಿ ಒಂದು ವಿಳ್ಯೇದೆಲೆ ಬಳ್ಳಿ ಇದೆ, ಸ್ವಲ್ಪ ಎಲೆ ಕಿತ್ತುಕೊಳ್ಳಬಹುದೇ ?" ಅಂತ ಕಾತರದಿಂದ ಕೇಳಿದಳು. ನಾನು, " ಅಯ್ಯೋ ಅಗತ್ಯವಾಗಿ ಎಷ್ಟು ಬೇಕಾದರೂ ಕಿತ್ತುಕೊಳ್ಳಿ" ಅಂತ ಪರವಾನಗಿ ನೀಡಿದೆ. ಕೈತುಂಬ ಚಿಗುರೆಲೆ ಇಟ್ಟುಕೊಂಡು ಮಯೂ ಮನೆಯೊಳಕ್ಕೆ ಬರುವ ಹೊತ್ತಿಗೆ ನಾನು ರತ್ನಮ್ಮನವರಿಗೆ ಹೇಳಿ, ಸ್ವಲ್ಪ ಸುಣ್ಣ ಅಡಿಕೆ ತರಿಸಿ ಇಟ್ಟಿದ್ದೆ. ಮನೆ ಹಿಂದಿರುವ ಪಾರ್ವತಮ್ಮನವರ ಹತ್ತಿರ ಇವೆರಡೂ ಯಾವಾಗಲೂ ಇರುವುದರಿಂದ ಅವು ಸುಲಭವಾಗಿಯೇ ದೊರಕಿದವು. ಅಂದು ಮಧ್ಯಾಹ್ನ ಊಟದ ನಂತರ ದಂಪತಿಗಳು ಎಲೆ ಅಡಿಕೆ ತಿಂದು ಬಾಯಿ ಕೆಂಪಗೆ ಮಾಡಿಕೊಂಡು., ದಶಕಗಳ ಹಿಂದಿನ ಅನುಭವಗಳನ್ನು ಪುನಃ ಸವಿಯುತ್ತಿದ್ದುದನ್ನು ನೋಡಿದಾಗ ನನಗಂತೂ ತುಂಬಾ ಖುಷಿ ಆಯಿತು.

******

"ದೇವರ ಮನೆಯಲ್ಲಿ ರಮಣ ಮಹರ್ಷಿಗಳ ಫೋಟೋವನ್ನು ನೋಡಿದೆ. ಅರುಣಾಚಲದ ಫೋಟೋ ಸಹಾ. ನಮ್ಮ ಅಕ್ಕನ ಮನೆಯಲ್ಲಿ ಒಂದು ಇಡೀ ಗೋಡೆಯನ್ನು ಆವರಿಸಿರುವ ರಮಣ ಮಹರ್ಷಿಗಳ ಫೋಟೋ ಇದೆ." ಮಯೂ ತಾನು ಬೆಳಗಿನ ಪ್ರಾರ್ಥನೆಯಲ್ಲಿ ನಮ್ಮ ದೇವರ ಮನೆಯಲ್ಲಿ ನೋಡಿದ್ದನ್ನು ಪ್ರಸ್ತಾಪಿಸಿದಳು.

"ಹೌದಮ್ಮ, ಕಳೆದ ಹಲವಾರು ವರ್ಷಗಳಿಂದ ನಾನು ರಮಣರ ಅರ್ಚನೆ ಮಾಡುತ್ತಿದ್ದೇನೆ. 2010ರಿಂದ ಪ್ರತಿ ವರ್ಷ ನಾನು ತಿರುವಣ್ಣಾಮಲೈಗೆ ಹೋಗಿ ಮೂರು ದಿನ ಆಶ್ರಮದಲ್ಲಿದ್ದು ಹಿಂತಿರುಗುವೆ. ಅವರು ಹೇಳುವ ಅದ್ವೈತ ಮಾರ್ಗ ನನಗೆ ತುಂಬಾ ಹಿಡಿಸಿದೆ" ಎಂದು ಉತ್ತರಿಸಿದೆ.

"ಅವರ ಬಗ್ಗೆ ತಿಳಿಯಲು, ಯಾವ ಪುಸ್ತಕ ಸಲಹೆ ಮಾಡುತ್ತೀರಾ?"

"ದ ಮಹರ್ಷಿ ಎಂಡ್ ಹಿಸ್ ಮೆಸೇಜ್ ಅಂತ ಒಂದು ಪುಸ್ತಕ ಇದೆ ಪಾಲ್

ಬ್ರಂಟನ್ ಬರೆದದ್ದು. ಅದನ್ನು ಓದಿ. ನನ್ನ ಕಾಪಿಯನ್ನೇ ಕೊಡುತ್ತೇನೆ."

"ಮಹರ್ಷಿಗಳ ಒಂದು ಫೋಟೋ ಎಲ್ಲಿ ಸಿಗುತ್ತೆ?"

"ಈ ಪಾಲ್ ಬ್ರಂಟನ್ ಪುಸ್ತಕದಲ್ಲೇ ಒಂದು ಬಹು ಸುಂದರವಾದ ಫೋಟೋ ಇದೆ. ಬೇರೆ ಯಾಕೆ ಬೇಕು?"

"ನಮ್ಮಕ್ಕ ನನಗೆ ಕರ್ತ್ರುರಾಜ್ಞಯಾ ಪ್ರಾಪ್ಯತೇ ಫಲಂ, ಕರ್ಮ ಕಿಂಪರಂ ಕರ್ಮ ತಜ್ಜಡಂ  ಅಂತ ಶ್ಲೋಕ ಹೇಳಿಕೊಡುತ್ತಿದ್ದರು. ಅದರ ಟೆಕ್ಸ್ಟ್ ಇದ್ದರೆ ಮನೆಗೆ ಹೋದ ಮೇಲೆ ಪಾರಾಯಣ ಮಾಡಲು ಅನುಕೂಲ."

"ಅದು ರಮಣರು ರಚಿಸಿರುವ ಉಪದೇಶಸಾರದ ಮೊದಲ ಶ್ಲೋಕ. ಅದರ ಕಾಪಿಯನ್ನ ದೇವರ ಮನೆಯಲ್ಲಿ ನೋಡಿರಬಹುದು. ನಾನು ದಿನ ನಿತ್ಯ ಅದರ ಪಾರಾಯಣೆ ಮಾಡುತ್ತಿದ್ದೇನೆ. ಕಳೆದ ಹತ್ತು ವರ್ಷಗಳಿಂದ. ಅದನ್ನೇ ತೆಗೆದುಕೊಂಡು ಹೋಗಬಹುದು. ಹತ್ತು ವರ್ಷಗಳ ಅಧ್ಯಯನದ ಪವಿತ್ರತೆ ಅದರಲ್ಲಿರುತ್ತೆ. ನಾನು ಬೇರೆ ಕಾಪಿ ಮಾಡಿಕೊಳ್ಳುತ್ತೇನೆ. ರಮಣರ ಬಗ್ಗೆ ಇಷ್ಟು ಆಸಕ್ತಿ ಇರುವವರನ್ನು ಕಂಡು ತುಂಬಾ ಸಂತೋಷವಮ್ಮ"

"ಇನ್ನೊಂದು ವಿಷಯ. ನಾಮ ಸ್ಮರಣೆ ಅಂತ ನಿನ್ನೆ ವಿಜಯ್ ಹತ್ರ ಮಾತಾಡ್ತಾ ಇದ್ರಲ್ಲ, ಯಾವ ಶ್ಲೋಕ ಅದು.?"

"ಅರುಣಾಚಲ ಶಿವ ಅಂತ ಶ್ಲೋಕ ಅದು. ಒಂದು ಹಾಳೇಲಿ ಬರೆದು ಕೊಡ್ತೀನಿ. ಅಂದ ಹಾಗೆ ದೇವರ ಮನೆ ಬಾಗಿಲಿನಲ್ಲಿ ಒಂದು ಆ್ಯಂಟೀಕ್ ಬ್ರಾಸ್ ಹ್ಯಾಂಗಿಂಗ್ ಇದೆ. ಲಕ್ಷ್ಮಿ, ಶಿವ, ಗಣೇಶ ಇರೋದು. ವಿಜಯ್ ಅದು ತುಂಬಾ ಇಷ್ಟ ಆಯಿತು ಅದು. ಅದನ್ನ ವಿಜಯ್ ಗೆ ಪ್ರೆಸೆಂಟ್ ಮಾಡ್ತೀನಿ ಮಯೂರ. ಅವನು ಅದನ್ನ ಅವರ ದೇವರ ಮನೆಯಲ್ಲಿ ಇಟ್ಕೊಂಡರೆ ಚೆನ್ನಾಗಿರುತ್ತೆ."

"ತುಂಬಾ ಥ್ಯಾಂಕ್ಸ್ ಶಿವಕುಮಾರ್. ಅಣ್ಣನ ಮನೆ ಆತಿಥ್ಯ ಅಂದರೇನು ಅಂತ ಈಗ ತಿಳೀತು."

**********

ಆ ಬೆಳಗ್ಗೆ  ಉಪಹಾರ ಮುಗಿದ ಮೇಲೆ ಶ್ರೀಧರ ಮತ್ತು ನಾನು ವೆರಾಂಡಾದಲ್ಲಿ ಕುಳಿತಿದ್ದೆವು. ಮಯೂರ ಮತ್ತು ವಿಜಯ್ ಪ್ಯಾಕಿಂಗ್ ಮಾಡುವುದರಲ್ಲಿ ನಿರತರಾಗಿದ್ದರು. ಟ್ಯಾಕ್ಸಿ ಬರುವುದಕ್ಕೆ ಇನ್ನೂ ಸ್ವಲ್ಪ ಸಮಯ ಉಳಿದಿತ್ತು.

"ಶ್ರೀಧರ ನೀನು ಬಂದದ್ದು ತುಂಬಾ ಚೆನ್ನಾಗಿತು ಕಣೋ. ನಿನ್ನ ಲಾಸ್ಟ್ ಟ್ರಿಪ್ ಕ್ಯಾನ್ಸಲ್ ಆದಾಗ ನನಗೆ ತುಂಬ ನಿರಾಸೆಯಾಗಿತ್ತು. ಸಧ್ಯ, ಈಗಲಾದರೂ ಬರುಕ್ಕೆ ಆಯಿತಲ್ಲ."

"ಹೌದು ಶಿವು, ನನಗೂ ಅಷ್ಟೆ. ನನಗಿರಲಿ, ಮಯೂರ ಮತ್ತು ವಿಜಯ್ ನಿಮ್ಮ ಮನೇಲಿ ತುಂಬ ಎಂಜಾಯ್ ಮಾಡಿದ್ರು. ವಿಜಯ್‌ಗಂತೂ ನಿನ್ನ ಹತ್ರ ಮಾತಾಡೋದು ಅಂದ್ರ ತುಂಬ ಇಷ್ಟ. ಅವನ ಹತ್ರ ನೀನು ಏನೇನೋ ಫಿಲಾಸಫಿ ಮಾತಾಡ್ದೆ. ನನ್ನ ಫಿಲಾಸಫಿ ತುಂಬಾ ಸಿಂಪಲ್. ಅಕ್ಸೆಪ್ಟೆನ್ಸ್  ಸಾಧಾರಣವಾಗಿ ಮನೆಯ ಸಣ್ಣಪುಟ್ಟ ರಿಪೇರಿ ಕೆಲಸಗಳನ್ನೆಲ್ಲಾ ನಾನೇ ಮಾಡೋದು. ಈಚೆಗೆ  ಕೈ ನಡುಕ ಶುರುವಾದಾಗಿನಿಂದ ಸ್ಕ್ರೂ ಡ್ರೈವರ್ ಹಿಡಿಯುಕ್ಕೆ ಆಗುಲ್ಲ. ನಮ್ಮಪ್ಪನಿಗೂ ಈ ಕೈ



ನಡುಕ ಇತ್ತು. ಸಿನಿಸ್ಟರ್ ಕಾಯಿಲೆ ಏನೂ ಇಲ್ಲ ಅಂತ ಡಾಕ್ಟರ ಹತ್ರ ಖಚಿತ ಪಡಿಸಿಕೊಂಡ ಮೇಲೆ ಅದರ ಜತೆ ಸಹ ಬಾಳ್ವೆ ಚೆನ್ನಾಗಿಯೇ ನಡೀತಾ ಇದೆ. ಅದರಿಂದಾಗಿ ನನ್ನ ಜೀವನೋತ್ಸಾಹಕ್ಕೇನೂ ಕುಂದು ಬಂದಿಲ್ಲ" ಅಂದ ಶ್ರೀಧರ.

"ಶ್ರೀಧರ, ನಿನ್ನ ಮಗನಿಗೆ ನಾನು ಹೇಳಿದ್ದರ ಸಾರಾಂಶ ಇಷ್ಟೇ. ಈಶ್ವರ ಪ್ರಸಾದ ಬುದ್ಧಿ. ಏನೇ ಬಂದರೂ ಭಗವಂತನ ಪ್ರಸಾದ ಅಂತ ಸ್ವೀಕರಿಸೋದು. ನೀನು ಅದನ್ನ ಪ್ರಾಕ್ಟೀಸ್ ಮಾಡ್ತಾ ಇರೋದನ್ನ ನಾನೇ ಕಣ್ಣಾರೆ ಕಂಡಿದೀನಿ. ಇನ್ನೇನು ಬೇಕೋ ನಿನಗೆ."

ಪ್ಯಾಕಿಂಗ್ ಮುಗಿಸಿ ಮಯೂರ ಮತ್ತು ವಿಜಯ್ ನಮ್ಮೊಂದಿಗೆ ಕುಳಿತರು. ಪರಸ್ಪರ ಧನ್ಯವಾದಗಳು ನಡೆದವು.


"ಶಿವಕುಮಾರ್, ನಿಮ್ಮ ಮಗಳ ಮನೆಗೆ ಸಿಂಗಪುರಕ್ಕೆ ಬಂದಾಗ, ನಮ್ಮ ಮನೆಗೂ ಬರುವ ಪ್ಲಾನ್ ಮಾಡಿ. ಕೇವಲ ಏಳು ಗಂಟೆಗಳ ಪಯಣ."

ಮಯೂರಳ ಆಹ್ವಾನ ಆತ್ಮೀಯತೆಯಂದ ಕೂಡಿತ್ತು. ನಾನು" ಖಂಡಿತ ಬರ್ತೀನಿ ಮಯೂರ, " ಎಂದು ಹೇಳುವ ಹೊತ್ತಿಗೆ ವಿಜಯ್ "ಟ್ಯಾಕ್ಸಿ ಬಂತು" ಅಂತ ಅನೌನ್ಸ್ ಮಾಡಿದ.

******

ನಾನು ಇನ್ನೂ ವೆರಾಂಡಾದಲ್ಲೇ ಕುಳಿತಿದ್ದೆ. ಶ್ರೀಧರ ಮಯೂರರಂತಹ ಅಮಾಯಕ ಸಜ್ಜನ ದಂಪತಿಗಳ ಇಂತಹ ಆಪ್ತ ಸ್ನೇಹಕ್ಕೆ ನಾನು ಅರ್ಹನೇ ಎಂಬ ಸಂಶಯ ಮೊಳೆಯಿತು. ಒಡನೆಯೇ ಕವಿ ವೀ.ಸೀ. ಯವರ ಕವನದ ಒಂದು ಸಾಲು ನೆನಪಿಗೆ ಬಂತು.

ಸ್ವರ್ಗದೊಳಗೀ ಸ್ನೇಹ ದೊರೆವುದೇನು?
ಈ ಪರಿಯ ಸೌಹಾರ್ದ ಕೆಳೆಯ ವೈಭವವು?
ಇಲ್ಲದಿರೆ ಎನಗಿಲ್ಲೆ ನೂರು ಜನ್ಮಗಳಿರಲಿ
ಎಲ್ಲಪರಿ ಮಮತೆಗಳ ಸತ್ಯ ಜೀವನವು.



# ಸೈಬರ್ ವಂಚಕ (ಅಣಕುವಾಡು)

ಎಚ್. ಡುಂಡಿರಾಜ್

**ಚಿತ್ರ : 'ಸಂಶಯಫಲ' ರಚನೆ: ಕು.ರಾ. ಸೀತಾರಾಮಶಾಸ್ತ್ರಿಗಳು**

(ದೂರದಿಂದ ಬಂದಂಥ ಸುಂದರಾಂಗ ಜಾಣ ಎಂಬ ಹಾಡಿನ ಧಾಟಿಯಲ್ಲಿ)

ದೂರದಿಂದ ಕದಿಯುವಂಥ ಸೈಬರ್ ಕಳ್ಳ ಜಾಣ
ಹ್ಯಾಕ್ ಮಾಡಿ ಹಾಕುತಾನೆ ಖಾತೆಗಳಿಗೆ ಕನ್ನ
ಈತ ಎಲ್ಲಿ ಇಹನೊ ಏನೊ ಹೇಗೆ ಕದಿಯುತಾನೊ
ನಾ ಕಾಣೆ ನಾ ಕಾಣೆ ನಿಮ್ಮ ಮೊಬೈಲ್ ಆಣೆ
ಅಯ್ಯಯ್ಯೊ ಇವ ಮಹಾ ಮೋಸಗಾರ
ಅಮ್ಮಮ್ಮೊ ಇವ ದೊಡ್ಡ ದಗಾಕೋರ
ಜೋಕೆ ಜೋಕೆ ಜೋಕೆ ಜೋಕೆ ಜೋಕೆ
ದೂರದಿಂದ ಕದಿಯುವಂಥ ಸೈಬರ್ ಕಳ್ಳ ಜಾಣಾ
ಬ್ಯಾಂಕುಗಳ ಹೆಸರಿನಲ್ಲಿ ಮೆಸೇಜ್ ಕಳಿಸುವ
ಫೋನು ಮಾಡುವ, ಗಾಳ ಹಾಕುವ
ಉಚಿತ ಕೊಡುಗೆ ಲಾಟರಿ ಬಲೆಯ ಬೀಸುವ
ಮೇಲ್ ಕಳಿಸುವ ಆಸೆ ತೋರುವ
ಹಿಂದೆ ಮುಂದೆ ನೋಡದೆ ಲಿಂಕ್ ಒತ್ತಬೇಡಿ
ಒಟಿಪಿ, ಪಾಸ್ ವರ್ಡು ಹಂಚಿಕೊಳ್ಳ ಬೇಡಿ
ಭದ್ರತೆಗೆ ಗಮನ ನೀಡಿ ಬೇಡ ಉದಾಸೀನ
ಜೋಪಾನ ಜೋಪಾನ ನಿಮ್ಮ ಮೊಬೈಲ್ ಆಣೆ
ಅಯ್ಯಯ್ಯೊ ಇವ ಮಹಾ ಮೋಸಗಾರ
ಅಮ್ಮಮ್ಮೊ ಇವ ದೊಡ್ಡ ದಗಾಕೋರ
ಜೋಕೆ ಜೋಕೆ ಜೋಕೆ ಜೋಕೆ ಜೋಕೆ
ದೂರದಿಂದ ಕದಿಯುವಂಥ ಸೈಬರ್ ಕಳ್ಳ ಜಾಣಾ
App ಹಾಕಿಕೊಳ್ಳುವಾಗ ಹುಷಾರಾಗಿರಿ
ಬೇಡ ಅವಸರ ವಹಿಸಿ ಎಚ್ಚರ
ಜಾಲತಾಣದಲ್ಲಿ ಎಲ್ಲ ವಿವರ ಕೊಟ್ಟರೆ
ಸಾಲ ಪಡೆದರೆ ಮುಂದೆ ತೊಂದರೆ
ಮೋಸವಾಯಿತೆಂದು ನೊಂದು ನಾಚಿಕೊಳ್ಳಬೇಡಿ
ಸೈಬರ್ ಅಪರಾಧವನ್ನು ಬೇಗ ವರದಿ ಮಾಡಿ
ದುಡ್ಡು ಕಳೆದುಕೊಂಡ ಮೇಲೆ ಅತ್ತರದು ವ್ಯರ್ಥ
ಜೋಪಾನ ಜೋಪಾನ ನಿಮ್ಮ ಮೊಬೈಲ್ ಆಣೆ
ಅಯ್ಯಯ್ಯೊ ಇವ ಮಹಾ ಮೋಸಗಾರ
ಅಮ್ಮಮ್ಮೊ ಇವ ದೊಡ್ಡ ದಗಾಕೋರ
ಜೋಕೆ ಜೋಕೆ ಜೋಕೆ ಜೋಕೆ ಜೋಕೆ
ದೂರದಿಂದ ಕದಿಯುವಂಥ ಸೈಬರ್ ಕಳ್ಳ ಜಾಣಾ



# ಮುಗಿಲುಹಳ್ಳಿಯಲ್ಲಿ ಒಂದು ರಾತ್ರಿ (ಕೊರವಂಜಿಯಿಂದ)

ಅ.ರಾ.ಸೇ.

ಬೆಳಗಾದರೆ ರಿಪಬ್ಲಿಕ್, ಪರೀಕ್ಷೆಗೆ ಎರಡೇ ತಿಂಗಳು, ಎಲೆಕ್ಷನ್ ಇನ್ನೇನು ಬಂದೇಬಿಟ್ಟಿತು, ಥಳಿಥಳಿ, ಕಾರ್ಗತ್ತಲನ್ನು ಒಡೆದು ಕೃಷ್ಣ ಪಕ್ಷದ ಕೃಶಕಾಯ ಚಂದ್ರ ಬೀದಿಯಮೇಲೆ ತೇಲುತ್ತಿದಾನೆ. ಮುಗಿಲುಹಳ್ಳಿಯ ರತ್ನಾವಳಿ ಎಕ್ಸ್ ಟೆನ್ಷನ್ನಿನ ಯುವಕರು ಎಸ್ಟೆಲಿಟ, ಮೀನಾ, ಹೇವರ್ತ್, ಮರ್ಲಿನ್ ಇತ್ಯಾದಿ ಕನಸುಗಳನ್ನೂ, ಯುವತಿಯರು ಪೆಕ್, ಕುಮಾರ್ ಇತ್ಯಾದಿಗಳನ್ನೂ ಕಾಣುತ್ತಿದ್ದಾರೆ. ಕಾಂಗ್ರೆಸ್ ಹೈಕಮ್ಯಾಂಡಿಗೆ ಬರೆದ ತಮ್ಮ ಪತ್ರವನ್ನು ಶ್ರೀಮನ್ನಾರಾಯಣ್ ಹರಿದು ಹಾಕಿದುದು, ನಾಳೆ ಬರಲಿರುವ ಎಲೆಕ್ಷನ್ನಿನ ಫಲಿತಾಂಶ, ರಿಪಬ್ಲಿಕ್ ಡೇ ಭಾಷಣ ಮಾಡುತ್ತಿರುವಾಗ ಸಭೆಯ ನಡುವೆ ಡೀಸೆಲ್ ಟ್ರಕ್ ನುಗ್ಗುವ ದೃಶ್ಯ, ನಿಧಾನಸೌಧ, ಲೋಕಸಭೆ, ಅವಿಶ್ವಾಸ ಇತ್ಯಾದಿ ಕನಸುಗಳು ರಾಜಕೀಯ ಪಟುಗಳಿಗೆ ಬೀಳುತ್ತಿವೆ.

ಬೀದಿಯ ಎಡಭಾಗದಲ್ಲಿ ಸಾಲಿಗೆ ಸ್ವಲ್ಪ ಹಿಂದೆ ಒಂದು ಮಂಗಳೂರು (ಅಥವಾ ಯಲಹಂಕ) ಹೆಂಚಿನ ಮಹಡೀ ಮನೆ. ಬಾಗಿಲಿನ, ಕಿಟಕಿಯ, ಕದಗಳು ಮುಚ್ಚಿವೆ. ಅಂಗಳದಲ್ಲಿ ಅರೆಬೆಳಕು. ದೂರದ ತಂತಿಯ ಕಂಬ ತೂಕಡಿಸುತ್ತಿದೆ. ಬಾಗಿಲಿನ ಮುಂದೆ ಇಪ್ಪತ್ತು ವಯಸ್ಸಿನ ಯುವಕ ಹಾಗೂ ನಾಲ್ವತ್ತು ವಯಸ್ಸಿನ ಒಬ್ಬ ಮಧ್ಯ ವಯಸ್ಕ. 'ಯಕ್ಕಾ, ಯಕ್ಕಾ, ಬಾಗಿಲ್ತಗೀ' ಎಂದು ಕೂಗುತ್ತಿದ್ದಾರೆ. ಐದು, ಹತ್ತು, ಹನ್ನೆರಡು, ಹನ್ನೆರಡುವರೆ, ಒಂದು ಗಂಟೆ ಬಡಿಯಿತು.

'ಯಕ್ಕೊ, ಯಕ್ಕಯ್ಯಾ, ಯಕ್ಕಣೀ ಬಾಗ್ಲಕ್ಕಾ, ತಗಿಯಕ್ಕಾ, ಬಾಗ್ಲುತಗಿ ಯಕ್ಕೋ ಯಕ್ಕೋೀ, ಯಕ್ಕಾ ಾ ಾ ಾ'

'ಧಾರಿಕಂಗಳ ಬಲೆಯೆ ಸೆರೆಯೇ, ನೋಡಿ ನೋಡದ ಬೆಡಗೆ ......' ಎಂದು ವೀಸೀಯವರು ಹೇಳಿದುದು........ ಇತ್ಯಾದಿಯಾಗಿ ಹುಡುಗನೊಬ್ಬ ಓದುತ್ತಿದ್ದ. ಸೆಕೆಂಡ್‌ಷೋ ಮುಗಿಸಿಕೊಂಡು ಬಂದ ಬೆಲ್ಲದಧಿಪತಿಗಳು ಬೆಡ್ ಸ್ವಿಚ್ ಆಫ್ ಮಾಡಿ ಆಕಳಿಸಿ, 'ಗುರುವೇ ಗೊರವಂಕಾ, ಬಕ್ಕೇಶಾ' ಎಂದು ರಗ್ ಹೊದೆಯಲಿದ್ದರು. ಕಾಂಗ್ರೆಸ್ ಕಪ್ಪಣ್ಣನವರು, ಎಲೆಕ್ಷನ್ ರಾಜಕೀಯವನ್ನು ಚಿಂತಿಸುತ್ತಿದ್ದವರು, ಉಸಿರ್ಗರೆದು 'ಗುಜರ್‌ಗಯಾ ಓ ಝಮಾನಾ ಕೈಸಾ?' ಎಂದು ಹಳೆಯ ಹಾಡೊಂದನ್ನು ಕುರುಕುತ್ತಿದ್ದರು. ಮಿಲ್ಲಿನ ಸೆಕೆಂಡ್ ಷಿಫ್ಟ್ ಕೂಲಿಗಾರರಿಗೆ ಕೃಷ್ಚೇವ್ ಮಹಾತ್ಮ್ಯವನ್ನು ಕಮ್ಯುನಿಸ್ಟ್ ಕರಿಯಣ್ಣ ಹೇಳುತ್ತಿದ್ದ. ಸೋಷಲಿಸ್ಟ್ ಸುಬ್ರಾ ಮಣ್ಣನು 'ಲೋಹಿಯಾ ಸರ್ಕಾರವಾದರೆ ಭಾರತ ಕಾಣುವ ಸ್ವರ್ಣಯುಗವನ್ನು ಪ್ರಚಾರ ಲೇಖನವೊಂದರಲ್ಲಿ ಚಿತ್ರಿಸುತ್ತಿದ್ದ. ಅವರೆಲ್ಲರ ಚಿಂತಾಸಮಾಧಿಯನ್ನೊಡೆದು ಕಾಳರಾತ್ರಿಯ ಕಾರೊಡಲಿನಿಂದ ಹೊರಟ 'ಯ್ಯಖೋೀ, ಯಬ್ಬಾ, ಬಾಗ್ಲೂ ಬಾಗ್ಲೂೂ' ಎಂಬ ಕೂಗು ಆಕಾಶವನ್ನಾವರಿಸಿತು.



ಚಳಿಗಾಳಿ ಭೋರೆಂದು ಬೀಸಿತು. ಮರದ ಮೇಲಿನ ಕಾಗೆಗಳು ಎದ್ದು 'ಕಾ ಕಾ ಕಾ ಕಾ' ಎಂದು ಚೀರಿ ರೆಕ್ಕೆ ಬಡಿದು ಪುಷ್ಪವೃಷ್ಟಿ ಮಾಡಿದವು. 'ಯಕ್ಕಾ, ಹಕ್ಕಯ್ಯಾ, ಹಖ್ಖಿಯೋೀ, ಯಕ್ಕಣೀ ಬಾಗ್ಲೂ, ಅಕ್ಕ, ಅಕ್ಕಾ ಬಾಗ್ಲು, ಏ ಹಕ್ಕಾ ಯೋ ಯಕ್ಕ, ಓ ಅಕ್ಕೊ, ಬಾಗ್ಲು ಬಾಗ್ಲು' ಧಡಧಡ ಬಾಗಿಲು ಬಡಿಯಿತು ಇಲ್ಲ, ಅಕ್ಕ ಏಳಲೊಲ್ಲಳು– ತಮ್ಮ ಬಿಡಲೊಲ್ಲ!

ಹುಡುಗ ಪುಸ್ತಕ ಮುಚ್ಚಿಟ್ಟು 'ಚೆಲುವೆ ನೀನಾರೆ' ಎನ್ನುತ್ತಾ ಹೊರಗೆ ಬಂದ. ಬೆಲ್ಲದಧಿಪತಿ 'ಈ ಯಕ್ಕನ ಮನೆ ಹಾಳಾಗ' ಎಂದು ಶಪಿಸುತ್ತಾ ಹೊರಗೆ ಬಂದ. ಕಪ್ಪಣ್ಣ ಬಾಗಿಲು ಕಂಬಿಗಳಿಂದ ಇಣುಕಿದ. ಸುಬ್ರಾಮಣ್ಣ ಬೀದಿಗಿಳಿದ. ಕರಿಯಣ್ಣ ತನ್ನ ಹಿಂಬಾಲಕರೊಡನೆ ಮನೆ ಮುಂದೆ ಹೋಗಿ ನಿಂತ.

"ಯಕ್ಕೋ, ಯಕ್ಕೋ ಬಾರಕ್ಕಾ ಬಾಗ್ಲು ತೆಗಿ–ಢಡ್–ಢಡಾರ್–ಯಕ್ಕಾ ಸತ್ತೇನ್ ಯಕೋ ಬದಿಕಿದೀಯಾ ಯಕ್ಕೋ–ಬಾಗ್ಲಕ್ಕಾ ಹಬ್ಬಿಯಾ'

ಕರಿಯಣ್ಣ 'ಏ ಯಕ್ಕಾ ಏನಿದು ಬಾಗ್ಲು ತಗಿ ನಿನ್ತಮ್ಮ ಚಳೀಗೆ ಸೆಟೆದ' ಎಂದ. ಸುಬ್ರಾಮಣ್ಣ 'ಯಕ್ಕಯ್ಯಮ್ಮೋರೇ ಬಾಗ್ಲು ತಗೀರೀ' ಎಂದು ಕೂಗಿದ. ಬೆಲ್ಲದಧಿಪತಿಗಳು 'ಲೇ ತಮ್ಮ ನಿಮ್ಮಕ್ಕ ಮನ್ಸೀನೋ ಕೊರ್ಡ್ರೋ. ಸತ್ಲೋ ಹೆಂಗೋ ಪೋಲೀಸ್ನೋರ್ನ ಕರ್ಕೊಂಬರ್ತೀನ್ತಡೀ' ಎಂದು ಫೋನ್ ಬಳಿಗೆ ಹೋದರು. ಓದುವ ಹುಡುಗನು ಎಂಟು ಹತ್ತು ಹುಡುಗರೊಡನೆ 'ಯಕ್ಕಾ ಯಕ್ಬಯ್ಯಾ' ಎಂದು ಮೇಳ ಗೀತೆ ಆರಂಭಿಸಿದ.

ಯಕ್ಕಯ್ಯನ–ತಮ್ಮಯ್ಯನ ಗಂಟಲು ಕೀಚಲಾಗಿತ್ತು. ಮುಖದಲ್ಲಿ ಬೆವರಿಳಿ–ಯುತ್ತಿತ್ತು. ಇನ್ನೊಬ್ಬ ತಮ್ಮಯ್ಯ ಉಸಿರೆಳೆಯುತ್ತಿದ್ದ. ಬಾಗಿಲು ತಟ್ಟಿದರು, ಕಿಟಕಿ ದಬ್ಬಿದರು, ಆರಿಚಿದರು, ಬಡಿದುಕೊಂಡರು. ಒಬ್ಬರಲ್ಲ, ಮೂವರಲ್ಲ, ನೂರಾರು ಜನ. ಯಕ್ಕ ಗಾಢನಿದ್ರೆಯಲ್ಲಿದ್ದಳು. ಕಪ್ಪಣ್ಣನವರು ಬಂದರು 'ತಮ್ಮ ಬಾರಲೇ ಇಲ್ಲಿ. ಯಾಕೋ ಹಂಗೆ ಬಡ್ಕಂತೀ, ಬಾರೋ ಕಂಬ್ಬಿ ಕೊಡ್ತೀನಿ. ನಿನ್ಕಾಲಲ್ಲಿ ಯಾರಾದ್ರೂ ನಿದ್ದೆ ಮಾಡ್ಬೇಕೋ ಬೇಡವೋ. ಬಾರೋ ಮಂಕ' ಎಂದರು. ಸುಬ್ರಾಮಣ್ಣ ಕರಿಯಣ್ಣನ ಕಡೆ ನೋಡಿದ. ಕರಿಯಣ್ಣ ತಲೆಹಾಕಿದ, ಸುಬ್ರಾಮಣ್ಣ 'ಅದು ಹೇಗ್ರೀ ಸಾಧ್ಯ? ಯಕ್ಕಯ್ಯನ್ನ ಎಬ್ಬಿಸ್ಲೇ ಬೇಕು' ಎಂದ.

"ಯಕ್ಕ, ಯಕ್ಕಾ, ಯ್ಯಕಯಾ, ಅಕ್ಕಯೋ, ಬಾಗ್ಲು ಬಾಗ್ಲು'

ಮೂರುಗಂಟೆ ಬಡಿಯಿತು. ದೂರದಲ್ಲಿ ಪೋಲಿಸ್ ವ್ಯಾನಿನ ಹಾರನ್ ಮೊಳಗಿತು. ಮನೆಗಳ ಕಿಟಕಿಗಳು ತೆರೆದವು. ಮಹಡಿ ಮೆಟ್ಟಿಲುಗಳ ಮೇಲೆ ಚಪ್ಪಲಿಗಳು ಪಟಪಟ ಎಂದವು. ಜನ ಬಂದರು. ವ್ಯಾನ್ ಬಂತು. ಎಲ್ಲರೂ ಏಕಕಂಠದಿಂದ ತಾರಕಸ್ವರದಲ್ಲಿ ಕೂಗಿದರು. **'ಯಕ್ಕಯ್ಯಾ, ಯಕ್ಕೋ, ಯಕ್ಕಾ, ಯಕ್ಕಯ್ಯಾ'**

ಮನೆಯೊಳಗೆ ಸಪ್ಪಳವಿಲ್ಲ. ದೆವ್ವವೋ ಭೂತವೋ? ಸಪೊಕೇಶನ್ನೋ? **'ಅಕ್ಕಯ್ಯ, ಎಕ್ಕಯ್ಯ, ಹೆಕ್ಕಯ್ಯಾ'**

ಅಕ್ಕಯ್ಯ ಭ್ರಾಂತಿಯೋಗದಲ್ಲಿದ್ದಳೋ? ಸವಿಕಲ್ಪ ಸಮಾಧಿಯೋ? ನಿರ್ವಿಕಲ್ಪವೋ ಅಥವಾ ಆರ್ಡಿನರಿ ಸಮಾಧಿಯೋ?

ಯಕ್ಕನದು ಮರ ನಿದ್ದೆ, ಯಮ ನಿದ್ದೆ, ಅದ್ಧುರಿ ನಿದ್ದೆ, ಬಹದ್ದೂರ್ ನಿದ್ದೆ, ಭರಂದ್ ನಿದ್ದೆ.

ಕಪ್ಪಣ್ಣನವರ ಮಗ ಬಂದ. ಯಕ್ಕ, ಅಟ್ಟದಮೇಲೆ ಮಲಗಿರಬಹುದು ಎಂದು ಸೂಚಿಸಿದ, ಏಣಿ ತಂದ, ಪೋಲಿಸು ದಫೆದಾರರು ಹತ್ತಿದರು. ಕಣ್ಣು ಕಪಟವೊಂದು ಅವರ ಕಣ್ಣಿಗೆ ಅಪ್ಪಳಿಸಿತು. ಅವರು ಹಿಂದಕ್ಕೆ ಬಿದ್ದರು. 'ಅಯ್ಯಯ್ಯೋ, ಅಮ್ಮಯ್ಯೋ, ಯಕ್ಕಣ್ಣೀ' ಎಂದು ಕೂಗಿದರು.



ಕಪ್ಪಣ್ಣ, ಅವನ ಮಗ, ಸುಬ್ರಾಮಣ್ಣ, ಕರಿಯಣ್ಣ ಅಟ್ಟಕ್ಕೆ ಏಣಿ ಮೇಲೆ ಹತ್ತಿದ್ದರು.

ಅಲ್ಲೂ ಕಿಟಕಿಗಳು ಬಂದು. ಮನೆಯ ಸುತ್ತಲೂ ಜನಜಂಗುಳಿ, **'ಏಳೆಕ್ಕಯ್ಯೋ'** ಎಂದು ಚಿಳ್ಳೆ ಪಿಳ್ಳೆಗಳು ಕೂಗಿದವು. ಚಳಿಗಾಳಿ ಭೋರಿಡುತ್ತಿತ್ತು. 'ಇಳಿದು ಬಾ ಯಕ್ಕ ಇಳಿದು ಬಾ' ಎಂದ ಓದುವ ಹುಡುಗ. ಅಟ್ಟದ ಮೇಲಿನ ಕಿಟಕಿಯೊಂದು ಮುರಿಯಿತು. ಒಳಗಿನ ಗೊರಕೆಯೊಂದು ನಿಂತಿತು. ಆಕಳಿಸಿದ ಸದ್ದು.

'ಯಾವೋನೋ ಭಾಡ್ಯಾ ಮನೆ ಮುದ್ದೋನು' ಎಂದು ಹೆಣ್ಣು ದನಿಯೊಂದು ಘರ್ಜಿಸಿತು. ಕರಿಯಣ್ಣ ಅಟ್ಟದಿಂದ ಕೆಳಕ್ಕೆ ಧುಮುಕಿಬಿಟ್ಟ. ಕಪ್ಪಣ್ಣನವರೂ, ಸುಬ್ರಾಮಣ್ಣನೂ ಏಣಿಯ ಕಡೆಗೆ ಓಡಿದರು. 'ಮನೆ ಮುರುಕರು. ಏನ್ರೋ ನಿಮ್ಗೆ ಬ್ಯಾನೆ, ಯಾರಾದ್ರೂ ನಿದ್ದೆಗಿದ್ದೆ ಮಾಡ್ಬೋಕೋ ಇಲ್ಲೊ. ಯಾರೋ ಅರ್ಜೋದು 'ಯಕ್ಕಯ್ಯ' ಅಂತ. ನಿಮಗೇನು ಮನೆ ಮಠ ಐತೋ ಇಲ್ಲೋ', 'ಯಕ್ಕಾ ನಿನ್ತಮ್ಮ ಕೂಗ್ತಾನೆ ನೋಡು' ಎಂದ ಕಪ್ಪಣಪುತ್ರ. 'ಎಲೇ ಕೊಟ್ರೇಶಿ, ಭಡ್ವಾ, ಎಲ್ಗೆ ಹೋಗಿದ್ಯೋ, ಈ ಅಪರಾತ್ರ್ಯಾಗೇನೋ ಮನ್ಗೆ ಬರೋದು. ಬಾ ಇಲ್ಲಿ, ನಿನ್ನ ಚರ್ಮ ಸುಲೀತೀನಿ'

ವಿದ್ಯುದ್ದೀಪ ಹೊತ್ತಿದವು. ಕೊಟ್ರೇಶಿ ಒಳಕ್ಕೆ ಹೋದ. ಈ ಅಶಾಂತಿಪರ್ವವನ್ನು ಕೊನೆಗೊಳಿಸಲು ಶ್ರಮಿಸಿ, ಯಕ್ಕಯ್ಯನನ್ನು ಕೊನೆಗೂ ಎಬ್ಬಿಸಿದವನು ನಾನೇ.

ನನಗೇ ನಿಮ್ಮ ಓಟು ಮೀಸಲಾಗಲಿ ಎಂದು ಮರುದಿನ ರಿಪಬ್ಲಿಕ್‌ಡೇ ಬಹಿರಂಗ ಸಭೆಯಲ್ಲಿ ಕಪ್ಪಣ್ಣನವರು ವೋಟುದಾರರಿಗೆ ವಿನಂತಿ ಮಾಡಿದರು. ಸುಬ್ರಾಮಣ್ಣ ಇದನ್ನು ವಿರೋಧಿಸಿ ಯಕ್ಕನನ್ನು ಎಬ್ಬಿಸಿದ ಯಶ ತನ್ನದೇ ಎಂದು ಪೇಪರಿಗೆ ಹೇಳಿಕೆ ಕೊಟ್ಟಿದ್ದಾನೆ.


ಕಮ್ಯುನಿಸ್ಟ್ ವ್ಯಾನ್ ಈ ರೀತಿ ಪ್ರಚಾರ ಮಾಡಿದೆ

'ನಿಮ್ಮ ಓಟು ಯಾರಿಗೆ?'

'ಕಾಮ್ರಡ್ ಕರಿಯಣ್ಣನವರಿಗೆ'

'ಯಕ್ಕಯ್ಯನನ್ನು ಎಬ್ಬಿಸಿದವರು ಅವರೇ.'

ಮುಗಿಲುಹಳ್ಳಿಯ ಚುನಾವಣೆ 'ಯಕ್ಕನನ್ನು ಎಬ್ಬಿಸಿದವರಾರು' ಎಂಬುದರ ಮೇಲೆ ನಡೆಯಲಿದೆ. ಉಳಿದ 'ಸಮತಾವಾದೀ ಸಮಾಜ' 'ಕೋಮು' 'ಪ್ರಜಾ ಸತ್ತೆಯ ರಕ್ಷಣೆ' 'ಸಮತೆ' 'ಅನ್ನ ಬಟ್ಟೆ' ಎಂಬ ತತ್ವಗಳಿಗೆ ನಮ್ಮೂರಿನಲ್ಲಿ ಮಾನ್ಯತೆ ಇಲ್ಲ. ■



# ‘ದೆಗಡಿಯಿದ್ದ ಬದ್ದಾದ ಬೂಗು’ ಮತ್ತು ಅನುನಾಸಿಕ ಅಕ್ಷರಗಳು

**ಶ್ರೀವತ್ಸ ಜೋಶಿ, ಅಮೆರಿಕ**

ಅನುನಾಸಿಕ ಅಕ್ಷರಗಳ ಶಕ್ತಿ ಮತ್ತು ಮಹತ್ತ್ವ ಗೊತ್ತಾಗುವುದು ನಮಗೆ ನೆಗಡಿಯಾದಾಗಲೇ. ಸದ್ಯ ನನಗೇನೂ ನೆಗಡಿಯಾಗಿಲ್ಲ ಹಾಗಾಗಿ ತಾಜಾ ಅನುಭವದಿಂದ ನಾನಿದನ್ನು ಹೇಳ್ತಿರೋದಲ್ಲ. ಆದರೆ ನೆಗಡಿಯ ಅನುಭವ ನಮಗೆಲ್ಲರಿಗೆ ಆಗೊಮ್ಮೆ ಈಗೊಮ್ಮೆ ಆಗುವಂಥದ್ದೇ. ಮತ್ತು ಹಾಗಾದಾಗಲೆಲ್ಲ ಅನುನಾಸಿಕ ಅಕ್ಷರಗಳ ಉಚ್ಚಾರದ ತೊಂದರೆ ಅರಿವಿಗೆ ಬರುವಂಥದ್ದೇ. ಬಹುಶಃ ಅದರಿಂದಲೇ ಇರಬಹುದು ‘ದೆಗಡಿ’ ಉಚ್ಚಾರದ ಬಗ್ಗೆಯೇ ಸಾಕಷ್ಟು ಜೋಕುಗಳೂ ಇವೆ. ಉದಾಹರಣೆಗೆ– ಜಗಲಿಯ ಮೇಲೆ ಅಪ್ಪ, ಅಮ್ಮ, ಮಗ ಕುಳಿತಿದ್ದರು. ‘ಅಪ್ಪಾ ದೋಡು, ಎಷ್ಟು ದಕ್ಷತ್ರಗಳು!’ ಮಗ ಆಕಾಶದ ಕಡೆ ಕೈ ತೋರಿಸುತ್ತ ಹೇಳಿದನು. ‘ದೋಡಿದೆ ಯೇದೇದಿದ್ದ ಬಗದ ಉಚ್ಚಾರಡೆ ಹ್ಯಾಗಿದೆ?’ ಅಂತ ಅಪ್ಪ, ಅಮ್ಮನಿಗೆ ಹೇಳಿದರು. ‘ಸುಬ್ಬದೆ ಬಗೂದ ಯಾಕೆ ಹೀಗೆ ಹೀಯಾಳಿಸ್ತೀರಿ?!’ ಅಂತ ಕೋಪಿಸಿಕೊಂಡಳು ಅಮ್ಮ. ಆ ದಾರಿಯಲ್ಲಿ ಹೋಗುತ್ತಿದ್ದವನೊಬ್ಬ ಇವರ ಸಂಭಾಷಣೆಯನ್ನು ಕೇಳಿದನು. ‘ಬೂವರಿಗೂ ದೆಗಡಿ ಆದತ್ತೆ ಕಾಡುತ್ತೆ!’ ಅಂತ ತನಗೆ ತಾನೇ ಹೇಳಿಕೊಂಡನು. ಈಗ ಅಮೆರಿಕದಲ್ಲಿ ಸ್ಪ್ರಿಂಗ್ ಸೀಸನ್. ಗಿಡಮರಗಳ ಚಿಗುರು, ಹುಲ್ಲಿನ ಧೂಳು, ಹೂವುಗಳ ಪರಾಗಎಲ್ಲ ಸೇರಿ ಗಾಳಿಯ ತುಂಬ ಎಲರ್ಜಿ ಕಣಗಳು. ‘ಎಲ್ಲರಿಗೂ ದೆಗಡಿ ಆದತ್ತೆ ಕಾಡುತ್ತೆ!’ ಎನ್ನುವ ಪರಿಸ್ಥಿತಿ.

ನೆಗಡಿಯಿಂದ ಬಂದ್ ಆದ ಮೂಗನ್ನು ಬಿಡಿಸಬೇಕಾದರೆ– ಅಂದರೆ ಡುಂಡಿರಾಜರು ಹೇಳುವಂತೆ ‘ಸಿಂಬಳ ಸುರಿಯುತ್ತಿರುವ ಮೂಗ; ನೋಡಿದರೆ ನೆನಪಾಗುವುದು ಜೋಗ!’ ಅಂತಾಗಬೇಕಾದರೆ– ಕೆಲವರು ನಸ್ಯ ಉಪಯೋಗಿಸುತ್ತಾರೆ. ನಸ್ಯ ಹಾಕಿಕೊಂಡು ಬಲವಾಗಿ ಸೀನಿದರೆ ನೆಗಡಿ ಅರ್ಧ ವಾಸಿಯಾಗುತ್ತದೆಂದು ಅವರ ನಂಬಿಕೆ. ಅಂಥವರ ಬಗ್ಗೆ ಕೈಲಾಸಂ ಒಂದು ಜೋಕು ಸಿಡಿಸಿದ್ದಾರೆ. ಇಬ್ಬರು ನೆಗಡಿ–ಮನುಷ್ಯ (ಮ–ನಸ್ಯ)ರ ಸಂಭಾಷಣೆ ಹೀಗಿರುತ್ತದಂತೆ. ಒಬ್ಬ: ‘ದಗ್ಗೆ ದೆಗಡಿ ಆಗಿದೆ. ಸ್ವಲ್ಪ ದಸ್ಯ ಕೊಡೋ!’ ಇನ್ನೊಬ್ಬ: ‘ಏ! ದಗ್ಗೇ ಇಲ್ಲಾ, ದಿಗ್ಗೆಲ್ಲಿ ಕೊಡಲೋ?’ ಒಬ್ಬ: ‘ಜಿಪುಡ ದದ್ದ ಬಗದೇ, ಹಾಳಾಗಿ ಹೋಗು!’ ಈ ದಗೆ ಹದಿ, ಅಲ್ಲಲ್ಲ ನಗೆಹನಿ ನಾನೋದಿದ್ದು ಕೈಲಾಸಂ ಅವರ ‘ನಮ್ಕ್ಳಬ್ಬು ಮತ್ತು ಕೈಲಾಸಂ ನೂಕ್ಸ್‌ನ ಕೆಲವು ಕಲ್ಪನೆಗಳು’ ಪುಸ್ತಕದಲ್ಲಿ.

ದೆಗಡಿ–ದಸ್ಯದ ಇನ್ನೊಂದು ಭಲೇ ಪ್ರಸಂಗ ಪ್ರೊಫೆಸರ್ ಟಿ.ಎಸ್.ವೆಂಕಣ್ಣಯ್ಯನವರದೆಂದು ಪ್ರಸಿದ್ಧ. ತಳುಕಿನ ವೆಂಕಣ್ಣಯ್ಯನವರು ಒಬ್ಬ ನಸ್ಯಪ್ರೇಮಿ. ನಸ್ಯವನ್ನು ಗೌರವದಿಂದ ‘ಜ್ಞಾನಚೂರ್ಣ’ ಎಂದು ಕರೆಯುತ್ತಿದ್ದರಂತೆ. ಅದಿಲ್ಲದಿದ್ದರೆ ಅವರಿಗೆ ಸಭೆ–ಸಮಾರಂಭಗಳಲ್ಲಿ ಮಾತೇ ಹೊರಡುತ್ತಿರಲಿಲ್ಲವಂತೆ. ಮೂಗಿನ ಎರಡೂ ಹೊಳ್ಳೆಗಳೊಳಗೆ ಚಿಟಿಕೆ ನಸ್ಯ ಏರಿತೋ, ಎಲ್ಲಿಲ್ಲದ ಹಾಸ್ಯಪ್ರವೃತ್ತಿ ರಂಗೇರುತ್ತಿತ್ತು, ಸುತ್ತಮುತ್ತಲಿನವರಿಗೆ ಬೋಧಪ್ರದ ರಂಜನೆಯೂ ಸಿಗುತ್ತಿತ್ತು. ಒಮ್ಮೆ ಡಿವಿಜಿ ಮತ್ತು ವೆಂಕಣ್ಣಯ್ಯ ಒಂದೆಡೆ ಕಲೆತಿದ್ದರು. ಡಿವಿಜಿ ವೆಂಕಣ್ಣಯ್ಯರಿಗಿಂತ ಎರಡು ವರ್ಷ ಚಿಕ್ಕವರಾದರೂ ಅವರಿಬ್ಬರಲ್ಲಿ ಹೋಗೋ–ಬಾರೋ ಏಕವಚನದ ದೋಸ್ತಿ ಇತ್ತಂತೆ. ಹೀಗೇ ಹರಟೆ ಮಾತು ಆಗುತ್ತಿರಬೇಕಾದರೆ ವೆಂಕಣ್ಣಯ್ಯನವರ ‘ಜೇಬಿನಿಂದ



ನಸ್ಯದ ಡಬ್ಬಿ ಹೊರಬಂತು. ನಸ್ಯದ ಚಟ ಬಿಡುವುದು ಕಷ್ಟಕರ ಎಂದು ಒಪ್ಪಿಕೊಂಡಿದ್ದೂ ಆಯ್ತು. 'ಹೋಗಲಿ ಬಿಡು. ಅನುನಾಸಿಕ ಅಕ್ಷರ ಬಳಸದೆ ನಸ್ಯದ ಬಗ್ಗೆ ಒಂದು ಪದ್ಯ ಬರಿ ನೋಡುವಾ!' ಎಂದರಂತೆ ಡಿವಿಜಿ. ವೆಂಕಣ್ಣಯ್ಯ ಇದ್ದವರು ಒಂದು ಚಿಟಿಕೆ ನಸ್ಯವನ್ನೇರಿಸಿ ಬೆರಳುಗಳನ್ನು ಕೊಡವಿಕೊಂಡು ತತ್‌ಕ್ಷಣವೇ ಕವನ ಕಟ್ಟಿದರಂತೆ: 'ದೆಗಡಿಯು ಬಲವಾಗಿದ್ದರೆ। ಹೊಗೆಯೆಲೆ ಧೂಳದ್ದು। ಬೂಗಿಗೇರಿಸು ಗೆಳೆಯಾ।' ಎಂತಹ ಪ್ರತ್ಯುತ್ಪನ್ನಮತಿ ಮತ್ತು ಹಾಸ್ಯಪ್ರಜ್ಞೆ!  ಅಂದಹಾಗೆ, ಅನುನಾಸಿಕ ಅಕ್ಷರ ಬಳಸದೆ ನಸ್ಯದ ಬಗ್ಗೆ ಪದ್ಯವೆಂದಾಗ ದಂಡಿಯ ದಶಕುಮಾರ ಚರಿತೆಯಲ್ಲಿ ಮಂತ್ರಗುಪ್ತನೆಂಬ ರಾಜಕುಮಾರನ ನೆನಪಾಗುತ್ತದೆ. ಮಂತ್ರಗುಪ್ತನು ಹಿಂದಿನ ರಾತ್ರಿ ಪ್ರಿಯತಮೆಯೊಂದಿಗೆ ಸುರತ ಕೇಳಿಯಲ್ಲಿ ಮೈಮರೆತಿದ್ದಾಗ ಕಾಮೋದ್ರೇಕದಿಂದ ಆ ಪ್ರಿಯತಮೆಯು ಮಂತ್ರಗುಪ್ತನ ತುಟಿಗಳನ್ನು ತೀವ್ರವಾಗಿ ಕಚ್ಚಿರುತ್ತಾಳೆ. ಅವನ ತುಟಿಗಳು ಗಾಯಗೊಂಡು ಊದಿರುತ್ತವೆ. ಎರಡೂ ತುಟಿಗಳನ್ನು ಮುಚ್ಚಲಿಕ್ಕಾಗದಷ್ಟು ನೋವು. ಅಂತಹ ಸನ್ನಿವೇಶದಲ್ಲಿ ಅವನ ಸಾಹಸ ವರ್ಣನೆ ಪ, ಫ, ಬ, ಭ, ಮ ಅಕ್ಷರಗಳ ಬಳಕೆಯಿಲ್ಲದೆಯೇ, ಅಂದರೆ ತುಟಿಗಳ ನೆರವಿಲ್ಲದೆ 'ನಿರೋಷ್ಠ್ಯ'ವಾಗಿ ನಡೆಯುತ್ತದೆ!

ಇರಲಿ, ನಮ್ಮ ಇಂದಿನ ವಿಷಯ ಓಷ್ಠ್ಯ ಅಕ್ಷರಗಳದ್ದಲ್ಲ, ಅನುನಾಸಿಕ ಅಕ್ಷರಗಳನ್ನು ಕುರಿತಾದ್ದು. ಹಾಗಾಗಿ, ನೆಗಡಿ ಮತ್ತು ಅನುನಾಸಿಕಗಳ ಇನ್ನೂ ಒಂದು ಮೋಜಿನ ಪದ್ಯವನ್ನು ಇಲ್ಲಿ ದಾಖಲಿಸಲೇಬೇಕು. ಇದು ನನಗೆ ಸಿಕ್ಕಿದ್ದು ಅಂತರಜಾಲದಲ್ಲಿ ಒಂದು ಬ್ಲಾಗ್‌ನಲ್ಲಿ. ಮೂಲ ಕೊಂಕಣಿ ರಚನೆ ಫಾ. ಪಾವ್ಲ್ ಲುವಿಸ್ ಬೊತೆಲ್ ಅವರದಂತೆ. ಕನ್ನಡಕ್ಕೆ ಅನುವಾದಿಸಿದವರು ಗುರು ಬಾಳಿಗ ಎಂಬುವವರು. ಬರೀ ಅನುವಾದ ಅಲ್ಲ, ಹೆಚ್ಚೂ ಕಡಿಮೆ ಛಂದಸ್ಸಿಗೆ ಹೊಂದಿಸಿ ಬರೆದಿದ್ದಾರೆ. ಇದನ್ನು ದೋಣಿ ಸಾಗಲಿ ಮುಂದೆ ಹೋಗಲಿ... ಧಾಟಿಯಲ್ಲಿ ಮಿಶ್ರಛಾಪು ತಾಳ ಹಾಕುತ್ತ ಹಾಡಿಕೊಳ್ಳಲಿಕ್ಕೂ ಆಗುತ್ತದೆ. ನಿಮಗೀಗ ನೆಗಡಿ ಆಗಿರದಿದ್ದರೂ ಆಗಿದೆಯೆಂದುಕೊಂಡು ಇದನ್ನು ಒಮ್ಮೆ ದೊಡ್ಡಧ್ವನಿಯಲ್ಲಿ ಹಾಡಿ ಆನಂದಿಸಿ. ಮತ್ತು ನೆಗಡಿಯಾಗಿರದೆ ಹಾಡುವುದಾದರೆ ಈ ಪದಗಳೆಲ್ಲ ಏನಿರಬಹುದೆಂದು ಅಂದಾಜು ಮಾಡಿಕೊಳ್ಳಿ:

ದೆಟ್ಟರೆದುರಿಗೆ ದಾಕು ಬಾತದು ಆಡದಿರುವುದು ಸಭ್ಯವೇ?
ಆದರೆದ್ದಯ ಬೂಗು ಕಟ್ಟಿದೆ ಬಾತದಾಡಲು ಸಾಧ್ಯವೇ?
ಎಟ್ಟು ದಿದಗಳು ಕಳೆದವಿದ್ದಿಗೆ ಬೂಗು ದದ್ದದುಕಟ್ಟಿದೆ
ಅವದುಇವದೂ ಹೇಳಿದೆಲ್ಲವು ಬದ್ದು ಬಾಡಿಯುಆಗಿದೆ
ಅಬ್ರತಾಜ್ಜದ ತಿಕ್ಕಿದೋಡಿರಿ ಎದ್ದರೊಬ್ಬರು ಗೆಳೆಯರು
ಸುಟ್ಟ ಅರಶಿಡ ಹೊಗೆಯ ಬೂಸಲು ಅಳಲೆಪಡ್ಡಿತ ಕರೆದರು
ಅಬ್ರತಾಜ್ಜದ ತಿಕ್ಕಿತೀಡಲು ಬೂಗು ಸುಲಿದೇ ಹೋಯಿತು
ಅರಶಿಡದ ಹೊಗೆ ಕಪ್ಪುಕಾಡಿಗೆ ಬೂಗಿದೊಳಗಡೆ ಅಟ್ಟಿತು
ಓಬ ಕಾಳಿದ ದೀರತದ್ದರು ಬೂಗಿದಿದ್ದಲಿ ಸೆಳೆಯಲು
ಕೊಚ್ಚ ಸಬಯಕೆ ಬೂಗಲಿರಿಸಿದ ಬೇಲೆ ಬೂಗದು ತೊಳೆಯಲು
ದೋಡಿ ಬಿಡುವಾ ಎದ್ದುದಾದದ ಬೂಗಿದೊಳಗಡೆ ಸೆಳೆದೆದು
ದೆತ್ತಿಗೇರಿತು ಎದ್ದ ಪ್ರಾಡವುದೆಗಡಿ ಹಾಗೇ ಉಳಿಯಿತು
ಅಕ್ಕ ಬದ್ದಳು ದಸ್ಯ ಕೊಟ್ಟಳು ಸೆಳೆದು ದೋಡಿದಳೆದ್ದಳು
ದೆಗಡಿಯೊಬ್ಬೆಲೆ ಬುಗಿಯಲೆದ್ದುತ ದೊಡ್ಡ ಚಿಟಿಕೆಯ ಹಿರಿದೆದು



ಕಡ್ಡು ಬೂಗಿಗೆ ಬೆಕ್ಕಿ ಹಿಡಿಯಿತು ಹೊತ್ತಿ ಉರಿಯಿತು ಲೋಕವು
ಅಕ್ಕ ದೀಡಿದದಸ್ಯವೆದ್ದರೆ ಬೆಡಸು ಕಾಳಿದ ಪುಡಿಯದು
ದಿಬಗೆ ತಿಳಿದಿಹ ಬದ್ದುಇದ್ದರೆದದಗೆ ಬೇಗದೆ ತಿಳಿಸಿರಿ
ಬೆಡಸು ಕಾಳಿದ ದಸ್ಯ ಅರಶಿಡ ಬಿಟ್ಟು ಬೇರೆಯೆ ಹೇಳಿರಿ॥

ಈ ಪದ್ಯವನ್ನೋದಿದ ಮೇಲೆಯಾದರೂ ನೀವು ಒಪ್ಪಲೇಬೇಕು ಅನುನಾಸಿಕ ಅಕ್ಷರಗಳ ಮಹತ್ತ್ವವನ್ನು, ಮತ್ತು ನೆಗಡಿಯಾದಾಗ ಅವುಗಳನ್ನುಚ್ಚರಿಸಲಿಕ್ಕಾಗದೆ ಆಗುವ ಆಭಾಸವನ್ನು. ಆದ್ದರಿಂದ ಈಗಿನ್ನು ಲೇಖನದ ಉಳಿದ ಭಾಗದಲ್ಲಿ ಅನುನಾಸಿಕ ಅಕ್ಷರಗಳ ಕೆಲವು ವೈಶಿಷ್ಟ್ಯಗಳನ್ನು ಸೋದಾಹರಣವಾಗಿ ನೋಡೋಣ. ನಾವಾಡುವ ಮಾತಿನಲ್ಲಿ, ಬರವಣಿಗೆಯಲ್ಲಿ ಅನುನಾಸಿಕ ಅಕ್ಷರಗಳ ಅನನ್ಯ ಕೊಡುಗೆಯನ್ನು ಹೆಮ್ಮೆಯಿಂದ ಸ್ಮರಿಸೋಣ.

ತೀರ ಶುಷ್ಕವಾದ ವ್ಯಾಕರಣ ಪಾಂಡಿತ್ಯದ ಪ್ರಸ್ತುತಿಯಂತಲ್ಲದಿದ್ದರೂ, ವರ್ಣಮಾಲೆಯ ಬಗೆಗಿನ ಪ್ರಾಥಮಿಕ ಜ್ಞಾನದಿಂದ ನೆನಪಿಸಿಕೊಳ್ಳುವುದಾದರೆ– ವರ್ಗೀಯ ವ್ಯಂಜನಗಳ ಪೈಕಿ ಪ್ರತಿ ವರ್ಗದ ಕೊನೆಯ ಅಕ್ಷರವನ್ನು ಅನುನಾಸಿಕ ಎನ್ನುತ್ತೇವೆ. ಅದನ್ನು ಉಚ್ಚರಿಸುವುದಕ್ಕೆ ಮೂಗಿನ ಸಹಾಯ ಬೇಕು ಎಂಬ ಕಾರಣಕ್ಕೆ ಆ ಹೆಸರು. ಙ, ಞ, ಣ, ನ, ಮ – ಇವೇ ಆ ಐದು ಅನುನಾಸಿಕ ಅಕ್ಷರಗಳು. ಇವುಗಳ ಪೈಕಿ ನ ಮತ್ತು ಮ ನಮಗೆ ಅಂಥದೇನೂ ವಿಶೇಷ ಅನಿಸುವುದಿಲ್ಲ. ಅಂತ್ಯಾಕ್ಷರಿ ಆಡುವಾಗ ಎದುರಾಳಿ ತಂಡದವರ ಹಾಡು ನ ಅಥವಾ ಮ ದಿಂದ ಕೊನೆಗೊಂಡರೆ ನ ಅಥವಾ ಮ ದಿಂದ ಆರಂಭಿಸಲಿಕ್ಕೆ ನಮಗೆ ಹಾಡುಗಳು ಯಥೇಷ್ಟ ಸಿಗುತ್ತವೆ. ಣ ದಿಂದ ಕೊನೆಯಾದರೆ ಮಾತ್ರ ಸ್ವಲ್ಪ ಪಜೀತಿ ಆಗುವುದು.ಆದರೆ ಣ ದಿಂದ ಕೊನೆಗೊಂಡರೆ ನ ದಿಂದ ಆರಂಭಿಸಬಹುದು ಎಂದು ಅಂತ್ಯಾಕ್ಷರಿಯ ಯುನಿವರ್ಸಲ್ ರೂಲ್ ಇರುವುದರಿಂದ ಜಟಾಪಟಿ ಆಗುವುದಿಲ್ಲ– ಜೈನರ 'ಣಮೋ ಅರಿಹಂತಾಣಂ... ಣಮೋ ಸಿದ್ಧಾಣಂ... ಣಮೋ ಆಇರಿಯಾಣಂ...' ಪ್ರಾರ್ಥನೆಯನ್ನು ಣ ದಿಂದ ಆರಂಭವಾಗುವ ಪದ್ಯವೆಂದು ಬಳಸಿ ಒಂದು ಸುತ್ತನ್ನು ನಿಭಾಯಿಸಬಹುದಾದರೂ. ಇನ್ನು, ಞ ಮತ್ತು ಙ ಇವುಗಳಿಂದ ಪದಗಳು ಆರಂಭವಾಗುವುದಿರಲಿ ಕೊನೆಯಾಗುವಂಥವೂ ಸಿಗಲಿಕ್ಕಿಲ್ಲ, ಅಷ್ಟೇಕೆ ಪದ ಮಧ್ಯದಲ್ಲಿ ಈ ವ್ಯಂಜನ ಬಳಕೆಯಾಗಿರುವ ಪದಗಳನ್ನು ಹುಡುಕಲಿಕ್ಕೂ ನಿಘಂಟು ತೆರೆದು ಸೂಕ್ಷ್ಮದರ್ಶಕದ ಅಡಿಯಲ್ಲಿ ಹಿಡಿಯಬೇಕಾದೀತು. ಗಡಿನಾಡ ಕವಿ, ಏರುತಿಹುದು ಹಾರುತಿಹುದು ನೋಡು ನಮ್ಮ ಬಾವುಟ... ಪದ್ಯವನ್ನು ನಮಗೆ ಕೊಟ್ಟಿರುವ, ಕಯ್ಯಾರ ಕಿಞ್ಞಣ್ಣ ರೈಯವರ ಹೆಸರನ್ನು ಬರೆಯಲಿಕ್ಕೆ ಉಚ್ಚರಿಸಲಿಕ್ಕೆ ಅನೇಕರಿಗೆ ಸಮಸ್ಯೆಯಾಗುವುದು ಇದೇ ಕಾರಣದಿಂದ ಎಂದು ನನಗನಿಸುತ್ತದೆ.

ಆದರೆ ಸುಮಾರು ಒಂದೆರಡು ಶತಮಾನಗಳ ಹಿಂದಿನವರೆಗೆ ಙ ಞ ಗಳು ಇಷ್ಟೊಂದು ಎಂಡೇಂಜರ್ಡ್ ಸ್ಪೀಸೀಸ್ ಆಗಿರಲಿಲ್ಲ. ಏಕೆಂದರೆ ಆಗಿನ ಕಾಲದಲ್ಲಿ ಅನುಸ್ವಾರವನ್ನು ಬರೆಯುವಾಗ ಯದ್ವಾತದ್ವಾ ಸೊನ್ನೆಯನ್ನೇ ಬಳಸುತ್ತಿರಲಿಲ್ಲ. ಪದದ ಕೊನೆಗೆ ಅನುಸ್ವಾರ ಬಂದರೆ ಮಾತ್ರ ಸೊನ್ನೆ. ಪದ ಮಧ್ಯದಲ್ಲಿ ಅನುಸ್ವಾರದ ಬಳಿಕ ಅವರ್ಗೀಯ ವ್ಯಂಜನವಿದ್ದರೆ ಮಾತ್ರ ಸೊನ್ನೆ. ಮಿಕ್ಕೆಲ್ಲ ಸಂದರ್ಭಗಳಲ್ಲಿ– ಅಂದರೆ ಪದ ಮಧ್ಯದಲ್ಲಿ ಅನುಸ್ವಾರದ ಬಳಿಕ ವರ್ಗೀಯ ವ್ಯಂಜನವಿದ್ದರೆ ಆಯಾ ವರ್ಗಗಳ ಅನುನಾಸಿಕ ಅಕ್ಷರವನ್ನೇ ಬಳಸುತ್ತಿದ್ದದ್ದು. ಉದಾಹರಣೆಗೆ ಈಗ ನಾವು ಅಂಕ, ಶಂಖ, ಗಂಗಾ, ಲಂಘನ ಎಂದು ಬರೆಯುತ್ತೇವಲ್ಲ, ಈ ಪದಗಳನ್ನು ಹಿಂದಿನ ಕಾಲದಲ್ಲಿ ಅನುಕ್ರಮವಾಗಿ ಅಙ್ಕ, ಶಙ್ಖ, ಗಙ್ಗಾ, ಲಙ್ಘನ ಎಂದೇ ಬರೆಯುತ್ತಿದ್ದದ್ದು. ಹಾಗೆ ಬರೆಯುವವರಿಗೆ ಮತ್ತು ಓದುವವರಿಗೆ ಙ ಅಕ್ಷರವು ಅಪರಿಚಿತವೆಂಬ ಭಾವನೆ



ಬರುತ್ತಿರಲಿಲ್ಲ. ಙ ಮಾತ್ರವಲ್ಲ ಉಳಿದ ನಾಲ್ಕು ಅನುನಾಸಿಕಗಳ ಬಳಕೆಯೂ ಹೀಗೆಯೇ. ಈಗ ನಾವು ಇಂಚರ, ವಾಂಛೆ, ಸಂಜಯ ಎಂದು ಬರೆಯುತ್ತೇವಲ್ಲ, ಹಿಂದಿನ ಕಾಲದಲ್ಲಾದರೆ ಇವು ಅನುಕ್ರಮವಾಗಿ ಇಞ್ಚರ, ವಾಞ್ಛೆ, ಸಞ್ಜಯ ಎಂದೇ ಬರೆಯಲ್ಪಡುತ್ತಿದ್ದದ್ದು. ಈಗಿನ ಮಂಟಪ, ಕಂಠ, ಗಂಡ, ಪಂಢರಾಪುರಗಳು ಹಿಂದಿನ ಕಾಲದಲ್ಲಿ ಅನುಕ್ರಮವಾಗಿ ಮಣ್ಟಪ, ಕಣ್ಠ, ಗಣ್ಡ, ಪಣ್ಢರಾಪುರ ಆಗಿರುತ್ತಿದ್ದುವು; ಈಗಿನ ಕುಂತಿ, ಮಂಥರಾ, ಸ್ಕಂದ, ಕಬಂಧ ಹಿಂದಿನ ಕಾಲದಲ್ಲಿ ಕುನ್ತಿ, ಮನ್ಥರಾ, ಸ್ಕನ್ದ, ಕಬನ್ಧ ಎಂದು ಇರುತ್ತಿದ್ದುವು. ಹಾಗೆಯೇ ಈಗಿನ ಕಂಪು, ಕಂಬನಿ, ದಂಭಾಚಾರಗಳು ಹಿಂದಿನ ಕಾಲದಲ್ಲಿ ಅನುಕ್ರಮವಾಗಿ ಕಮ್ಪು, ಕಮ್ಬನಿ, ಮತ್ತು ದಮ್ಭಾಚಾರ ಆಗಿರುತ್ತಿದ್ದುವು.


ಸೂಕ್ಷ್ಮವಾಗಿ ಗಮನಿಸಿದರೆ, ಹಿಂದಿನ ಕಾಲದಲ್ಲಿ ಬಳಕೆಯಲ್ಲಿದ್ದ ಆ ಕ್ರಮ ತುಂಬ ಸಿಸ್ಟಮೆಟಿಕ್ ಮತ್ತು ಸೈಂಟಿಫಿಕ್‌ಕೂಡ. 'ಉಚ್ಚರಿಸಿದಂತೆಯೇ ಬರೆಯುವುದು, ಬರೆದಂತೆಯೇ ಉಚ್ಚರಿಸುವುದು' ಎಂಬುದನ್ನು ಶತಪ್ರತಿಶತ ಪಾಲಿಸುತ್ತಿದ್ದ ಕ್ರಮವದು. ಬೇಕಿದ್ದರೆ ನೀವು ಹಳೆಯ ಕಾಲದ ಗ್ರಂಥಗಳನ್ನು ತೆರೆದು ನೋಡಿ. ಅಥವಾ ಕನ್ನಡದ ಹೆಮ್ಮೆಯೆನಿಸಿರುವ ಕಿಟ್ಟೆಲ್‌ಕೋಶವನ್ನು ತೆರೆದು ನೋಡಿ. ಅಲ್ಲೆಲ್ಲ ವರ್ಗೀಯ ವ್ಯಂಜನದ ಹಿಂದಿನ ಅನುಸ್ವಾರಕ್ಕೆ ಸೊನ್ನೆ ಬಳಕೆ ಇಲ್ಲವೇ ಇಲ್ಲ. ಅನುನಾಸಿಕದೊಡನೆ ಒತ್ತಕ್ಷರವಾಗಿಯೇ ಬರೆದದ್ದಿರುತ್ತದೆ. ಈಗ ನಾವು ಇದ್ದಬಿದ್ದಲ್ಲೆಲ್ಲ ಸೊನ್ನೆ ಸುತ್ತುತ್ತೇವಾದ್ದರಿಂದ ಅನುನಾಸಿಕಗಳು ನಮಗೆ ಅಪರಿಚಿತವಾಗುತ್ತಿವೆ. ನಮ್ಮ ಭಾಷಾಪ್ರಬುದ್ಧತೆ ಸೊನ್ನೆಯತ್ತ ಜಾರುತ್ತಿದೆ. ಮೊನ್ನೆ ಬೆಂಗಳೂರಿನಿಂದ ವಿದ್ಯಾ ಕಾನಲೆ ಅವರು ಒಂದು ವಾಟ್ಸ್ಯಾಪ್ ಮೆಸೇಜು ಕಳುಹಿಸಿದ್ದರು: 'ಇದು ನವಕರ್ನಾಟಕ ಪುಟಾಣಿ ಪುಸ್ತಕ ಸರಣಿಯ ಪುಸ್ತಕಗಳಲ್ಲೊಂದು. ಈ ರೀತಿಯ ಪುಟ್ಟ ಪುಸ್ತಕಗಳು ಬರ್ತ್‌ಡೇ ರಿಟರ್ನ್ ಗಿಫ್ಟ್ ಆಗಿ  ಕೊಡಲು ಚೆನ್ನಾಗಿರುತ್ತವೆ. ನಾನು ತುಂಬಾ ಜನರಿಗೆ ಕೊಟ್ಟಿದ್ದೇನೆ. ಆದರೆ ಈ ಪುಸ್ತಕದ ಅಕ್ಷರ ಮಾಲೆಯಲ್ಲಿ ಙ ಅಕ್ಷರವೇ ಇಲ್ಲ!' ಎಂದು ಬರೆದಿದ್ದರು. ಜೊತೆಯಲ್ಲೇ ಅದೇ ಪುಸ್ತಕದಿಂದ ಒಂದು ಪುಟದ ಡಿಜಿಟಲ್ ಚಿತ್ರವನ್ನೂ ಕಳುಹಿಸಿದ್ದರು. ಅದರಲ್ಲಿ ಗ ಪಕ್ಕದಲ್ಲಿ ಗಡಿಯಾರದ ಚಿತ್ರ; ಘ ಪಕ್ಕದಲ್ಲಿ ಘಂಟೆಯ ಚಿತ್ರ; ಅದಾದ ಮೇಲೆ ಕೆಳಗೆ ಚಿಕ್ಕದಾಗಿ ಜ್ಞ ಎಂದು ಅಚ್ಚಾಗಿದೆ. ಇದು ಮುದ್ರಣ ದೋಷವಲ್ಲ. ಪುಸ್ತಕ ರಚಿಸಿದವರಿಗೆ ಙ ಅನುನಾಸಿಕದ ಪರಿಚಯವೇ ಇಲ್ಲ! ವಿದ್ಯಾರೊಂದಿಗಿನ ವಿಚಾರ ವಿನಿಮಯದಲ್ಲಿ ತಿಳಿದುಬಂದ ಇನ್ನೊಂದು ಆತಂಕಕಾರಿ ಬೆಳವಣಿಗೆಯೆಂದರೆ ಬೆಂಗಳೂರು ಮತ್ತು ಸುತ್ತಮುತ್ತಲಿನ ಬಹುತೇಕ ಕನ್ನಡ ಮಿಸ್ಸುಗಳು ಈಗೀಗ ಙ ಮತ್ತು ಞ ಇವೆರಡನ್ನೂ ಞ ಎಂದೇ ಉಚ್ಚರಿಸುತ್ತಾರೆ. ಅಷ್ಟೇಕೆ, ಜನಪ್ರಿಯ ಗಾಯಕಿ ಬಿ.ಆರ್. ಛಾಯಾ ಅವರು ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ ವಿರಚಿತ ಶಿಶುಗೀತೆ 'ಕನ್ನಡ ಅಕ್ಷರ ಎಷ್ಟಿದೆ ಅಂತ ಎಲ್ಲ ಗೊತ್ತಮ್ಮ...'ಹಾಡಿದ್ದರಲ್ಲಿ ಙ ವನ್ನೂ ಞ ಎಂದೇ ಉಚ್ಚರಿಸಿದ್ದಾರೆ. ಕನ್ನಡ ವಾಙ್ಮಯದಿಂದ ಹೀಗೆ ಙ ಮರೆಯಾದರೆ ದಿಙ್ಮೂಢರಾಗಬೇಕಾಗುತ್ತದೆ ನಾವು! ಙ ವನ್ನು ಅಜ್ಞದ ಪರದೆಯ ನೇಪಥ್ಯಕ್ಕೆ ಸರಿಸಿದ ಪಾಪ ಗಙ್ಗೆಯಲ್ಲಿ ಮುಳುಗೆದ್ದರೂ ಪರಿಹಾರವಾಗದು.



ಅದಿರಲಿ, ಅಂತ್ಯಾಕ್ಷರಿಯಲ್ಲಿ ಣ ಬದಲಿಗೆ ನ ಎಂದು ಮೇಲೆ ಒಂದು ಕಡೆ ಹೇಳಿದ್ದೆನಷ್ಟೆ? ಸಂಸ್ಕೃತದಲ್ಲಿ ಅದರ ಉಲ್ಟಾ ಎಂಬಂತೆ ಒಂದು ನಿಯಮವಿದೆ. ಏನೆಂದರೆ ನ ಇರುವ ಪದದಲ್ಲಿ ರ ಅಥವಾ ಷ ಅಕ್ಷರಗಳೂ ಇದ್ದರೆ ಆ ಪದದಲ್ಲಿನ ನ ಅಕ್ಷರವು ಣ ಆಗುತ್ತದೆ! (ಈ ನಿಯಮಕ್ಕೆ ಕೆಲವು ಸೂಕ್ಷ್ಮ ಅಪವಾದಗಳೂ

ಇವೆಯಾದರೂ ಸ್ಥೂಲ ಮಟ್ಟದಲ್ಲಿ ಹಾಗೆ ಅರ್ಥಮಾಡಿಕೊಳ್ಳೋಣ). ಉದಾಹರಣೆಗೆ 'ಅಯನ' ಎಂಬ ಪದ. ಇದಕ್ಕೆ ಸಂಚಾರ, ಗತಿ, ಕಾಲಮಾನ ಮುಂತಾದ ಅರ್ಥಗಳು. ರಾಮನ ಕಾಲಮಾನ, ರಾಮನು ಸಂಚರಿಸಿದ ಅವಧಿ 'ರಾಮ + ಅಯನ = ರಾಮಾಯನ' ಆಗಬೇಕಿತ್ತು ಅಲ್ಲವೇ? ಆದರೆ ರ ಅಕ್ಷರವಿರುವುದರಿಂದ ರಾಮಾಯಣ ಆಗಿದೆ! ದಕ್ಷಿಣ+ಅಯನ = ದಕ್ಷಿಣಾಯನ ಎಂದು ನ ಉಳಿದುಕೊಂಡರೆ ಉತ್ತರ + ಅಯನ = ಉತ್ತರಾಯಣ ಆಗುತ್ತದೆ ರ–ಕಾರ ಇರುವುದರಿಂದ. ರಾಮಾಯಣದ ಬದಲಿಗೆ ಸೀತೆಯ ಕಥೆ ಎಂದು ಹೇಳಿದರೆ ಸೀತಾ+ಅಯನ = ಸೀತಾಯನ ಆಗುತ್ತದೆ, ಸೀತಾಯಣ ಆಗುವುದಿಲ್ಲ. ಭಗವದ್ಗೀತೆಯ ಹತ್ತನೆಯ ಅಧ್ಯಾಯದಲ್ಲಿನ–ಣ ವಿಚಾರ ನಮಗೆ ತುಂಬ ಸ್ಪಷ್ಟವಾಗಿ ಗೊತ್ತಾಗುತ್ತದೆ. ಶ್ಲೋಕಗಳಲ್ಲಿ ಆದಿತ್ಯಾನಾಂ, ವೇದಾನಾಂ, ದೇವಾನಾಂ, ಭೂತಾನಾಂ, ವಸೂನಾಂ, ಸೇನಾನೀನಾಂ, ಯಜ್ಞಾನಾಂ, ಸಿದ್ಧಾನಾಂ, ಅಶ್ವಾನಾಂ...ಅಂತ ಬರುವಲ್ಲೆಲ್ಲ ನ ಇದೆ; ಆದರೆ ನಕ್ಷತ್ರಾಣಾಂ, ಇನ್ದ್ರಿಯಾಣಾಂ, ರುದ್ರಾಣಾಂ, ಶಿಖರಿಣಾಂ, ಮಹರ್ಷೀಣಾಂ, ಸ್ಥಾವರಾಣಾಂ, ನರಾಣಾಂ, ಸರ್ಪಾಣಾಂ, ಋಷಾಣಾಂ... ಇವುಗಳಲ್ಲೆಲ್ಲ ಣ ಇದೆ ! ಪದದಲ್ಲಿ ರ ಅಥವಾ ಷ ಇದ್ದರೆ ನ ಹೋಗಿ ಣ ಬಂದಿರುತ್ತದೆ. ನಮ್ಮ ರಾಜ್ಯದ ಹೆಸರನ್ನು ನಾವೀಗ ವ್ಯಾವಹಾರಿಕವಾಗಿ ಕರ್ನಾಟಕ ಎಂದು ಬರೆಯುತ್ತೇವಷ್ಟೆ? ಅದು ವ್ಯಾಕರಣಬದ್ಧವಾಗಿ ಕರ್ಣಾಟಕ ಎಂದು ಇರಬೇಕು (ನಿಜವಾಗಿಯಾದರೆ ಈ ಪ್ರದೇಶದ ಹೆಸರಿದ್ದದ್ದು 'ಕರ್ಣಾಟ' ಎಂದು). ಬ್ರಿಟಿಷರು ಕೆ ಎ ಆರ್‌ಎನ್ ಎ ಟಿ ಎ ಕೆ ಎ ಅಂತ ಬರೆದು ಕರ್ನಾಟಕ ಎಂದು ಓದಿದರು. ನಾವೂ ಅವರ ಗುಲಾಮರಾಗಿ ಕರ್ನಾಟಕ ಎಂದೇ ಹೇಳಿದೆವು, ಬರೆದೆವು, ಮುಂದುವರಿಸಿದೆವು.


ಕೊನೆಯಲ್ಲಿ, ಅನುನಾಸಿಕಗಳಿಗೆ ಸಂಬಂಧಿಸಿದಂತೆಯೇ ಇನ್ನೂಒಂದು ಸ್ವಾರಸ್ಯಕರ ವಿಚಾರ. 'ಬ್ರಹ್ಮ' ಪದದಲ್ಲಿ 'ಹ್ಮ'ವನ್ನು ಹೇಗೆ ಉಚ್ಚರಿಸಬೇಕು? ಇದಕ್ಕೆ ಎರಡು ಯೋಚನಾ–ಶಾಲೆ (ಸ್ಕೂಲ್‌ಆಫ್‌ಥಾಟ್) ಇವೆ. ಬರೆದಂತೆಯೇ ಉಚ್ಚರಿಸುವುದು ಸಂಸ್ಕೃತದ ಮತ್ತು ಕನ್ನಡದ ಹಿರಿಮೆಗಳಲ್ಲೊಂದು. ಆ ಪ್ರಕಾರವಾದರೆ 'ಹ್ಮ' ಉಚ್ಚರಿಸುವಾಗ ಮೊದಲಿಗೆ ಹ್, ಆಮೇಲೆ ಮ. ಗೀತಾ ಪರಿವಾರದಲ್ಲಿ ಆನ್‌ಲೈನ್ ಭಗವದ್ಗೀತೆ ಕಲಿಕೆಯಲ್ಲಿ ನಾವು ಈ ಕ್ರಮವನ್ನೇ ಅನುಸರಿಸುತ್ತೇವೆ. ಅದೇ ರೀತಿ ವಹ್ನಿ (ಅಗ್ನಿಯ ಇನ್ನೊಂದು ಹೆಸರು) ಪದದಲ್ಲಿ ಮೊದಲಿಗೆ ಹ್, ಆಮೇಲೆ ನಿ. ಆದರೆ, ಇನ್ನೊಂದು ಸ್ಕೂಲ್ ಆಫ್ ಥಾಟ್ ಪ್ರಕಾರ 'ಹಿ ನ–ಮ–ಪರೇತತ್ಪರಸ್ಯ ಚ' ಎಂಬ ಸೂತ್ರವೊಂದನ್ನು ಉಲ್ಲೇಖಿಸಿ 'ಹಕಾರಕ್ಕೆ ನಕಾರದ ಅಥವಾ ಮಕಾರದ ಒತ್ತು ಬಂದಾಗ ನಕಾರ ಅಥವಾ ಮಕಾರವನ್ನೇ ಮೊದಲು ಉಚ್ಚರಿಸಿ ಆಮೇಲೆ ಹಕಾರ ಉಚ್ಚರಿಸಬೇಕು' ಎನ್ನುತ್ತಾರೆ. ಅದರಂತೆ 'ಬ್ರಹ್ಮ' ಮತ್ತು 'ವಹ್ನಿ'ಗಳನ್ನು ಹಾಗೆ ಬರೆದರೂ, ಅನುಕ್ರಮವಾಗಿ 'ಬ್ರಮ್ಹ' ಮತ್ತು 'ವನ್ಹಿ' ಎಂದು ಉಚ್ಚರಿಸಬೇಕಂತೆ. 'ಮಧ್ಯಾಹ್ನ' ಎಂದು ಬರೆದು 'ಮಧ್ಯಾನ್ಹ' ಎಂದು ಉಚ್ಚರಿಸಬೇಕಂತೆ (ಈಗ ಕೆಲವರು ಆ ತಂಟೆಯೇ ಬೇಡವೆಂದು ಮಧ್ಯಾನಅಥವಾ ಮತ್ತೂ ಮುಂದುವರಿದು ಮದ್ಯಾನ ಎಂದು ಉಚ್ಚರಿಸುವವರೂ ಇದ್ದಾರೆ). ಗಮನಿಸಬೇಕಾದ್ದೆಂದರೆ ಇದು ಹ–ದೊಂದಿಗೆ ನ ಅಥವಾ ಮ ಅನುನಾಸಿಕ ಸೇರಿದಾಗ ಮಾತ್ರ. ಉಳಿದ ಮೂರು ಅನುನಾಸಿಕಗಳಾದ ಙ, ಞ,ಣ ಗಳಿಗೆ ಇದು ಅನ್ವಯವಾಗುವುದಿಲ್ಲ. ಅಪರಾಹ್ಣ ಎಂದು ಬರೆದು ಅಪರಾಣ್ಹ ಎಂದು ಉಚ್ಚರಿಸುವಂತಿಲ್ಲ. ದೆಗಡಿ ಆದಾಗ ಮಾತ್ರ ಅಪರಾಡ್ಣ ಎನ್ನಲಿಕ್ಕಡ್ಡಿಯಿಲ್ಲವೆನ್ನಿ.





[ವಿಶ್ವವಾಣಿ ಪತ್ರಿಕೆಯ ತಿಳಿರುತೋರಣ ಅಂಕಣದಲ್ಲಿ ಪ್ರಕಟವಾದ ಬರಹ ಲೇಖಕರ ಅನುಮತಿ ಪಡೆದು ಇಲ್ಲಿ ಮುದ್ರಿಸಿದ್ದೇವೆ. – ಸಂ]


■

# ಚಂದ್ರ ಯಾನ


ನಿನ್ನ ಸಾಧನೆ ನೋಡಿ
ನನಗೆ ಹೆಮ್ಮೆ
ಜೈ ಹಿಂದ್!
ನೀನೇ ನನಗೆ ಸ್ಫೂರ್ತಿ!
ಜೈ ಹಿಂದ್!
CHANDRAYAAN
2
CHANDRAYAAN
3


ಬನ್ನಿ,
ಬಣ್ಣ
ತುಂಬಿ!
SATISH ACHARYA


ಜಗತ್ತೇ ಬೆರಗುಗಣ್ಣಿನಿಂದ ನೋಡಿತು !


ಚಂದ್ರಯಾನ್ - 3

# ಒಂದು ಪ್ರಲಾಪ (ಅಪರಂಜಿಯಿಂದ)

ಸಿ.ಆರ್. ಸತ್ಯ

ಅಲ್ಲಾ, ನೋಡೋದಕ್ಕೆ ನಾನು ಸ್ವಲ್ಪ ಜಾಸ್ತಿ ಕಪ್ಪಗೇ ಇದೀನಿ, ಒಪ್ಪಿಕೊತೀನಿ (ಬೇರೆ ಮಾರ್ಗವೇ ಇಲ್ಲವಲ್ಲ !), ಹಾಗೆಂತ, ನಾನು ಜೀವಮಾನ ಪರ್ಯಂತ ಈ ಸಮಾಜದ ಕೈನಲ್ಲಿ ನಾ ಕಪ್ಪು ನಾ ಕಪ್ಪು ಅಂತ ಸೂಜಿ ಚುಚ್ಚಿದ ಹಾಗೆ ಮನದಟ್ಟು ಮಾಡಿಸ್ಕೊಳ್ತಾನೇ ಇರಬೇಕೆ ?

ನನ್ನ ತಾಪತ್ರಯ ನಾನು ಹುಟ್ತಾನೇ ಶುರುವಾಯ್ತು ಅಂತ ಅಂದರೆ ನಿಮಗೆ ಆಶ್ಚರ್ಯವಾಗಬಹುದು. ನನ್ನನ್ನ ಈ ಲೋಕಕ್ಕೆ ಬರಮಾಡಿದಳಲ್ಲಾ–ಆ ಮಿಡ್ ವೈಫು–ಅವಳು ನನ್ನನ್ನ ನೋಡ್ತಾನೇ "ಒಳ್ಳೇ ಕರೀ ಕಲ್ಲಿನ ಗುಂಡಿನ ಹಾಗೆ ಇದಾನಮ್ಮ" ಅಂತ ಅಂದಳಂತೆ. ಅಲ್ಲೇ ಪಕ್ಕದ ಬೆಡ್‌ನಲ್ಲಿದ್ದ ನಮ್ಮ ಪಕ್ಕದ ಮನೆ ಪ್ರೇಮಲತಮ್ಮನವರ ಮಗು ಕಡೆ ನೋಡಿ, “ಇವನೇ ಸರಿ, ಬಿಳಿ ಕಲ್ಲಿನ ಕೃಷ್ಣ!” ಅಂತ ಹೊಗಳಿದಳಂತೆ! (ಈ ಬಿಳಿ ಕಲ್ಲಿನ ಕೃಷ್ಣ ಈಗ I.A.S, ಬೇರೆ ಮುಗಿಸಿ ಕೂತಿದಾನೆ ಅನ್ನೋದು ದುಃಖದ ವಿಷಯ ಬಿಡಿ.)

ಇಲ್ಲಿ ತನಕ ನಾನು ಹೇಳಿದ್ದು ಮುನ್ನುಡಿ, ಈ ನನ್ನ ಪ್ರಲಾಪದ ಮೊದಲನೇ ಅಧ್ಯಾಯದ ಬಿಗಿನಿಂಗ್ ಹೇಗಿದೆ ನೋಡಿ.

ಹುಟ್ಟಿದ ಆನಂತರ ಹನ್ನೊಂದನೆಯ ದಿನ ನನ್ನ ಅಪ್ಪ, ಅಮ್ಮ ನನಗೆ ನಾಮಕರಣ ಬೇರೆ ಮಾಡಿದರು. ಅವತ್ತಿನ ತನಕ ನನಗೆ ಏನು ಹೆಸರು ಇಡಬೇಕು ಅಂತ ಇಬ್ಬರೂ ಕಚ್ಚಾಡಿ ಕೊನೆಗೆ "ಬಿಳಿಗಿರಿ" ಅಂತ ನಿಶ್ಚಯ ಮಾಡಿದರಂತೆ. ನಮ್ಮ ಅಕ್ಕಪಕ್ಕದ ಮನೆಯವರೆಲ್ಲಾ, “ಹುಡುಗನಿಗೆ ಈ ಹೆಸರು ಹೊಂದುಕೊಳ್ಳೋದಿಲ್ಲ. ಅವನು ಬೆಳೆದ ಮೇಲೆ ಇದರಿಂದ ತುಂಬಾ ತೊಂದರೆಗೆ ಸಿಕ್ಕಿಹಾಕ್ಕೋತಾನೆ. ತೀರಾ ಹೀಗೆ ದುಡುಕಬೇಡಿ” ಅಂತ ಬುದ್ಧಿವಾದ ಹೇಳಿದರೂ ನನ್ನ ಅಪ್ಪ, ಅಮ್ಮ ಹಿಡಿದ ಹಟ ಬಿಡಲಿಲ್ಲವಂತೆ ನಾಮಕರಣ ನಡೆಸೇಬಿಟ್ಟರು. ಅವತ್ತು ನನ್ನ ತೊಟ್ಟಿಲು ತೂಗಿದ ಮುತ್ತೈದೆಯರು ಒಳಗೊಳಗೇ ನಗ್ತಾ ಇದ್ದರು ಅಂತ ಅಕ್ಕ ಪಕ್ಕದ ಮನೆ ಹೆಂಗಸರು ಈಗಲೂ ಜ್ಞಾಪಿಸ್ಕೋತಾರೆ!

ಸರಿ, ಹುಟ್ಟಿದ ಮೇಲೆ ಬೆಳೆಯದೇ ಇರೋದಕ್ಕೆ ಸಾಧ್ಯವೆ ? ಬೆಳೆದೆ. ಅಪ್ಪ ನನ್ನನ್ನ–ಮಿಕ್ಕೆಲ್ಲಾ ಮಕ್ಕಳಿಗೂ ಮಾಡೋಹಾಗೆ–ಸ್ಕೂಲಿಗೂ ಸೇರಿಸಿದ್ರು. ಎಲ್ಲಾ ಚೆನ್ನಾಗಿಯೇ ನಡೀತಿದೆ ಅಂತ ಅಂದ್ಕೋತಿದ್ದೆ. ಅಷ್ಟರಲ್ಲೇ ಬಂತೂ ನೋಡಿ ಇಂಡಿಪೆಂಡೆನ್ಸ್ ಡೇ ! ಸ್ಕೂಲಿನ ಮೈದಾನದಲ್ಲಿ ಬಾವುಟ ಹಾರಿಸಿದ ಮೇಲೆ ನಮ್ಮ ಟೀಚರ್ರು (ಏನು ಬೆಳ್ಳಗಿದ್ರು ಅಂತೀರಿ) ಎಲ್ಲರಿಗೂ ಚಾಕಲೇಟ್ ಹಂಚೋದಕ್ಕೆ ನಿಂತರು. ನಾದೆಲ್ಲಾ ಅವರ ಹತ್ತಿರ ನುಗ್ಗಿದ್ವಿ. ಆಗ ಅವರು ರೇಗಿಕೊಂಡು “ಹೀಗೆ ನುಗ್ಗಿದರೆ ನಾನು ಯಾರಿಗೂ ಸ್ವೀಟ್ ಕೊಡೋದಿಲ್ಲ. ಎಲ್ಲಾ ಗಂಭೀರವಾಗಿ ಸಾಲಾಗಿ ಬನ್ನಿ, ಬಿಳೀ ಮಕ್ಕಳೆಲ್ಲಾ ಮೊದಲು ಲೈನ್‌ನಲ್ಲಿ ಬನ್ನಿ. ಕರೀ ಮಕ್ಕಳೆಲ್ಲಾ ಹಿಂದೆ ಬನ್ನಿ. ಹಾ! ಹಾಗೆ! ಹಾಗೆ !!” ಅಂತ ಹೇಳೋದೇ ! ನೀವು ಸರಿಯಾಗೇ ಊಹಿಸಿದಿರಿ. ನಾನೇ ಲೈನಿನ ಕೊನೇಲಿದ್ದಿದ್ದು. ನನ್ನ ಛಾನ್ಸ್ ಬರೋ ಹೊತ್ತಿಗೆ ಸ್ವೀಟ್ಸ್ ಮುಗಿದೇ ಹೋಗಿತ್ತು.



ಅವತ್ತಿನಿಂದ ನಾನು ಕಾಲೇಜು ಅಭ್ಯಾಸ ಮುಗಿಸೋವರೆಗೂ ನನ್ನ ಕತೆ ಹೀಗೇ ಮುಂದುವರೀತು ನೋಡಿ. ಕ್ಲಾಸಿನಲ್ಲಿ ಕಪ್ಪಗಿರೋರ ಬೆಂಚು: ಕ್ಯಾಂಟೀನ್‌ನಲ್ಲಿ ಕರಿಯರ ಟೇಬಲ್; ಬಸ್ಸಿನಲ್ಲಿ 'ಲಾಸ್ಟ್ ಸೀಟು: ಟ್ರೈನಿನಲ್ಲಿ ಅಪ್ಪರ್ ಬರ್ತ್ ಓನ್ಲಿ: ಡ್ರಾಮಾಗಳಲ್ಲಿ ನೋ ಪಾರ್ಟಿಸಿಪೇಷನ್ (ಮೆಕಪ್ ಹಿಡಿಯೋಲ್ಲವಂತೆ): ಫೋಟೋ ಗ್ರಾಫ್‌ಗಳಲ್ಲಿ ನೋ ಎಕ್ಸಿಸ್ಟೆನ್ಸು (ನನ್ನ ಬಣ್ಣ ಕಾಂಟ್ರಾಸ್ಟ್ ಕೊಡೋಲ್ಲವಂತೆ !); ಬಸ್ಸಿನಲ್ಲಿ ಪ್ರಯಾಣ ಮಾಡ್ತಿದ್ದಾಗ ಯಾರಿಗಾದರೂ ಪಿಕ್‌ಪಾಕೆಟ್ ಆದರೆ ಎಲ್ಲರೂ ಮೊದಲು ನನ್ನ

ಕಡೇನೇ ನೋಡೋದು (ಕಳ್ಳರೆಲ್ಲಾ ಕಪ್ಪಗೇ ಇದ್ದಾರ್ಯೆ ಅಂತೀನಿ ?) ಯಾವುದಾದರೂ ರೆಡಿಮೇಡ್ ಶಾಪ್‌ಗೆ ಹೋಗಿ ಒಂದು ಶರ್ಟನ್ನೋ, ಪ್ಯಾಂಟನ್ನೋ ಟ್ರೈ ಮಾಡಿ, ಬೇಡ ಅಂತ ಮಾಲೀಕನಿಗೆ ವಾಪಸ್ ಕೊಟ್ಟರೆ ಅವನು ಅವನ್ನ ಧೋಬಿ ತರಹ ಕೊಡವೋದು (ನನ್ನ ಬಣ್ಣ ಎಲ್ಲಿ ಅವಕ್ಕೆ ಹತ್ತಿ ಬಿಡುತ್ತೋ ಅಂತ); ಪವರ್ ಕಟ್ ಆಗಿದ್ದಾಗ ಕತ್ತಲಲ್ಲಿ ಅಂಗಡಿಯಿಂದ ಕ್ಯಾಂಡ್ಲ್‌ಗಳನ್ನ ಖರೀದಿ ಮಾಡೋಣ ಅಂತ ಹೊರಟರೆ ನನ್ನ ಫ್ರೆಂಡ್ಸ್ "ಹಲೋ, ಇನ್‌ವಿಜಿಬಲ್ ಮ್ಯಾನ್!" ಅಂತ ಕೂಗೋದು, ಹೀಗೇ ಆಗ್ಹೋಯ್ತು, ನನ್ನ ಜಾಯಮಾನ.

ಪದವೀಧರ ಆದರೂ ಕೆಲಸ ಬೇರೆ ಸಿಗಲಿಲ್ಲ. ಮನಸ್ಸು ಬಂದಾಗಲೆಲ್ಲಾ ಕಂಡ ಕಡೆಗೆ ಅಪ್ಲಿಕೇಶನ್ನುಗಳನ್ನ ಗುಜರಾಯಿಸಿದೆ. ಯಾವುದೋ ಒಂದು ಇಂಟರ್‌ವ್ಯೂನಲ್ಲಿ ಮೊದಲನೇ ಪ್ರಶ್ನೆಗೆ (ವ್ಹಾಟೀಸ್ ಯುವರ್ ನೇಮ್?) ನಾನು "ಬಿಳಿಗಿರಿ" ಅಂತ ಹೇಳಿದಾಗ ಆ ಚೇರ್ಮನ್ನು "ಆರ್ ಯೂ ಶೂರ್ ?" ಅಂತ ಬೇರೆ ಕೇಳಿದ್ದ. ಇನ್ನೊಂದು ಕಡೆ ಆಪ್ಲಿಕೇಶನ್ ಫಾರಮ್ಮಿನಲ್ಲಿ ಆರ್ ಯೂ ಫಿಸಿಕಲಿ ಹ್ಯಾಂಡಿಕ್ಯಾಪ್ಡ್ ಅಂತ ಕೇಳಿದ್ದಕ್ಕೆ ನಾನು, ಬಟ್ ಐ ಆಮ್ ಕಲರ್‌ಫುಲೀ ಹ್ಯಾಂಡಿಕ್ಯಾಪ್ಡ್ ಅಂತ ಬರೆದಿದ್ದೆ. ಹಾಳಾದವರು ಇಂಟರ್‌ವ್ಯೂಗೂ ಕರೀಲಿಲ್ಲ ನೋಡಿ.

ಸರಿ, ಇಂತಹ ಕಷ್ಟ ಕಾರ್ವಣ್ಯಗಳಲ್ಲಿ ಬೆಳೆದು ಬಲಿತು ನಿಂತಿದ್ದ ನನಗೆ ಮದುವೆ ಇಲ್ಲದಿದ್ದರೆ ಆಗುತ್ತೆ ? "ಇವನಿಗೆ ಒಳ್ಳೆ ಬೆಳ್ಳಗಿರೋ ಹುಡುಗೀನೇ ತಂದ್ಕೋ ಬೇಕು" ಅಂತ ನನ್ನ ಅಮ್ಮ, ಅಪ್ಪ ಮೊಂಡು ಹಿಡಿದರು. ಅವರ ಮೊಂಡುತನ (ನಾಮಕರಣ) ಜ್ಞಾಪಕ ಇದೆ ತಾನೆ ? ಬಿಳಿ ಹುಡುಗೀರೂ ಅಲ್ಲದೆ ಕರೀ ಹುಡುಗಿಯರೂ ನನ್ನನ್ನ ಬೇಡಾ ಅಂತ ತಿರಸ್ಕರಿಸೋದೆ ! ಎಷ್ಟೋ ಹುಡುಗಿಯರ ಅಪ್ಪ, ಅಮ್ಮಂದಿರ ಕೈಲಿ ಬೇರೆ ಬೈಯಿಸ್ಕೊಂಡು, ಸಾಕಾಗಿ, ಕೊನೆಗೆ ನಾನೇ ವರದಕ್ಷಿಣೆ ಕೊಡ್ತೀನಿ, ಮದುವೆ ಮಾಡ್ಕೊಳ್ಳಿ ಅಂತ ಬೇಡಿದೆ. ಯಾರೂ ಒಪ್ಪಿಗೆ ಕೊಡಲಿಲ್ಲ. ನಾನು ಮದುವೆ ಆಗದೆ ಅಲೀತಿರೋದನ್ನ ನೋಡಿ, ನನ್ನ ಅವ್ವ-ಹೌದು, ಸೇಮ್ ಅಪ್ಪ-"ಒಳ್ಳೆ ಕರಿ ಬಸವನ ತರಹ ಮದುವೇನೂ ಇಲ್ಲದೆ ಹ್ಯಾಗೆ ಸುತ್ತುತ್ತಾ ಇದ್ದಾನೆ ನೋಡು" ಅಂತ ಈಚೀಚೆಗೆ ದಿನ ನಿತ್ಯ ಖಂಡನೇಗೂ ಇಳಿದಿದ್ದಾರೆ. ಇದರಿಂದ ನನ್ನ ಮನಸ್ಸಿನಲ್ಲಿ ಆಗುತ್ತಿರೋ ಉದ್ವೇಗವನ್ನು ಯಾರಿಗೆ ಬಣ್ಣಿಸಲಿ ? ನನ್ನ ಜೀವನ ಪರ್ಯಂತ ಬ್ರಹ್ಮಚಾರಿಯಾಗಿ ಇರೋದಲ್ಲದೆ ಕಂಡ ಕಂಡವರ ಬಾಯಲ್ಲಿ ಬಯ್ಯಿಸ್ಕೊತಾನೂ ಇರಬೇಕೆ ? ಇದು ಯಾವ ನ್ಯಾಯ ?

ಈ ಪ್ರಲಾಪವನ್ನ ಇಲ್ಲಿಯವರೆಗೂ ಸಹಾನುಭೂತಿಯಿಂದ ಅವಲೋಕನ ಮಾಡಿದ ಓದುಗರಲ್ಲಿ ಅನೇಕ ಅವಿವಾಹಿತ ತರುಣಿಯರೂ ಇದ್ದಾರೆ ಅಂತ ನನ್ನ ನಂಬಿಕೆ. ಈ ನನ್ನ ಕೊನೆಯ ವಾಕ್ಯಗಳು ಅವರಿಗೆ ಉದ್ದೇಶಿಸಿದ್ದು, "ಡಿಯರ್ ಗರ್ಲ್ಸ್ ಮಾನವರಿಗೆ ಚರ್ಮದ ಬಣ್ಣ ಮುಖ್ಯವಲ್ಲ; ಗುಣ ಮುಖ್ಯ. ಹೊರಗಿನಿಂದ ನಾನು, ನನ್ನ ಹೃದಯ ಕಪ್ಪುಗೋಪಿಯ ಹಾಗೆ ಕಾಣಬಹುದು. ಆದರೆ ನನ್ನ ಒಳ ಹೃದಯ ಕೆಂಪು ಗುಲಾಬಿ, ಗರ್ಲ್ಸ್! ನನ್ನನ್ನ ನಂಬಿ. ಬೇಸಿಕಲಿ ನಾನು ಒಳ್ಳೇ ಮನುಷ್ಯ. ಬೇಕಾದರೆ ನೀವೇ ಖುದ್ದಾಗಿ ನನ್ನನ್ನ ಅಳತೆ ಮಾಡಿ, ಐ ಯಾಮ್ ರೆಡಿ ಫಾರ್ ಎ ಡೇಟ್, ನನಗೂ ನಿಮಗೂ ಅದೃಷ್ಟ ಖುಲಾಯಿಸಿದರೆ ಡೇಟ್ ಮೇ ಬಿಕಮ್ ಎನ್ ಎಂಗೇಜ್ ಮೆಂಟ್ ! ಖಂಡಿತಾ ನನಗೆ ಕಾಗದ ಬರೀರಿ, ಥ್ಯಾಂಕ್ಸ್ ಎಂಡ್ ಗುಡ್ ಬೈ !!" ■

ಸೋಮದೇವನ ಕೃತಿಯ ಛಲಬಿಡದ ವಿಕ್ರಮ್ ಬೇತಾಳ್
ಸೋಮನಾಥನ ಇಸ್ರೋ ನಾಯಕತ್ವದ ವಿಕ್ರಮ್ ಪ್ರಗ್ಯಾನ್
ಮಕ್ಕಳ ಪುಸ್ತಕ ಚಂದಾಮಾಮ
ಭಾರತದ ಹೆಮ್ಮೆ ಚಂದ್ರಯಾನ

–ಶ್ಯಾಮಲ ಸತ್ಯ



# ಗಾಳಕ್ಕೆ ಸಿಗದ ನೀನೂ.....!

ಸುಮಾ ರಮೇಶ್, ಹಾಸನ

ಯಾವುದೋ ಪತ್ತೇದಾರಿ ಕತೆಯನ್ನು ಓದುತ್ತಾ ಕುಳಿತಿದ್ದೆ. ಕತೆ ರೋಚಕ ಘಟ್ಟ ತಲುಪಿತ್ತು. ಕಾಲಿನ ಸಂದಿಯಿಂದ ಡೈನಿಂಗ್ ಹಾಲಿನೆಡೆಗೆ ಏನೋ ಮೂವ್ ಆದಂತಾಯ್ತು. ಎದೆ ಝಲ್ ಎನಿಸಿ ತಟ್ಟನೆ ತಲೆ ಎತ್ತಿದರೆ ಏನೂ ಇಲ್ಲ. ಜಗ್ಗೇಶ್ ಶೈಲಿಯಲ್ಲಿ "ಭ್ರಮೆ....!" ಎಂದುಕೊಳ್ಳುತ್ತಾ ಓದು ಮುಂದುವರಿಸಿದೆ. ಪುನಃ ಅದೇ ಹಿಂದಿನ ಏಕಾಗ್ರತೆಗೆ ಜಾರುವಷ್ಟರಲ್ಲಿ ಹಾಲ್‌ನಿಂದ ಅಡುಗೆ ಮನೆಯೆಡೆಗೆ ಮಿಂಚಿನ ವೇಗದಲ್ಲಿ ಜೀವಿಯೊಂದು ಸರಿದಂತಾಯ್ತು. ಅರ್ಧ ಶತಮಾನ ನಿಷ್ಠೆಯಿಂದ ದುಡಿದ ನನ್ನ ಕಣ್ಣುಗಳ ಕ್ಷಮತೆಯ ಬಗ್ಗೆ ಹೆಮ್ಮೆಯಿದ್ದರೂ ಆ ಫ್ರಾಕ್ಷನ್ ಆಫ್ ಎ ಸೆಕೆಂಡಿನ ನನ್ನ ವೀಕ್ಷಣೆಯ ಗ್ರಹಿಕೆಗೆ ಅದು ಯಾವ ಕುಟುಂಬಕ್ಕೆ ಸೇರಿದ ಜೀವಿಯೆಂದು ಖಚಿತವಾಗಲಿಲ್ಲ. ಮತ್ತೊಮ್ಮೆ ಮೆದುಳಿನಲ್ಲಿ ರೆಕಾರ್ಡ್ ಆದ ಅದರ ಚಿತ್ರಣವನ್ನು ರಿವೈಂಡ್ ಮಾಡಿದಾಗ ಹೊರಬಂದ ಅಂಶಗಳಿಷ್ಟು..... ಅದು ಹಾವಿನಷ್ಟು ದೊಡ್ಡದಿರಲಿಲ್ಲ.... ಹಲ್ಲಿಯಷ್ಟು ಚಿಕ್ಕದೂ ಅಲ್ಲ.... ಅಳಿಲು ಇಲ್ಲವೇ ಹೆಗ್ಗಣದಂತ ಯಾವುದೋ ಒಂದು ಜೀವಿ ಎಂದು.... ಆದರೂ ಹೆಗ್ಗಣಕ್ಕೆ ಆ ಮಿಂಚಿನ ವೇಗ ಇರುವ ಬಗ್ಗೆ ಅನುಮಾನ ಮೂಡುವಾಗಲೇ ಮತ್ತೆ ಟಣ್ಣನೆ ಅದೇ ಚೇತನ ಅಡುಗೆ ಮನೆಯಿಂದ ದೇವರ ಕೋಣೆಗೆ ಓಡಿತು.

ಈ ಬಾರಿ ನನ್ನ ದೃಷ್ಟಿ ನಿಚ್ಚಳವಾಗಿತ್ತು. ಅದು ನೋ ಡೌಟ್..... ರ್‍ಯಾಟ್ (rat)....! ಎಂದು ನನ್ನ ಮೆದುಳು ತೀರ್ಪಿತ್ತಿತು. ಮೂಷಿಕ ವಾಹನ ತನ್ನ ಧಣಿಯನ್ನರಸುತ್ತಾ ದೇವರ ಕೋಣೆಗೆ ತೆರಳಿ ಅಲ್ಲೇ ತಾತ್ಕಾಲಿಕವಾಗಿ ಪಾರ್ಕ್ ಆಗಿತ್ತು. ರಸ್ತೆ ಬದಿ ಸತ್ತು ಬಿದ್ದಿರುತ್ತಿದ್ದ ಹೆಗ್ಗಣಗಳನ್ನು ಕಂಡು ಹೇಸುತ್ತಿದ್ದವಳು ಅದೇ ಗುಂಪಿಗೆ ಸೇರಿದ ಇಲಿಯನ್ನೂ, ಅದರ ಸೌಂದರ್ಯವನ್ನೂ ಮೊದಲ ಬಾರಿಗೆ ಹತ್ತಿರದಿಂದ ನೋಡಿ ಬೆರಗಾಗಿದ್ದೆ. ಆ ಮೂಷಿಕನ ಕಣ್ಣು, ಮೂಗು, ಕಿವಿ, ಬಾಲ, ವೇಗ ಎಲ್ಲವೂ ನನ್ನ ಮನಸ್ಸನ್ನು ಸೂರೆಗೊಂಡಿತ್ತು.

"ಜಿಂಕೆಮರಿ ಓಡ್ತಾ ಐತೆ ....ನೋಡ್ಲಾ ಮಗ....." ಎಂಬ ಕಲ್ಯಾಣ್ ರವರ ಗೀತ ರಚನೆಗೆ ಬಹುಶಃ ಇಲಿಯೇ ಸ್ಫೂರ್ತಿ ಎನಿಸಿತು.

"ಇಲಿ ಮರಿ ಓಡ್ತಾ ಐತೆ ನೋಡ್ಲಾ ಮಗಾ ...." ಎಂದು ಬರೆದರೆ ಅಭಾಸವಾಗಿ ನಾಯಕಿಯೇ ಚಿತ್ರ ತೊರೆದು ಓಡುವ ಅಪಾಯವಿತ್ತು.

ನಂತರ ಇಡೀ ದಿನ ಆ ಮೂಷಿಕ ನಿರ್ಭಿಡೆಯಿಂದ" ಪೋರಿ ಟಪೋರಿ ಬಂದ್ಲೋ.... ಟೊಂಯ್.... ಟೊಂಯ್...." ಎಂಬಂತೆ ಹಾಲಿನಿಂದ ರೂಮಿಗೆ, ರೂಮಿನಿಂದ ಕಿಚನ್‌ಗೆ ಬೆಡ್ರೂಮ್‌ಗೆ ಎನ್ನುತ್ತಾ ಸರಸರನೆ ಓಡಾಡುತ್ತಿದ್ದರೆ ನನ್ನ ಮನ ವಿಚಿತ್ರ ರೀತಿಯ ಪುಳಕವನ್ನು ಅನುಭವಿಸುತ್ತಿತ್ತು.



ಇತ್ತೀಚೆಗೆ ಮಕ್ಕಳು ತಮ್ಮ ಬದುಕನ್ನರಸಿ ಪರಸ್ಥಳಗಳಲ್ಲಿ ನೆಲೆಸಿದ ನಂತರ ನಮ್ಮ ಡೂಪ್ಲೆಕ್ಸ್ ಮನೆ ಜನರಿಲ್ಲದೆ ಬಣಗುಡುತ್ತಿತ್ತು. ಪುಣುಕ್.... ಪುಣುಕ್.... ಎನ್ನುತ್ತಾ ಪ್ರಾಯದ ಹುಡುಗಿಯಂತೆ ಜಿಗಿದಾಡುವ ಈ ಪುಟ್ಟ ಇಲಿ ನಮ್ಮಿಬ್ಬರಿಗೆ ಜೊತೆಯಾದದ್ದು ಖುಷಿಯೆನಿಸಿತು. ಮನೆಯಲ್ಲಿ ಯಾವಾಗಲೂ ಕದಲುತ್ತಿರುವ ಜೀವಿ ಇದ್ದರೆ ಒಳಿತು ಎಂದು ವಾಸ್ತು ಪಂಡಿತರು ಅಕ್ವೇರಿಯಂ ಇಡಲು ಸಜೆಸ್ಟ್ ಮಾಡಿದ್ದರು. ಫಿಶ್ ಟ್ಯಾಂಕ್ ಮೇಂಟೇನ್ ಮಾಡುವುದು ನಿಜಕ್ಕೂ ಕಠಿಣ. ಇದಾದರೆ

ಸಲೀಸು... ಆರಾಮವಾಗಿ ಓಡಾಡಿಕೊಂಡಿರಲಿ ಎಂದು ಸುಮ್ಮನಾದೆ.

ಅಂದು ಬೆಳಿಗ್ಗೆ ತಡವಾಗಿ ಬಂದ ಕೆಲಸದ ನಿಂಗಿ ಲಿಫ್ಟ್ ಗಿಂತಲೂ ವೇಗವಾಗಿ ಮೂರು ಮೂರು ಮೆಟ್ಟಿಲಿಗೊಂದೊಂದು ಕಾಲಿರಿಸುತ್ತಾ ದಡಬಡನೆ ಮೇಲೆ ಒರೆಸಲು ಹೋದವಳು ಕಿಟಾರನೆ ಕಿರುಚಿದ ಸದ್ದು ಕೇಳಿ ಬೆಚ್ಚಿದೆ. ಅವಳು ಕಿರುಚಿದ ಫ್ರೀಕ್ವೆನ್ಸಿಗೆ ಎಲ್ಲೋ ಮುಗ್ಗರಿಸಿ ಬಿದ್ದು ಕೈಕಾಲು ಡ್ಯಾಮೇಜ್ ಆಗಿರಬಹುದೆಂಬ ಗುಮಾನಿ ಮೂಡಿ, ಹೋಗಿ ನೋಡುವ ಇರಾದೆಯಿಂದ ಮೇಲೆದ್ದೆ. ಮಂಡಿ ನೋವಿನ ಸಮಸ್ಯೆಯಿಂದ ತಿಂಗಳಿಗೊಮ್ಮೆಯೂ ಮಹಡಿ ಹತ್ತದ ನಾನು ಒಲಿಂಪಿಕ್ಸ್ ಆಟಗಾರ್ತಿಯಂತೆ ಹಾರಿ ಹೋಗಿ ಬಿದ್ದಿರಬಹುದಾದ ನಿಂಗಿಯನ್ನು ಎತ್ತಲು ಕನಿಷ್ಠ ಜಿಲ್ಲಾ ಮಟ್ಟದ ಕ್ರೀಡಾಪಟುವಿನ ವೇಗದಲ್ಲಾದರೂ ಓಡದಿದ್ದರೆ ಹೇಗೆಂಬ ಹುರುಪಿನಿಂದ ಹಿಂಭಾರವನ್ನೂ ಲೆಕ್ಕಿಸದೆ ಸೊಂಟಕ್ಕೆ ಮೂಟೆ ಕಟ್ಟಿಕೊಂಡು ಓಡುವ ಸ್ಪರ್ಧಿಯಂತೆ ತಕ್ಕಮಟ್ಟಿಗಿನ ವೇಗದಲ್ಲೇ ಮೇಲೇರಿದೆ. ಆತಂಕ, ಆಯಾಸಗಳ ಸಮ್ಮಿಲನದಿಂದ ಉಬ್ಬಸದಂತಾದ ನನ್ನ ಶ್ವಾಸವನ್ನು ಒಂದರೆಕ್ಷಣ ತಹಬಂದಿಗೆ ತಂದುಕೊಂಡು ನಿಂಗಿಗಾಗಿ ತಡಕಾಡಿದೆ. ಮಗಳ ರೂಮಿನಲ್ಲಿ ಸೊಂಟದ ಮೇಲೆ ಕೈಯಿರಿಸಿ ಕುದುರೆಯ ಕಸುವಿನಲ್ಲಿ ನಿಂತಿದ್ದ ನಿಂಗಿಯನ್ನು ಕಂಡು ಅಚ್ಚರಿಯಾಯಿತು. ಕಾಟ್ ಮೇಲಿನ ಹಾಸಿಗೆ ಛಿದ್ರಗೊಂಡು ಕಿಟಕಿಯಿಂದ ತೂರಿ ಬರುತ್ತಿದ್ದ ಗಾಳಿಯ ರಭಸಕ್ಕೆ ಹತ್ತಿಯ ತುಣುಕುಗಳು ತಾಂಡವಗೈಯ್ಯುತ್ತಿದ್ದವು.

"ಅಕ್ಕಾ, ಮನೆಯಲ್ಲಿ ಇಲಿಯೋ, ಹೆಗ್ಗಣವೋ ಸೇರ್ಕೊಂಡಿರ್ಬೇಕು...." ನಿಂಗಿ ಗುಮಾನಿಯಿಂದ ಮೂಗರಳಿಸಿ ಕಣ್ಣು ಕಿರಿದುಗೊಳಿಸಿದಳು.

"ಹೌದು ಕಣೇ ನಿಂಗಿ.... ಒಂದು ಪುಟ್ಟ ಇಲಿ ಸೇರ್ಕೊಂಡಿದೆ. ಅದು ಎಷ್ಟು ಮುದ್ದಾಗಿ ಓಡಾಡ್ಕೊಂಡಿದೆ ಗೊತ್ತಾ.....?" ನಿಂಗಿಯ ಪತ್ತೇದಾರಿಕೆಯನ್ನು ನಿರ್ಲಕ್ಷಿಸುತ್ತಾ ಇಲಿಯ ಬಣ್ಣನೆಗೆ ಉತ್ಸಾಹ ತೋರಿದೆ.

"ಅಕ್ಕಾ ಇದು ಅದ್ರುದೇ ಕೆಲ್ಸ...." ಗಾಳಿಯ ರಭಸಕ್ಕೆ ಹಾರಾಡುತ್ತಿದ್ದ ಹತ್ತಿಯನ್ನು ಕೈಲಿಡಿದು ಕಿಟಕಿಯನ್ನು ಮುಚ್ಚುತ್ತಾ ಮತ್ತೊಂದು ಕೈಯಿಂದ ತಲೆ ಬಡಿದುಕೊಂಡಳು. ಅಷ್ಟು ಪುಟ್ಟ ಮರಿಯಿಂದ ಈ ಮಟ್ಟಿಗಿನ ಅನಾಹುತ ಸಾಧ್ಯವೇ ಎನಿಸಿ ನಾನು ಅಚ್ಚರಿಯಿಂದ ಮ್ಯೂಟ್ ಆದೆ.

"ಅಲ್ಲಾ ಅಕ್ಕ.....ಇಲಿ ಸೇರ್ಕೊಂಡಿರೋದು ಗೊತ್ತಿದ್ರೂ ಸುಮ್ನೆ ಇದೀರಲ್ಲಾ ಓಡ್ಸದ್ ಬುಟ್ಟು...ಬಟ್ಟೆ ಎಲ್ಲಾ ಕಡ್ದಾಕುತ್ತೆ..... ರಮಾಂಟಿ ಮನೇಲಿ ರೇಶ್ಮೆ ಸೀರೆನೇ ಕಡ್ದಾಕಿತ್ತು....." ನಿಂಗಿ ದನಿ ಎತ್ತರಿಸಿ ಕೈ ತಿರುವುತ್ತಾ ನುಡಿದಳು.

ಅಷ್ಟರಲ್ಲೇ ಸ್ನಾನ ಮುಗಿಸಿ ಹೊರಬಂದ ಪತಿ ಟವೆಲ್ ತಂದು ನಮ್ಮ ಮುಂದೆ ಹಿಡಿದರು. ಇಲಿಯ ಪ್ರತಿಭೆಗೆ ಪಕ್ಕಾದ ಟವೆಲ್‌ನಲ್ಲಿ ವರ್ಲ್ಡ್ ಮ್ಯಾಪೇ ಸೃಷ್ಟಿಯಾಗಿತ್ತು.

"ಅಕ್ಕಾ, ನಮ್ಮನೇಲಿ ಇಲಿ ಬೋನ್ ಐತೆ.... ತಂದ್ಕೊಡ್ತೀನಿ ಸುಮ್ನಿರಿ....." ಎನ್ನುತ್ತಾ ನಿಂಗಿ ಹರಿದ ಟವೆಲ್ ನಿಂದಲೇ ನೆಲದಲ್ಲಿ ಹರಡಿದ್ದ ಹತ್ತಿಯನ್ನು ಗುಡಿಸಿ ಹಾಸಿಗೆಗೆ ತುಂಬಿದಳು.



ಸಂಜೆಯಷ್ಟರಲ್ಲಿ ನಿಂಗಿ ಒಂದು ಹಳೆಯ ತಗಡಿನ ಬೋನನ್ನು ತಂದು ಕೊಬ್ಬರಿ ಚೂರನ್ನು ಕಮ್ಮಗೆ ಸುಟ್ಟು ಅದರ ಒಳಭಾಗದ ತಂತಿಗೆ ಸಿಕ್ಕಿಸಿ ಮಹಡಿಯಲ್ಲಿರಿಸಿ ಬಂದಳು. ಇಲಿಯ ಬಗ್ಗೆ ಬೆಳಗಿನಿಂದ ತಲೆಕೆಡಿಸಿಕೊಂಡು ಗೂಗಲ್ ನಿಂದ ಮಾಹಿತಿ ಸಂಗ್ರಹಿಸಿದ್ದ ಇವರು rat ಗ್ಲೂ ಪ್ಯಾಡ್ ಎಂಬ ಒಂದು ಕೆಂಪನೆಯ ವಸ್ತುವನ್ನು

ತಂದು ಮೆಟ್ಟಿಲಿನ ಕೆಳಗಿರಿಸಿದರು. ಅದರೆಡೆಗೆ ಬೆರಗಿನಿಂದ ನೋಡುತ್ತಿದ್ದ ನಮಗೆ

"ಇದು ಸ್ಪೆಷಲ್ ಅಂಟಿನ rat ಬೋನ್ ಟ್ರ್ಯಾಪ್. ಇಲಿ ಇದರ ಮೇಲೆ ಕಾಲಿರಿಸಿದರೆ ಮುಗಿಯಿತು. ಕಾಲು ಅದಕ್ಕೆ ಅಂಟಿಕೊಳ್ಳುತ್ತದೆ. ಕೊನೆಗೆ ಅದನ್ನು ಪ್ಯಾಡ್ ನಿಂದ ಹೊರತೆಗೆಯಲು ಹಲಸಿನ ಅಂಟಿಗೆ ಬಳಸಿದಂತೆ ಎಣ್ಣೆಯನ್ನು ಬಳಸಬೇಕು....." ಎಂದು ವಿವರಿಸಿದರು. ನಿಂಗಿ ಅಸಡ್ಡೆಯಿಂದ ವ್ಯಂಗ್ಯ ನಗು ಬೀರಿದಳು. ತನ್ನ ಪುರಾತನ ಬೋನಿನ ಮುಂದೆ ಈ ಪ್ಯಾಡ್ ಯಾವ ಪುಟಗೋಸಿ ಎಂಬಂತೆ ಮುಖ ಮಾಡಿಕೊಂಡು ಮನೆಗೆ ಹೋದಳು. ಇಲಿಯನ್ನು ಕೆಡವಿಕೊಳ್ಳಲು ನಿಂಗಿಯ ಬೋನು, ನನ್ನವರ ಪ್ಯಾಡು ಎರಡೂ ಜಿದ್ದಿಗೆ ಬಿದ್ದು ಕುಳಿತಿದ್ದವು.

ಮರುದಿನ ನಿಂಗಿ ಎಂದಿಗಿಂತಲೂ ಅರ್ಧ ಗಂಟೆ ಮೊದಲೇ ಬಂದಳು. " ಅಕ್ಕಾ ಬೋನಿಗೆ ಇಲಿ ಬಿತ್ತಾ.......? ಹುಷಾರು... ತೆಗ್ಯಕೋದ್ರೆ ನುಗುಚ್ಕೊಳುತ್ತೆ. ನೀರು ತುಂಬಿರೋ ಬಕೀಟಿನೊಳ್ಗೆ ಮುಳುಗ್ಸಿದ್ರೆ ಹತ್ತು ನಿಮಿಷುಕ್ಕೆ ಸಾಯುತ್ತೆ...." ಎನ್ನುತ್ತಲೇ ಮಾಡುವ ಕೆಲಸ ಬದಿಗಿರಿಸಿ ಕ್ಯಾಟ್ ವಾಕ್ ಮಾಡುತ್ತಾ ಉತ್ಸಾಹದಿಂದ ಮಹಡಿಯೇರಿದಳು. ಇಡೀ ದಿನ ಇಲಿಗಾಗಿ ಕಮ್ಮಗಿನ ಕೊಬ್ಬರಿಯೊಂದಿಗೆ ಕಾಯುತ್ತಾ ಬಾಯ್ತೆರೆದು ಬಳಲಿದ್ದ ನಿಂಗಿಯ ಬೋನು ಬೇಸರದಿಂದ ".........ನಿದ್ದಿ... ಕದ್ದೀ...ಯಲ್ಲೆ ನಿಂಗಿ" ಎಂದು ಅವಳನ್ನು ಆರೋಪಿಸುತ್ತಾ ದುಃಖದಿಂದ ಮುಲುಕಿತು. ಇಲಿಯನ್ನು ಕಾಣದೆ ನಿರಾಶಳಾದ ನಿಂಗಿ ತಟ್ಟನೆ ಏನೋ ನೆನೆದವಳಂತೆ ಕೆಳಗಿಳಿದು ಬಂದು rat ಗ್ಲೂ ಪ್ಯಾಡ್ ನೆಡೆಗೆ ಬಗ್ಗಿ ನೋಡಿದಳು. ಇಲಿಯ ಕಾಲಿನ ಬದಲು ನಮ್ಮವೇ ಒಂದೆರಡು ಕೂದಲುಗಳು ಅದರಲ್ಲಿ ಅಂಟಿರುವುದನ್ನು ಕಂಡು ಸಮಾಧಾನಗೊಂಡಳು. 'ಹಿಟ್ ಅಂಡ್ ಮಿಸ್ ಕೇಸ್' ಎಂಬ ಭಾವದಿಂದ ಕುಳಿತಿದ್ದ ನನ್ನವರೆಡೆಗೆ ವಕ್ರ ನೋಟ ಬೀರಿ ಒಳಬರುತ್ತಾ

"ಯಾಕಕ್ಕಾ ....ಇಲಿ ಬೀಳ್ಲಿಲ್ವಾ....? ಅಣ್ಣುನ್ ಪ್ಯಾಡು ಗೀಡಿಗೆಲ್ಲಾ ಅದು ಬೀಳಲ್ಲಾ ಬುಡಿ.... ಆದ್ರೆ ಬೋನಿಗೆ ಬೀಳ್ಬೇಕಿತ್ತಲ್ಲಾ...." ಎಂದಳು. ನಾನು ಮೌನವಾಗಿ ಮೆಲುನಗುತ್ತಾ ಕೆಲಸ ಮುಂದುವರಿಸಿದೆ.

ಈಗಿನ ಮಕ್ಕಳಂತೆ ಇವೂ ಆಲ್ಫಾ ಜನರೇಷನ್ ಇಲಿಗಳು. ಮಿಂಚಿನ ವೇಗದಿ ಓಡುತ್ತಾ, ಅರಿವೆಗಳನ್ನು ಹರಿದು ಹರವುತ್ತಾ ಹರ್ ಘರ್ ಸುರಂಗ್ ತೋಡುವ ಇವು ಪೈಡ್ ಪೈಪರ್‌ನ ಪೀಪಿಗಾಗಲೀ, ನಿಂಗಿಯ ಕ್ಯಾಟ್ ವಾಕಿಗಾಗಲೀ ಫ್ಲ್ಯಾಟ್ ಆಗುವಷ್ಟು ಮುಗ್ಧ ಜೀವಿಗಳಾಗಿ ಉಳಿದಿಲ್ಲವೆಂದು ನನಗೂ ಮನದಟ್ಟಾಗಿತ್ತು.

ಹಿಂದಿನ ರಾತ್ರಿ ನಾವಿಟ್ಟ ಟ್ರ್ಯಾಪುಗಳನ್ನೆಲ್ಲಾ ದಾಟಿದ್ದ ಇಲಿ ಕಿಚನ್‌ಗೆ ಬಂದು ಕೊರೆದು ನುಣ್ಣಗಾಗಿಸಿ ಹೋಗಿದ್ದ ಕಾಯಿಹೋಳನ್ನು ಅವಳ ಮುಂದೆ ಹಿಡಿದೆ. ನಾವಿರಿಸಿದ್ದ ಗಾಳಕ್ಕೆ ಸೆಡ್ಡು ಹೊಡೆದು ಕರಟದಲ್ಲಿ ಅದೇ ತೋಡಿದ್ದ ಖೆಡ್ಡಾವನ್ನು ಕಂಡು ಬೇಸ್ತು ಬಿದ್ದ ನಿಂಗಿಯ ಮುಖ ಅವಳೇ ಸುಟ್ಟು ಸಿಕ್ಕಿಸಿದ್ದ ಕೊಬ್ಬರಿಯಷ್ಟೇ ಕಪ್ಪಾಯ್ತು.

■



ಹೆಣ್ಣು ಪೌರೋಹಿತ್ಯ ಮಾಡದಿರಲು ಕಾರಣವೇನು
ಹೋಮಕುಂಡದ ಬಿಸಿಗೆ ಮೇಕಪ್ ಹಾಳಾಗುತ್ತೆ ಎನ್ನುವ ಆತಂಕದಿಂದ

–ರಾಮ್‌ಬಾಣ

# ಸಾಲಿಗ್ರಾಮ ಸ್ಪರ್ಶ......

**ಎಚ್. ಗೋಪಾಲಕೃಷ್ಣ**

ಮುತ್ತಾತನ ಕಾಲಕ್ಕೂ ಹಿಂದಿನ ನಾಲ್ಕು ಸಾಲಿಗ್ರಾಮ ನಮ್ಮ ಮನೆಯಲ್ಲಿತ್ತು. ಅಂಡಾಕಾರದ ತೆಳು ನೀಲಿ ಬಣ್ಣದ ಒಂದು, ಕಡು ಕಪ್ಪಿನವು ಮೂರು, ಒಟ್ಟು ನಾಲ್ಕು. ಅಪ್ಪ ಮನೆಯಲ್ಲಿ ಇದ್ದಾಗ ಅದಕ್ಕೆ ಭಕ್ತಿಯಿಂದ ಪೂಜೆ ಪಾರಾಯಣ ನಡೆಸೋರು. ಅವರು ಪೂಜೆ ಮಾಡಲು ಸಿದ್ಧತೆಯದೇ ಒಂದು ಕತೆಗಾಗುವಷ್ಟು ಸರಕು. ಒದ್ದೆ ಮಡಿ ಪಂಚೆ ಮೊಣಕಾಲಿನ ಮೇಲಕ್ಕೆ ಬರುವಂತಹದನ್ನು ಕಚ್ಚೆ ಹಾಕಿ ಉಡುತ್ತಿದ್ದರು. ಎದುರಿಗೆ ಸಾಣೆ ಕಲ್ಲು, ಗಂಧದ ಕೊರಡು ಇಟ್ಟುಕೊಂಡು ಗಂಧ ತೇಯುತ್ತಿದ್ದರು. ತೇಯ್ದ ಗಂಧವನ್ನು ಆಗಾಗ ತೆಗೆದು ಒಂದು ಬೆಳ್ಳಿ ಬಟ್ಟಲಿಗೆ ತುಂಬುವರು. ಒಂದು ಅರ್ಧ ಬಟ್ಟಲು ಗಂಧ ತುಂಬಿದ ನಂತರ ಪುಟ್ಟ ಪಂಚಪಾತ್ರೆ ಯಿಂದ ಗೋಪಿ ಚಂದನ,ಮುದ್ರೆ ಆಚೆ ಇಡುವರು. ಬಲಗೈಯಿಂದ ಗೋಪಿಚಂದನ ಹಿಡಿದು ಎಡ ಅಂಗೈ ಮೇಲೆ ಎರಡು ಉದ್ಧರಣೆ ನೀರು ಹಾಕಿ ಸುತ್ತಗೆ ಸುತ್ತಿದರೆ ಚಂದನ ಪೇಸ್ಟ್ ರೆಡಿ. ನಂತರ ಆ ಚಂದ ನಕ್ಕೆ ಮುದ್ರೆ ಒತ್ತಿ ಅದನ್ನು ಎಡ ತೋಳು, ಬಲ ತೋಳು, ಹಣೆಹಣೆ ಅಕ್ಕ ಪಕ್ಕ, ಎದೆ, ಹೊಟ್ಟೆ ಬೆನ್ನು ಭಾಗಗಳಿಗೆ ಒತ್ತುವರು. ಕುತ್ತಿಗೆ ಕೆಳಭಾಗಗಳಿಗೆ ತೋರು ಬೆರಳಿನಿಂದ ಗಂಧ ತೆಗೆದು ಅದನ್ನು ಓರೆಯಾಗಿ ಸವರಿಕೊಳ್ಳುವರು. ಈ ಪ್ರಕ್ರಿಯೆ ನಡೆವಾಗ ಮಂತ್ರ, ದೇವರನಾಮ ಹಾಡುತ್ತಿದ್ದರು. ಇದು ಮೊದಲ ಪಾರ್ಟ್.

ನಂತರ ಪೂಜೆಗೆ ತಯಾರಿ ಕೃಷ್ಣಾಂಜಿನದ ಪೆಟ್ಟಿಗೆಯಿಂದ ಸಾಲಿಗ್ರಾಮ ಹೊರ ತೆಗೆದು ಅದನ್ನು ಬೆಳ್ಳಿ ತಟ್ಟೆಯಲ್ಲಿಟ್ಟು ಪೂಜೆ ಮಾಡುತ್ತಿದ್ದರು. ಅಗಲವಾದ ಬೆಳ್ಳಿ ತಟ್ಟೆ ಮಧ್ಯೆ ಪಾಣಿಪೀಠದ ಮೇಲೆ ಸಾಲಿಗ್ರಾಮ ಇಡುತ್ತಿದ್ದರು. ಮಂತ್ರಗಳು. ದೇವರ ನಾಮ, ಗೀತಾ ಪಠಣ ಪೂಜೆಯ ಭಾಗ. ಪೂಜೆ ನಂತರ ಸಾಲಿಗ್ರಾಮಕ್ಕೆ ಅಭಿಷೇಕ. ನಂತರ ವಿಸರ್ಜನಾ ಮಂತ್ರ. ಮತ್ತೆ ಅದು ಕೃಷ್ಣಾಂಜಿನದ ಪೆಟ್ಟಿಗೆ ಸೇರುತ್ತಿತ್ತು. ಈಚೆಗೆ ಒಬ್ಬರು ಮಠದ ಸ್ವಾಮಿಗಳ ಕೊಠಡಿಯಲ್ಲಿ ಜಿಂಕೆ ಚರ್ಮ ಇತ್ತು ಅಂತ ಅರೆಸ್ಟ್ ಮಾಡಿದ್ದರಲ್ಲಾ (ವನ್ಯ ಮೃಗ ಸಂರಕ್ಷಣಾ ಕಾಯಿದೆ ಉಲ್ಲಂಘನೆ) ಆಗ ನನಗೆ ನಮ್ಮ ಮನೆಯಲ್ಲಿದ್ದ ಆ ಕೃಷ್ಣಾಂಜಿನದ ಪೆಟ್ಟಿಗೆ ನೆನಪಿಗೆ ಬರೋದು. ನಮ್ಮನ್ನೂ ಸಹ ಆಗ ಅರೆಸ್ಟ್ ಮಾಡುತ್ತಿದ್ದರಾ ಅಂತನಿಸೋದು. ಕೃಷ್ಣಾಂಜಿನ ಅಂದರೆ ಜಿಂಕೆ ಚರ್ಮ. ಈಗ ಈ ಚರ್ಮದ ಕತೆ ಮಧ್ಯೆ ಮತ್ತೊಂದು ತೀರಾ ಈಚಿನ ನೆನಪು ಬಂತು. ಅದನ್ನ ಈಗ ಹೇಳಲೇ...

ನನ್ನ ಹೆಂಡತಿ ಚಿಕ್ಕಪ್ಪ ಸತ್ಯವ್ರತ ಕರ್ನಾಟಕದ ಪ್ರಸಿದ್ಧ ಸ್ವಾತಂತ್ರ ಹೋರಾಟಗಾರರು ಮತ್ತು ಗಾಂಧೀವಾದಿ. ವಿನೋಬಾ ಅವರ ಸರ್ವೋದಯ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಅವರ ಹೆಂಡತಿ ಡಾ.ಲಕ್ಷ್ಮಿ ಅವರು ನ್ಯಾಚುರೋಪತಿ ವೈದ್ಯರು. ಅವರು ವಾಸ ಇದ್ದ ಬೆಂಗಳೂರಿನ ಕುಮಾರ ಪಾರ್ಕನ ಗಾಂಧಿಭವನದ ಸುತ್ತ ರಾಜಾಸ್ಥಾನದ ಮಾರವಾಡಿಗಳು ಮತ್ತು ಉತ್ತರ ಭಾರತೀಯರ ವಾಸ. ಇವರು ಅಲ್ಲಿ ಎಲ್ಲರಿಗೂ ತುಂಬಾ ಆಪ್ತರು ಮತ್ತು ಬೇಕಾದವರು. ಇವರಿಗೆ ಸುತ್ತ ಮುತ್ತಲಿನವರು ಆಗಾಗ ಏನಾದರೂ ವಿಶೇಷ ವಾದದ್ದನ್ನು ತಂದು ಕೊಡುವುದನ್ನು ಅಭ್ಯಾಸ ಮಾಡಿಕೊಂಡಿದ್ದರು. ಒಂದು ಸಲ



ಅವರ ಮನೆಗೆ ಹೋಗಿದ್ದೆವು ನಾನು, ನನ್ನಾಕೆ. ಎರಡು ಹೊಸ ಕುರ್ಚಿ ಮನೆಯ ಪಡಸಾಲೆಯಲ್ಲಿ ಕಾಣಿಸಿದವು. ಹಾಗೇ ಮಾತಾಡುತ್ತಾ ಇರಬೇಕಾದರೆ ಸತ್ಯವ್ರತ ಅವರು ಆ ಕುರ್ಚಿ ತೋರಿಸಿದರು. ಇದು ಯಾವುದರಿಂದ ಮಾಡಿದ್ದಾರೆ ಗೊತ್ತಾ ಅಂದರು. ಹೊಸದಾಗಿತ್ತು. ಅಂಚಿಗೆ ಮರದ ಪಟ್ಟಿ ಇತ್ತು, ಈಸಿ ಚೇರ್ ಮಾದರಿ ಕೂಡುವ ಜಾಗಕ್ಕೆ ದಪ್ಪನೆ ಒಂದು ಅರ್ಧ ಇಂಚು ದಪ್ಪದ ಹಾಸು ಇತ್ತು. ಮೊದಲನೇ ಬಾರಿಗೆ ಅಂತಹ ಕುರ್ಚಿ ನೋಡಿದ್ದು ನಾನು. ಯಾರಾದರೂ ಫ್ರೀ ಕೊಟ್ಟರೆ ನನಗೂ ಇರಲಿ ಅಂತ ಅನಿಸುವ ಹಾಗಿತ್ತು.

ತಿಳಿಯದು ಅಂತ ತಲೆ ಆಡಿಸಿದೆ.

ನೋಡಿ ಇದು ಫೇಂಡಾ ಮೃಗದ ಚರ್ಮ ಅಂತ ಹೇಳಿ ಅದನ್ನು ಮುಟ್ಟಿಸಿದರು, ಸವರಿ ಅಂದರು, ಅದರ ಮೇಲೆ ಕೂಡಿಸಿ ಹೇಗಿದೆ ಅಂದರು....! ಪ್ರಾಣಿ ಮೇಲೆ ಕೂತ ಹಾಗಿತ್ತು. ಎಷ್ಟು ಆಯಿತು ದುಡ್ಡು ಅಂದೆ. ಯಾರೋ ಕೊಟ್ಟರು ಅಂದರು.

ಯಾರು ಕೊಟ್ಟರು ಅಂತ ವಿಚಾರಿಸಿದೆ. ಯಾರೋ ಮಾರವಾಡಿ, ಎಂಟು ತಂದನಂತೆ, ಎರಡು ಇಲ್ಲಿ ಕೊಟ್ಟ ಅಂದರು...!

ಸಾರ್ ಫೇಂಡಾಮೃಗ ಅಳಿವಿನ ಅಂಚಿನಲ್ಲಿ ಇರೋ ಪ್ರಾಣಿ. ಯಾರಾದರೂ ಸರ್ಕಾರದವರು ಇದನ್ನ ನೋಡಿದರೆ ನಿಮ್ಮನ್ನು ಅರೆಸ್ಟ್ ಮಾಡಿ ಬಿಡ್ತಾರೆ ಹುಷಾರು ಅಂದೆ. ಯಾಕೆ ಎಂದು ಮುಗ್ಧರಾಗಿ ಕೇಳಿದರು. ವನ್ಯ ಮೃಗ ಸಂರಕ್ಷಣಾ ಕಾಯಿದೆ ಉಲ್ಲಂಘನೆ ಎಂದೆ. ಆಗಾಗ ಅವರನ್ನು ತಮಾಷೆ ಮಾಡುತ್ತಿದ್ದೆ. ತಮಾಷೆಯ ಭಾಗವಾಗಿ ಅವರು ನಂಬಿದ ಸಿದ್ಧಾಂತಗಳನ್ನು (ಅದರಲ್ಲೂ ವಿನೋಬಾ ಅವರ ವಿಚಾರ ಧಾರೆ, ಎಮರ್ಜೆನ್ಸಿ ಯನ್ನು ಅವರು ಅನುಶಾಸನ ಪರ್ವ ಅಂತ ಕರೆದದ್ದು...) ಸಹ ವ್ಯಂಗ್ಯ ಮಿಶ್ರಿತ ಹಾಸ್ಯ ಮಾಡುತ್ತಿದ್ದೆ. ಪಾಪ, ಅವರೋ ಹಸುವಿನ ಸ್ವಭಾವದವರು, ಹಿಂದೆ ಬಂದರೆ ಒದೆಯದ, ಮುಂದೆ ಬಂದರೆ ಹಾಯದ ಪುಣ್ಯಕೋಟಿಯ ವಂಶಸ್ಥರು. ಅಳಿಯನ ಮಾತಿಗೆ ನಕ್ಕು ಎಳಸು ಎಳಸು ಅಂದು ಕೊಳ್ಳುತ್ತಿದ್ದರು. ಎಂದಿನ ಹಾಗೆ ರೇಗಿಸುತ್ತಾ ಇದೀನಿ ಅಂತ ಅಂದುಕೊಂಡು ಬಾಯ್ತುಂಬಾ ನಕ್ಕರು. ಅವರು ನಿಧನರಾದ ಕೆಲವು ವರ್ಷದವರೆಗೂ ಆ ಕುರ್ಚಿಗಳು ಮನೆಯ ಹೊರ ಪಡಸಾಲೆಯಲ್ಲಿ ಇದ್ದವು. ಬಿಸಿಲು ಮಳೆ ಗಾಳಿಗೆ ಮೈ ಒಡ್ಡಿ ಮೊದಲಿನ ಚೆಲುವು ಹೋಗಿತ್ತು. ಇವರನ್ನ ಯಾರೂ ಬದುಕಿದ್ದಾಗ ಅರೆಸ್ಟ್ ಮಾಡಲಿಲ್ಲವಲ್ಲ ದೇವರು ದೊಡ್ಡವನು ಎಂದು ನಂಟರು ಇಷ್ಟರ ಮುಂದೆ ಹೇಳಿ ಹಲವರ ನಗುವಿಗೆ ಕಾರಣ ಆಗಿದ್ದೆ! ತುರ್ತು ಪರಿಸ್ಥಿತಿಯಲ್ಲಿ ಅವರು ಜೈಲಿನಲ್ಲಿ ಇದ್ರಲ್ಲಾ ಅಂತ ನೆಂಟರು ನೆನೆಸಿಕೊಳ್ಳುತ್ತಾ ಇದ್ದರು. ಅವರ ಮರಣದ ನಂತರ ಕೊನೆಗೆ ಮನೆ ಸುಪರ್ದಿಗೆ ತೆಗೆದುಕೊಂಡ ಗಾಂಧಿ ಭವನದವರು ಆ ಕುರ್ಚಿ ಯಾರಿಗೆ ಕೊಟ್ಟರೋ ತಿಳಿಯದು.

ಕೃಷ್ಣಾಂಜಿನದ ನೆನಪು ಫೆಂಡಾಮೃಗಕ್ಕೆ ಬಂತಾ.. ಸಾಲಿಗ್ರಾಮದ ಬಗ್ಗೆ ಹೇಳ್ತಾ ಇದ್ದೆ.



ಸಾಲಿಗ್ರಾಮದ ಪೂಜೆಯ ನಂತರ ಕೆಲವು ಸಲ ಪ್ರಸಾದವೂ ಸಹ ಸಿಗುತ್ತಿತ್ತು. ಪ್ರಸಾದ ಸಹ ವಿಶಿಷ್ಟ ಅನಿಸುವಂತಹುದು. ಹಯಗ್ರೀವ, ಅವಲಕ್ಕಿ ಪಾಯಸ, ಕಾಶೀ ಹಲ್ವಾ ಈ ಗುಂಪಿನವು. ಅಂದರೆ ಅವು ನಿಮಗೆ ಹೊರಗೆಲ್ಲೂ ಕಾಸು ಕೊಟ್ಟರೂ ಸಹ ಸಿಗದಿರುವಂತಹುದು! ಈಗಲೂ ಆ ಪ್ರಸಾದ ನೆನೆಸಿಕೊಂಡರೆ ಬಾಯಲ್ಲಿ ಒದ್ದೆ ಒದ್ದೆ ಅನುಭವ ಆಗುತ್ತೆ. ನಾವು ಹಾಗೇ ಚಿಕ್ಕವರಾಗೇ ಇದ್ದಿದ್ದರೆ ಪ್ರಸಾದ ತಿಂದು ಕೊಂಡು

ಸುಖವಾಗಿ ಇರಬಹುದಿತ್ತು ಅಂತ ಅನಿಸುತ್ತೆ! ಹಯಗ್ರೀವ ಅನ್ನುವ ಹೆಸರೇ ನಾನು ಯಾವ ಹೋಟೆಲ್‌ನಲ್ಲಿಯೂ ಕೇಳಿಲ್ಲ.

ಅಪ್ಪ ತೀರಿದ ನಂತರ ನಮ್ಮ ಮನೆಪುರೋಹಿತರು ಮನೆಗೆ ಬಂದಿದ್ದರು. ಅವರಿಗೆ ನಾವು ಆಚಾರ್ರು ಎನ್ನುತ್ತೇವೆ. ಮನೆಯಲ್ಲಿ ಸಾಲಿಗ್ರಾಮ ಇದ್ದರೆ ಪ್ರತಿದಿನ ಅದರ ಪೂಜೆ ಮಾಡಬೇಕು. ಹಾಗೇ ಅದನ್ನ ಪೆಟ್ಟಿಗೆಯಲ್ಲಿ ಇಡಬಾರದು ಎಂದು ಅದೇ ಪುರೋಹಿತರು ಹೇಳಿದರು. ಪೂಜೆ ಇಲ್ಲದೇ ಸಾಲಿಗ್ರಾಮ ಮನೇಲಿ ಇದ್ದರೆ ಇದ್ದರೆ ಮನೆಗೆ ಕೇಡು. ಗಂಡಸರು ಪೂಜೆ ಮಾಡಬೇಕು ಈ ದೇವರಿಗೆ ಅಂದರು. ಮನೆಯಲ್ಲಿದ್ದ ಮೂವರು ಅಣ್ಣಂದಿರಲ್ಲಿ ಇಬ್ಬರು ಫ್ಯಾಕ್ಟರಿಲಿ ಶಿಫ್ಟ್‌ನಲ್ಲಿ ಕೆಲಸ ಮಾಡುವವರು. ಇನ್ನೊಬ್ಬ ಅಣ್ಣ ಬೆಂಗಳೂರಿಂದ ದೂರ ಇದ್ದ. ಕೊನೇ ಗಂಡಸು ನಾನು ಪೂಜೆ ಪುನಸ್ಕಾರ ಇಂದ ಹತ್ತು ಗಾವುದ ದೂರ. ಏನು ಮಾಡುವುದು ಅಂತ ಜಿಜ್ಞಾಸೆ ನಡೆಯಿತು ಸುಮಾರು ದಿವಸ. ಕೊನೆಗೆ ಅದೇ ಆಚಾರ್ಯರ ಸಲಹೆ ಕೇಳಿದೆವು. ಯಾವುದಾದರೂ ದೇವಸ್ಥಾನಕ್ಕೆ ಕೊಡಿ, ಅವರು ದಿವಸಾ ಪೂಜೆ ಮಾಡ್ತಾರೆ ಅಂತ ಸಲಹೆ ಕೊಟ್ಟರು. ಯಾರೂ ಪೂಜಿಸುವವರು ಇಲ್ಲದೇ ಸಾಲಿಗ್ರಾಮ ನಂತರ ದೇವಸ್ಥಾನ ಸೇರಿತು! ಈಗ ನಮ್ಮ ಯಾರ ಮನೆಯಲ್ಲಿಯು ಸಾಲಿಗ್ರಾಮ ಇಲ್ಲ. ಮಡಿ ಸಹ ಇಲ್ಲ. ದೇವಸ್ಥಾನಕ್ಕೆ ಕೊಡುವ ಮೊದಲು ಒಮ್ಮೆ ಸಾಲಿಗ್ರಾಮ ಮುಟ್ಟಬೇಕು, ಕೈಯಲ್ಲಿ ಹಿಡಿಯಬೇಕು ಅನ್ನಿಸಬೇಕೆ. ತಬ್ಬಲಿ ಕರುವನ್ನ ಹಸು ತಬ್ಬಿದ ಹಾಗೇ ತಬ್ಬಿಕೋ ಬೇಕು ಅನಿಸಬೇಕೆ? ಮಧ್ಯ ರಾತ್ರಿ ಎಲ್ಲರೂ ಮಲಗಿರ ಬೇಕಾದರೆ ಸೆಕೆಂಡ್ ಶಿಫ್ಟ್ ಮುಗಿಸಿಕೊಂಡು ಮನೆಗೆ ಸೇರಿದೆನಾ.. ಎರಡು ತಮ್ಮಿಗೆ ನೀರು ತಲೆ ಮೇಲೆ ಸುರಿದು ಕೊಂಡು ಮಡಿಯಲ್ಲಿ ದೇವರ ಮನೆಗೆ ಹೋದೆ. ಯಾರಿಗೂ ಗೊತ್ತಾಗದ ಹಾಗೆ ಪೆಟ್ಟಿಗೆಯಿಂದ ಸಾಲಿಗ್ರಾಮ ಆಚೆ ತೆಗೆದು ಒಂದೊಂದನ್ನೇ ಒಂದು ಕೈಯಲ್ಲಿ, ನಂತರ ಎರಡು ಕೈಯಲ್ಲಿ ಅದನ್ನು ಹಿಡಿದು ಬೊಗಸೆಯಲ್ಲಿ ಮುಚ್ಚಿಟ್ಟುಕೊಂಡು ನಂತರ ಪೆಟ್ಟಿಗೆ ಒಳಗಿಟ್ಟೆ. ಬೊಗಸೆಯಲ್ಲಿ ಇಟ್ಟು ಮುಚ್ಚಿಕೊಂಡಾಗ ಅದೆಂತಹ ಸ್ಪರ್ಶ ಸುಖ ಅನುಭವಿಸಿದ್ದೆ ಗೊತ್ತೇ... ಇಂತಹ ಸಾಲಿಗ್ರಾಮ ಸ್ಪರ್ಶ ಸುಖ ಯಾರಿಗುಂಟು ಯಾರಿಗಿಲ್ಲ.....!

ನಮ್ಮದು ತಳ ಮಧ್ಯಮ ವರ್ಗದ ಕುಟುಂಬ. ಆಸ್ತಿ ಪಾಸ್ತಿ ಮಾಡಲು ಸಾಕಷ್ಟು ಹಣ ಇರಲಿಲ್ಲ ಹಾಗೂ ಮಾಡಲಿಲ್ಲ. ಆದರೆ ಜೀವನವನ್ನು ತುಂಬಾ ಪ್ರಾಮಾಣಿಕ ವಾಗಿ ನಡೆಸಿಕೊಂಡು ಬಂದಿದ್ದರು. ಅದೇ ಗುಣ ನಮ್ಮಲ್ಲೂ ಸಹ ವಂಶ ವಾಹಿನಿ ಆಗಿದೆ. ಅಡುಗೆ ತಡ ಆಯಿತು ಅಂತ ಹಸಿವು ಆಗಿದೆಯೇ ಹೊರತು ಹೊಟ್ಟೆಗಿಲ್ಲದೆ ನಾವೆಂದೂ ಸಂಕಟ ಪಟ್ಟವರಲ್ಲ. ಇನ್ನೂ ತಮಾಷೆ ಅಂತ ನನಗೆ ಬೆಳೆದ ಮೇಲೆ ಅನ್ನಿಸಿದ್ದು ನಮ್ಮನೆಯಲ್ಲಿ ಸಹ ಒಬ್ಬ ಕೆಲಸದಾಕೆ ಇದ್ದರು.ಅಂದರೆ ನಮ್ಮ ಆಗಿನ ಧಿಮಾಕು ನೋಡಿ. ಗಂಜಿ ಕುಡಿಯೋನಿಗೆ ಗಡ್ಡ ಹಿಡಿಯೋನು ಒಬ್ಬ ಅಂತೆ. ಕೆಲಸದಾಕೆ ಮನೆಗೆ ಆಗಾಗ ನಾನು ನಮ್ಮ ಅಣ್ಣ ಶಾಮು ಹೋಗ್ತಾ ಇದ್ದೆವು. ಆಕೆ ಹೆಸರು ಜಾಕೀರಾಬಿ ಅಂತ. ಅಲ್ಲಿ ನಮಗೆ ಆಕೆ ಬಲವಂತ ಮಾಡಿ ತಿಂಡಿ ಕೊಡ್ತಾ ಇದ್ದಳು. ಹೀಗೇ ಒಮ್ಮೆ ಅಕ್ಕಿರೊಟ್ಟಿ, ತೆಂಗಿನ ಕಾಯಿ ಚಟ್ನಿ ಕೊಟ್ಟಳು. ತಿಂದು ಮನೆಗೆ ಬಂದೆವು. ನಮ್ಮ ಅಣ್ಣ ಅಮ್ಮನ ಬಳಿ ಪಿಸು ಮಾತಿನಲ್ಲಿ ಹೇಳಿದ ಅಮ್ಮಾ ಜಾಕಿರಾಬಿ ಮನೇಲಿ ಅಕ್ಕಿ ರೊಟ್ಟಿ,ತೆಂಗಿನ ಕಾಯಿ ಚಟ್ನಿ ಮಾಡ್ತಾರೆ...! ನಮ್ಮ ಮನೇಲಿ ಅಕ್ಕಿ ರೊಟ್ಟಿ ಅನ್ನೋದು ಒಂದು ಲಕ್ಷುರಿ ಆಗ. ಅಮ್ಮ ಪೆಚ್ಚಾದಳು. ಅದಾದ ಮೇಲೆ ವಾರಕ್ಕೆ ಒಮ್ಮೆ



ಆದರೂ ಅಕ್ಕಿ ರೊಟ್ಟಿ ಮಾಡಿ ಕೊಡೋಳು! ಜತೆಗೆ ತೆಂಗಿನ ಕಾಯಿ ಚಟ್ನಿ ಸಹ.

ಅದೂ ಹೇಗೆ ಅಂತೀರಿ. ಮನೇಲಿ ಒಂದು ದೊಡ್ಡ ಡಬರಿ ಇತ್ತು. ಅದು ಹುಳಿ, ಬಿಸಿಬೇಳೆ ಭಾತ್ ಮಾಡಬೇಕಾದರೆ ಅಟ್ಟದಿಂದ ಕೆಳಗೆ ಬರ್ತಿತ್ತು. ಈಗ ರೊಟ್ಟಿಗೂ ಸಹ ಅದೇ. ಎರಡು ಮೂರು ಸೇರು ಅಕ್ಕಿ ಹಿಟ್ಟು ಕಲಸೋದು. ಆಗ ಮನೇಲಿ ಸೇರು ಉಪಯೋಗಿಸುತ್ತಿದ್ದರು. ಈಗಲೂ ನಮ್ಮ ಮನೇಲಿ ಅಳೆಯೋದಕ್ಕೆ ಅಂತ ಒಂದು ಪಾವು ಇಟ್ಟು ಕೊಂಡಿದ್ದೀವಿ. ತೂಕ ಮಾಡಲು ತೂಕದ ಮೇಶಿನು, ತೂಕದ ಬಟ್ಟು ಇವೆಲ್ಲಾ ಇಲ್ಲ! ಅದಕ್ಕೆ ಅಂದರೆ ರೊಟ್ಟಿಗೆ ಎಲ್ಲಾ ಬೇಕಾದ್ದು ಅಂದರೆ ಜೀರಿಗೆ, ಈರುಳ್ಳಿ ಇಲ್ಲವೇ ಕೊಬ್ರಿ ತುರಿ ಹಸಿಮೆಣಸಿನ ಕಾಯಿ ಸೇರಿಸೋದು. ಚೆನ್ನಾಗಿ ಕಲಸಿ ಇಡೋದು, ನಂತರ ಡಬರಿಯಲ್ಲಿ ಅದನ್ನು ತಟ್ಟೋದು. ಅಷ್ಟೂ ಮಕ್ಕಳಿಗೆ ಒಂದು ಡಬರಿಯಲ್ಲಿ ತಟ್ಟಿದ ರೊಟ್ಟಿ ಮಸ್ತ್ ಆಗ್ತಾ ಇತ್ತು. ಅದಕ್ಕೆ ತಾಳಿ ಪಿಟ್ಟು ಅಂತ ಹೆಸರು. ವಯಸ್ಸಾಗುತ್ತಾ ಆಗುತ್ತಾ ಇಂತಹ ನೆನಪುಗಳು ಹೆಚ್ಚಂತೆ!

ಅಮ್ಮ ಕಾದಂಬರಿ ಓದುವುದರಲ್ಲಿ ಎತ್ತಿದ ಕೈ. ಇನ್ನೂರು ಪುಟದ ಕಾದಂಬರಿ ಒಂದೇ ದಿನದಲ್ಲಿ ಓದಿ ಮುಗಿಸಿ ಬಿಡ್ತಾ ಇದ್ದಳು. ಅವಳ ಪೆಟ್ ಕಾದಂಬರಿ ಕಾರರು ಅಂದರೆ ಅನಕೃ, ರಾಮಮೂರ್ತಿ. ಇವರಿಬ್ಬರ ಪುಸ್ತಕ ಅಂದರೆ ಸರಿ ರಾತ್ರಿ ಆದರೂ ಓದಬೇಕು. ಅಪ್ಪ ಊರಿಂದ ಬರಬೇಕಾದರೆ ಕೈಲಿ ಕೊರವಂಜಿ ಪತ್ರಿಕೆ ಇರುತ್ತಿತ್ತು. ಅದನ್ನ ಒಂದು ಒಂದೂವರೆ ಗಂಟೆ ಅಷ್ಟರಲ್ಲಿ ಅಮ್ಮ ಓದಿ ಮುಗಿಸೊಳು. ನಂತರ ಮುಂದಿನ ಸಂಚಿಕೆ ಬರುವವರೆಗೆ ಈ ಸಂಚಿಕೆಯ ವಿಷಯವೇ ಅವಳ ಮಾತಿನ ಪ್ರೈಮ್ ಸಂಗತಿ. ಅದರ ನಂತರ ಅನಕೃ, ರಾಮಮೂರ್ತಿ. ಅಪರೂಪಕ್ಕೆ ನರಸಿಂಹಯ್ಯ. ಮೊದಲು ತಾಯಿನಾಡು ಪತ್ರಿಕೆ ಮನೆಗೆ ಬರ್ತಿತ್ತು. ನಂತರ ಅದು ಪ್ರಜಾವಾಣಿಗೆ ಶಿಫ್ಟ್ ಆಯಿತು. ಅದು ಯಾವ ಮಾಯದಲ್ಲಿ ಯೊ ಅಮ್ಮ ಮನೆ ಕೆಲಸ ಮುಗಿಸಿಬಿಡ್ತಾ ಇದ್ದಳು, ಮತ್ತು ಓದಿಗೆ ಸಮಯ ಮಾಡಿಕೊಳ್ತಾ ಇದ್ದಳು!

ನಮಗೆ ಓದೋದು ಅಮ್ಮನಿಂದ ಬಂದ ಬಳುವಳಿ ಆದರೆ ಪುಸ್ತಕ ಕೊಳ್ಳೋದು ಅಪ್ಪನ ಜೀನ್ಸ್‌ಉ......

■

**ಗುಂಡು ಮುಖ.**

ಮಗುವಿಗೆ ನಾಮಕರಣ,, ತೊಟ್ಟಿಲು ಶಾಸ್ತ್ರ ವೆಂದು ಹೋಗಿದ್ದ ವಿಶಾಲಾಕ್ಷಿ, ಮಗ ದೀಪುವನ್ನು ಕುರಿತು ಹೇಳಿದರು  ನೋಡು ದೀಪು,  ತೊಟ್ಟಿಲು ಅಲಂಕಾರ ಎಷ್ಟು ಚೆನ್ನಾಗಿದೆ, ಮಗು ಕೂಡ ನೋಡು ಪುಟ್ಟ ಕೃಷ್ಣನಂತಿದೆ ಅಲ್ವಾ?? ಅಂದರು ವಿಶಾಲ..

ಪುಟ್ಟ ದೀಪು ಅಂದ, ಹೌದು, ನೋಡಮ್ಮ ಎಷ್ಟು ಚೆನ್ನಾಗಿ ಗುಂಡು ಮುಖ ಹಾಕಿಸಿಕೊಂಡಿದೆ..ಅಲ್ವಾ ಅಂದಿದ್ದು ಕೇಳಿ ಎಲ್ಲರೂ ಹೊಟ್ಟೆ ಬಿರಿಯುವಂತೆ ನಕ್ಕರು.. ಪಕ್ಕದಲ್ಲೇ ಇದ್ದ ತಾತ ಹೌದು ಮರಿ ಬಂಗಾರದ ಅಂಗಡೀಲಿ ಆರ್ಡರ್ ಕೊಟ್ಟು ಒಡವೆ ಮಾಡಿಸ್ತಾರಲ್ಲಾ ಹಾಗೇ, ಅದು ಆರ್ಡರ್ ಕೊಟ್ಟು ಗುಂಡು ಮುಖ ಹಾಕಿಸಿಕೊಂಡಿದೆ ಕಣಪ್ಪಾ ಅಂದದ್ದು ಕೇಳಿ ಮತ್ತೂ ನಗೆಪಟಾಕಿ ಜೋರಾಗಿ ಸಿಡಿಯಿತು..

**–ಸುಮನಾ.**



# ಸಾಮರಸ್ಯ

**ಟಿ.ಜಿ. ಪುಷ್ಪಲತ ಶಂಕರಭಟ್ಟ**

ಗಿರ್ರ್ರೋ......ಎಂದು ಒಂದೇ ಸಮನೆ ತಿರುಗುತ್ತಿರುವ ಫ್ಯಾನ್ ಅಡಿ ಅಂಗಾತವಾಗಿ ಮಲಗಿ ಕೊಂಡಿರುವ ಅಭಿ ತಿರುಗುವ ಕಾಲ ಚಕ್ರದಿಂದ ಇಂಚಿಂಚೇ ಹಿಂದೆ ಸರಿಯುತ್ತಿದ್ದಾನೆ. ಮೇಲೆ ಫಳ ಫಳ ಹೊಳೆಯುವ ಸಾಗುವಾನಿ ಅಡ್ಡೆಗಳು, ಎಂಟಂಕಣದ ಮನೆ

ತುಂಬಾ ಹರಡಿಕೊಂಡ ಮರದ ಚಿತ್ತಾರಗಳು.ಅದನ್ನು ಕೀಳಿಸಿ ಆರ್.ಸಿ.ಸಿ ಮನೆ ಮಾಡೋಣವೆಂದರೆ ಅಪ್ಪ ಒಪ್ಪುವುದಿಲ್ಲ.ಹಾಗಂತ ನಾವಿನ್ಯತೆಗೆ ಏನೂ ಕೊರತೆ ಇಲ್ಲ.ಮತ್ತೆ ಕಣ್ ಮುಚ್ಚಿದಾಗ ಅದೇ ನೆನಪು....

ಅಂದು ಹೀಗೆ ಅಂಗಾತವಾಗಿ ಮಲಗಿದ ಕ್ಷಣ ಇಂದಿಗೂ ಕಣ್ಣಂಚಲ್ಲೇ ಇದೆ. ಯೋಚಿಸುತ್ತಲೇ ಕಳೆದುಹೋದ.

ಹಣೆ ಮೇಲೆ ಬೆವರ ಹನಿಗಳು ಮುತ್ತಿನಂತೆ ಹರಡಿವೆ.ಮಗುವಂತೆ ಜೋಪಾನ ಮಾಡುತಿದ್ದ ಅವನ ಮೊಬೈಲ್ ಅಲ್ಲೇ ಎಲ್ಲೋ ಬಿದ್ದುಕೊಂಡಿದೆ. ಕ್ಷಣಕ್ಕೊಮ್ಮೆ ಅಳುವ ಸದ್ದು ಕಿವಿಯಲ್ಲಿ ಮೊಳಗುತ್ತಿದೆಯಾದರೂ ಅದನ್ನು ಎತ್ತಿ ಲಲ್ಲೇ ಗೆರೆದು ಸಂತೈಸುವರಿಲ್ಲ.

ಇದುವರೆಗೂ ಅರ್ಧ ನಿಮಿಷವನ್ನು ತಲುಪದ ಅದರ ಅಳು ಇಂದೇಕೋ ನಿಲ್ಲುತ್ತಲೇ ಇಲ್ಲ.

ಸಂದೇಶಗಳ ಸರಮಾಲೆ ಒಂದರ ಮೇಲೊಂದರಂತೆ, ಭುವಿಗೆ ಬೀಳುವ ಮಳೆ ಹನಿಗಿಂತಲೂ ಅಪರಿಮಿತ.

ತಿರುಗುವ ಫ್ಯಾನ್ ನಲ್ಲೆ ಕಾಲ ಚಕ್ರ ಕಾಣುತ್ತ ಕಳೆದು ಹೋದವ ದಾವೂದ್‌ನ ಅಭಿ...... ಎಂಬ ಸ್ವರಕ್ಕೆ ವಾಸ್ತವಕ್ಕೆ ಮರಳಿದ ಕ್ಷಣ.

ಅಲ್ಲೆಲ್ಲ ಹುಡುಕಿದೆ...ಶಾಸ್ತ್ರ ದ ಹೊತ್ತಿಗೆ ಎಂತದ ಇದು ಮಾಣಿ.....ಎಂಬ ಮಾತಿಗೆ ಕಣ್ಣುಗಳನ್ನು ಉಜ್ಜುತ್ತ ಎದ್ದವನನ್ನೇ ದಿಟ್ಟಿಸುತ್ತ "ಕಣ್ಣೇಕೇ ಇಷ್ಟು ಕೆಂಪಾಗಿದೆಯಾ"..... ಆರಾಮಾಗಿದ್ಯ ಎನ್ನುತ್ತ ಹಣೆ ಪರೀಕ್ಷಿಸಿದವನ ಮೇಲೆ,

ಅವನ ಹೆಗಲ ಮೇಲೆ ಪ್ರಪಂಚ ಕಂಡ ಅಭಿಗೆ ಮುದ್ದು ಉಕ್ಕಿತು.

ಎಂತ ಇಲ್ಲ ಮಾರಾಯ..... ನಿದ್ದೆ ಬಿಟ್ಟದ್ದಲಾ.. ಎನ್ನುತ್ತ ಹಣೆಗೆ ಡಿಕ್ಕಿ ಹೊಡೆದವ ಇನ್ನೂ 5 ವರ್ಷದ ತುಂಟನಾಗಿಯೇ ಕಂಡ ದಾವೂದ್ ಕಣ್ಣಿಗೆ.

ಅಭಿ ಸಿರಿಮನೆ ಮನೆತನದ ನಾಲ್ಕನೇ ತಲೆಮಾರು. ಗಣಪತಿ ಭಟ್ಟರ ಮುದ್ದಿನ ಮೊಮ್ಮಗ. ಸ್ನೇಹ ಪ್ರೀತಿಯಲ್ಲಿ ಮಾತ್ರವಲ್ಲದೇ ರೂಪ ಗುಣದಲ್ಲೂ ಅವರದ್ದೇ ಪಡಿಯಚ್ಚು ಎಂದು ಊರವರು ಮಾತ್ರವಲ್ಲ ಸ್ವತಃ ದಾವೂದ್‌ನೇ ಗಣಪತಿ ಭಟ್ಟರೊಂದಿಗೆ ಆಗಾಗ ಹೇಳುವುದಿದೆ.

"ನೀನೊಬ್ಬನೆಯ ನಿದ್ದೆ ಬಿಟ್ಟದ್ದ"....ಎನ್ನುತ್ತಾ ಎಳೆದು ಕೊಂಡೇ ಹೋಗುತ್ತಿದ್ದವನ್ನು ತಡೆದು 2 ಮಿನಿಟ್ ಬಂದೆ ಎಂದು ಬಾತ್ ರೂಮ್ ಹೊಕ್ಕ.

"ಸರಿ ತಟ್ಟನೆ ಬಾ...ಅಲ್ಲೇ ನಿದ್ದೆ ಮಾಡಿ ಬಿಟ್ಟೀಯ"...ಎನ್ನುತ್ತ ಹೋದ ದಾವೂದ್.



ಮುಖ ತೊಳೆಯಲೆಂದು ಹೋದವ ಸರಿರಾತ್ರಿಯಲ್ಲೂ ತಲೆಯಿಂದ ಪಾದದವರೆಗೂ ತಣ್ಣೀರಿಳಿಸಿ ಹೊರಬಂದ.

ಒಳಗಿರುವ ತಳಮಳದ (ನೋವಿನ) ಬೇಗುದಿಗೆ ತಣ್ಣೀರುಣಿಸಿ ತಂಪೆರೆವ ಪ್ರಯತ್ನ ಅವನದು.

ಅತ್ತ ಮೊಬೈಲ್‌ನ್ನೇ ತಬ್ಬಿ ಕುಳಿತಿರುವವಳು ನಂಬಿಕೆಯ ತುಣುಕುಗಳನ್ನು ಎಣಿಸುತ್ತ ಭೋರ್ಗರೆವ ಭಾವನೆ ಅದುಮುತ್ತಾಳೆ.

ಹೋಗಲಾರೆ ಎಂಬ ಬಂಧನದಲ್ಲಿ ಬಿಗಿದುಕೊಂಡಿದ್ದವ ದಾವೂದ್‌ನ ಮಾತುಗಳಿಗೆ ಕಟ್ಟುಬಿದ್ದಿದ್ದ. ದಾವೂದ್‌ನ ಮುದ್ದ ಮನಸ್ಸಿಗೆ ನೋವುಣಿಸುವ ಯೋಚನೆಯನ್ನೂ ಅವ ಮಾಡಲಾರ. ದಾವೂದ್‌ನ ವ್ಯಕ್ತಿತ್ವದಲ್ಲೇ ಪುನಃ ಕಳೆದು ಹೋಗುತ್ತಾನೆ.

ಹೌದು, ದಾವೂದ್ ಹೆಸರಿಗಷ್ಟೇ ಮುಸಲ್ಮಾನ ವಾಸ್ತವವಾಗಿ ಧರ್ಮ ಜಾತಿ ಎಲ್ಲವನ್ನು ಮೀರಿ ನಿಂತ ಮನುಷ್ಯ. ಈ ಊರಿನ ವಿಶೇಷವೋ.... ಅನ್ಯೋನ್ಯತೆಯೋ ತಿಳಿಯದು. ಎಲ್ಲೆಡೆ ಇರುವಂತೆ ಇಲ್ಲಿ ಮುಸಲ್ಮಾನರು ಓಣಿಯಾಗಲಿ, ಅಗ್ರಹಾರ ಬೀದಿಯಾಗಲಿ ಕಾಣಸಿಗುವುದಿಲ್ಲ. ಎಲ್ಲರಲ್ಲಿ ಎಲ್ಲರೂ ಬೆರೆತಿರುವಂತಿದೆ.

ಪುರಾತನ ಕಾಲದ ಮನೆಯಲ್ಲಿ ವಾಸವಿರುವ ದಾವೂದ್ ನಂಬಿಕಸ್ತ ವ್ಯಕ್ತಿ. ತಲೆಮಾರುಗಳಿಂದ ಬೆಳೆದ ಸಂಬಂಧ ಆದ್ದರಿಂದ ನಮಗೆ ಬಂಧುಗಳಿಗಿಂತ ಹೆಚ್ಚು.

ನಿತ್ಯವೂ ಒಮ್ಮೆ ಬಂದು ತಾತನೊಂದಿಗೆ ಎಲೆ–ಅಡಿಕೆ ಬಾಯ್ ಆಡಿಸುತ್ತಾ ಊರಿನ ಉಸಾಬರಿ ಗಳಿಗೆಲ್ಲಾ ಆಶ್ಚರ್ಯ ಸೂಚಕ ಚಿಹ್ನೆ ಬಳಸುವ ದಾವೂದ್ ಕಾರ್ಡ್ಸ್ ಆಟದಲ್ಲಿ ನಿಷ್ಣಾತ. ಎಲ್ಲರನ್ನು ಅಕ್ಕ ತಂಗಿ ಅಣ್ಣ ಎನ್ನುತ್ತಾ ಸಂಬಂಧ ಬೆಸೆಯುವ ಅವನನ್ನು ಮಾತನಾಡಿಸದವರೆ ಇರಲಿಲ್ಲ. ಹಬ್ಬದ ಎಲ್ಲಾ ವ್ಯಂಜನ ಸವಿದು ಹೊಗಳುವ ಅವ ಬರುವ ಸಮಯ ಸ್ವಲ್ಪ ಹಿಂದು ಮುಂದಾದರೂ ಹಬ್ಬ ಅಪೂರ್ಣವಾದಂತೆ ಇರುತ್ತಿತ್ತು.

ಇನ್ನು ರಂಜಾನ್ ಈದ್ ಮಿಲಾದ್‌ನಲ್ಲಿ ಸ್ವೀಟ್, ಬಟ್ಟೆ ಉಡುಗೊರೆಯಲ್ಲೇ ಜೋಳಿಗೆ ತುಂಬಿಡುತ್ತಿದ್ದ ದಾವೂದ್ ನಮ್ಮ ಮನೆಗೇ ಹಬ್ಬದ ಕಳೆಯನ್ನು ಎಳೆದು ತರುತ್ತಿದ್ದ. ಅತಿಥಿಗಳನ್ನು ಅಲ್ಲಾನೆಂದೇ ಕಾಣುವ ಅವನ ಪರಿ ಅದ್ಭುತವಾದದ್ದು. ಒಟ್ಟಾರೆ ಹಿಂದೂ ಮುಸ್ಲಿಂ ಎನ್ನದೆ ಸಂಭ್ರಮಿಸುವ ಅವಕಾಶ ನಮ್ಮದಾಗಿತ್ತು.

ಗಣೇಶ ಚತುರ್ಥಿ ಬಂತೆಂದರೆ ಚಂದಾವಸೂಲಿಯಿಂದ ನೀರಲ್ಲಿ ಲೀನವಾಗಿ ಸುವವರೆಗೂ ಮುಂದಿರುತ್ತಿದ್ದ ಅವನ ಉತ್ಸಾಹಕ್ಕೆ ಸಾಟಿ ಇರಲಿಲ್ಲ ಕಷ್ಟ ಎಂದರೆ ಕೈಲಿದ್ದಷ್ಟು ನೀಡುತ್ತಿದ್ದ ದಾವೂದ್ ನಿಜವಾದ ಭಕ್ತ, ಸಂತ. ಹೀಗಾಗಿ ನಮ್ಮ ಬಾಲ್ಯ ಅರ್ಧ ನಮ್ಮ ಮನೆಯಲ್ಲಿ ಕಳೆದರೆ ಇನ್ನರ್ಧ ಅವನ ಮನೆಯಲ್ಲಿ ಕಳೆದಿತ್ತು. ಅವನ ಇಬ್ಬರು ಮಕ್ಕಳಲ್ಲಿ ಮೊದಲನೆಯವ ಸಮೀರ್, ಇನ್ನು ಎರಡನೆಯವಳು ಸುಹಾನ. ಸಮೀರ್ ಅಜ್ಜಿ ಮನೆಯಲ್ಲೇ ಇರುತ್ತಿದ್ದರಿಂದ ಅವನ ಒಡನಾಟ ತೀರಾ ಕಡಿಮೆ. ಆದರೆ ಸುಹಾನ ನನ್ನದೇ ವಯಸ್ಸಿನವಳು. ಒಂದೇ ತರಗತಿ ಮಿಗಿಲಾಗಿ ಆಕೆ ಶ್ವೇತ ಸುಂದರಿ.



ಒಂದೇ ವಯಸ್ಸಿನವರಾಗಿದ್ದರಿಂದಲೂ ಹತ್ತಿರದ ಒಡನಾಟದಿಂದಲೂ ಸ್ನೇಹ ಎಡೆಬಿಡದೆ ಹರಿಯಿತು. ತುಂಟಾಟದಲ್ಲಿ ಓದಿನಲ್ಲಿ ಸದಾ ಸ್ಪರ್ಧೆ ಗಿಳಿಯುತ್ತಿದ್ದ ನಮ್ಮಿಬ್ಬರನ್ನು ಸಂಭಾಳಿಸುವುದೇ ಕಷ್ಟವಾಗಿ ಅವಳನ್ನೂ ಸ್ವಲ್ಪ ದಿನದ ಮಟ್ಟಿಗೆ ಅಜ್ಜಿಮನೆಗೆ ಓಡಿಸಿದ್ದರು ಆದರೆ ಅಲ್ಲಿ ಅವಳಿಗೆ ನನ್ನಂತಹ ಘಟಾನುಘಟಿ ಪ್ರತಿಸ್ಪರ್ಧಿ

ಇಲ್ಲವೆಂದೋ ಅಥವಾ ತಾನಿಲ್ಲದೆ ಊರೆ ಹಾಳಾಗಿ ಬಿಡುತ್ತದೆ ಎಂಬ ವಿಶ್ವಾಸದಲ್ಲೋ ದೊಡ್ಡ ರಂಪಾಟವನ್ನೇ ಮಾಡಿ ಪುನಹ ಮರಳಿದ್ದಳು ನಮ್ಮ ತುಂಟಾಟಗಳಿಗೆ ಮಿತಿಯೇ ಇರಲಿಲ್ಲ ಎಷ್ಟೋ ದಿನ ಶಾಲೆಗೆ ಹೋಗುವುದಾಗಿ ತೋಟದ ಮನೆಯಲ್ಲಿ ಆಡುತ್ತ ಕಳೆದದ್ದಿದೆ. ನಮ್ಮ ಮನೆಯಲ್ಲೂ ಹೆಣ್ಣು ಮಕ್ಕಳು ಇರದ ಕಾರಣ ಅವಳೆ ನನಗಿಂತ ಮುದ್ದಾಗಿದ್ದಳು. ಕಾಲ ಉರುಳಿದಂತೆ ನಮ್ಮ ಸ್ನೇಹದ ಚಿತ್ರಪಟಕ್ಕೆ ಪ್ರೀತಿಯ ಬಣ್ಣ ತುಂಬಿದವಳು ಅವಳೇ. ಸ್ನೇಹದ ಮಾಯೆಯೋ...ಪ್ರೀತಿಯ ಮಾಯೆಯೋ.... ಒಟ್ಟಾರೆ ನಾನು ಬಂಧಿತನಾಗಿ ಒಲವ ಓಕುಳಿಯಲ್ಲಿ ಮಿಂದದ್ದಾಯಿತು.

ನೆನೆಯುತ್ತಾ ಅರಿವಿಲ್ಲದೆ ಅಭಿ ಮುಖದಲ್ಲಿ ಮಂದಹಾಸದ ಮುಗುಳ್ನಗೆ ಮೂಡಿತು.

ಮುಂದೆ ನಾನು ಬೆಂಗಳೂರಿನಲ್ಲೇ ಎಂಬಿಬಿಎಸ್ ಮುಗಿಸಿ ಅಲ್ಲೇ ವೈದ್ಯನಾದೆ. ಅವಳು ಅವಳ ಆಸೆಯಂತೆ ಶಿಕ್ಷಕಿಯಾದಳು. ಮಾಯೆಯಲ್ಲೇ ಮುಳುಗಿದವರಿಗೆ ಮನೆಯಲ್ಲಿ ಪ್ರಸ್ತಾಪಿಸಿದ ಮದುವೆಯ ವಿಷಯ ಗಂಟಲಲ್ಲಿ ಸಿಕ್ಕ ಗಾಳದಂತಾಯಿತು.. ಪುರಾತನ ಕಾಲದಿಂದ ಬೆಸೆದುಕೊಂಡು ಬಂದಿದ್ದ ಸಾಮರಸ್ಯದ ಬಂಧ ಒಡೆವ ಪ್ರೇಮಿಯಾಗುವ ಬದಲು ಸ್ನೇಹಿತರಾಗಿಯೇ ಉಳಿದು ಬಿಡೋಣವೆಂದು ಸಾವಿರ ಬಾರಿ ತಿಳಿಸಿದ್ದೇನೆ. ವಾಸ್ತವದ ಬದುಕು ತೆರೆದಿಟ್ಟು ಗೋಗರೆದಿದ್ದೇನೆ. ದಾವೂದ್‌ನ ಮುಗ್ಧ ಮನ ಒಡೆದು ಕ್ರೌರ್ಯ ತುಂಬಲು ನನ್ನಿಂದ ಅಸಾಧ್ಯವೆಂದು ಕಣ್ಣೀರಿಟ್ಟಿದ್ದೇನೆ. ಅವಳ ಕಲ್ಪನೆ ಭೇದಿಸಿ ವಾಸ್ತವಕ್ಕೆ ಕೈಹಿಡಿದು ಕರೆತರಲು ಪ್ರಯತ್ನಿಸಿ ಸೋತಿದ್ದೇನೆ.

ಎಲ್ಲಕ್ಕೂ ಅವಳದ್ದೊಂದೇ ಉತ್ತರ "ನೀನಿಲ್ಲದೆ ಬದುಕಿಲ್ಲ, ನೀನು ಬೇಕು, ಬೇಕೇ ಬೇಕು".

ಪುನಹ...

ರಕ್ತ ಸಂಬಂಧಕ್ಕೂ ಮಿಗಿಲಾಗಿರುವ ಸಾಮರಸ್ಯ ಕದಡುವುದು ಬೇಡವೆಂದು ಕೈ ಜೋಡಿಸಿದ್ದೇನೆ. ಆದರೆ ಅದೆಲ್ಲದಕ್ಕೂ ಅವಳು ನಿರ್ಲಿಪ್ತೆ, ನಿಶ್ಚಲೆ ಅವಳದ್ದೊಂದೇ ದೃಢನಿರ್ಧಾರ.

ರಕ್ತಸಂಬಂಧಕ್ಕೂ ಮಿಗಿಲಾಗಿರುವ ಬಂಧ ಮದುವೆಯಿಂದ ಗಟ್ಟಿಗೊಳ್ಳುವುದಿಲ್ಲವೇಕೆ?. ಒಡೆದು ಹೋಗುವುದೇಕೆ? ರಕ್ತ ಸಂಬಂಧ ಮೀರಿದ ಬಂದ ಪ್ರೀತಿ ದಾಂಪತ್ಯದಿಂದ ಇನ್ನೂ ಬಿಗಿಯಾಗುವ ಬದಲು ಕದಡಿ ಹೋಗುವುದೇಕೆ? ಇದೆಲ್ಲವನ್ನೂ ಮೀರಿ ನಮ್ಮ ಬದುಕು ನಮ್ಮಿಷ್ಟದಂತೆ ಬದುಕಲು ಸಾಧ್ಯವಿಲ್ಲವೇಕೆ? ಅವಳದೆಲ್ಲಾ ತಾರ್ಕಿಕ ಪ್ರಶ್ನೆ.

ಆದರೆ ನಾವಿರುವುದು ವಾಸ್ತವದಲ್ಲಿ. ಒಂದೇ ತಟ್ಟೆಯಲ್ಲಿ ತಿನ್ನುತ್ತಾ ಪ್ರೀತಿ ಹಂಚಬಹುದು. ಆದರೆ ವೈವಾಹಿಕ ಸಂಬಂಧ ಎಂದೊಡನೆ ಮರೆತಿದ್ದ ಕಂದಕದ ಆಳ ತಿಳಿಯುವುದಿದೆ. ಅಗೋಚರವಾಗಿದ್ದ ಗೋಡೆ ದಿಗ್ಗನೆ ಆಕಾಶದೆತ್ತರ ಬೆಳೆದು ನಿಲ್ಲುವುದಿದೆ. ವಾಸ್ತವತೆ ತೆರೆದಿಡಲು ಮುನ್ನುಗ್ಗಿ ಅವಳ ತಾರ್ಕಿಕತೆ ಎದುರು ಕುಸಿಯುತ್ತೇನೆ ಕೊನೆಗೂ ನನ್ನ ಮೌನವೊಂದೇ ಉತ್ತರ.

ಮೌನದಷ್ಟು ಭೇದಿಸಲಾಗದ ಅಸ್ತ್ರ ಇನ್ನೊಂದೆಲ್ಲಿದೆ.



ಅರಿವಿಲ್ಲದೆ ಮುಖದ ಮೇಲೆ ವಿಷಾದದ ನಗು. ಪುಟ್ಟ ಕೈಗಳು ಮುಖವನ್ನು ಸವರುತ್ತಿರುವ ಅರಿವಾಗುತ್ತಿದೆಯಾದರೂ ನೆನನೆನಪಿನಾಳದಿಂದ ಹೊರಬರುವಲ್ಲಿ ಅವನು ವಿಫಲ.

ಮದುವೆಯ ದಿನ ಹತ್ತಿರ ಬಂದೆ ಬಿಟ್ಟಿತು. ದಿನ ಉರುಳುವುದು ಗೊತ್ತೇ ಆಗುವುದಿಲ್ಲ. ಅವಳು ಕಾಯುತ್ತಿದ್ದಾಳೆ. ಕನಸಿನ ರಾಜಕುಮಾರ ಈಗ ಬಂದಾನು ಆಗ ಬಂದಾನು. ಮಾಯಾ ಕುದುರೆಯ ಮೇಲೆ ನನ್ನ ಕರೆದು ಕೊಂಡು ಹೋದಾನು ಎಂದು. ಎರಡು ಮನೆಗಳ ನಡುವೆ ಕಲ್ಲು ಅರೆಯ ನಡುವೆ ಜುಳು ಜುಳುನೇ ಹರಿವ ಆ ಒರತೆ ಅವಳಿಗೆ ದೊಡ್ಡ ತೊರೆಯಂತೆ ಕಾಣುತ್ತಿದೆ. ಅದ ಜಿಗಿದು ಬರುವನೇ ನಲ್ಲ.ಅದರ ತಂಪಾದ ನೀರಿನಲ್ಲಿ ನಾನು ಚಿಕ್ಕವಳಿದ್ದಾಗ ಪುಟ್ಟ ದೋಣಿಯೊಂದನ್ನು ಮಾಡಿ ತೇಲಿ ಬಿಟ್ಟು ನನ್ನ ಅದರೊಳಗೆ ಕರೆದೊಯ್ಯುವೆನೆಂದು ಆಸೆ ಹುಟ್ಟಿಸಿದ ಹುಡುಗ ನೀನು. ಈಗೇಕೆ ಕರೆದೊಯ್ಯುತ್ತಿಲ್ಲ.......

ಆ ಸೂರ್ಯರಶ್ಮಿ ಭೂಮಿ ತಲುಪುವ ಮುನ್ನ ಕಲ್ಪನೆಯ ಮುಸುಕು ಸರಿದು ವಾಸ್ತವದ ಬೆಳಕು ಬೀಳುತ್ತದೆ. ಅರಿವಿಲ್ಲದೆ ಜಿನುಗಿದ ಕಣ್ಣೀರು ಒರೆಸಿಕೊಳ್ಳುತ್ತಾ ಎರಡೂ ಮನೆಗಳ ನಡುವೆ ತಣ್ಣಗೆ ಹರಿವ ಒರತೆ ದಾಟಿ ದಾವೂದ್ ಮನೆಯಂಗಳದತ್ತ ಹೊರಡುತ್ತಾನೆ. ಮುಖ ಸವರುತಿರುವ ಪುಟ್ಟ ಕೈಗಳು ಈಗ ಒದ್ದೆ.

ಹಳ್ಳ ದಾಟುತ್ತಿದ್ದವನಿಗೆ ಮತ್ತೆ ದೋಣಿಯ ನೆನಪಾಯ್ತು.....ಎಷ್ಟು ದೋಣಿಗಳನ್ನು ಮಾಡಿ ಕೊಟ್ಟಿದ್ದೆನೋ.. ಅದನ್ನು ನೋಡುತ್ತಲೇ ಜಿಗಿದು ಅವಳ ಮನೆಯ ಬಾಗಿಲಿಗೆ ಬಂದ.

ಅವಳು ಬಾಗಿಲತ್ತಲೇ ನೋಡುತ್ತಿದ್ದಾಳೆ...ಚಿರ ಪರಿಚಿತ ಸದ್ದು....ಬಂದ, ಅವನು ಬಂದ..

ಮೊಬೈಲ್ ಚೂರಾಗಿ ಕೆಳಗೆ ಬಿದ್ದಿದೆ.

"ಯಾಕೆ ಮೋನೆ, ಎಲ್ಲಿ ನಿನ್ನ ಲಕ್ಷ್ಯ?" ಅಮ್ಮನ ನವಿರಾದ ಗದರುವಿಕೆ.

ಮನೆಯಂಗಳಕ್ಕೆ ಕಾಲಿರಿಸುವ ಮುನ್ನ ಪುನಹ ನೆನಪಿನಂಗಳಕ್ಕೆ ಕಾಲಿರಿಸುತ್ತಾನೆ.

ಮೆಹಂದಿಯಲ್ಲಿ ಎಂಥವರನ್ನಾದರೂ ಮೀರಿಸಬಲ್ಲವನು ಅವನು. ತನ್ನಿಂದ ಅನಾಹುತವಾಗಬಾರದೆಂದು ಇಟ್ಟ ಹೆಜ್ಜೆ ಹಿಂತೆಗೆದ. ಅಷ್ಟರಲ್ಲಿ ಎದುರಾದ ದಾವುದ್ ಅವನನ್ನು ಎಳೆದುಕೊಂಡೇ ಹೋದ. ಶಾಸ್ತ್ರವೆಲ್ಲ ಎಲ್ಲರೆದುರು ಕ್ಯಾಮೆರಾ ಸೆರೆಯಲ್ಲೇ ನಡೆಯುತ್ತಿದ್ದರಿಂದ ವಿಪರೀತ ಕ್ರಿಯೆಗೆ ಅವಕಾಶವಿಲ್ಲ ಎಂಬ ಧೈರ್ಯದಲ್ಲಿ ನಡೆದ. ಸಮೀರ್ ಕೊಟ್ಟ ಮೆಹೆಂದಿ ಹಿಡಿದು ಬಳಿ ಬಂದವನ ಕಣ್ಣನ್ನೇ ದಿಟ್ಟಿಸುತ್ತಿದ್ದಳು ಸುಹಾನ.

ದೃಷ್ಟಿ ಎದುರಿಸಲಾರದೆ ತಲೆತಗ್ಗಿಸಿದವ ಪುನಹ ಮುಖ ನೋಡುವ ಸಾಹಸಕ್ಕೆ ಕೈಹಾಕಲಿಲ್ಲ. ಅವನ ಸ್ಥಿತಿ ಅವಳೂ ಅರಿಯದವಳೇನಲ್ಲ.

ಸಾವಿರ ಗದ್ದಲಗಳ ನಡುವೆ ಇಬ್ಬರ ಮನಸ್ಸು ಮಾತ್ರ ಮೌನಕ್ಕೆ ಶರಣಾಗಿತ್ತು. ಚಿತ್ತಾರ ಬಿಡಿಸಲು ಕೈ ಸ್ಪರ್ಶಿಸುತ್ತಿದ್ದಂತೆ ಸಾವಿರ ವೀಣೆ ತಂತಿ ಒಮ್ಮೆಲೆ ಮಿಡಿದಂತೆ ಇಬ್ಬರಲ್ಲೂ ಕಂಪನ. ವಿಧಿಯಿಲ್ಲದೆ ಸಹಿಸಲೇಬೇಕಾಯಿತು ಹುಡುಗ. ಕೈ ಕಾಲುಗಳನ್ನೆಲ್ಲಾ ಆವರಿಸುತ್ತಿತ್ತು ಒಲವಿನ ಬಣ್ಣ. ಇಬ್ಬರ ಮನದಲ್ಲೂ ಸಾವಿರ ಚಿಟ್ಟೆಗಳ ಹಾರಾಟದ ಆರ್ಭಟ. ಇನ್ನೊಮ್ಮೆ ಹುದುಗಿದ್ದ ನೋವಿನ ನರ್ತನ. ಚಿತ್ತಾರ ಬಿಡಿಸುವ ಕೈ ಅಂಗೈ ಮೇಲೆ ಓಡುತ್ತಿತ್ತು. ಆ ರೇಖೆಗಳು ಹೆದ್ದಾರಿಗಳಾಗಿ ನನ್ನ ಕರೆದೊಯ್ಯಬಾರದೆ ಹುಡುಗ. ಆ ತುದಿಗಳೆಲ್ಲ ನಿನ್ನ ಮನೆಯಂಗಳಕ್ಕೆ ತಲುಪಲಿ ಎಂದು ಹಂಬಲಿಸುತ್ತಾಳೆ. ಎರಡು ಹೃದಯಗಳು ಮೌನ.. ಹೊರಗೆ ಗದ್ದಲ.



"ಏನಾಯ್ತು, ಹೌದಾ. ಏನಂತೆ. ಅಯ್ಯೋ.." ಒಬ್ಬರಿಗೊಬ್ಬರು ಗುಸು ಗುಸು ಪಿಸು ಪಿಸು ಸದ್ದು ಹೋಗು ಹೋಗುತ್ತಲೇ ದೊಡ್ಡದಾಗುತ್ತಾ ಹೋಯಿತು. ಚಿತ್ತಾರ ಮುಗಿಯಲೇ ಇಲ್ಲ. "ಏನಾಯತ್ಯ" ಎಂದು ದಡಕ್ಕನೇ ಎದ್ದು ಜಗಲಿಗೆ ಬಂದ. ಗಲಾಟೆ ಅಂತೆ...ಬೆಂಕಿ...ದಾವೂದ್ ಕುಸಿದೇ ಹೋದ. ಕಟ್ಟೆಯ ಮೇಲೆ ಅಕ್ಷರಶಃ ಅಡ್ಡ ಮಲಗಿ ಬಿಟ್ಟ. ಏನಾಯ್ತು, ಏನಾಯ್ತು ಎಂದು ವಿಚಾರಿಸಿಕೊಳ್ಳುವುದರೊಳಗೆ ಮನೆಯಲ್ಲಿ ಸೂತಕದ ಛಾಯೆ.

ಮದುವೆಗೆ ಸಿದ್ದವಾಗುತಿದ್ದ ವರನ ಮನೆ ಕೋಮು ಗಲಭೆಯಲ್ಲಿ ಉರಿದು ಹೋಗಿ, ವರ ಬೆಂಕಿಯಲ್ಲಿ ಬೆಂದು ಹೋಗಿದ್ದ ಕಾರು ಸಮೇತ.

ಅದು ಅಲ್ಲಿಗೆ ನಿಲ್ಲದೆ ಈ ಊರಿಗೂ ಹಬ್ಬಿಕೊಳ್ಳತೊಡಗಿತು. ಈ ದುಃಖದ ನಡುವೆಯೂ ಮತ್ತೊಂದು ಆಘಾತ.

ಸಂಜೆ ಹೊತ್ತಿಗೆ ಇಡೀ ಊರೂ ಕರಿಮುಸುಕು ಹೊದ್ದಂತೆ ಕುಂತಿದ್ದು, ರಾತ್ರಿಯಾಗುವ ಹೊತ್ತಿಗೆ ಧಿಗ್ಗನೆದ್ದು ದಾವೂದ್‌ನ ಮನೆಗೆ ಬೆಂಕಿಯಾಗಿ ಅಮರಿಕೊಳ್ಳತೊಡಗಿತು.

ಗಣಪತಿ ಭಟ್ಟರ ಪರಿವಾರವೇ ಅಕ್ಷರಶಃ ಹೆಗಲಾದರು ದಾವೂದ್‌ಗೆ. ಭಟ್ಟರ ಮೂಲೆ ಮನೆಯೂ ಬೆಂಕಿಗೆ ತುತ್ತಾಯಿತು. ಅಷ್ಟರಲ್ಲಿ ಬಂದ ಪೊಲೀಸರಿಂದ ವಾತಾವರಣ ಸ್ವಲ್ಪ ತಿಳಿಯಾಯಿತು. ದಾವುದ್ ಪರಿವಾರ ಭಟ್ಟರ ಮನೆ ಸೇರಿತು. ಕಣ್ಮುಚ್ಚಿ ಕುಳಿತಿದ್ದ ದಾವೂದ್ ತಣ್ಣೀರ ಸ್ಪರ್ಶಕ್ಕೆ ಎಚ್ಚೆತ್ತವ ಕಣ್ಣೀರಿಟ್ಟಿದ್ದ. ಜೀವನ ಪೂರ್ತಿ ದುಡಿದಿದ್ದರ ಜೊತೆಗೆ 4 ಪಟ್ಟು ಸಾಲ ಹೇರಿಕೊಂಡು ಇದ್ದೊಬ್ಬ ಮಗಳ ಮದುವೆಗೆ ಸಿದ್ಧವಾದವ ಉಳಿದ ಬೂದಿ ನೋಡಿ ಹೇಗೆ ಸಹಿಸಿಯಾನು?

ಸುಹಾನ ಅರಿವಿಲ್ಲದಂತೆ ಅಭಿ ಎದೆಯಲ್ಲಿ ಮಗುವಂತೆ ಅವಿತಿದ್ದಳು. ಅವನ ಬಿಗಿಯಾದ ಅಪ್ಪುಗೆ ಭದ್ರತೆ ನೀಡಿತ್ತು.

ಜೀವನ ಪೂರ್ತಿ ಈ ಭದ್ರತೆ ಕೊಡುವೆಯಾ ಅಭಿ.....ಧೈರ್ಯವಾಗಿ ಕೇಳಿದ್ದಳು ಎಲ್ಲರೆದುರು.

ದಾವೂದ್‌ಗೆ ಸಾಂತ್ವನ ನೀಡುತ್ತಿದ್ದ ಭಟ್ಟರ ನೋಟ ಗಂಭೀರವಾಗಿತ್ತು. ದಾವೂದ್ ನಿಧಾನವಾಗಿ ಎದ್ದವ ಏನಿದೆಲ್ಲಾ ಮಗಳೇ ಎಂದ... ಸುಹಾನ ದಾವೂದ್ ತೆಕ್ಕೆಗೆ ಸೇರಿದವಳೇ ಅಭಿ ನನಗೆ ಬೇಕು....ಬೇಕೇ ಬೇಕು...ಎನ್ನುತ್ತಾ ಅಳುತ್ತಲೇ ಇದ್ದಳು.

ಗಂಭೀರವಾಗಿದ್ದ ತಾತನೆದುರು ಕುಳಿತ ಅಭಿ..

ತಾತ ಈವರೆಗೆ ನನ್ನಿಷ್ಟ ತಿಳಿಸುವ ಮೊದಲೇ ಕೊಟ್ಟಿದ್ದೆ....ಈಗ ನಾನೆ ಕೇಳ್ತಾ ಇದೀನಿ ಅವಳು ನನ್ನಿಷ್ಟ ಮಾತ್ರ ಅಲ್ಲ ನನ್ನ ಪ್ರಾಣ ...ಪ್ಲೀಸ್.... ಬಡ ಬಡಾಯಿಸುತ್ತಲೇ ಇದ್ದ.

"ಅಪಿಚೇದಸೀ ಪಾಪೇಭ್ಯಹಃ

ಸರ್ವೇಭ್ಯಃ ಪಾಪಕೃತ್ತಮಃ

ಸರ್ವಂ ಜ್ಞಾನಪ್ಲವೇನೈವಾ

ವೃಜಿನಂ ಸಂತರಿಷ್ಯಸಿ"

ಭಟ್ಟರು ಕೈಲಿದ್ದ ಭಗವದ್ಗೀತೆ ಪಕ್ಕಕ್ಕಿರಿಸಿದವರೇ ಹೊರ ನಡೆದರು.



ದಾವೂದ್ ಕಲ್ಲಂತೆ ನಿಂತಿದ್ದ. ಜರೀನ ಇನ್ನೊಂದು ಮೂಲೆಯಲ್ಲಿ. ಒಂದರ ಮೇಲೊಂದು ಆಘಾತ, ಅನಿರೀಕ್ಷಿತ.......

ಅವರು ಬೆಂಕಿ ಇಟ್ಟರು. ಇಲ್ಲಿ ಬೆಳಕು ಹಚ್ಚುತ್ತಿದ್ದಾರೆ.

ಒಳಬಂದ ಭಟ್ಟರ ಪಾದಕ್ಕೆ ಜರೀನಾ ಉದ್ದ ಬಿದ್ದು ಬಿಟ್ಟಳು.

ಜಗಲಿಯಲ್ಲಿ ಕುಳಿತಿದ್ದ ದಾವೂದ್ ಭಟ್ಟರನ್ನು ಅಪ್ಪಿಕೊಂಡ. ಅಲ್ಲಿ ಸಾವಿರ ವರ್ಷಗಳ ಅಪ್ಯಾಯಮಾನತೆ ಇತ್ತು.. ಭಟ್ಟರು "ಓಂ ಶಾಂತಿ ಓಂ ಶಾಂತಿ" ಎಂದರು.

ಜರೀನ ಅಭಿಯ ಕೆನ್ನೆ ತೋಯಿಸುತಿದ್ದ ಕಣ್ಣೀರ ಒರೆಸಿ ಮಗುವಂತೆ ಅಪ್ಪಿಕೊಂಡಳು. ಭಟ್ಟರು ಕಣ್ ತುಂಬಿಕೊಂಡು ನಿಂತಿದ್ದ ದಾವೂದ್‌ನನ್ನು, ಮನುಷ್ಯನಿಗಿಂತ ದೊಡ್ಡ ಧರ್ಮವಿದೆಯಾ ದಾವೂದ್, ನಮ್ಮ ಮಕ್ಕಳು ತಮ್ಮ ಸಂತೋಷವನ್ನ, ಕನಸನ್ನ ಸರಿಯಾಗಿ ಹುಡುಕಿಕೊಂಡಿರುವಾಗ ನಾವು ಅದನ್ನು ಒಡೆದರೆ ಭಗವಂತ ನಮ್ಮನ್ನು ಕ್ಷಮಿಸುತ್ತಾನಾ ಹೇಳಿ.. ಎಂದರು.

ಮದುವೆ ಸರಳವಾಗಿ ನಡೆಯಿತು. ತಕ್ಷಣ ಇಬ್ಬರನ್ನು ಬೆಂಗಳೂರಿಗೆ ಕಳುಹಿಸಿ ಬಿಟ್ಟರು.

ಸುಹಾನಾ ಹೇಳಿದಂತೆ ಮದುವೆ ರಕ್ತ ಸಂಬಂಧವನ್ನು ಮೀರಿದ ಬಂಧ, ಸಾಮರಸ್ಯ ಸಂತೋಷ ವನ್ನು ಇಮ್ಮಡಿಗೊಳಿಸುತ್ತದೆ. ದಿನಕಳೆದಂತೆ ಬಲವಾಗುತ್ತಲೇ ಹೋದ ಬಂಧ ಬದಲಾವಣೆಯ ಬೆಳಕನ್ನೇ ಸುರಿಸಿತು ಕೋಮುಗಲಭೆಯ ವಾಸನೆಯೂ ಊರ ಪ್ರವೇಶಿಸಲಾಗದಷ್ಟು ಪ್ರೀತಿಯ ಗಂಧ ಬಲವಾಯಿತು.

ಇದಾಗಿ ಇಂದಿಗೆ 5 ವರ್ಷ ಕಳೆದಿದೆ. ಈಗ ದಾವೂದ್‌ನೂ ಇಲ್ಲಾ ಗಣಪತಿ ಭಟ್ಟರು ಇಲ್ಲ.

ಆದರೇ ಪ್ರೀತಿ ಬೆಳೆಯುತ್ತಲೆ ಇದೆ.

ಮಗಳು ರೇಷ್ಮಾ ಈಗ 3 ವರ್ಷದ ಪುಟ್ಟ ಕೂಸು. ಮಲಗಿದ್ದಲಿಂದ ಅಭಿ ಎದ್ದು ಹೊರಗೆ ಬಂದು ಬಾಗಿಲ ಎದುರಿಗೆ ನಿಂತ. ಕೈ ಬಿಡಿಸಿಕೊಂಡ ರೇಷ್ಮಾ ದಾವೂದ್‌ನ ಮನೆ ಕಡೆ ಓಡಿದಳು. ಈಗ ಎರಡು ಮನೆಗಳ ನಡುವೆ ಹರಿಯುತ್ತಿದ್ದ ಒರತೆ ಇಲ್ಲ. ಹಾಗಂತ ಮುಚ್ಚಿಲ್ಲ. ಸುಂದರ ಕಾಲುವೆ ಮಾಡಿ ಅದಕ್ಕೊಂದು ಪುಟ್ಟ ಸೇತುವೆ ಮಾಡಿದ್ದಾನೆ ಸಮೀರ.

ಓಡಾಡುವ ಮಕ್ಕಳಿಗೆ ಅಡ್ಡಿಯಾಗಬಾರದಲ್ಲ ಅದಕ್ಕೆ.

ಈಗ ಕೆಸರೂ ಇಲ್ಲಾ, ಕಲ್ಲೂ ಇಲ್ಲ. ಹುಲ್ಲು ಹಾಸಿನ ಮೇಲೆ ಪುಟ ಪುಟನೇ ನಡೆದಾಡುವ ರೇಷ್ಮಾಳನ್ನು ನೋಡುತ್ತಾ ನಿಂತ ಅಭಿ.

■



ಮನೆ ಕಾಯಲು ಎಲ್ಲರೂ ನಾಯಿಯನ್ನೇ ಸಾಕುತ್ತಾರಲ್ಲ, ಏಕೆ?

ಹಾಗೇನಿಲ್ಲ. ಕೆಲವರು ಮನೆ ಅಳಿಯನನ್ನು ಸಾಕುತ್ತಾರೆ.

ಕನ್ನಡಿ ಹೆಣ್ಣು ಜಾತಿಗೆ ಸೇರಿದ್ದು ಎಂದು ಹೇಗೆ ಹೇಳುತ್ತೀರಿ ಗುರೂಜಿ?

ನಿಮ್ಮ ಎಲ್ಲಾ ದೋಷಗಳನ್ನೂ ಯಾವಾಗಲೂ ಎತ್ತಿ ತೋರುತ್ತದಲ್ಲ!

–ರಾಮ್‌ಬಾಣ

# ಮಾರ್ಗದರ್ಶನದ ಮಾದರಿ

ಸಂಜಯ ಹಾವನೂರ, ಅಮೆರಿಕ

"ನಮ್ಮ ಮನೀಗೆ ಬರೋದು ಅಗದಿ ಸರಳ. 80 ಅಡಿ ರಸ್ತೆದಾಗ ನೆಟ್ಟಗ ಬಂದರ ಒಂದು ನೀರಿನ ಟಾಂಕೀ ಕಾಣತದ ಅದನ್ನ ಬಲಕ್ಕ ಮಾಡಿಕೊಂಡು ಒಳಗ ಬಂದರ ಒಂದು ಆಟದ ಮೈದಾನ, ಆ ಮೈದಾನ ಎಡಕ್ಕ ಮಾಡಿಕೊಂಡು ತಿರುವಿ ಬಂದರ ಒಂದು ಕಿರಾಣಿ ಅಂಗಡಿ ಎದುರಿಗೇ ಅದನ್ನು ಮುಂದ ಮಾಡಿಕೊಂಡು ನಡದರ ಮಗ್ಗಲಕ ..." ನಾವು ಒಂದು ಕಾಲಕ್ಕೆ ಬೆಂಗಳೂರಿನ ಬಿಟಿಎಂ ಬಡಾವಣೆಯಲ್ಲಿದ್ದಾಗ ನಮ್ಮ ತಂದೆ ಕೊಡುತ್ತಿದ್ದ ಮಾರ್ಗದರ್ಶನದ ವೈಖರಿ ಇದು.

"ಇಷ್ಟೆಲ್ಲ ಸಾಹಸ ಮಾಡಿಕೊಂಡು ಅಕಸ್ಮಾತ್ತು ಮನೆ ಸಿಕ್ಕರೆ ಅದನ್ನು ಹಿಂದೆ ಮಾಡಿಕೊಂಡು ಬಂದ ದಾರಿಯಲ್ಲೇ ತಿರುಗಿ ಹೋದರೆ ನೆಟ್ಟಗೆ ನಿಮ್ಮ ಮನೆ ಸೇರಿಕೊಳ್ಳುತ್ತೀರಿ" ಅಂತ ನನ್ನ ಹೆಂಡತಿಯ ಒಗ್ಗರಣೆ. "ಇವರು ಕೊಡುವ ಮಾರ್ಗದರ್ಶನ ಪಾಲಿಸಿಕೊಂಡೂ ನಮ್ಮ ಮನೆಗೆ ಜನ ಬರುತ್ತಿದ್ದಾರಲ್ಲ. ಅದೇ ಒಂದು ಆಶ್ಚರ್ಯ"

ಅದನ್ನು ಕೇಳಿಕೊಂಡು ನಾನು ಸುಮ್ಮನಿರಲಾದೀತೆ? "ನಿನ್ನ ಅಪ್ಪ ಏನು ಮಹಾ ಕಂಡಿಲ್ಲವೇ? ನಂದಳಿಕೆ ಲಕ್ಷ್ಮೀನಾರಣಪ್ಪನ ಯುಗದಲ್ಲೇ ಇನ್ನೂ ಇದ್ದಾರಲ್ಲ. ನೆಲಮಂಗಲದ ತುದಿಯಲ್ಲಿ, ಹೆಸರಿಲ್ಲದ ಬಡಾವಣೆಯ ದಿಕ್ಕಿಲ್ಲದ ಮೂಲೆಯಲ್ಲಿ ಮನೆ ಕಟ್ಟಿಕೊಂಡು, ನೀವು ನೆಲಮಂಗಲ ನಿಲ್ದಾಣದಲ್ಲಿ ಇಳಿದು ನೈಋತ್ಯ ದಿಕ್ಕಿನಲೆ ನಾಲ್ಕು ಗಾವುದ ನಡಕೊಂಡು ಬಪ್ಪದು ಎಂತ ತಿಳಿಗನ್ನಡದೊಳ್‌ಪೇಳ್ವರಲ್ತೆ. ಬೆಳಿಗ್ಗೆ ಆರಕ್ಕೆ ಎಬ್ಬಿಸಿ ಪೂರ್ವ ಎಲ್ಲಿದೆ ಎಂದು ಕೇಳಿದರೆ ಕಕ್ಕಾಬಿಕ್ಕಿಯಾಗಿ ಕಣ್ಣಣ್ಣು ಬಿಡುವ ನಿನ್ನ ಕಜಿನ್ನುಗಳು ನೆಲಮಂಗಲದಲ್ಲಿ ನೈಋತ್ಯವನ್ನು ಹುಡುಕಿದ್ದುಂಟೇ?" ಮೈಲಿಗೆ ಎಷ್ಟು ಮಣ ಎಂದು ಕೇಳಿದರೆ ಗಡಿಬಿಡಿಸಿ ಫೋನನ್ನೊತ್ತಿ "ನೀನು ಹೇಳೇ ಹೇ ಸಿರಿ" ಎಂದೊರಲುವ ಗಾವಿಲರು ಗಾವುದದ ಲೆಕ್ಕವನ್ನೆಂತು ಬಲ್ಲರು?

ಕರಾರುವಾಕ್ಕಾಗಿ ತಲೆಕೆಡಿಸುವಂತೆ ಮಾರ್ಗದರ್ಶನ ಮಾಡುವುದು ಹಿರಿಯ ಮಹನೀಯರ ಮಾದರಿಯಾದರೆ ಮಹಿಳೆಯರದು ಇನ್ನೊಂದು ಪರಿ. ಹಬ್ಬ ಹರಿದಿನಗಳು ಬಂದರೆ ನಮ್ಮ ತಾಯಿಗೆ ಸಾಯಂಕಾಲ ಮಠಕ್ಕೆ ಹೋಗುವ ಸಂಭ್ರಮ. ತಲೆ ತುಂಬ ಹೂವು ಮುಡಿದು, ಮುಖಕ್ಕೆ ಢಾಳಾಗಿ ಅರಿಶಿನ ಕುಂಕುಮ ಬಳಿದು, ಚೀಲದಲ್ಲಿ ಹಣ್ಣು ಕಾಯಿ ಜಡಿದು ತಯಾರು. ಮುಂದಿನ ಕಾರ್ಯಕ್ರಮ ಆಟೋದವನಿಗೆ ಆಣತಿ "ರಾಯರ ಮಠಕ್ಕ ಹೋಗಪ್ಪಾ. ಧೊಡ್ಡ ದಿನಾ ಇವತ್ತ"

"ಯಾವ ರಾಯರ ಮಠ ಅಮ್ಮಾ?"

"ಗೊತ್ತಿಲ್ಲೇನೋ ಮಂತ್ರಾಲಯ ರಾಯರು ಪರಿಮಳ ವೃಂದಾವನಾ. ಮಹಾ ಜಾಗೃತ ಸ್ಥಾನ. ಹಣಮಂತ ದೇವರ ಗುಡಿ ಹಿಂದ ಹಾಸ್ಪಿಟಲ್ಲು ಬರತದಲ್ಲ ಅಲ್ಲೇ ಮುಂದ ಹೋಗಬೇಕು. ಯಾವತ್ತೂ ಹೋಗಿಲ್ಲೇನು?" ಎಂದು ಫಟ್ಟಿಸಿ ಕೂಡುತ್ತಿದ್ದರು. ಸೀಟಿನ ಹಿಂದೆ "ಗಫೂರ ಅಹಮದ್‌ಬಡೇ ಮಿಯಾ, ಮಸ್ಜಿದ್‌ಗಲ್ಲಿ, ಸಾಕೀನ ಸುಲ್ತಾನ್‌ಪಾಳ್ಯ" ಎಂದು ರಬ್ಬಾಗಿ ಬರೆದಿರುವ ಬೋರ್ಡು ಕತ್ತಲೆಯಲ್ಲಿ ಕಾಣಲಿಲ್ಲ ಎಂದುಕೊಂಡರೂ, ಅವನ ಮುಷ್ಠಿಯಗಲದ ದಾಡಿ, ತಲೆಯ ಮೇಲೆ ಕವಚಿದ ಬಿಳಿಯ ಟೊಪ್ಪಿ, ಮೇಲೆ ಸಾಲಾಗಿ ಹಾಕಿದ ಮಕ್ಕಾ ಮದೀನಾದ ಚಿತ್ರಗಳು, ಉದ್ದಕ್ಕೆ



ಬರೆದ ಅರೇಬಿಕ್ ಸಂದೇಶಗಳನ್ನು ಗಮನಿಸುವ ಗೋಜಿಗೆ ಎಂದೂ ಹೋದವರಲ್ಲ. ಪರಿಮಳದ ಗಂಧವೂ ತಟ್ಟಿರದ ಬಡಪಾಯಿ, ಆರು ತಿಂಗಳ ಹಿಂದೆ ಇವಳಂಥವಳೇ ಯಾರನ್ನೋ, ಇಂದಿರಾನಗರದಲ್ಲಿ ಪಿರಾಮಲ್‌ಶೇಠು ಕಟ್ಟಿಸಿದ್ದ ರಾಜಮಾತಾ ಬಿಂದ್ರಾಬನ್ ಜಾಗರನ್ ಮಂದಿರಕ್ಕೆ ಕರೆದುಕೊಂಡು ಹೋಗಿದ್ದನ್ನು ನೆನಪು ಮಾಡಿಕೊಂಡು ಗಾಡಿ ಬಿಡುತ್ತಿದ್ದ. ಸುಮಾರು ಅರ್ಧ ತಾಸಿನ ನಂತರ, ಜಯಪ್ರಕಾಶ ನಗರದ ಕೊನೆಯ ಬಡಾವಣೆಯಲ್ಲಿರುವ ಮಠಕ್ಕೆ ವಿರುದ್ಧ ದಿಕ್ಕಿನಲ್ಲಿರುವ ಮಹಾತ್ಮಾ ಗಾಂಧಿ ರಸ್ತೆಯಲ್ಲಿದ್ದೇವೆ ಎಂದು ಅವಳಿಗೆ ಜ್ಞಾನೋದಯವಾಗಿ "ಇಲ್ಲೆಲ್ಲಿ ಹೊಂಟೀಯೋ? ಪರಿಮಳ ವೃಂದಾವನಾ ಹಣಮಂತ ದೇವರ ಗುಡಿ ಹಿಂದ ಅಂತ ಕ್ಲಿಯರ್‌ಆಗಿ ಹೇಳಿದ್ನೆಲ್ಲೋ. ಧಾರಿ ಗೊತ್ತಿಲ್ಲಾ ಅಂದರ ಕೇಳಬೇಕು ಅಂತ ತಿಳಿಯಂಗಿಲ್ಲೇನು" ಎಂದು ದಬಾಯಿಸುವರು. ಅಂತೂ ಅವರಿವರನ್ನು ಕೇಳಿ ಮಠ ಮುಟ್ಟುವ ತನಕ ಮಂಗಳಾರತಿ ಮುಗಿದಿರುತ್ತಿತ್ತು. ಮನೆಗೆ ಬಂದ ಮೇಲೆ ಆಟೋ ಚಾಲಕನಿಗೆ ಅನುಪಸ್ಥಿತಿಯಲ್ಲೇ ಹೆಣ ಎತ್ತಿ, ಹತ್ತು ಸಲ ಮಂಗಳಾರತಿ ಮಾಡುತ್ತಿದ್ದರು.

"ಬೆಂಗಳೂರಿನಲ್ಲಿ ಹಾದಿಗೊಂದು ಹಣಮಂತ ದೇವರ ಗುಡಿ, ಹಾಸ್ಪಿಟಲ್ಲು ಇರತಾವ. ವಿಳಾಸ ಹೇಳುವಾಗ ಯಾವಾಗಲೂ ಮೇಲಿನಿಂದ ಆರಂಭಿಸಬೇಕು. ಮೊದಲು ಉಪನಗರ, ಆಮೇಲೆ ಬಡಾವಣೆ, ರಸ್ತೆಯ ಸಂಖ್ಯೆ ಹೇಳಿ ಅಲ್ಲಿ ಮುಟ್ಟಿದ ನಂತರ ಯಾರಾದರನ್ನೂ ಕೇಳಿದರ ಸರಿಯಾಗಿ ಹೇಳುತ್ತಾರೆ" ಎಂದು ನಾನು ವ್ಯವಸ್ಥಿತವಾಗಿ ವಿವರಿಸಲು ಹೋಗುತ್ತಿದ್ದಂತೆ "ಅಷ್ಟು ತಿಳವಳಿಕಿ ಇದ್ದಾಂವ ಮುಂದಿನ ಸಲ ನೀನ ಸ್ಕೂಟರ ಮ್ಯಾಲೆ ಕರಕೊಂಡು ಹೋಗಬೇಕು" ಎಂದು ನನ್ನ ಮೇಲೆಯೂ ಹರಿಹಾಯುತ್ತಿದ್ದರು. ಹಬ್ಬದ ದಿನ ಮಧ್ಯಾಹ್ನ ಗಡದ್ದಾಗಿ ನಿದ್ದೆ ಮಾಡಿ ಎದ್ದವನು, ಬೆಳಗ್ಗಿನ ಅಳಿದುಳಿದ ಅಂಬೋಡಿಗಳ ಜೊತೆಗೆ ಕಾಫಿ ಕುಡಿಯುತ್ತ ಟೀವಿ ನೋಡುವ ಬದಲಿಗೆ ಇವಳ ಭಕ್ತಾದಿಗಳ ದೊಂಬಿಯಲ್ಲಿ ಸಿಕ್ಕಿ ಹಾಕಿಕೊಳ್ಳುತ್ತೇನೆಯೆ?

ಇದೆಲ್ಲ ಹಳೆಯ ವಿಷಯವಾಯಿತು. ಈಗ ಎಲ್ಲರ ಕೈಯ್ಯಲ್ಲೂ ಸ್ಮಾರ್ಟಫೋನುಗಳಿವೆ. ವಿಳಾಸ ಬರೆದು "ಹೋಗು" ಎಂದರಾಯಿತು ಕರೆಕ್ಟಾಗಿ ಇಲ್ಲಿ ತಿರುಗಿ, ಅಲ್ಲಿ ಹೊರಳಿ ಹೋಗಬೇಕು ಎಂದು ವೈಯ್ಯಾರವಾಗಿ ಹೇಳುತ್ತದೆ. ದಾರಿ ಹುಡುಕುವುದು ಸಮಸ್ಯೆಯೇ ಅಲ್ಲ ಎಂದು ನೀವು ತಿಳಿದಿದ್ದರೆ – ಅದು ಶುದ್ಧಾಂಗ ತಪ್ಪು. ಸುಮಾರು 25 ವರ್ಷಗಳ ಹಿಂದೆ ನಾನೂ ವಿಜಯನಗರದ ಹೆಸರಿಲ್ಲದ ಹೊಸ ಬಡಾವಣೆಯಲ್ಲಿ ಮನೆ ಮಾಡಿದ್ದೆ. ನನ್ನ ಖಾಸಾ ದೋಸ್ತನೊಬ್ಬ ಆಗಾಗ ಪಟ್ಟಾಂಗದ ಪ್ರಗಲ್ಭಗಳಿಗೆ ಬರುತ್ತಿದ್ದ. ಮೊದಲ ಬಾರಿಗೆ ಬರುವ ಮೊದಲು ಅವನಿಗೆ, ಕಾರ್ಡ್‌ರಸ್ತೆಯಲ್ಲಿ ಇಂಥ ಕಡೆ ತಿರುಗಿ ಮೇಲಕ್ಕೆ ಬಂದು ಬಲಕ್ಕೆ ... ಎಂದು ಮೂರು ವಾಕ್ಯದಲ್ಲಿ ದಿಕ್ಕು ವಿವರಿಸಿದ್ದು ಸಾಕಾಗಿತ್ತು. ಆಮೇಲೆ ಎಷ್ಟೋ ಸಲ ತನ್ನ ಹಳೇ ಸ್ಕೂಟರಿನಲ್ಲಿ ಬಿಟ್ಟ ಬಾಣದಂತೆ ನೆಟ್ಟಗೆ ಮನೆಗೆ ಬರುತ್ತಿದ್ದ. ಕಳೆದ ವರ್ಷ ನಾನು ಬೆಂಗಳೂರಿಗೆ ಬಂದಿದ್ದಾಗ ಫೋನು ಮಾಡಿ, ಸಾಯಂಕಾಲ ನಿನ್ನ ಮನೆಗೆ ಬರಬೇಕು, ಜೊತೆಗೆ ನಮ್ಮ ತಾಯಿಯನ್ನೂ ಕರೆದುಕೊಂಡು ಬರುತ್ತೇನೆ. ನಿಮ್ಮನ್ನೆಲ್ಲ ನೋಡಿ ಬಹಳ ವರ್ಷಗಳಾಗಿವೆ ಎಂದು ಹಟ ಹಿಡಿದಿದ್ದಾರೆ ಎಂದ.



"ಅವಶ್ಯ ಬಾರಪಾ ಮಹರಾಯಾ. ಅಮ್ಮ ಬರುವುದೂ ಬಹಳ ಸಂತೋಷ. ಮನೆಯಲ್ಲಿ ಎಲ್ಲರೂ ಕಾಯುತ್ತೇವೆ. ಬರುವ ದಾರಿ ನೆನಪದನೋ ಇನ್ನೊಮ್ಮೆ ಹೇಳಬೇಕೋ?" ನಮ್ಮ ಬಡಾವಣೆಗೆ ಹೆಸರು, ಮನೆಗೆ ನಂಬರು ಎಲ್ಲ ಬಂದಿದ್ದವು.

"ಹೇ ಅದೆಲ್ಲ ಬ್ಯಾಡ. ನನ್ನ ಹತ್ತಿರ ಇಂಪೋರ್ಟೆಡ್‌ಕಾರು ಅದ, ಜಿಪಿಯಸ್ಸೂ

ಹಾಕಿಸಿಕೊಂಡೇನಿ. ಹಂಗ ಫೋನಿನಾಗ ಮ್ಯಾಪಂತೂ ಅದ, ಸ್ಪಷ್ಟ ತೋರಸತದ. ಬ್ಯಾರೆ ಯಾವ ಗೈಡನ್ನೂ ಬೇಕಾಗೂದುಲ್ಲ ಎಲ್ಲಾ ಅಗದೀ ಸರಳ ಈಗ" ಢಕಲೋ ಮಾಡೆಲ್ ಸ್ಕೂಟರಿನಿಂದ ಫಾರಿನ್‌ಕಾರಿಗೆ ಅವನಿಗೆ ಬಡ್ತಿ ಸಿಕ್ಕದ್ದು ಕೇಳಿ ಇನ್ನಷ್ಟು ಆನಂದವಾಯಿತು. ಆದರೂ ಸರಿಯಾದ ವಿಳಾಸ ಕೊಟ್ಟು, ಅವರ ಆಗಮನಕ್ಕಾಗಿ ಕಾಯುತ್ತ ಕುಳಿತೆವು. ಸಾಯಂಕಾಲ ಮುಗಿದು ಕತ್ತಲೆ ಕವಿದಂತೆ ಅವನ ಸಂದೇಶಗಳು ಶುರುವಾದವು. "ಇಲ್ಲೇ ನೀ ಹೇಳಿದ ಅಡ್ರೆಸ್ಸಿಗೇ ಬಂದೇನಿ. ಮ್ಯಾಪ ಪ್ರಕಾರ ಎದುರಿಗೇ ಇರಬೇಕು. ಆದರೆ ಮನೆ ಯಾಕ ಕಾಣವಲ್ಲತು?" ಇವನ ಇಂಪೋರ್ಟೆಡ್‌ಕಾರು ಹೇಳುವ ಜಾಗದಲ್ಲಿ ನಾನು ಮನೆ ಯಾಕೆ ಕಟ್ಟಲಿಲ್ಲ ಎಂದು ಸಮಜಾಯಿಷಿ ಕೊಡಬೇಕೇ? ಮುಂದೆ ಎರಡು ತಾಸು ವಿಜಯನಗರ ಮೂರನೇ ಹಂತವೆಂಬ ಚಕ್ರವ್ಯೂಹದ ಸಂದಿಗಳಲ್ಲಿ ಕಾರು ನಡೆಸಿದ್ದೇ ಬಂತು. ಕಂಡ ರಸ್ತೆಗಳ ನಡುನಡುವೆ ಕಾರು ನಿಲ್ಲಿಸಿ "ಹಾ ಇಲ್ಲೆ ದುರ್ಗಾ ಪರಮೇಶ್ವರಿ ಗುಡಿ ಅದ... ಈಗ ಶ್ರೀ ಸತ್ಯಸಾಯಿ ಲಿಕ್ಕರ್‌ಶಾಪ ಹತ್ತಿರ ಬಂದೇನಿ... ಲಾರ್ಡ ಮೆಕಾಲೆ ಪ್ರಿ ಎಲ್‌ಕೆಜಿ ಕಾನ್ವೆಂಟ ಸ್ಕೂಲ ಅಂತ ಬೋರ್ಡು ಕಾಣತದ... ಶ್ರೀ ರಾಘವೇಂದ್ರ ಮಟನ್‌ಬಿರಿಯಾನಿ ಸ್ಟಾಲ್‌ಎದುರಿಗೇ ಇದ್ದೀನಿ... ಡಾಕ್ಟರ್‌ಮಂಜುನಾಥ ಅವರ ಕ್ಲಿನಿಕ್ಕು ಕೆಳಗ ಪ್ರಸೂತಿ ತಜ್ಞರು ಅಂತ ದೊಡ್ಡದಾಗಿ ಬರಕೊಂಡಾರ..." ಎಂದು ತನ್ನ ಅಕ್ಷಾಂಶ ರೇಖಾಂಶಗಳನ್ನು ವರ್ಣಿಸುತ್ತಿದ್ದ. ಇವುಗಳಲ್ಲಿ ಒಂದಾದರೂ ಇಲ್ಲದ ರಸ್ತೆ ಬೆಂಗಳೂರಿನಲ್ಲಿ ನಿಮಗೆ ಹುಡುಕಿದರೂ ಸಿಗಲಿಕ್ಕಿಲ್ಲ. ಹಾಗೆಂದು ಇವುಗಳಲ್ಲಿ ಒಂದನ್ನೂ ವಿಜಯನಗರದ ತೃತೀಯ ಸಾಮ್ರಾಜ್ಯದಲ್ಲಿ ಕಂಡ ನೆನಪು ನನಗಿಲ್ಲ. ಯಾಕೆಂದರೆ ಈ ವ್ಯಾಪಾರಿ ಕೇಂದ್ರಗಳಲ್ಲಿ ನಡೆಯುವ ಯಾವ ಧಂದೆಯಲ್ಲೂ ನನಗೆ ಸರ್ವಥಾ ಆಸಕ್ತಿಯಿಲ್ಲ! ಕೊನೆಗೆ ತನ್ನ ವಯಸ್ಸಾದ ತಾಯಿಯನ್ನು ವ್ಯರ್ಥವಾಗಿ ಊರು ಸುತ್ತಿಸಿ ದಣಿಸಿ ಮನೆಗೆ ಹೋದ. ಇವನಷ್ಟು ಕಷ್ಟ ಪಟ್ಟು ಹುಡುಕಿದ್ದರೆ ಕೋಲಂಬಸನಿಗೆ ಭಾರತ ದೇಶ ಯಾವಾಗಲೋ ಸಿಕ್ಕಿರುತ್ತಿತ್ತು. ಮರುದಿನ ನಾವೇ ಅವರ ಮನೆಗೆ ಹೋಗಿ ಭೆಟ್ಟಿಯಾಗಿ ಬಂದೆವು.

ಹಾಗೆಂದು ಮ್ಯಾಪು ನೋಡಿ ದಿಕ್ಕು ತಪ್ಪಿ ಅಲೆಯುವುದರಲ್ಲಿ ನಾನು ನನ್ನ ಯಾವ ಸ್ನೇಹಿತರಿಗೂ ಕಡಿಮೆಯವನಲ್ಲ. ಬೆಂಗಳೂರಿಗೆ ಬಂದಾಗಲೆಲ್ಲ ಮಾಜೀ ಪತ್ರಕರ್ತ, ಹಾಲೀ ಲೇಖಕರೊಬ್ಬರನ್ನು ಭೆಟ್ಟಿಯಾಗಲು ತಪ್ಪದೇ ಹೋಗುತ್ತೇನೆ. ಏರುತ್ತಿರುವ ತಾಪಮಾನ. ಹದಗೆಡುತ್ತಿರುವ ಹವಾಮಾನ, ಹರಡುತ್ತಿರುವ ಅಜ್ಞಾನ ಮುಂತಾದ ಜಾಗತಿಕ ಉಸಾಬರಿಗಳಲ್ಲಿ ನಮಗಿಬ್ಬರಿಗೂ ಸಮಾನವಾದ ಆಸಕ್ತಿ. ಜ್ಞಾನಭಾರತಿಯ ಆಚೆಗೆ ಬೆಳೆದಿರುವ, ಹೆಸರಿದ್ದರೂ ಗುರುತಿಲ್ಲದ ಬಡಾವಣೆಯ ಮೂಲೆಯಲ್ಲಿ ಅವರ ವಾಸ. ಕೈಫೋನುಗಳಿಗಿಂತ ಹೆಚ್ಚು ಅಧ್ವಾನ ... ಅಲ್ಲಲ್ಲ, ಅಡ್ವಾನ್ಸ ಆಗಿರುತ್ತವೆಂಬ ಭ್ರಾಂತಿಯಲ್ಲಿ ನಾನು ಪ್ರತಿ ಸಲ ಮೊದಲಿಗೆ ದೊಡ್ಡ ಗಣಕದಲ್ಲಿ ಅವರ ವಿಳಾಸ ನೋಡಿಕೊಳ್ಳುತ್ತೇನೆ. ಗೂಗಲ್‌ಸರ್ವಜ್ಞನ ಬೆಂಗಳೂರಿನ ಭೂಪಟಗಳನ್ನು ವೀಕ್ಷಿಸುವುದೂ ಒಂದು ವಿಲಕ್ಷಣ ಅನುಭವ. ಯಾವುದೋ ಜಾಗದ ವಿವರಗಳನ್ನು ಬರೆದು, ಎಲ್ಲಿದೆ ಎಂದು ಕೇಳುವ ಪುರುಸೊತ್ತಿಲ್ಲದೇ ಠಪ್ಪೆಂದು "ಇದೋ ನಿಮ್ಮ ಠಿಕಾಣಿ" ಎಂದು ಕೆಂಪು ಧ್ವಜವನ್ನು ನಟ್ಟು ತೋರಿಸುತ್ತದೆ. ಜಾಗದ ಹಿಂದು ಮುಂದುಗಳನ್ನು ನೋಡಲು ಝೂಮ ಇನ್‌ಅಥವಾ ಔಟು ಮಾಡಿದರೆ ಒಂದು ಅದ್ಭುತ ಗೋಚರಿಸುತ್ತದೆ. ಇದ್ದಕ್ಕಿದ್ದಂತೆ ನಕ್ಷೆ ಬದಲಾಗಿ, ಮೊದಲ ಪರದೆಯ ಮೇಲಿದ್ದ ಅಂಗಡಿ ರಸ್ತೆಗಳು ಮಾತ್ರವಲ್ಲ ಬಡಾವಣೆಗಳೂ ಮಾಯವಾಗಿ ಬೇರೆಯದೇ ಬೆಂಗಳೂರಿನ ದರ್ಶನವಾಗುತ್ತದೆ! ಎಲಾ ಇವನ ಎಂದು ಕಕ್ಕಾಬಿಕ್ಕಿಯಾಗಿ ನೀವು ಮತ್ತೆ



ಹಿಂದಿನ ಪುಟಕ್ಕೆ ಹೋದರೆ... ಅಲ್ಲಿ ಮೂರನೆಯ ನಕಾಶೆ ಕಾದಿರುತ್ತದೆ. ಕೆಂಪೇಗೌಡರ ಬೆಂಗಳೂರು ದಿನದಿನಕ್ಕೆ ಬದಲಾಗುತ್ತಿದೆ ಎನ್ನುವುದು ಉತ್ಪ್ರೇಕ್ಷೆಯಾಗಿರಬಹುದು. ಆದರೆ ಗೂಗಲಗೌಡ್ರು ತೋರಿಸುವ ಬೆಂಗಳೂರು ಕ್ಷಣಕ್ಷಣಕ್ಕೆ ಬದಲಾಗುತ್ತದೆ ಎನ್ನುವುದು ನಾನು ಅನುಭವಿಸಿದ ಅಪ್ಪಟ ಸತ್ಯ. ಕೊನೆಗೂ ನಾನು ಮಾಡುವುದು, ಅರ್ಧ ದಿನದ ಗುತ್ತಿಗೆಗೆ ಆಟೋ ಮಾಡಿಕೊಂಡು ಅವರೂರಿಗೆ ಹೋಗುತ್ತೇನೆ. ನನ್ನ ಸ್ನೇಹಿತನಂತೆ ಆರು ಬಾರಿ ಅಲ್ಲಲ್ಲಿ ನಿಂತು ಅವರಿಗೆ ಕರೆಕರೆ ಮಾಡಿ ಎರಡು ತಾಸು ಸುತ್ತಿ ಹೇಗೋ ಮನೆ ಹುಡುಕಿಕೊಳ್ಳುತ್ತೇನೆ. ಆಶ್ಚರ್ಯವೆಂದರೆ ತಿರುಗಿ ಬರುವಾಗ ಅದೇ ಆಟೋ ಚಾಲಕ ಯಾವ ಮಾರ್ಗದರ್ಶನದ ಅಗತ್ಯವೂ ಇಲ್ಲದೇ ಅರ್ಧ ಗಂಟೆಯಲ್ಲಿ ನನ್ನ ಮನೆಗೆ ತಂದು ಬಿಡುತ್ತಾನೆ!

"ಕನ್ನಡಿಗರೇ ಎಚ್ಚತ್ತುಕೊಳ್ಳಿ! ತಲೆಯೆತ್ತಿ ನಡೆಯಲು ಕಲಿಯಿರಿ" ಎಂದು ಮೊಳಗುವ ಕವಿವಾಣಿಗೆ "...ಅಡ್ರಸ್ ಹುಡುಕುವಾಗ" ಎಂದು ಸೇರಿಸಬೇಕಾದ ದಿನಗಳು ಬಂದಿವೆ. ಮೊದಲಿಗೆ ಯಾರದಾದರೂ ಮನೆ ಹುಡುಕಿಕೊಂಡು ಹೋಗುವಾಗ ಊರ್ಧ್ವಮುಖಿಗಳಾಗಿ, ಕಣ್ಣು ಬಿಟ್ಟುಕೊಂಡು ದಾರಿಯಲ್ಲಿ ಆಚೀಚೆ ನೋಡುತ್ತ ಅವರ ಸುತ್ತಲಿನ ಜಗತ್ತನ್ನೂ ಪರಿಚಯ ಮಾಡಿಕೊಳ್ಳುತ್ತಿದ್ದೆವು. ಈಗ? ನಾವೆಲ್ಲ ನಿರಂತರ ಅವನತ ಮುಖಿಗಳು. ತಗ್ಗದೆಯೇ ಬಗ್ಗದೆಯೇ ನುಗ್ಗಿ ನಡೆವರಿಗೆ ವಾಟ್ಸಾಪೇಶ್ವರಿ ದರ್ಶನ ಕೊಡುವವಳಲ್ಲ.

ಅವನು: ನಿಮ್ಮ ಅಡ್ರಸ್ಸು ಡೈರೆಕ್ಷನ್ನು ಕಳಿಸಿ ಬಿಡಿ. ನಾನೇ ನಿಮ್ಮ ಮನೆಗೆ ಬರುತ್ತೇನೆ.

ನಾನು: ವಿಳಾಸ ಇಲ್ಲಿದೆ. ಬರುವ ದಾರಿ ಸುಲಭ. ಬೆಂಗಳೂರಿನ ಸುಪ್ರಸಿದ್ಧ ರಸ್ತೆಯಲ್ಲಿರುವ ನೂರಂತಸ್ತಿನ ಅತ್ಯಂತ ಎತ್ತರದ ಕಟ್ಟಡದ ಎದುರಿಗೇ ಗಾಢ ಕೆಂಪಿನ ಬಣ್ಣ ಬಳಿದುಕೊಂಡು ಎದ್ದು ಕಾಣುವಂತೆ ...

ಅವನು: ಪರವಾಗಿಲ್ಲ ಸಾರ್. ವಾಟ್ಸಾಪಲ್ಲಿ ಒಂದು ಲಿಂಕ್‌ಕಳಿಸಿಬಿಡಿ!

ಕೈಫೋನುಗಳು ಬಂದು ಇಡೀ ಜಗತ್ತನ್ನೇ ನಿಮ್ಮ ಅಂಗೈಯಲ್ಲಿ ಅಡಕಿಸಿವೆ ಎಂದು ನಮ್ಮ ವಿಜ್ಞಾನ ಲೇಖಕರು, ಅದು ತಮ್ಮದೇ ವೈಯುಕ್ತಿಕ ಸಾಧನೆ, ಎಂಬ ಧಾಟಿಯಲ್ಲಿ ದೊಡ್ಡದಾಗಿ ಹೇಳುತ್ತಾರೆ. ಇರಬಹುದು. ಆದರೆ ಮೂರು ಹೊತ್ತೂ ತಮ್ಮ ಅಂಗೈಯನ್ನು ದಿಟ್ಟಿಸುತ್ತ ದಿನ ಕಳೆಯುವವರಿಗೆ ಕಾಣುವುದು... ತಮ್ಮ ಅಂಗೈ ಮಾತ್ರ. ನಿಜವಾದ ಜಗತ್ತು ಎಲ್ಲಿದ್ದರೇನು? ಅವರ ಮಟ್ಟಿಗೆ ಅದು ಯಾವಾಗಲೂ ಕಗ್ಗತ್ತಲೆಯ ಖಂಡವೇ. ಆದರೂ ನಾನೊಬ್ಬ ಆಶಾಜೀವಿ. ಯಂತ್ರಾಂತರ್ಗತ ಮ್ಯಾಪುಗಳ ಹಾವಳಿ ಒಂದಲ್ಲ ಒಂದು ದಿನ ಕೊನೆಗೊಳ್ಳುತ್ತದೆ ಎಂಬ ಭರವಸೆಯಲ್ಲಿದ್ದೇನೆ. ಆಮೇಲೆ ರಸ್ತೆಯಲ್ಲಿ ಕಂಡವರನ್ನು ತರುಬಿ, ದಿಕ್ಕು ಕೇಳುವ ದಿನಗಳು ಮರಳಿ ಬರುತ್ತವೆ. "ಹೀಗೇ ಸ್ಟ್ರೈಟ್ ಆಗಿ ಹೋಗ್ಬಿಟ್ಟು... ಫಸ್ಟ್‌ರೈಟಲ್ಲಿ ಟರ್ನಾಗಿ... ಲೆಫ್ಟಿಗೆ ಕಟ್‌ತಗೊಂಡು... ಒಂದೇ ರೋಡು" ಎಂಬ ದಿಗ್ದರ್ಶನದ ಕುರಿತು ಎಷ್ಟೇ ಕುಚೋದ್ಯ ಮಾಡಿದರೂ ಕೊನೆಯಲ್ಲಿ ಅವು ಗುರಿ ಮುಟ್ಟಿಸುತ್ತಿದ್ದವಲ್ಲವೇ? ■



ಸಿನಿಮಾದಲ್ಲಿ ನಾಯಕನಂತೆ ನಾಯಕಿ ಏಕೆ ಮೈ ಮುಚ್ಚಿಕೊಳ್ಳುವುದಿಲ್ಲ
ಏಕೆಂದರೆ ಪ್ರೇಕ್ಷಕ ಅದನ್ನು ಮೆಚ್ಚಿಕೊಳ್ಳುವುದಿಲ್ಲ.

–ರಾಮ್‌ಬಾಣ

# ನಕ್ಕು ನಲಿಸಿದ ಹಾಸ್ಯ ಚಕ್ರವರ್ತಿ

**ಎನ್.ಎಸ್. ಶ್ರೀಧರಮೂರ್ತಿ**

ಕನ್ನಡ ಚಿತ್ರರಂಗ ಕಂಡ ವಿಶಿಷ್ಟವಾದ ಕಲಾವಿದ ನರಸಿಂಹ ರಾಜು. 1954 ರಿಂದ 1979 ರವರೆಗಿನ ಅವಧಿಯಲ್ಲಿ 256 ಚಿತ್ರಗಳಲ್ಲಿ ಅವರು ಅಭಿನಯಿಸಿದ್ದರು. ಈ ಕಾಲಘಟ್ಟದಲ್ಲಿ ಮೂಡಿ ಬಂದಿದ್ದು 610 ಚಿತ್ರಗಳು ಎಂದರೆ ಪ್ರತಿ ಮೂರು ಚಿತ್ರಗಳಲ್ಲಿ ಒಂದು ಚಿತ್ರದಲ್ಲಿ ನರಸಿಂಹ ರಾಜು ಕಾಣಿಸಿ ಕೊಂಡಿದ್ದರು. ಇದಕ್ಕಿಂತಲೂ ಮುಖ್ಯವಾದ ಸಂಗತಿ ಎಂದರೆ 1954 ರಿಂದ 1967ರಲ್ಲಿ ಬಿಡುಗಡೆಯಾದ 168 ಚಿತ್ರಗಳಲ್ಲಿ ನೂರು ಚಿತ್ರಗಳಲ್ಲಿ ನರಸಿಂಹ ರಾಜು ಕಾಣಿಸಿ ಕೊಂಡಿದ್ದರು. ಈ ಕಾಲ ಘಟ್ಟದಲ್ಲಂತೂ ಪ್ರತಿ ಎರಡು ಚಿತ್ರಗಳಲ್ಲಿ ಒಂದು ಚಿತ್ರದಲ್ಲಿ ನರಸಿಂಹ ರಾಜು ಇದ್ದರು. ಹೀಗೆ ನಿರಂತರ ನಟಿಸುತ್ತಾ ಬಂದರೂ ಅಭಿನಯದಲ್ಲಿನ ವೈವಿಧ್ಯತೆಯನ್ನು ಅವರು ಕಾಪಾಡಿ ಕೊಂಡು ಬಂದಿದ್ದರು ಎನ್ನುವುದು ಮಹತ್ವದ ಸಂಗತಿ.

'ನಗ ಬೇಕು ನಗಿಸ ಬೇಕು ಅದೇ ನನ್ನ ಧರ್ಮ, ನಗಲಾರೆ ಅಳುವೆ ಎಂದರೆ ಅದು ನಿನ್ನ ಕರ್ಮ' ಎಂದು ಬೆಳ್ಳಿತೆರೆಯ ಮೇಲೆ ಹಾಡಿದ ನರಸಿಂಹ ರಾಜು ಅದರಂತೆಯೇ ಬದುಕಿದರು. ಕನ್ನಡದಲ್ಲಿ ನಿರಂತರವಾಗಿ ಒಂದಲ್ಲ ಒಂದು ಮೈಲಿಗಲ್ಲುಗಳನ್ನು ಸ್ಥಾಪಿಸುತ್ತಾ ಸಾಗಿದರು. ಕನ್ನಡದಲ್ಲಿ ಮೊದಲು ನೂರು ಚಿತ್ರಗಳನ್ನು ತಲುಪಿದ ಕಲಾವಿದರು ಅವರು, ಮದ್ರಾಸಿನಲ್ಲಿ ಮನೆ ಕಟ್ಟಿ ಕೊಂಡ ಕನ್ನಡದ ಮೊದಲ ಕಲಾವಿದರು ಅವರು, ಪೋನ್ ಹಾಕಿಸಿ ಕೊಂಡ ಮೊದಲ ಕಲಾವಿದರು ಅವರು, ಕಾರ್ ಕೊಂಡು ಕೊಂಡ ಮೊದಲ ಕಲಾವಿದರು ಅವರು, ಆದಾಯ ತೆರಿಗೆ ಕಟ್ಟಿದ ಮೊದಲ ಕಲಾವಿದರು ಅವರು, ಅವರ ಮಾತಿನಲ್ಲಿಯೇ ಹೇಳುವುದಾದರೆ ಮಗಳ ಮದುವೆಯನ್ನು ವೈಭವೋಪೇತವಾಗಿ ಮಾಡಿದ ಮೊದಲ ಕಲಾವಿದರು ಅವರು.

ತಿಪಟೂರು ರಾಮರಾಜು ನರಸಿಂಹ ರಾಜು ಹುಟ್ಟಿದ್ದು 1923ರ ಜುಲೈ 24ರಂದು ಅಂದರೆ ಇದು ಅವರ ಜನ್ಮ ಶತಮಾನೋತ್ಸವ ವರ್ಷ. ಈ ಸಂದರ್ಭದಲ್ಲಿ ಅವರ ಕೆಲವು ಹಾಸ್ಯ ಪ್ರಸಂಗಗಳನ್ನು ನೆನಪು ಮಾಡಿ ಕೊಳ್ಳುವ ಮೂಲಕ ನರಸಿಂಹ ರಾಜು ಅವರ ಸ್ಮರಣೆಯನ್ನು ಮಾಡುತ್ತಿದೇನೆ.

**ನೀನು ಕತ್ತೆ.. ನಾನು ನಿನ್ನ ಮಗ**

ಬೇಡರ ಕಣ್ಣಪ್ಪ ನಾಟಕದಲ್ಲಿ ನರಸಿಂಹ ರಾಜು ಅವರದ್ದು ಕಾಶಿ ಪಾತ್ರ. ಅವನು ಪೂಜಾರಿಯ ಮಗ. ಜಿ.ವಿ.ಅಯ್ಯರ್ ಕಳ್ಳ ಪೂಜಾರಿ ಪಾತ್ರ ಮಾಡುತ್ತಿದ್ದರು. ಪೂಜಾರಿ ಬೂಟಾಟಿಕೆಯ ವ್ಯಕ್ತಿ, ಹಣ ಮತ್ತು ವೇಶ್ಯಾ ಸಹವಾಸಕ್ಕೆ ದಾಸನಾಗಿದ್ದವ. ಹೊರಗಿನ ಜಗತ್ತಿಗೆ ಮಹಾ ದೈವಭಕ್ತಿಯನ್ನು ನಟಿಸುತ್ತಿರುತ್ತಾನೆ. ತಂದೆಯ ಡಾಂಭಿಕತನವನ್ನು ಪ್ರತಿ ನಿತ್ಯ ತೆರೆದಿಡುವುದೇ ಕಾಶಿಯ ಕೆಲಸ. ಪೂಜಾರಿ ರೇಷ್ಮೆ ಶಾಲು ಹೊದ್ದು ಹಣೆಗೆ ತ್ರಿಪುಂಡ್ರ, ಕೊರಳಿಗೆ ರುದ್ರಾಕ್ಷಿಮಾಲೆ ಧರಿಸಿ ಹೊರಟಿದ್ದಾನೆ.. ದಾರಿಯಲ್ಲಿ ಮಗ ಕಾಶಿ ಪ್ರತ್ಯಕ್ಷ.

'ಓಹೋಹೋ. ಏನಪ್ಪ ಇದು? ಸ್ನಾನನೂ ಮಾಡ್ದೆ ವಿಭೂತಿ ಧರಿಸಿ ಪೂಜೆಗೆ ಹೊರಟೇ ಬಿಟ್ಟರಾ' ಎನ್ನುತ್ತಾನೆ.



ಪೂಜಾರಿ ಗಾಭರಿಯಿಂದ 'ಅಲ್ಲವೋ ಕತ್ತೆ ಮಗನೆ.. ಮೆಲ್ಲಗೆ ಮಾತನಾಡೋ,

ದಾರೀಲಿ ಯಾರಾದ್ರೂ ಕೇಳಿಸಿ ಕೊಂಡಾರು.. ಏನೋ ನೀರು ಕಾದಿರಲಿಲ್ಲ. ಪೂಜೆಗೆ ತಡ ಆಗ್ತಾ ಇತ್ತು.. ಅಂತ'

ಕಾಶಿ ಅದಕ್ಕೆ 'ಸರಿಯಾಗಿ ಹೇಳಿದೆ. ಕತ್ತೆ ಮಗ.. ನೀನು ಕತ್ತೆ ನಾನು ನಿನ್ನ ಮಗ' ಎಂದರೆ ಜನ ಬಿದ್ದು ಬಿದ್ದು ನಗುತ್ತಿದ್ದರು.

**ಹರಿಶ್ಚಂದ್ರ ಸುಳ್ಳಾಡಿದ**

'ಸತ್ಯ ಹರಿಶ್ಚಂದ್ರ' ನಾಟಕದಲ್ಲಿ ನರಸಿಂಹ ರಾಜು ಅವರದ್ದು ನಕ್ಷತ್ರಿಕನ ಪಾತ್ರ. ವಿಶ್ವಮಿತ್ರ ತನ್ನ ಶಿಷ್ಯ ನಕ್ಷತ್ರಿಕನಿಗೆ ಹೇಗಾದರೂ ಹರಿಶ್ಚಂದ್ರನ ಬಾಯಲ್ಲಿ ಸುಳ್ಳಾಡಿಸಲು ಹೇಳಿರುತ್ತಾನೆ. ಎಷ್ಟೇ ಪ್ರಯತ್ನ ಪಟ್ಟರೂ ಹರಿಶ್ಚಂದ್ರ ಸುಳ್ಳಾಡುವುದಿಲ್ಲ. 'ನನ್ನ ಶಿಷ್ಯನಾಗಿ ಹರಿಶ್ಚಂದ್ರ ಸುಳ್ಳಾಡುವಂತೆ ಮಾಡುವುದು ನಿನ್ನ ಕರ್ತವ್ಯ' ಎಂದು ದಿನವೂ ವಿಶ್ವಾಮಿತ್ರರು ಎಚ್ಚರಿಸುತ್ತಿದ್ದರು. ಒಂದು ದಿನ ಇದ್ದಕ್ಕಿದ್ದ ಹಾಗೆ ನಕ್ಷತ್ರಿಕ ಓಡಿ ಬಂದ 'ಗುರುಗಳೇ, ಗುರುಗಳೇ.. ನಿಮಗೆ ಸಂತೋಷವೆನ್ನಿಸುವ ವಿಚಾರಿವಿದೆ' ಎಂದು ಗಂಭೀರವಾಗಿ ಹೇಳಿದ.

ಕೋಪದಿಂದ ಉರಿಯುತ್ತಿದ್ದ ವಿಶ್ವಾಮಿತ್ರನ ಮುಖ  ಈಗ ನಗುವಿನಿಂದ ಅರಳಿ 'ಹೌದೆ? ಹರಿಶ್ಚಂದ್ರ ಸುಳ್ಳಾಡಿದನೆ? ಎಲ್ಲಿ ಹೇಗೆ' ಎಂದು ಅವಸರದಿಂದ ಕೇಳಿದ.

'ಈಗ ತಾನೇ ಕೇಳಿ ಕೊಂಡು ಅವನ ಬಳಿಯಿಂದಲೇ ಬರುತ್ತಿದ್ದೇನೆ ಗುರುವರ್ಯ.. ನಮ್ಮ ಗುರು ವಿಶ್ವಾಮಿತ್ರರು ಕರುಣಾ ಸಮುದ್ರ, ದಯಾಮಯಿ, ಶಿಷ್ಯವತ್ಸಲ ಎಂದೆಲ್ಲಾ ಹೊಗಳುತ್ತಿದ್ದ.. ಅದೆಲ್ಲವೂ ಸುಳ್ಳಲ್ಲವೇ ಗುರುಗಳೇ' ಎಂದು ನರಸಿಂಹ ರಾಜು ತಮ್ಮದೇ ಆದ ಶೈಲಿಯಲ್ಲಿ ಹೇಳಿದಾಗ ಪ್ರೇಕ್ಷಕರು ಬಿದ್ದು ಬಿದ್ದು ನಗುತ್ತಿದ್ದರು.

**ಸಾಹುಕಾರ್ರ ಮನೇಲಿ ಊಟ**

'ಸಾಹುಕಾರ' ನಾಟದಲ್ಲಿ ಜಿ.ವಿ.ಅಯ್ಯರ್ ಮಹಾಜಿಪುಣ ಸಾಹುಕಾರನ ಪಾತ್ರ ಮಾಡುತ್ತಿದ್ದರು. ಈ ನಾಟಕದಲ್ಲಿ ನರಸಿಂಹ ರಾಜು ಆಚಾರಿ ಎನ್ನುವ ಹೆಸರಿನ ಕೆಲಸಗಾರ, ಬಾಲಕೃಷ್ಣ 'ಕೃಷ್ಣರಾಯ' ಎನ್ನುವ ಗುಮಾಸ್ತ. ಸಾಹುಕಾರ ಎಂತಹ ಜಿಪುಣ ಎಂದರೆ ಮಹಾಲಕ್ಷ್ಮಿ ಫೋಟೋಕ್ಕೆ ಕರ್ಪೂರ ಪೂಜೆ ಮಾಡಿದೆ ಅದನ್ನು ಕೂಡಲೇ ಆರಿಸಿ ಮೂರು ದಿನಕ್ಕೆ ಬಳಸುವವನು, ಊದಿನ ಕಡ್ಡಿ ಬಳಸಿದರೆ ಕೂಡಲೇ ಆರಿಸಿ ಅದನ್ನು ಒಂದು ವಾರ ಬಳಸುವವನು. ಆಚಾರಿ ಮತ್ತು ಕೃಷ್ಣರಾಯ ಇಬ್ಬರೂ ಹತ್ತಾರು ವರ್ಷಗಳಿಂದ ಸಾಹುಕಾರನ ಮನೆಯಲ್ಲಿ ಕೆಲಸ ಮಾಡಿಕೊಂಡು ಅವರ ಜಿಪುಣತನಕ್ಕೆ ಬೇಸರ ಪಟ್ಟಿದವರು. ಅವರಿಗೆ ಅಲ್ಲಿ ಒಂದು ಲೋಟ ನೀರು ಕೂಡ ಸಿಕ್ಕುತ್ತಿರಲಿಲ್ಲ. ಅಂತಹದರಲ್ಲಿ ಒಂದು ದಿನ ಈ ಸಾಹುಕಾರ ಅವರಿಬ್ಬರನ್ನು ಊಟಕ್ಕೆ ಕರೆದು ಬಿಟ್ಟ. ಸಾಹುಕಾರನ ಮಾತು ಕೇಳಿದ ಕೂಡಲೇ ನರಸಿಂಹ ರಾಜು ತಾನು ತೊಟ್ಟಿದ್ದ ಹರಕಲು ಕೋಟು, ಷರಟು, ಬನಿಯನ್, ಸ್ವೆಟರ್, ಮಫ್ಲರ್, ಟೋಪಿ ಎಲ್ಲವನ್ನು 'ಊ..'ಎನ್ನುವಷ್ಟರಲ್ಲಿ ಬಿಚ್ಚಿ ಊಟ ಎನ್ನುವಾಗ ಬಾಲಕೃಷ್ಣರ ಸೊಂಟಕ್ಕೆ ಅಡರಿ 'ರಾಯ.. ಇವತ್ತು ಊಟ. ಸಾಹುಕಾರ್ರ ಮನೇಲಿ ಊಟ' ಎಂದು ಸಂತೋಷಾತಿರೇಕ ಪ್ರಕಟಿಸುತ್ತಿದ್ದರು. ಈ ದೃಶ್ಯಕ್ಕೆ ಯಾವಾಗಲೂ ಐದು ನಿಮಿಷಕ್ಕೆ ಕಡಿಮೆ ಇಲ್ಲದಂತೆ ಚಪ್ಪಾಳೆ ಬೀಳುತ್ತಿತ್ತು.



ಸ್ಪರ್ಧೆ ಅವರ ನಡುವೆ.. ನಮ್ಮ ನಡುವೆ ಅಲ್ಲ!

ಆಗಿನ ಕಾಲದ ಉಳಿದ ಕಲಾವಿದರಂತೆ ದ್ವಾರಕೀಶ್ ರಂಗಭೂಮಿಯಿಂದ ಚಿತ್ರರಂಗಕ್ಕೆ ಬಂದವರಲ್ಲ. ನೇರವಾಗಿ ಚಿತ್ರರಂಗಕ್ಕೆ ಬಂದವರು. 'ಪರಿಪೂರ್ಣ ಕಲಾವಿದರು ಎನ್ನಿಸಿ ಕೊಳ್ಳಲು ರಂಗಭೂಮಿಯಲ್ಲಿ ಅಭಿನಯಿಸಿದರೆ ಮಾತ್ರ ಸಾಧ್ಯ' ಎಂಬ ಮಾವ ಹುಣಸೂರು ಕೃಷ್ಣಮೂರ್ತಿಗಳ ಮಾತು ನೆನಪಾಯಿತು.ದ್ವಾರಕೀಶ್ ಒಪ್ಪಿಕೊಂಡು ಬಂದೂ ಬಿಟ್ಟರು.

ಹುಬ್ಬಳ್ಳಿಯಲ್ಲಿ ಅಂದಿನ ನಾಟಕ 'ಹಳ್ಳಿ ಹುಡುಗಿ–ಪೇಟೆ ಹುಡುಗ' ಹೌಸ್‌ಫುಲ್. ಹೀರೋ ಹೀರೋಯಿನ್ ಎಲ್ಲೋ ಮೂಲೆಗೆ, ದ್ವಾರಕೀಶ್ ಪ್ರತಿ ಮಾತಿಗೆ ಜನ ಕಾದು ಕುಳಿತಿದ್ದರು. ಚಪ್ಪಾಳೆ.ರಾತ್ರಿ ಮೂರು ಗಂಟೆಯಾದರೂ ಜನ ಜಂಗುಳಿ ಕರಗಲಿಲ್ಲ. ಕೊನೆಗೆ ಹಿರೇಮಠ್ ಅವರೇ ಹೇಗೋ ದ್ವಾರಕೀಶ್ ಅವರನ್ನು ಜನರಿಂದ ತಪ್ಪಿಸಿ ಕೊಂಡು ಮುಖ್ಯರಸ್ತೆಗೆ ಕರೆದು ಕೊಂಡು ಬಂದರೆ ಅಲ್ಲಿ ಕಂಡಿದ್ದೇನು? ಎದುರಿನಲ್ಲಿ ಇನ್ನೊಂದು ಕಂಪನಿ ಅಲ್ಲಿ ನರಸಿಂಹ ರಾಜು ಅವರ ಕಟೌಟ್.ಆಗ ದ್ವಾರಕೀಶ್ ಅವರಿಗೆ ಹಿರೇಮಠ್ ಅವರು ದುಂಬಾಲು ಬಿದ್ದು ನನ್ನನ್ನು ಕರೆದು ಕೊಂಡು ಬಂದಿದ್ದು ಏಕೆ ಎನ್ನುವುದು ಅರ್ಥವಾಯಿತು. ವಿರೋಧಿ ಕಂಪನಿಗೆ ಪೈಪೋಟಿ ನೀಡಲು ನನ್ನನ್ನು ಬಳಸಿ ಕೊಂಡಿದ್ದಾರೆ. ನರಸಿಂಹ ರಾಜು ಆಗಲೇ ಚಿತ್ರರಂಗದಲ್ಲಿ ಬಹು ಎತ್ತರಕ್ಕೆ ಏರಿರುವ ಕಲಾವಿದ. ಅವರ ವಿರೋಧ ಕಟ್ಟಿ ಕೊಂಡು ನಾನು ಚಿತ್ರರಂಗದಲ್ಲಿ ಇರುವುದು ಹೌದೆ? ಚಿತ್ರರಂಗದಲ್ಲಿ ನನ್ನ ಭವಿಷ್ಯವೇ ಇಲ್ಲಿಗೆ ಮುಕ್ತಾಯವಾಯಿತು ಎಂದೇ ದ್ವಾರಕೀಶ್ ಅವರಿಗೆ ಅನ್ನಿಸಿತು.

ರಾತ್ರಿ ರೂಮಿಗೆ ಬಂದು ಮಲಗಿ ಕೊಂಡರೂ ಕಣ್ಣಿಗೆ ಕಣ್ಣು ಹತ್ತುತ್ತಿಲ್ಲ. ಆಗ ರೂಂ ಬಾಗಿಲು ಬಡಿದ ಶಬ್ದವಾಯಿತು. ನೋಡಿದರೆ ಸ್ವತ: ನರಸಿಂಹ ರಾಜು ಅವರೇ ನಿಂತಿದ್ದಾರೆ.ಕನಸೋ, ನನಸೋ ಎಂದು ದ್ವಾರಕೀಶ್ ಕಣ್ಣು ಉಜ್ಜಿ ಕೊಂಡು ನೋಡಿದರು.

"ಏಕಯ್ಯ, ನಿದ್ದೆ ಹತ್ತಿತ್ತಾ?'ಎಂದು ಕೇಳಿದರು ನರಸಿಂಹ ರಾಜು.ನನ್ನಿಂದ ತಪ್ಪಾಯಿತು.ಹೀಗೆ ನಿಮ್ಮ ವಿರುದ್ದ ಇವರು ನನ್ನನ್ನು ಎತ್ತಿ ಕಟ್ಟುತ್ತಾರೆ ಅಂತ ಗೊತ್ತಿರಲಿಲ್ಲ. ಅಂದು ತಮ್ಮ ಅಳಲನ್ನು ದ್ವಾರಕೀಶ್ ಹೇಳಿ ಮುಗಿಸುವಲ್ಲಿ ಅತ್ತೇ ಬಿಟ್ಟಿದ್ದರು.ನರಸಿಂಹ ರಾಜು ಮಾತ್ರ ಏನೂ ಆಗಿಲ್ಲವೆಂಬಂತೆ. 'ನೋಡು ನಾನು ಒಂದು ಕಡೆ ಕಲಾ ಸೇವೆ ಮಾಡ್ತಾ ಇದ್ದೀನಿ, ನೀನು ಇನ್ನೊಂದು ಕಡೆ ಮಾಡ್ತಾ ಇದ್ದೀಯಾ.. ಸ್ಪರ್ಧೆ ಕಂಪನಿಗಳ ನಡುವೆ ನಮ್ಮ ನಡುವೆ ಅಲ್ಲ' ಎಂದು ಸಮಾಧಾನ ಮಾಡಿದರು.

ಇದರಿಂದ ದ್ವಾರಕೀಶ್ ಅವರಿಗೆ ಸಮಾಧಾನವಾಯಿತು.ಅಷ್ಟೇ ಅಲ್ಲ ನರಸಿಂಹ ರಾಜು ಅವರ ಬಗ್ಗೆ ಇದ್ದ ಗೌರವ ಕೂಡ ಇನ್ನಷ್ಟು ಹೆಚ್ಚಾಯಿತು.

ಒನ್ ಮೋರ್ ಚಾನ್ಸ್ ಪ್ಲೀಸ್!

1972ರಲ್ಲಿ ಬಾಂಗ್ಲ ವಿಮೋಚನೆಯ ಸಂದರ್ಭ.. ರಾಷ್ಟ್ರೀಯ ರಕ್ಷಣಾ ನಿಧಿಗೆ ಹಣ ಕೂಡಿಸಲು ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿ ಕನ್ನಡ ಮತ್ತು ಹಿಂದಿ ಚಿತ್ರನಟರಿಂದ ಕ್ರಿಕೆಟ್ ಪಂದ್ಯ ಅಯೋಜನೆಗೊಂಡಿತ್ತು. ನರಸಿಂಹ ರಾಜು ಬಿಳಿ ಪ್ಯಾಂಟು ಮತ್ತು ಬಿಳಿ ಶರ್ಟ್ ತೊಟ್ಟು ಕಾಲಿಗೆ ಪ್ಯಾಡ್ ಹಾಕಿಕೊಂಡು ಸ್ಲಾಗಿಶ್ ಶೈಲಿಯಲ್ಲಿ ಬ್ಯಾಟಿಂಗ್‌ಗೆ ಇಳಿದಾಗ ಕ್ರಿಡಾಂಗಣದ ತುಂಬಾ ಚಪ್ಪಾಳೆಗಳ ಸುರಿಮಳೆ. ಎಲ್ಲರಿಗೂ ಕೈ ಬೀಸಿ ಮೊದಲ ಎಸೆತಕ್ಕೆ ನರಸಿಂಹ ರಾಜು ಸಿದ್ಧರಾದರು. ಆದರೆ



ಬಿರುಸಿನಿಂದ ಬಂದ ಬಾಲು ಅವರ ವಿಕೆಟ್ ಎಗರಿಸಿ ಬಿಟ್ಟಿತು, ಪ್ರೇಕ್ಷಕರೆಲ್ಲಾ ತಬ್ಬಿಬ್ಬಾಗಿ ಕುಳಿತಾಗ ನರಸಿಂಹ ರಾಜು ತಕ್ಷಣವೇ ಚೇತರಿಸಿ ಕೊಂಡು ತಮ್ಮದೇ ವಿಶಿಷ್ಟ ಶೈಲಿಯಲ್ಲಿ 'ಒನ್ ಮೋರ್ ಚಾನ್ಸ್ ಪ್ಲೀಸ್' ಎಂದಾಗ ಮೈದಾನದಲ್ಲಿ ಇನ್ನೊಮ್ಮೆ ಹರ್ಷೋದ್ಗಾರ ಕೇಳಿ ಬಂದಿತ್ತು.

**ಹೇಳಿ ಕಳುಹಿಸಿದರೂ ನಾನು ಇರಬೇಕಲ್ಲ!**

1979ರ ಜುಲೈ 10, ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ 'ಪ್ರೀತಿ ಮಾಡು ತಮಾಷೆ ನೋಡು' ಚಿತ್ರದ ಡಬ್ಬಿಂಗ್ ನಡೆಯುತ್ತಿತ್ತು. ದ್ವಾರಕೀಶ್ ನಿರ್ಮಾಪಕರು. ನರಸಿಂಹ ರಾಜು ಅದರಲ್ಲಿ ಅಭಿನಯಿಸುತ್ತಿದ್ದವರು 'ನೋಡಯ್ಯ, ಇನ್ನಾದರೂ ಬಾಕಿ ಉಳಿಸಿದ್ದರೆ, ಮತ್ತೆ ನಾನು ಸಿಗಲ್ಲ' ಎಂದರು. ದ್ವಾರಕೀಶ್ 'ಇನ್ನೇನು ಉಳಿದಿಲ್ಲ, ಹಾಗೆ ಇದ್ದರೆ ಹೇಳಿ ಕುಳುಹಿಸುವೆ' ಎಂದರು. 'ಹೇಳಿ ಕಳುಹಿಸಿದರೂ ನಾನು ಇರ ಬೇಕಲ್ಲ, ಅದಕ್ಕೆ ಕೆಲಸ ಮುಗಿಸು ಎಂದಿದ್ದು' ಎಂದು ಒತ್ತಿ ಒತ್ತಿ ಹೇಳಿದರು. ದ್ವಾರಕೀಶ್ ಅವರಿಗೆ ಇದರ ಅಂತರಾರ್ಥ ತಿಳಿಯಲಿಲ್ಲ. ಆಗ ಸ್ಕೈಲ್ಯಾಬ್ ಎನ್ನುವ ಉಪಗ್ರಹ ಬೀಳುತ್ತದೆ ಎನ್ನುವ ಸುದ್ದಿ ಹಬ್ಬಿತ್ತು. ಅದು ಬಿದ್ದರೆ ಆ ಭಾಗವೆಲ್ಲವೂ ನಾಶವಾಗುತ್ತದೆ ಎಂದು ಹೇಳಲಾಗುತ್ತಿತ್ತು. ನರಸಿಂಹ ರಾಜು ತಮ್ಮ ಎಲ್ಲಾ ಮಕ್ಕಳು ಅಳಿಯಂದಿರನ್ನು ಕರೆದು ಸ್ಕೈಲ್ಯಾಬ್ ಬಿದ್ದರೆ ನಾವು ಮತ್ತೆ ಭೇಟಿ ಆಗಲು ಆಗುವುದಿಲ್ಲ ಇವತ್ತು ಎಲ್ಲರೂ ಒಟ್ಟಿಗೆ ಸೇರಿ ಊಟ ಮಾಡೋಣ ಎಂದರು. ಇಡೀ ದಿನ ಎಲ್ಲರೂ ಸಂತೋಷವಾಗಿ ಕಾಲ ಕಳೆದರು. ಕುಟುಂಬದ ಜೊತೆಗೆ ಸಂತೋಷವಾಗಿ ನಕ್ಕು ನಲಿದು ರಾತ್ರಿ ಮಲಗಿದ ನರಸಿಂಹ ರಾಜು ಜುಲೈ 11ರ ಬೆಳಗಿನ ಜಾವ ನಿದ್ದೆಯಲ್ಲಿಯೇ ಹೃದಯಾಘಾತವಾಗಿ ತೀರಿ ಕೊಂಡರು.

ಜೀವನದುದ್ದಕ್ಕೂ ವಿಶಿಷ್ಟತೆ ಮರೆದಿದ್ದ ನರಸಿಂಹ ರಾಜು ಸಾವಿನಲ್ಲಿ ಕೂಡ ವಿಭಿನ್ನವಾಗಿದ್ದರು. ■



# 'ಕಲ್ಲಾಕೃತಿ'!

ಚಿತ್ರಾ ರಾಮಚಂದ್ರನ್

"ಈ ಭಾನುವಾರನಾದ್ರೂ ನಾವು ಮೇಘನಾ ಮನೆಗೆ ಹೋಗ್ಬೇಕು ರೀ ! ದಿನಾ ಕರೆ ಮಾಡಿ ಯಾವಾಗ ಬರ್ತೀಯಾ ಅಂತ ಕಾಡ್ತಾನೇ ಇದ್ದಾಳೆ ! " ಎಂದಳು ಅಶ್ವಿನಿ.

ಮೊಬೈಲ್ ನೋಡುತ್ತ ತಿಂಡಿ ತಿನ್ನುತ್ತಿದ್ದ ವಿನ್ಯಾಸ್ 'ಹೂಂ' ಎಂದು ನಿರುತ್ಸಾಹದಿಂದ ತಲೆದೂಗಿದ.

"ಅವಳನ್ನ ಅಚಾನಕ್ಕಾಗಿ ಮಾಲ್ನಲ್ಲಿ ಸಂಧಿಸಿ ತಿಂಗಳಮೇಲೆ ಆಯ್ತು. ಇನ್ನೂ ಹೂಂ ಹಾಂ ಅನ್ನೋದ್ರಲ್ಲೇ ಇದ್ದೀರೇ ಹೊರತು ಹೊರಡೋ ಸೂಚನೆಯೇ ಕಾಣ್ತಿಲ್ಲ! ಪರೀಕ್ಷೆ ಮುಗಿದ ಕೂಡ್ಲೇ ಮದುವೆಯಾಗಿ ವಿದೇಶಕ್ಕೆ ಹೋಗ್ಬಿಟ್ಟು. ಮೂವತ್ತು ವರ್ಷಗಳು ಅದು ಹೇಗೆ ಕಳೆದು ಹೋದವೋ ಏನೋ! ಇದೀಗ ವಾಪಸ್ಸು ಬಂದಿದ್ದಾಳೆ!" ಸ್ನೇಹಿತೆಯ ಬಗ್ಗೆ ಹೇಳುವಾಗಲೇ ಅಶ್ವಿನಿಯ ಮನದಲ್ಲಿ ಉತ್ಸಾಹ ಉಕ್ಕಿತು. ಕಾಲೇಜಿನಲ್ಲಿ ಅವರುಗಳು ತಮ್ಮದೇ ಒಂದು ಕಪಿ ಸೈನ್ಯ ಕಟ್ಟಿಕೊಂಡು ಹೊಡೆದ ಲೂಟಿಗಳೆಲ್ಲ ಸ್ಮೃತಿ ಪಟಲದಲ್ಲಿ ಫ್ಲಾಶ್ ಬ್ಯಾಕ್ ಆದಾಗ ಕಣ್ಣುಗಳು ನಕ್ಷತ್ರಗಳಂತೆ ಹೊಳೆದವು !

"ನೀನು ನಿನ್ನ ಫ್ರೆಂಡ್ ಜೊತೆ ಹರಟೆಗೆ ಕೂತ್ರೆ, ಶಿವ ಪೂಜೆಯಲ್ಲಿ ಕರಡಿ ಹಾಗೆ ಅಲ್ಲಿಗ್ಬಂದು ನಾನೇನು ಮಾಡ್ಲಿ ಹೇಳು?" ರಾಗ ತೆಗೆದ ವಿನ್ಯಾಸ್.

"ಇಲ್ಲೇ ಎಲ್ಲಾದ್ರೂ ಅವ್ಳು ಮನೆ ಮಾಡ್ಕೊಂಡಿದ್ದಿದ್ರೆ ನಾನೇ ಹೋಗಿ ಬರ್ತಿದ್ದೆ. ಆ ಮಹಾತಾಯಿ ಏರ್ ಪೋರ್ಟ್ಗೆ ಹೋಗೋ ದಾರೀಲಿ ಎಲ್ಲೋ ಫಾರ್ಮ್ ಹೌಸ್ ಮಾಡ್ಕೊಂಡಿದ್ದಾಳೆ. ಅಷ್ಟು ದೂರ ನಾನು ಒಬ್ಳೆ ಹೋಗಿ ಬರಕ್ಕಾಗಲ್ಲ! ಗಂಡ ಹೆಂಡ್ತಿ ಇಬ್ರೂ ಮಹಾ ರಸಿಕರು! ಮನೆಯ ತುಂಬಾ ಕಲಾಕೃತಿಗಳು, ದೊಡ್ಡ ತೋಟದಲ್ಲಿ ಹತ್ತಾರು ಶಿಲ್ಪಗಳ ಸಂಗ್ರಹ ಎಲ್ಲ ಇವೆಯಂತೆ! ಕರಡಿ ತೋಟದಲ್ಲಿ ಓಡಾಡ್ಕೊಂಡಿದ್ರೆ ಏನೂ ತೊಂದ್ರೆ ಇಲ್ಲ!"

ಅವನು ಮಣಿಯುವವರೆಗೂ ಅವಳು ಬಿಡುವವಳಲ್ಲವಲ್ಲ!

ಅಂತೂ ಇಂತೂ ಒಂದು ವಾರಾಂತ್ಯದಲ್ಲಿ ಅಶ್ವಿನಿ ಮತ್ತು ವಿನ್ಯಾಸ್ ಮೇಘನಾಳ ಮನೆಯನ್ನು ಕುರಿತು ಹೊರಟೇಬಿಟ್ಟರು. ಊರು ಬಿಟ್ಟು ಇಪ್ಪತ್ತು ಕಿಲೋಮೀಟರುಗಳು ಸಾಗಿದಮೇಲೆ, ಐಟಿಸಿ ಕಾರ್ಖಾನೆಯ ಬಳಿ ಎಡಕ್ಕೆ ಇದ್ದ ಒಂದು ಕಚ್ಚಾ ರಸ್ತೆಯಲ್ಲಿ ನಾಗಾಲೋಟದಲ್ಲಿ ಚಲಿಸ ತೊಡಗಿತು ಕಾರು. ದೂರದಲ್ಲಿ ಕಂಗೊಳಿಸಿದ ನಂದಿ ಬೆಟ್ಟ. ದಾರಿಯ ಎರಡು ಬದಿಯಲ್ಲೂ ಹೂವು ಮತ್ತು ಹಣ್ಣಿನ ತೋಟಗಳು. ಸಣ್ಣ ಪುಟ್ಟ ಕೆರೆಗಳು.

ಪ್ರಕೃತಿಯ ಮಡಿಲಿನಲ್ಲಿ ಇಂತಹ ಸುಂದರವಾದ ಪರಿಸರದಲ್ಲಿ ಮನೆ ಮಾಡಿಕೊಂಡಿರುವವರು ನಿಜಕ್ಕೂ ಮಹಾ ರಸಿಕರೇ ಆಗಿರಬೇಕು ಎಂದು ಕೊಳ್ಳುವಷ್ಟರಲ್ಲಿ ಹುಚ್ಚೆದ್ದ ಕುದುರೆಯಂತೆ ಕಾರು ಒಮ್ಮೆ ಕುಣಿದು ಭೂತದ ದರ್ಶನವಾದಂತೆ ಗಡ ಗಡ ನಡುಗುತ್ತ ಮುಂದೆ ಸಾಗಿತು!



ಫಾರ್ಮ್ ಹೌಸ್ ತಲುಪಿದ ಕೂಡಲೇ ಓಡೋಡಿ ಬಂದು ಸ್ನೇಹಿತೆಯನ್ನು ಅಪ್ಪಿಕೊಂಡು ಸ್ವಾಗತ ನೀಡಿದಳು ಮೇಘನಾ.

"ಸಾರೀ ವಿನ್ಯಾಸ್ ಅವರೇ! ಇವರು ಒಂದು ಕೆಲ್ಸದ ಸಲುವಾಗಿ ತುರ್ತಾಗಿ ದಿಲ್ಲಿಗೆ ಹೋಗಬೇಕಿತ್ತು. ನಿಮ್ಮನ್ನ ಮುಂದಿನ ಸರ್ತಿ ಮೀಟ್ ಮಾಡೋದಾಗಿ ಹೇಳಿ ಇದೀಗ ಏರ್ ಪೋರ್ಟ್ಗೆ ಹೋದ್ರು! ಬೇಜಾರು ಮಾಡ್ಕೋಬೇಡಿ! ಬನ್ನಿ ಜ್ಯೂಸ್ ಕುಡೀತಾ ಮನೆ ನೋಡುವಿರಂತೆ! "

ಉಭಯ ಕುಶಲೋಪರಿಯ ನಂತರ ತಂಪು ಪಾನೀಯದ ಜೊತೆ ಪ್ರಾರಂಭವಾಯಿತು ಕಂಡಕ್ಟೆಡ್ ಟೂರ್! ಸುಂದರ ಕೆತ್ತನೆಗಳಿಂದ ಕೂಡಿದ ಕಂಬಗಳಿದ್ದ ಭವ್ಯವಾದ ತೊಟ್ಟಿಮನೆ. ಮೂಲೆ ಮೂಲೆಯಲ್ಲೂ ಫಳ ಫಳ ಮೆರುಗೇರಿದ ಕೊಳದಪ್ಪೆ, ಬೋಗುಣಿ, ಮಡಿಕೆ, ಕುಡಿಕೆ, ಬಿಂದಿಗೆ, ಹೂಜಿ, ಗಂಗಾಳ, ಹಂಡೆ ಮುಂತಾದ ಹಿತ್ತಾಳೆ ಪಾತ್ರೆಗಳಲ್ಲಿ ಕಂಗೊಳಿಸಿದ ಹಚ್ಚ ಹಸಿರು ಗಿಡಗಳು. ಗುಜರಿ ಅಂಗಡಿಗಳಿಂದ ಹೆಕ್ಕಿ ತಂದಿದ್ದ ಬಗೆ ಬಗೆಯ ಪುರಾತನ ವಸ್ತುಗಳು ಷೋ ಕೇಸುಗಳಲ್ಲಿ ಕಣ್ಣು ಕುಕ್ಕುವಂತೆ ಹೊಳೆಯುತ್ತಿದ್ದವು. ಪ್ರತಿಯೊಂದು ಗೋಡೆಯ ಮೇಲೂ ಚಿನ್ನದ ರೇಕಿನಿಂದ ಕೂಡಿದ ಬೃಹದಾಕಾರದ ಮೈಸೂರು ಶೈಲಿಯ ವರ್ಣ ಚಿತ್ರಗಳು. ಒಟ್ಟಾರೆ ಆ ಮನೆ ಒಂದು ಸಾಂಸ್ಕೃತಿಕ ಪರಂಪರೆಯ ವಸ್ತು ಸಂಗ್ರಹಾಲಯದಂತೆ ಕಂಡಿತು.

"ತುಂಬಾ ಚೆನ್ನಾಗಿದೆ ಮೇಘು ಮನೆ! ಅದ್ಭುತ ಸಂಗ್ರಹ! ಚೆನ್ನಾಗಿ ಜೋಡಿಸಿದ್ದೀಯ!" ಎಂದು ಹೃತ್ಪೂರ್ವಕವಾಗಿ ಪ್ರಶಂಸಿದಳು ಅಶ್ವಿನಿ.

ಸ್ನೇಹಿತಿ ತನ್ನ ಅಭಿರುಚಿಯನ್ನು ಬಾಯಿ ತುಂಬಾ ಹೊಗಳಿದ್ದೇ ತಡ! ಪ್ರತಿಯೊಂದು ವಸ್ತುವಿನ ಮೂಲ, ಇತಿಹಾಸ, ಭೂಗೋಳ ಎಲ್ಲವನ್ನೂ ಸಾವಕಾಶವಾಗಿ ವಿವರಿಸ ತೊಡಗಿದಳು ಮೇಘನಾ. ಸಾಕು ಸಾಕು ಎನ್ನುವಷ್ಟು ತಿಂಡಿ ತೀರ್ಥದ ಸೇವನೆಯನ್ನು ಮುಗಿಸಿದರು ಅಶ್ವಿನಿ ಮತ್ತು ವಿನ್ಯಾಸ್.

ಯಾರ್ಯಾರಿಗೋ ಬೇಡವಾಗಿದ್ದ ಪಾರಂಪರಿಕ ವಸ್ತುಗಳು, ವಿಗ್ರಹಗಳು, ಪೂಜಾ ಪರಿಕರಗಳು, ಪಾತ್ರೆ ಪಗಡ ಎಲ್ಲವನ್ನು ತಂದು ಸುಂದರವಾಗಿ ಮನೆಯನ್ನು ಅಲಂಕರಿಸಿದ್ದಳು ಮೇಘನಾ! ಇನ್ನು ತೋಟದಲ್ಲಿ ಎಂತೆಂತಾ ಶಿಲ್ಪಗಳನ್ನು ತಂದು ನಿಲ್ಲಿಸಿರುವಳೋ? ಬೇಲೂರ ಶಿಲಾ ಬಾಲಿಕೆಯರು, ಹಂಪೆಯ ಮಂಟಪಗಳ ಕಂಬಗಳಲ್ಲಿ ತುಂಟ ನಗೆ ಬೀರಿ ನಿಂತಿರುವ ಬಾಲ ಕೃಷ್ಣ, ನರ್ತಿಸುವ ಭಂಗಿಯ ಗಣಪ, ಗಂಭೀರವಾಗಿ ಒಂದು ಕಾಲು ಮಡಚಿ ಕುಳಿತ ನಂದಿ ವಿಗ್ರಹ ಎಲ್ಲವೂ ಅಶ್ವಿನಿಯ ಸ್ಮೃತಿ ಪಟಲದಲ್ಲಿ ಹಾದು ಹೋದವು. ಯಾವ ಗುಡಿಗೆ ಹೋದರೂ ಗರ್ಭಗುಡಿಯಲ್ಲಿಯ ದೇವರನ್ನು ಕಾಣುವುದಕ್ಕಿಂತ ಹೊರ ಆವರಣಗಳಲ್ಲಿದ್ದ ಶಿಲ್ಪ ಸೌಂದರ್ಯವನ್ನು ಗಂಟೆಗಟ್ಟಲೆ ಕಣ್ತುಂಬಿಸಿಕೊಳ್ಳುವುದು ಅವಳ ವಾಡಿಕೆ. ಮೇಘನಾಳ ಶಿಲ್ಪಗಳನ್ನು ಕಾಣಲು ತುದಿಗಾಲಲ್ಲಿ ನಿಂತಳು ಅಶ್ವಿನಿ.

"ಇವರಿಗೆ ನಿನ್ನ ಹಾಗೇ ಶಿಲ್ಪ ಕಲಾಕೃತಿಗಳಲ್ಲಿ ಬಲು ಆಸಕ್ತಿ ಅಶ್ವಿನಿ. ಹುಡುಕಿ ಹುಡುಕಿ ಇವನ್ನೆಲ್ಲ ತಂದಿಟ್ಟಿದ್ದಾರೆ. ಕಲ್ಲಿನಲ್ಲಿ ಬಗೆ ಬಗೆಯ ಭಾವನೆಗಳನ್ನ ಅದೆಷ್ಟು ಸುಂದರವಾಗಿ ಸೆರೆ ಹಿಡಿದಿದ್ದಾನೆ ನೋಡು ಶಿಲ್ಪಿ! ನೋಡು! ಈ ಕಲಾಕೃತಿಯ ಶೀರ್ಷಿಕೆ 'ಗೊಂದಲ'! ಇದು 'ಇಕ್ಕಟ್ಟು'! ಅಲ್ಲಿರೋದು 'ಪರಿವರ್ತನೆ'! 'ಅಡೆತಡೆ'! 'ಅನ್ವೇಷಣೆ' ಎಷ್ಟು ಸುಂದರ ನೋಡು! ಇಲ್ಲಿ ಈಜು ಕೊಳದ ಪಕ್ಕ ಇರೋದು 'ಪರಿಸರ ಪ್ರಜ್ಞೆ'! ಕೊನೆಯಲ್ಲಿರೋ ಕಲಾಕೃತಿಯ ಶೀರ್ಷಿಕೆ' ಶೀರ್ಷಿಕೆ ರಹಿತ'!"



ಮೇಘನಾಳ ರನ್ನಿಂಗ್ ಕಾಮೆಂಟ್ರಿ ಕೇಳಿಸಿಕೊಳ್ಳುತ್ತಾ ಒಂದೊಂದೇ ಶಿಲ್ಪ ಕಲಾ ಕೃತಿಯನ್ನು ನೋಡಿದ ಅಶ್ವಿನಿ ತಬ್ಬಿಬ್ಬಾದಳು ! ಸ್ನೇಹಿತಿ ಮನೆಗೆ ಹೊರಡುವವರೆಗೆ

ಮೇಘನಾ ಅವಳ ಯಾವ ಪ್ರತಿಕ್ರಿಯೆಯನ್ನೂ ನಿರೀಕ್ಷಿಸದೆ ಶಿಲ್ಪಗಳ ಬಗ್ಗೆ ವಟ ವಟ ಎನ್ನುತ್ತಲೇ ಇದ್ದಳು!

"ಇವರಿರೋವಾಗ ಮತ್ತೊಮ್ಮೆ ಬನ್ನಿ! ಶಿಲ್ಪಗಳ ಬಗ್ಗೆ ನನಗಿಂತ ಚೆನ್ನಾಗಿ ವಿವರಿಸಿ ಹೇಳ್ತಾರೆ!" ಎನ್ನುತ್ತ ಅಶ್ವಿನಿ ಮತ್ತು ವಿನ್ಯಾಸನ್ನು ಬೀಳ್ಕೊಟ್ಟಳು ಮೇಘನಾ!

ಮತ್ತೆ ಕುಣಿಯುತ್ತ ಗಡ ಬಡ ಶಬ್ದ ಮಾಡುತ್ತ ಕಚ್ಚಾ ರಸ್ತೆಯಲ್ಲಿ ಚಲಿಸ ತೊಡಗಿತು ಕಾರು.

"ಆ ಕಲಾಕೃತಿಗಳನ್ನ ಅರ್ಥ ಮಾಡ್ಕೊಳದಕ್ಕೆ ನಿನಗೆ ಇನ್ನಷ್ಟು ಸಮಯ ಬೇಕಿತ್ತೋ ಏನೋ?" ಎಂದು ಮೌನ ಮುರಿದ ವಿನ್ಯಾಸ್.

"ಸ್ವಲ್ಪ ಸಮಯವೇನು? ನನ್ನ ಇಡೀ ಜನ್ಮ ಅಲ್ಲೇ ಕಳೆದಿದ್ರೂ ನನಗೊಂದೂ ಅರ್ಥವಾಗ್ತಿರ್ಲಿಲ್ಲ! ರಾಮನಗರದ ಬೆಟ್ಟದಿಂದ ಮರಿ ಬಂಡೆಗಳನ್ನ ಉರುಳಿಸ್ಕೊಂಡು ತಂದು ಇಷ್ಟ ಬಂದಂತೆ ಜೋಡಿಸಿಟ್ಟಂತಿದ್ದವು! ಕಲಾಕೃತಿಯಂತೆ, ಹಾವ ಅಂತೆ, ಭಾವ ಅಂತೆ! ನನಗೇನೂ ಕಾಣಿಸ್ಲಿಲ್ಲಪ್ಪ!" ನಿರಾಶೆಯಿಂದ ನುಡಿದಳು ಅಶ್ವಿನಿ.

"'ಪ್ರತಿಯೊಂದು ಕಲ್ಲಿನಲ್ಲೂ ಆಗಲೇ ಪೂರ್ಣಗೊಂಡ ಶಿಲ್ಪವಿದೆ! ನಾನು ಹೆಚ್ಚಳ ಇರುವ ಕಲ್ಲನ್ನು ಮಾತ್ರ ಕೆತ್ತಿ ತೆಗೆಯುತ್ತೇನೆ ಅಷ್ಟೇ!' ಎಂದನಂತೆ ಮೈಕೆಲೇಂಜಲೋ! ಬಹುಶಃ ಮೇಘನಾಳ ಮನೆಯಲ್ಲಿರೋ ಕಲಾಕೃತಿಗಳಲ್ಲಿ ಹೆಚ್ಚಾಗಿದ್ದ ಕಲ್ಲನ್ನ ಕೆತ್ತಿ ತೆಗೆಯೋಕ್ಕೆ ಆ ಶಿಲ್ಪಿ ಮರೆತಿರಬೇಕು!"


ಇದ್ದಕ್ಕಿದ್ದಂತೆ ಕಾರಿಗೆ ಏನೋ ಗುದ್ದಿದಂತೆ 'ಟನ್' ಎಂದು ಶಬ್ದವಾಯಿತು.

"ಛೆ! ಎಂತಾ ಕೆಟ್ಟ ರಸ್ತೆಯಪ್ಪ! ಕಲ್ಲೇಟು ಬಿತ್ತೇನ್ರೀ?"

"ಕಲ್ಲು ಅಲ್ಲಮ್ಮ! ಕಲಾಕೃತಿ! ಪ್ರತಿಯೊಂದು ಕಲ್ಲಲ್ಲೂ ಪೂರ್ಣಗೊಂಡ ಶಿಲ್ಪವಿದೆ, ನೆನಪಿರಲಿ!"

"ಅಲ್ಲ! ಕಲ್ಲಾಕೃತಿ ಅನ್ನಿ!" ಎಂದು ಹಗುರವಾದ ಮನಸ್ಸಿನೊಂದಿಗೆ ಕಿಲ ಕಿಲ ನಕ್ಕಳು ಅಶ್ವಿನಿ.

■



# ತರತರದ ಉಪಚಾರ

ಎಚ್. ಡುಂಡಿರಾಜ್

ಉಪಚಾರ ಎಂದರೇನು ಎನ್ನುವುದು ಎಲ್ಲರಿಗೂ ಗೊತ್ತಿದೆ. ಆದರೂ ಗೊತ್ತಿರುವ ಪದದ ಅರ್ಥವನ್ನು ನಿಘಂಟಿನಲ್ಲಿ ನೋಡಿದರೆ ಕೆಲವೊಮ್ಮೆ ನಮಗೆ ಗೊತ್ತಿರದ ಮಜವಾದ ಅರ್ಥಗಳು ಸಿಗುತ್ತವೆ. ಉಪಚಾರ ಅಂದರೆ ಸತ್ಕಾರ ಅನ್ನುವುದು ನಮಗೆ ಗೊತ್ತಿರುವ ಒಂದು ಅರ್ಥ. ನಿಘಂಟಿನಲ್ಲಿ ಅದಕ್ಕೆ ತೋರಿಕೆ, ಬೂಟಾಟಿಕೆ, ಲಂಚ ಎಂಬ ಕೆಟ್ಟ ಅರ್ಥಗಳೂ ಇವೆ! ಆದರೆ ನಾನಿಲ್ಲಿ ಬರೆಯ ಹೊರಟಿರುವುದು ಅವುಗಳ ಬಗ್ಗೆ ಅಲ್ಲ. ಉಪಚಾರ ಎನ್ನುವುದು ಸಂಸ್ಕೃತ ಶಬ್ದ. ಉಪ ಅಂದರೆ ಹತ್ತಿರ. ಚಾರ ಅಂದರೆ ನಡೆಯುವುದು. ಉಪಚಾರ ಮಾಡುವವರು ದೂರದಲ್ಲಿ ನಿಂತು ಉಪಚಾರ ಮಾಡುವುದಕ್ಕಿಂತ ಹತ್ತಿರ ಬಂದು ಉಪಚರಿಸಿದರೆ ಅದು ಹೆಚ್ಚು ಪರಿಣಾಮಕಾರಿ. ಉಪ ಎಂಬ ಪದಕ್ಕೆ ಸಹಾಯಕ ಮತ್ತು ಚಾರ ಎಂಬ ಪದಕ್ಕೆ ಸೇವಕ ಎಂಬ ಅರ್ಥವೂ ಉಂಟಲ್ಲವೆ? ಹೀಗಾಗಿ ಉಪಚಾರ ಎಂಬ ಪದವನ್ನು ಉಪ–ಚಾರ ಎಂದು ಒಡೆದು ಅರ್ಥೈಸಿದರೆ ಸಹಾಯಕ ಸೇವಕ ಅಥವಾ Aassistant ಎಂದಾಗುತ್ತದೆ. ಆದ್ದರಿಂದ ಅದನ್ನು ಒಡೆಯುವುದು ಬೇಡ.

ಯಾರಾದರೂ ಉಪಚಾರ ಮಾಡಿದರೆ ಸಂತುಷ್ಟರಾಗುವ ಪ್ರವೃತ್ತಿ ಮನುಷ್ಯರಲ್ಲಿ ಮಾತ್ರವಲ್ಲ ದೇವರಲ್ಲೂ ಇದೆ ಅನ್ನುವುದಕ್ಕೆ ಷೋಡಶೋಪಚಾರ ಪೂಜಾ ಪದ್ಧತಿಯೇ ಸಾಕ್ಷಿ. ಆವಾಹನ ಅಂದರೆ ಆಹ್ವಾನದಿಂದ ಆರಂಭವಾಗುವ ಈ ಪೂಜೆ ಪ್ರದಕ್ಷಿಣೆ , ನಮಸ್ಕಾರ ಮತ್ತು ಪ್ರಾರ್ಥನೆಯಲ್ಲಿ ಕೊನೆಗೊಳ್ಳುವುದು. ದೇವರಿಗೆ ಷೋಡಶ ಉಪಚಾರಗಳೇ ಯಾಕೆ? ಸ್ವಲ್ಪ ಹೆಚ್ಚು ಅಥವಾ ಕಡಿಮೆ ಮಾಡಿದರೆ ಏನಾಗುತ್ತದೆ? ಷೋಡಶಿಯರಿಗೂ ಷೋಡಶೋಪಚಾರಕ್ಕೂ ಏನಾದರೂ ಸಂಬಂಧವಿರಬಹುದೆ? ಎಂಬುದು ನನಗೆ ಸರಿಯಾಗಿ ಗೊತ್ತಿಲ್ಲ. ಸರಿಯಾಗಿ ಗೊತ್ತಿಲ್ಲದ ಮೇಲೆ ತಪ್ಪಾಗಿ ಹೇಳುವ ಅಭ್ಯಾಸವೂ ನನಗಿಲ್ಲ. ಆಸಕ್ತರು ಈ ಕುರಿತು ಸಂಶೋಧನೆ ಕೈಗೊಳ್ಳಬಹುದು. ಭೀಮನ ಅಮಾವಾಸ್ಯೆಯಂದು ಪತ್ನಿಯು ದೇವರಿಗೆ ಪೂಜೆ ಮಾಡುವಂತೆ ಪತಿದೇವರಿಗೂ ಆರತಿ ಬೆಳಗಿ ಪೂಜೆ ಮಾಡುವ ಪದ್ಧತಿ ಕೆಲವು ಕಡೆ ಇದೆ. ಈ ಪೂಜೆ ಒಂದು ದಿನಕ್ಕೆ ಮಾತ್ರ ಸೀಮಿತ. ಮರುದಿನ ಏನಾಗುತ್ತದೆ ಎಂದು ತಿಳಿಯಲು ಈ ಕೆಳಗಿನ ಹನಿಗವನವನ್ನು ಓದಬಹುದು:

**ಭೀಮನ ಅಮಾವಾಸ್ಯೆ ದಿನ**
**ಪತಿದೇವರಿಗೆ ಆರತಿ ಬೆಳಗಿ**
**ಎರಗಿದಳು ಅವನ ಅಡಿಗೆ**
**ಮರುದಿನ ಎಂದಿನ ಹಾಗೆ**
**ಇವಳು ಮೊಬೈಲ್ ನಲ್ಲಿ ಮುಳುಗಿ**
**ಯಜಮಾನರದ್ದೆ ಅಡಿಗೆ!**



ದೇವರಿಗೆ ಮತ್ತು ಪತಿದೇವರಿಗೆ ಮಾಡುವ ಉಪಚಾರದಲ್ಲಿರುವ ವ್ಯತ್ಯಾಸವನ್ನು ಸೂಚಿಸುವ ಇನ್ನೂ ಒಂದು ಹನಿಗವನವನ್ನು ಇಲ್ಲಿ ಉಲ್ಲೇಖಿಸಿದರೆ ಅಪ್ರಸ್ತುತ ಆಗಲಾರದು. ಅದು ಹೀಗಿದೆ:

**ದೇವರಿಗೆ ಮೊದಲು ನೈವೇದ್ಯ**
**ನಂತರ ಮಂಗಳಾರತಿ**
**ಪತಿದೇವರಿಗೆ**
**ಮೊದಲು ಮಂಗಳಾರತಿ**
**ನಂತರ ನೈವೇದ್ಯ!**

ದೇವತೆಗಳ ಹಾಗೆ ಋಷಿ ಮುನಿಗಳೂ ಉಪಚಾರ ಪ್ರಿಯರು ಎಂಬುದಕ್ಕೆ ನಮ್ಮ ಪುರಾಣಗಳಲ್ಲಿ ಪುರಾವೆ ಸಿಗುತ್ತದೆ. ಉತ್ತಮ ಉಪಚಾರ ಮಾಡಿದರೆ ಸಂತುಷ್ಟರಾಗಿ ವರ ನೀಡುತ್ತಿದ್ದ ಮುನಿಗಳು, ಉಪಚಾರದಲ್ಲಿ ತುಸು ವ್ಯತ್ಯಯವಾದರೂ ಮುನಿಸಿಕೊಂಡು ಶಾಪ ಕೊಡುತ್ತಿದ್ದರು. ಮುಟ್ಟಿದರೆ ಮುನಿ ಎನ್ನುವ ಹಾಗಿದ್ದ ದೂರ್ವಾಸ ಮುನಿಯನ್ನು ಉಪಚಾರದಿಂದ ಸಂತೃಪ್ತಿಪಡಿಸಿ ಮಕ್ಕಳಾಗುವಂಥ ಐದು ವರಗಳನ್ನು ಪಡೆದುಕೊಂಡ ಕುಂತಿಯ ಕತೆ ಯಾರಿಗೆ ಗೊತ್ತಿಲ್ಲ. ಉಪಚಾರದಲ್ಲಿ ನಿರ್ಲಕ್ಷ್ಯ ತೋರಿದ್ದಕ್ಕೆ ದುಶ್ಯಂತ ನಿನ್ನನ್ನು ಮರೆತುಬಿಡುವಂತಾಗಲಿ ಎಂದು ಶಕುಂತಲೆಗೆ ಶಾಪ ಕೊಟ್ಟದ್ದೂ ಅದೇ ದೂರ್ವಾಸ.

ದೇವರು ಮತ್ತು ಪುರಾಣ ಬಿಟ್ಟು ವರ್ತಮಾನಕ್ಕೆ ಬರೋಣ. ಮನೆಯ ಸದಸ್ಯರಿಗೆ ಉಪಚಾರದ ಅಗತ್ಯ ಇರುವುದಿಲ್ಲ. ಆದರೆ ಮನೆಗೆ ಬರುವ ನೆಂಟರು, ಸ್ನೇಹಿತರು ಮತ್ತಿತರ ಅತಿಥಿಗಳು ಮನೆಯವರಿಂದ ಒಳ್ಳೆಯ ಉಪಚಾರವನ್ನು ನಿರೀಕ್ಷಿಸುತ್ತಾರೆ. ಅತಿಥಿ ಅಂದರೆ ತಿಥಿ ಇಲ್ಲದೆ, ಅಂದರೆ ಅನಿರೀಕ್ಷಿತವಾಗಿ ಬರುವವರು ಎಂದು ಅರ್ಥ. ಹಾಗೆ ಬಂದಾಗಲೂ ಅವರಿಗೆ 'ಅತಿಥಿ ದೇವೋ ಭವ' ಎಂದು ದೇವರಿಗೆ ಮಾಡುವಂಥ ಉಪಚಾರ ಮಾಡುವುದು ಭಾರತೀಯರ ಸಂಸ್ಕೃತಿ. ಆದರೆ ಈಗ ವಿಶೇಷವಾಗಿ ಅತಿಥಿಗಳು ಸಾಮಾನ್ಯವಾಗಿ ಮುಂಚಿತವಾಗಿ ತಿಳಿಸಿಯೇ ಬರುತ್ತಾರೆ. ಇಲ್ಲದಿದ್ದರೆ ಮನೆಯ ಬೀಗವನ್ನು ನೋಡಬೇಕಾಗುತ್ತದೆ ಎಂಬುದು ಅವರಿಗೆ ತಿಳಿದಿರುತ್ತದೆ.

ಅತಿಥಿಗಳು ಮುಂಚಿತವಾಗಿ ತಿಳಿಸಿ ಬಂದರೆ ಉಪಚಾರ ಮಾಡಲು ಅನುಕೂಲವಾಗುತ್ತದೆ. ಅತಿಥಿಗಳು ಬಂದಾಗ ಅವರನ್ನು ಬನ್ನಿ ಬನ್ನಿ ಎಂದು ನಗುಮೊಗದಿಂದ ಸ್ವಾಗತಿಸುವುದು ಆವಾಹನೆ. ನಂತರ ಕುಳಿತುಕೊಳ್ಳಿ ಎಂದು ಆಸನ ತೋರಿಸುವುದೂ ಬಹಳ ಮುಖ್ಯ. ಏಕೆಂದರೆ ನಾ. ಕಸ್ತೂರಿಯವರ ಪ್ರಕಾರ ಬಹಳಷ್ಟು ಮನೆಗಳಲ್ಲಿನ ಪೀಠೋಪಕರಣಗಳ ಮೇಲಿನ ಧೂಳು ತೆಗೆಯುವವರೇ ಅತಿಥಿಗಳು! ಆದ್ದರಿಂದಲೇ ಅವರು ಅನರ್ಥಕೋಶದಲ್ಲಿ ಧೂಳು ಎಂಬ ಪದಕ್ಕೆ ಆಗಂತುಕರು ಬಂದು ಕುಳಿತು ನಮ್ಮ ಕುರ್ಚಿಗಳ ಮೇಲಿಂದ ತೆಗೆಯುವ ವಸ್ತು ಎಂಬ ಅರ್ಥವನ್ನು ನೀಡಿದ್ದಾರೆ.

ಅತಿಥಿಗಳು ಕುಳಿತುಕೊಂಡ ಬಳಿಕ ನೀರು ಬೇಕೆ ? ಎಂದು ಕೇಳುವುದು ಉಪಚಾರದ ಪ್ರಮುಖ ಅಂಗ. ಉತ್ತರ ಕರ್ನಾಟಕದ ಕಡೆ ನೀರು ಬೇಕೆ? ಎಂದು ಕೇಳುವುದಿಲ್ಲ. ಮನೆಯ ಹೆಣ್ಣು ಮಗಳು ಒಂದು ಟ್ರೇ ಮೇಲೇ ನೀರು ತುಂಬಿದ ಗ್ಲಾಸು ತಂದೇ ಬಿಡುತ್ತಾರೆ. ಆಕೆ ನಗುನಗುತ್ತಾ "ತಗೋರಿ" ಅಂದಾಗ ಬೇಡವೆನ್ನಲು ಮನಸ್ಸಾಗುವುದಿಲ್ಲ. ಬಾಯಾರಿಕೆ ಆಗದಿದ್ದರೂ ನೀರು ಕುಡಿಯಬೇಕೆನಿಸುತ್ತದೆ.



ಅತಿಥಿಗಳು ದೂರದ ಊರಿನಿಂದ ಬಂದಿದ್ದರೆ ನೀರು ಕುಡಿಸಿದ ಬಳಿಕ ರೆಸ್ಟ್ ರೂಮ್ ಎಲ್ಲಿದೆ ಎಂದು ಬೇಗ ತೋರಿಸಿದರೆ ಅವರಿಗೆ ಹೆಚ್ಚು ಸಂತೋಷವಾಗುತ್ತದೆ.

ಬಂದವರು ಯುವ ಜನಾಂಗದವರಾದರೆ ಎಲ್ಲಕ್ಕಿಂತ ಮೊದಲು ಕೇಳಬೇಕಾದ್ದು **"ವೈಫೈ ಪಾಸ್ ವರ್ಡ್ ಬೇಕಾ?"**. ಆಗ ನಿಮ್ಮ ಆತಿಥ್ಯಕ್ಕೆ ಅತ್ಯುತ್ತಮ ರೇಟಿಂಗ್ ಸಿಗುತ್ತದೆ. ಮನೆಗಳಲ್ಲಿ ಅತಿಥಿಗಳಿಗೆ ಮಾಡುವ ಉಪಚಾರದ ಗುಣಮಟ್ಟ ಹಲವಾರು ಅಂಶಗಳ ಮೇಲೆ ನಿರ್ಧಾರವಾಗುತ್ತದೆ. ಅವುಗಳಲ್ಲಿ ಕೆಲವು ಹೀಗಿವೆ:

1. ಅತಿಥಿಗಳೊಂದಿಗಿನ ಸಂಬಂಧ. ನೆಂಟರು ನಿರೀಕ್ಷಿಸುವಷ್ಟು ಉಪಚಾರವನ್ನು ಸ್ನೇಹಿತರು ಬಯಸುವುದಿಲ್ಲ. ಹತ್ತಿರದ ನೆಂಟರಿಗೆ ಮಾಡುವಷ್ಟು ಉಪಚಾರವನ್ನು ದೂರದ ನೆಂಟರಿಗೆ ಯಾರೂ ಮಾಡುವುದಿಲ್ಲ. ಹತ್ತಿರದ ನೆಂಟರಿಗೆ ಮಾಡಿದ ಉಪಚಾರ ಸರಿಯಾಗದಿದ್ದರೆ ಅವರು ದೂರುವ ನೆಂಟರಾಗುತ್ತಾರೆ! ಬಂದವರು ಅತಿಥೇಯರ ಮೇಲಧಿಕಾರಿ ಅಥವಾ ಅವರಿಗೆ ಪ್ರಯೋಜನಕ್ಕೆ ಬರುವವರಾದರೆ ಉಪಚಾರದ ಮಟ್ಟ ಏರುತ್ತದೆ. ಬಂದವರು ಹೆಂಡತಿಯ ಕಡೆಯವರಾದರೆ ಉಪಚಾರದ ಪ್ರಮಾಣ ಜಾಸ್ತಿ. ಅಳಿಯಂದಿರಿಗೆ ಮಾವನ ಮನೆಯಲ್ಲಿ ಒಳ್ಳೆಯ ಉಪಚಾರ ಸಿಗುತ್ತದೆ. ಅದರಲ್ಲೂ ಮೊದಲ ದೀಪಾವಳಿಗೆ ಬಂದ ಹೊಸ ಅಳಿಯನಿಗೆ ರಾಜೋಪಚಾರ ಮಾಡಲೇಬೇಕು. ಆದರೆ ಉಪಚಾರ ಸಿಗುತ್ತದೆ ಅಂತ ಮಾವನ ಮನೆಯಲ್ಲಿ ಠಿಕಾಣಿ ಹೂಡಿದರೆ ಏನಾಗುತ್ತದೆ ಗೊತ್ತೆ? ಅದಕ್ಕೆ ಉತ್ತರ ಇಲ್ಲಿದೆ:

ಹೊಸ ಅಳಿಯನೆಂದು ವಿಶೇಷ ಉಪಚಾರ  ಬಗೆಬಗೆಯ ಸಿಹಿ ತಿಂಡಿ ಭಾರೀ ಸತ್ಕಾರ

**ಏಳು ದಿನವಾದರೂ**
**ಅಳಿಯಂದಿರು ಏಳರು**
**ಎಂಟನೆ ದಿನ ಅಡಿಗೆ ಸಖತ್ ಖಾರ!**

1. ಗುಪ್ತ ಕಾರ್ಯಸೂಚಿ: ಕೆಲವು ಅತಿಥೇಯರ ಉಪಚಾರದ ಹಿಂದೆ ಅವರ ಶ್ರೀಮಂತಿಕೆಯ ಪ್ರದರ್ಶನದ ಗುಪ್ತ ಕಾರ್ಯಸೂಚಿ ಇರುತ್ತದೆ.

2. ಮುಯ್ಯಿಗೆ ಮುಯ್ಯಿ: ಬಂದ ಅತಿಥಿಗಳು ಅವರ ಮನೆಗೆ ನಾವು ಹೋಗಿದ್ದಾಗ ಉಪಚಾರ ಮಾಡಿ ಒಳ್ಳೆಯ ಆತಿಥ್ಯ ನೀಡಿದ್ದರೆ ನಾವೂ ಹಾಗೆ ಮಾಡುತ್ತೇವೆ. ಇಲ್ಲದಿದ್ದರೆ ಮುಯ್ಯಿಗೆ ಮುಯ್ಯಿ!

3. ಪ್ರಾದೇಶಿಕತೆ: ನಾನು ಗಮನಿಸಿದಂತೆ ಮಲೆನಾಡಿನವರು ಉಪಚಾರದಲ್ಲಿ ಎತ್ತಿದ ಕೈ. ಉತ್ತರ ಕರ್ನಾಟಕದವರೂ ಚೆನ್ನಾಗಿ ಉಪಚರಿಸುತ್ತಾರೆ. ಆದರೆ ಉಡುಪಿಯವರು ಅತಿಥಿಗಳು ಹೊರಟು ನಿಂತ ಮೇಲೆ **"ಕುಡೀಲಿಕ್ಕೆ ಏನು ಮಾಡಲಿ?"** ಅಂತ ಕೇಳುತ್ತಾರಂತೆ! ಆದ್ದರಿಂದ ಬಾಯಿ ಮಾತಿನ ಉಪಚಾರಕ್ಕೆ 'ಉಡುಪಿ ಉಪಚಾರ' ಅನ್ನುವುದುಂಟು. ಹೋಟೆಲ್ ಉದ್ಯಮದಲ್ಲಿ ಜನಪ್ರಿಯರಾಗಿರುವ ಉಡುಪಿಯವರು ಉಪಚಾರದಲ್ಲಿ ಹಿಂದೆ ಬಿದ್ದಿರುವುದಕ್ಕೆ ಒಂದು ಕಾಲದಲ್ಲಿ ಅಲ್ಲಿದ್ದ ಕಡು ಬಡತನವೇ ಕಾರಣವಾಗಿರಬಹುದು. ಅಂಗಡಿ, ಹೋಟೆಲ್, ವಸತಿ ಗೃಹ, ಖಾಸಗಿ ರಂಗದ ಕಚೇರಿಗಳು ಮುಂತಾದ ಕಡೆಗಳಲ್ಲಿ ಗ್ರಾಹಕರಿಗೆ ಉತ್ತಮ ಉಪಚಾರ ಸಿಗುತ್ತದೆ. ವಿಮಾನದಲ್ಲಿ ಗಗನ ಸಖಿಯರು ಮಾಡುವ ಉಪಚಾರದ ಸೊಗಸನ್ನು ವಿವರಿಸಲು ಹೋದರೆ ಅದೇ ಒಂದು ಲೇಖನವಾಗುತ್ತದೆ. ಖಾಸಗಿ ರಂಗದಲ್ಲಿರುವ ಉಪಚಾರಕ್ಕೆ ಕಾರಣ ಅಲ್ಲಿರುವ ತೀವ್ರ ಸ್ಪರ್ಧೆ. ಸರಕಾರಿ ರಂಗದಲ್ಲಿ ಕಂಡುಬರುವ ಉಪಚಾರದ ಕೊರತೆಗೆ ಸ್ಪರ್ಧೆ ಇಲ್ಲದಿರುವುದೂ ಒಂದು ಕಾರಣ. ಅಂದ ಹಾಗೆ ಸರಕಾರಿ ರಂಗದಲ್ಲಿ ಉಪಚಾರದ ಕೊರತೆ ಇರುವುದು ಗ್ರಾಹಕರಿಗೆ



ಮಾತ್ರ, ಅಧಿಕಾರಿಗಳಿಗೆ, ಶಾಸಕರಿಗೆ, ಮಂತ್ರಿಗಳಿಗೆ ಉಪಚಾರ ಹೇಗೆ ಮಾಡಬೇಕು ಅನ್ನುವುದಕ್ಕೆ ಕಟ್ಟುನಿಟ್ಟಾದ ಪ್ರೊಟೊಕಾಲ್ ಇರುತ್ತದೆ. ಅದರಲ್ಲಿ ಸ್ವಲ್ಪವೂ ವ್ಯತ್ಯವಾಗುವಂತಿಲ್ಲ. ಬ್ಯಾಂಕ್ ಮತ್ತು ಸರಕಾರಿ ಕಚೇರಿಗಳಲ್ಲಿ ಪರಿವೀಕ್ಷಣೆ (Inspection) ಮತ್ತು ಲೆಕ್ಕಪತ್ರ ಪರಿಶೋಧನೆಗೆ ಬಂದವರಿಗೂ ಒಳ್ಳೆಯ ಉಪಚಾರ ಸಿಗುತ್ತದೆ. ಇದಕ್ಕೆ ಕಾರಣ ನಿಮಗೆ ತಿಳಿದಿದೆ ಎಂದು ಭಾವಿಸುತ್ತೇನೆ!

ಹಿಂದಿನ ಕಾಲದಲ್ಲಿ ಮದುವೆ ಮುಂಜಿ ಮುಂತಾದ ಸಮಾರಂಭಗಳು ಮನೆಯಲ್ಲೆ ನಡೆಯುತ್ತಿದ್ದದ್ದರಿಂದ ಅತಿಥಿಗಳಿಗೆ ಒಳ್ಳೆಯ ಉಪಚಾರ ಸಿಗುತ್ತಿತ್ತು. ಮದುವೆಗಳು ಛತ್ರಕ್ಕೆ ಸ್ಥಳಾಂತರಗೊಂಡ ಬಳಿಕ ಉಪಚಾರದ ಪ್ರಮಾಣ ಕಡಿಮೆಯಾಯಿತು. ಆರತಕ್ಷತೆಯಲ್ಲಿ ಸಾಮಾನ್ಯವಾಗಿ ಬಫೆ ಊಟ ಇರುವುದರಿಂದ ಅಲ್ಲಿ ಯಾರೂ ಉಪಚಾರ ನಿರೀಕ್ಷಿಸುವುದಿಲ್ಲ. ವಧು ವರರಿಗೆ ಕೈಕೊಟ್ಟ ಬಳಿಕ ಅತಿಥೇಯರು "ಊಟ ಮಾಡ್ಕೊಂಡು ಹೋಗಿ" ಅಂದರೆ ಅದೇ ಉಪಚಾರ. ಕೆಲವರಿಗೆ ಅಷ್ಟು ಹೇಳುವುದಕ್ಕೂ ಬಿಡುವಿರುವುದಿಲ್ಲ. ಮದುವೆ ದಿನ ಹೋದವರಿಗೆ ಕುಳಿತುಕೊಂಡು ಬಾಳೆ ಎಲೆ ಊಟ ಮಾಡುವ ಅವಕಾಶ ಇರುತ್ತದೆ. ಆಗ ಹೆಣ್ಣು ಮತ್ತು ಗಂಡಿನ ಕಡೆಯವರು ಗುಂಪು ಗುಂಪಾಗಿ ಬಂದು "ಸಾವಕಾಶ", "ನಿಧಾನವಾಗಿ ಊಟ ಮಾಡಿ "ಎಂದು ಉಪಚಾರ ಮಾಡುತ್ತಾರೆ. ಸಾವಕಾಶ ಎನ್ನುವುದು ಅತಿಥೇಯರ ಕಡೆಯ ಮಹಿಳೆಯರಿಗೆ ತಮ್ಮ ದುಬಾರಿ ವೇಷ ಭೂಷಣವನ್ನು ಪ್ರದರ್ಶಿಸಲು ಒಂದು ಸದವಕಾಶ.

ಬೆಂಗಳೂರಿನಲ್ಲಿ ಈಗೀಗ ಮದುವೆ ಛತ್ರದಲ್ಲಿ ವಿಪರೀತ ಜನಜಂಗುಳಿ ಇರುತ್ತದೆ. ಆರತಕ್ಷತೆ ದಿನ ಬಫೆಯಲ್ಲಿ ರಶ್ ಅಂತ ಬೇರೆ ಕೆಲಸವಿಲ್ಲದ ನನ್ನಂಥ ನಿವೃತ್ತರು ಸಾಮಾನ್ಯವಾಗಿ ಮದುವೆ ದಿನ ಬಾಳೆ ಎಲೆ ಊಟಕ್ಕೆ ಹೋಗುತ್ತಾರೆ. ಈಗೀಗ ಅಲ್ಲೂ ಎಲೆ ಹಿಡಿಯುವುದು ಕಷ್ಟವಾಗುತ್ತಿದೆ. ಈಚೆಗೆ ತುಂಬಾ ಜನರು ಸೇರಿದ್ದ ಒಂದು ಮದುವೆಯಲ್ಲಿ ಎಲೆಯ ಮುಂದೆ ಕುಳಿತಾಗ ನನಗೆ ಅದೆಷ್ಟು ಖುಷಿಯಾಯಿತು ಅಂದರೆ ಆ ಬಗ್ಗೆ ಹೀಗೊಂದು ಹನಿಗವನವನ್ನೇ ಬರೆದೆ:

**ಸಂತೋಷ**

**ಮದುವೆ ಛತ್ರದಲ್ಲಿ**
**ಹೋರಾಡಿ, ಮುನ್ನುಗ್ಗಿ**
**ಕೊನೆಗೂ ಊಟಕ್ಕೆ ಕೂತೆ**
**ಸಂತೋಷವಾಯಿತು**
**ಸಚಿವ ಸಂಪುಟದಲ್ಲಿ**
**ಸಿಕ್ಕಂತೆ ಒಳ್ಳೆಯ ಖಾತೆ!**

■

**ಅತ್ತೆ~ಸೊಸೆ**

ಸೊಸೆಯುಲಿದಳು ಖುಷಿಯಿಂದ ನೀವದೆಷ್ಟು ಒಳ್ಳೆಯವರು ಒಪ್ಪೀರಲ್ಲ ನಾ ಹೇಳಿದ್ದನ್ನೆಲ್ಲ ಅನುಭವಿ ಅತ್ತೆ ನುಡಿದಳು ಮೂರ್ಖರೊಡನೆ ವಾದಮಾಡಿ ನನಗಭ್ಯಾಸವಿಲ್ಲ.....

**– ಜ್ಯೋತಿ ರಾಜೇಶ್**



# ಬುದ್ಧಿವಂತರಿಗೆ ಮಾತ್ರ

ಗೌತಮ

ನನಗೆ ಮುಂಚಿನಿಂದಲೂ, ಅಂದರೆ ನನಗೆ ಬುದ್ಧಿ ಬಂದಾಗಿನಿಂದಲೂ, ಅಂದರೆ ನಾನು ಎಂಟು ಒಂಬತ್ತನೇ ಕ್ಲಾಸಿನಲ್ಲಿದ್ದಾಗಿನಿಂದಲೂ ನಾನು ಹಾಗೇನೇ. ಏನಾದರೂ ಹೊಸದನ್ನು ಅನ್ವೇಷಿಸಬೇಕು, ಯಾರೂ ಮಾಡದ ಸಾಧನೆಯನ್ನು ನಾನು ಮಾಡಬೇಕು, ನ್ಯೂಟನ್ನು ಐನ್‌ಸ್ಟೀನರಂತೆ ಸೂರ್ಯ ಚಂದ್ರರಿರುವವರೆಗೂ ನನ್ನ ಹೆಸರು ಚಾಲ್ತಿಯಲ್ಲಿರಬೇಕು, ನನ್ನ ಸಾಧನೆಯನ್ನು ಕಂಡು ಇಡೀ ಪ್ರಪಂಚವೇ ನಿಬ್ಬೆರಗಾಗಿ ಮೂಗಿನ ಮೇಲೆ ತೋರುಬೆರಳನ್ನಿಟ್ಟುಕೊಳ್ಳಬೇಕು ಮುಂತಾದವೇ ನನ್ನ ಆಸೆ.ನನ್ನ ಚೊಚ್ಚಲ ಪ್ರಯೋಗ ಆಗಲೇ ಆಗಿದ್ದು, ಅಂದರೆ ನಾನು ಹೈಸ್ಕೂಲಿನಲ್ಲಿದ್ದಾಗ. ಜ್ವರ ಬಂದಿತ್ತು. ಅಮ್ಮ ಡಾಕ್ಟರ ಹತ್ತಿರ ಕರಕೊಂಡುಹೋದಳು. ಮಾಮೂಲಿಯಾಗಿ ನೋಡೋದನ್ನೆಲ್ಲಾ ನೋಡಿ ಚೀಟಿ ಬರಕೊಟ್ಟರು. ಹೊರಗೆ ಬಂದೆವು. ಸಡನ್ನಾಗಿ ನೆನಪಿಗೆ ಬಂತು,

ಹೊಟ್ಟೇಗೇನು ತಿನ್ನಬೇಕು ಕೇಳಲಿಲ್ಲವಲ್ಲಾ ಅನ್ನೋದು. ಹಿಂತಿರುಗಿ ಹೋಗಿ 'ಡಾಕ್ಟ್ರೇ, ಹೊಟ್ಟೇಗೆ ಏನು ತೊಗೊಳ್ಳಿ?' ಕೇಳಿದೆ. 'ಏನಾದರೂ ಲೈಟಾಗಿರೋದನ್ನ ತೊಗೋಪ್ಪ' ಅಂದರು. 'ಸರಿ' ಅಂದೆ.

ಒಂದು ವಾರದ ಹಿಂದೆಯಷ್ಟೇ ಫಿಸಿಕ್ಸ್ ಕ್ಲಾಸಲ್ಲಿ ಮೇಷ್ಟ್ರು ಹೇಳಿದ್ದು ಇನ್ನೂ ಕಿವೀಲಿತ್ತು ಪ್ರಪಂಚದಲ್ಲಿರೋ ವಸ್ತುಗಳನ್ನೆಲ್ಲ ಮೂರು ಗುಂಪುಗಳಾಗಿ ವಿಂಗಡಿಸಬಹುದು. ಘನ, ದ್ರವ ಮತ್ತು ಅನಿಲ. ಅದರಲ್ಲಿ ಲೈಟಾಗಿರೋದು ಯಾವುದು? ಅನಿಲ. ಯಾವ ಅನಿಲವನ್ನೂ ತಿನ್ನೋಕಾಗಲ್ಲ. ಲೈಟಾಗಿರೋ ನೆಕ್ಸ್ಟ್ ವಸ್ತು ಅಂದರೆ ದ್ರವ. ನೀರು ಲೈಟು. ಅದಕ್ಕಿಂತಲೂ ಲೈಟ್ ಆಗಿರೋದು ಯಾವುದೂ? ಗೊತ್ತಾಗಲಿಲ್ಲ. ಅಮ್ಮ ಮುದ್ದೆ ಮಾಡಬೇಕಾದರೆ ನೀರಿಡ್ತಾಳೆ. ಅದರ ಮೇಲೆ ಒಂದು ಚಮಚ ಎಣ್ಣೆ ಹಾಕ್ತಾಳೆ. ಹೊಳೀತು ನಂತಲೇಗೆ.. ಅದು ತೇಲತ್ತೆ. ದೇರ್‌ಫೋರ್ ಎಣ್ಣೆ ನೀರಿಗಿಂತಲೂ ಹಗುರ. ಎಣ್ಣೆ ಈಸ್ ಲೈಟರ್ ದೆನ್ ವಾಟರ್. ಎಣ್ಣೆಗಿಂತಲೂ ಹಗುರವಾದದ್ದೇನು? ತಲೆ ಕೆರೆದುಕೊಂಡೆ. ಅಡುಗೆ ಮನೆಯಲ್ಲಿ 'ಘಂ' ಅಂತ ವಾಸನೆ ಹೊಡೀತು. ಹೋದೆ. ಅಮ್ಮ ಬೋಂಡ ಕರೀತಾ ಇದ್ದಳು. ಬೋಂಡ ಎಣ್ಣೇಲಿ ತೇಲ್ತಾ ಇದೆ. ಖುಷ್ಯಾಗಿ ಹೋಯ್ತು. ಬೋಂಡ ಎಣ್ಣೇಗಿಂತಲೂ ಲೈಟಾಗಿರತ್ತೆ! ಸೋ, ಬೋಂಡ ಈಸ್ ಲೈಟೆಸ್ಟ್ ಅಂತ ಅರ್ಥ ಆಗಿಹೋಯಿತು.

ಆರ್ಕಿಮಿಡೀಸ್ ಮಾಡಿದ ಹಾಗೆ ನಾನು ಮಾಡಲಿಲ್ಲ. ಬದಲಿಗೆ, 'ಅಮ್ಮ, ನನಗೊಂದು ಆರು ಬೋಂಡ ಕೊಡಮ್ಮ' ಅಂದೆ. 'ಅಯ್ಯೊ ಕತ್ತೆ ಮುಂಡೇದೆ. ಜ್ವರ ಬಂದಿದೆ, ಬೋಂಡ ತಿಂತೀಯಾ' ಅಂತ ಬೈದಳು. 'ಅಯ್ಯೊ ಅಮ್ಮಾ, ನಿಂಗೊತ್ತಾಗಲ್ಲ, ದ್ರವದಲ್ಲಿ ತೇಲೋ ವಸ್ತುಗಳು ಆ ದ್ರವಕ್ಕಿಂತ ಲೈಟಾಗಿರತ್ತೆ ಅಂತ ನಮ್ಮ ಫಿಸಿಕ್ಸ್ ಬುಕ್ಕಲಿದೆಯಮ್ಮಾ' ಅಂದೆ. 'ಏನಾದರೂ ಮಾಡಿಕೋಹೋಗು' ಅಂತ ಬಿಸಿಬಿಸಿ ಆರು ಬೋಂಡ ಕೊಟ್ಟಳು. ಚಪ್ಪರಿಸಿಕೊಂಡು ತಿಂದುಹಾಕಿದೆ. ಮಾರನೆ ದಿನ ಜ್ವರ ಜಾಸ್ತಿ ಆಯಿತು. ಆ ಡಾಕ್ಟರು ನನ್ನನ್ನೇ ಬೈಯ್ಯೋದಾ? ಡಾಕ್ಟರಿಗೆ ಸರಿಯಾಗಿ ಹೇಳಬೇಕು ಅನ್ನೋಷ್ಟು ಕೋಪ ಬಂದಿತ್ತು. ಅಯ್ಯೋ, ಹಾಗೇನಾದರೂ ಹೇಳಿದರೆ, ಕೋಪದಿಂದ ಒಂದಕ್ಕೆರಡು ಇಂಜೆಕ್ಷನ್ ಕೊಟ್ಟುಬಿಟ್ಟರೆ ನಾನೆಲ್ಲಿಗೆ ಹೋಗಲಿ ಅಂತ ಬಾಯಿ ಮುಚ್ಚಿಕೊಂಡು ತೆಪ್ಪಗೆ ಆಚೆಗೆ ಬಂದೆ. ಅದೇನು ಡಾಕ್ಟರುಗಳೋ ಏನೋ. ಈ ವಿಷಯ ನಮ್ಮಮ್ಮನಿಂದಲೋ ಅಥವಾ ಡಾಕ್ಟರಿಂದಲೋ ಜಗಜ್ಜಾಹೀರಾಗಿಯೋಯಿತು.



ಅದನ್ನ ಎಲ್ಲರೂ ಆ ವರ್ಷದ ಜೋಕ್ ಅಂತ ಪರಿಗಣಿಸಿಬಿಟ್ಟರು. ಹುಚ್ಚು ಜನ. ಬುದ್ಧೀಗೆ ಬೆಲೆ ಕೊಡಬೇಕು ಅನ್ನೋ ಬುದ್ಧಿ ಇಲ್ಲದ ಜನ. ಆದರೆ ಒಂದು ವಿಷಯ ನಿಮಗೆ ಗೊತ್ತಿರಲಿಕ್ಕಿಲ್ಲ. ಈ ಜೋಕು ಇವತ್ತಿಗೂ ನನ್ನ ಹೆಸರಿನಲ್ಲೇ ಚಾಲ್ತಿಯಲ್ಲಿದೆ. ಅಂದರೆ ಈ ಜೋಕಿನ ಜನಕ ನಾನೇ ಎನ್ನುವುದು ಅಘೋಷಿತ ದಾಖಲೆಯಾಗುಳಿದಿದೆ. ಈ ಶಿಕ್ಷಣ ಪದ್ಧತಿಯೇ ಸರಿ ಇಲ್ಲ ಅಂದರೆ ಅನೇಕ ಜನರ ಕಣ್ಣು ಕೆಂಪಗಾಗಬಹುದು. ಆದರೆ ಅದೇ ವಾಸ್ತವ. ಆ ಪರೀಕ್ಷೆಗಳೊ? ನೆನಪಿನ ಶಕ್ತಿಯನ್ನವಲಂಬಿಸಿ ಬುದ್ಧಿಮತ್ತೆಯನ್ನು ಅಳೆಯೋ ದಡ್ಡ ಕ್ರಮ ಅಂತ ನನ್ನ ದೃಢವಾದ ನಂಬಿಕೆ, ಯಾರು ಒಪ್ಪಲಿ ಬಿಡಲಿ. ಆದರೂ, ನದಿಯಲ್ಲಿ ಬಿದ್ದ ಮೇಲೆ ನದಿಯ ಜೊತೆಗೇ ಹರಿಯಬೇಕಲ್ಲ. ನಮ್ಮ ಕರ್ಮ.

ಇಂಥ ಪರೀಕ್ಷಾ ಪದ್ಧತಿಯಲ್ಲಿ ಉತ್ತೀರ್ಣರಾಗಿ ವಿಜ್ಞಾನಿಗಳಾಗಿರೋರಿಗೆ ಇನ್ನೆಷ್ಟು ಮಟ್ಟಿಗಿನ ಬುದ್ಧಿ ಇದ್ದೀತು ನೀವೇ ಹೇಳಿ. ಅಲ್ಲಾ, ಅಮೆರಿಕಾಗೆ ಹೋಗಬೇಕಾದರೆ, ಲಕ್ಷಾಂತರ ರುಪಾಯಿ ಖರ್ಚು ಮಾಡಿಕೊಂಡು, ಗಂಟೆಗಟ್ಟಲೆ ವಿಮಾನದಲ್ಲಿ ಕೂತುಕೊಂಡು ಹೋಗ್ತಾರಲ್ಲಾ, ಇವರಿಗೆ ಏನು ಹೇಳಬೇಕು. ಸ್ವಲ್ಪಾನೂ ಕಾಮನ್ ಸೆನ್ಸೇ ಇಲ್ಲವಾ ಇವರಿಗೆಲ್ಲ. ಏರೋಪ್ಲೇನನ್ನ ಮೇಲಕ್ಕೆ ತೊಗೊಂಡುಹೋಗಿ, ಅಲ್ಲೇ ನಿಲ್ಲಿಸಿಬಿಡೋದು. ತಿರುಗೋ ಭೂಮಿ ಹೇಗಿದ್ದರೂ ಏರೋಪ್ಲೇನ್ ಕೆಳಗೆ ಬಂದೇ ಬರತ್ತೆ. ಆ ಸಮಯಾನ ಅಡ್ಜಸ್ಟ್ ಮಾಡಿಕೊಂಡು ಪ್ಲೇನನ್ನ ಕೆಳಗಿಳಿಸಿದರೆ ಆಯ್ತಪ್ಪ. ಇದನ್ನ ಒಂದು ಲೇಖನ ಮಾಡಿ ಪತ್ರಿಕೆಗೆ ಕಳಿಸಿದೆ. ಏಪ್ರಿಲ್ ಮೊದಲ ವಾರದ ಸಂಚಿಕೆಯಲ್ಲಿ ಪ್ರಕಟವೂ ಆಯಿತು. ನನ್ನ ಲೇಖನ, 'ಅದ್ಭುತ!!!!!' ಅಂತ ಐದು ಆಶ್ಚರ್ಯಕರ ಚಿಹ್ನೆಗಳ ಶೀರ್ಷಿಕೆಯೊಂದಿಗೆ ಬಾಕ್ಸ್ ಐಟಂ ಆಗಿ ಪ್ರಕಟವಾಯಿತು. 'ಎಲ್ಲ ಹಾಸ್ಯಲೇಖನಗಳೂ ಸೊಗಸಾಗಿದ್ದವು. ಅದರಲ್ಲೂ 'ಅದ್ಭುತ!!!!!' ಎಂಬ ಲೇಖನ ಚಿಕ್ಕದಾದರೂ ಅದ್ಭುತವಾಗಿತ್ತು. ಇಂದಿನ ವಿಜ್ಞಾನಿಗಳು ಇದರಿಂದ ಸಾಕಷ್ಟು ವಿಷಯಗಳನ್ನು ಕಲಿಯಬಹುದು!' ಅಂತ ಒಬ್ಬ ವಾಚಕ ಮಹನೀಯರು ನನ್ನ ಲೇಖನವನ್ನು ಮೆಚ್ಚಿ ಬರೆದಿದ್ದರು. ಆದರೆ ಜನ? ಬೇಡ. ನಿಮಗೆ ಬೇಸರವಾಗಬಹುದು. ಇನ್ನೊಂದು ಅನ್ವೇಷಣೆ. ಹಳ್ಳೀಲಿರೋ ನಮ್ಮ ಚಿಕ್ಕಮ್ಮ ಒಮ್ಮೆ ಮಂಗಳೂರಿಗೆ ಹೋಗಿ ಬಂದರು. ಅಲ್ಲಿ ಸಮುದ್ರವನ್ನು ನೋಡಿ ಬೆಕ್ಕಸಬೆರಗಾಗಿದ್ದರು. ನನ್ನನ್ನ ಕೇಳಿದ್ದರು 'ಏನೋ, ಬೆಂಗಳೂರಲ್ಲಿ ಸಮುದ್ರ ಇಲ್ಲವಾ?' ಅಂತ. 'ಇಲ್ಲ' ಅಂದೆ. 'ಅಲ್ಲೂ ಯಾಕೆ ಒಂದು ಸಮುದ್ರ ಮಾಡಬಾರದು?' ಅಂತಕೇಳಿದ್ರು. ಎಲ್ಲರೂ ಜೋರಾಗಿ ನಕ್ಕಿದ್ದರು. ಆದರೆ ನಾನು ನಗಲಿಲ್ಲ. ನಾನದನ್ನ ತುಂಬಾ ಗಂಭೀರವಾಗಿ ತೊಗೊಂಡೆ. ನಾನು ನನ್ನ ಬುದ್ಧಿಯನ್ನೆಲ್ಲ ಉಪಯೋಗಿಸಿ ಸಮುದ್ರ ಮಾಡೋ ಯೋಜನೆಯನ್ನ ಸಿದ್ಧಪಡಿಸಿದ್ದೀನಿ. ಗೊತ್ತು, ಎಲ್ಲರೂ ನಗ್ತಾರೆ ಅಂತ. ನಗಲಿ ಬಿಡೀ. ನಕ್ಕರೆ ಹಲ್ಲು ಕಂಡೀತು ಅಂದ ದೊಡ್ಡವರೇ ಹೇಳಿದ್ದಾರೆ. ನಾನು ಈ ಪ್ರಾಜೆಕ್ಟನ್ನ ಪ್ರಕಟ ಮಾಡಿದರೆ, ತಲೆಗೊಂದು ತರಲೆ ಪ್ರಶ್ನೆ ಕೇಳ್ತಾರೆ ಅಂತ ಗೊತ್ತು. ಅದಕ್ಕೇ ನಾನು ಸೈಲೆಂಟಾಗಿ ಸಂಬಂಧ ಪಟ್ಟವರಿಗೆಲ್ಲಾ ಪ್ರಾಜೆಕ್ಟಿನ ರಿಪೋರ್ಟನ್ನ ಕಳಿಸಿದ್ದೀನಿ. ಪ್ರಧಾನ ಮಂತ್ರಿಗಳಿಗೂ. ■

**ಉಚಿತದ ಭಾಗ್ಯ**

ಈಗೀಗ ಉಪ್ಪು, ಖಾರ, ಒಗ್ಗರಣೆ ಒಂದೂ ಸರಿ ಇಲ್ಲ ಸಾರಿಗೆ.....
ಕಾರಣ ಉಚಿತವಾಗಿದೆಯಲ್ಲ ನೀರೆಗೆ ಕರ್ನಾಟಕ ಸಾರಿಗೆ.

**–ಜ್ಯೋತಿ ರಾಜೇಶ್**



# ಲಕ್ಷ್ಮಣ್ ಕಾರ್ನರ್



" ನಾನೇನೂ ಮಾಡಿಲ್ಲರವ್ವಾ "





" ಮಲಗುಕ್ಕೆ ಮುಂಚೆ ಕಿಟಕಿ
ತೆರೆದಿದ್ರಾ?
ಹೂಂ
ಹಾಗಾಗ್ರೆ ತಲೆನೋವು
ಮಾಯವಾಗಿರಬೇಕಲ್ಲಾ?
ತಲೆನೋವಿನ ಜೊತೆಗೆ, ಕನ್ನಡಕ,
ಪರ್ಸೂ ಗಡಿಯಾರ ಸಹಾ!



ನೋಡೋಕ್ಕೆ ನರಪೇತಲ
ಹೊರೋದು ಹೆಣಭಾರ !

# ಲಂಚ ಬ್ರೇಕ

**ಬೇಲೂರು ರಾಮಮೂರ್ತಿ**

ಸೋಮು ಅವತ್ತು ಬೆಳಗ್ಗಿನಿಂದ ಯಾವುದೋ ಲೆಕ್ಕಾಚಾರ ಸರಿಯಾಗಿ ಆಗದೇ ತಲೆಕೆಡಿಸಿಕೊಂಡು ಈ ದರಿದ್ರದ ಲೆಕ್ಕಾಚಾರದಿಂದ ನನ್ನ ಬದುಕಿನ ಲೆಕ್ಕಾಚಾರವೇ ಯಾಕೋ ತಲೆಕೆಳಕಾಗಿದೆ ಅಂದು ಪಕ್ಕದಲ್ಲಿ ಕೂತಿದ್ದ ಪದ್ಮಿನಿಗೆ ರೀ ಪದ್ಮನಿ ಇದೊಂದು ಸ್ವಲ್ಪ ಕೂಡಿಕೊಡ್ರೀ ಯಾಕೋ ಸರಿಯಾಗೇ ಬರ್ತ್ತಿಲ್ಲ ಅಂದು ದೊಡ್ಡ ಷೀಟ್ ಪೇಪರನ್ನು ಪದ್ಮಿನಿ ಕಡೆಗೆ ತಳ್ಳಿದಾಗ ಪದ್ಮಿನಿ ಮುಸಿಮುಸಿ ನಗುತ್ತಾ ನೀವು ಕೂಡಿ ಅಂದ್ರೆ ಸಖತ್ತಾಗಿ ಕೂಡ್ತೀರ ಆದರೆ ಲೆಕ್ಕ ಕೂಡಿ ಅಂದ್ರೆ ನಿಮಗಾಗೋಲ್ಲ ಅಂದಳು. ಸೋಮು ಇವಳು ಯಾವ ಕೂಡೋದರ ಬಗ್ಗೆ ಹೇಳುತ್ತಿದ್ದಾಳೆ ಅಂತ ತಲೆ ಕೆರೆದುಕೊಂಡಾಗ ಬಾಸ್ ಬರಹೇಳಿದರು. ಸೋಮು ಕೋಣೆಯ ಬಾಗಿಲು ತೆಗೆದಾಗ ರೀ ಸೋಮು ಬನ್ರೀ ಇಲ್ಲಿ ಅಂದರು. ಅವರು ಹಾಗಂದ್ರೆ ಅವರ ಸ್ವಂತ ಕೆಲಸಕ್ಕೇ ಕರಿತಾ ಇದಾರೆ ಅಂತ ಸೋಮುಗೆ ಗೊತ್ತು. ಸರ್ ಅಂತ ಅವರ ಟೇಬಲ್ ಬಳಿ ಹೋದ. ಒಂದು ಸಣ್ಣ ಕಾಗದ ಕೊಟ್ಟು ರೀ ನೋಡ್ರೀ ಇದು ರಸೀತಿ, ಇದನ್ನು ತಗೊಂಡು ಹೋಗಿ ಅದರಲ್ಲಿ ಬರೆದಿರೋ ಇಲಾಖೆಗೆ ಹೋಗಿ ಅವರು ಒಂದು ಸರ್ಟಿಫಿಕೇಟ್ ಕೊಡ್ತಾರೆ ತಗೊಂಡು ಬನ್ನಿ. ಬೇಗ ಹೋಗಿ ಇಲ್ಲದಿದ್ದರೆ ಲಂಚ್ ಅವರ್ ಅಂತ ನಿಮ್ಮನ್ನು ಒಂದು ಗಂಟೆ ಕೊಳೆಹಾಕ್ತಾರೆ ಅಂದರು. ಸೋಮು ರಸೀತಿ ಜೋಬಲ್ಲಿ ಇಟ್ಕೊಂಡು ಬೇಗ ಬೇಗ ಸ್ಕೂಟರ್ ಸ್ಟಾರ್ಟ್ ಮಾಡಿ ಹೊರಟ.

ಕಛೇರಿಯ ಮುಂದೆ ಗಾಡಿ ನಿಲ್ಲಿಸಿ ಇನ್ನೇನು ಪಾರ್ಕ್ ಮಾಡಬೇಕು ಅನ್ನುವಾಗ ಒಬ್ಬ ಬಂದು ಸರ್ ನನ್ನ ಅಂಗಡಿ ಇದೆ ಇಲ್ಲಿ ಪಾರ್ಕ್ ಮಾಡಬೇಡಿ ಅಂದ. ಯೋ ಎಲ್ಲಯ್ಯಾ ನಿನ್ನ ಅಂಗಡಿ, ಸುಮ್ನೆ ಮಾಡು ಇಲ್ಲಿಂದ ಎತ್ತಂಗಡಿ ಅಂದ. ಅವನು ಸಾರ್ ನನ್ನ ಸೊಪ್ಪಿನ ಅಂಗಡಿ ಇಲ್ಲೇ ಇದೆಯಲ್ಲಾ ಸರ್. ನಮ್ಮದು ಫುಟ್ ಪಾತ್ ಅಂಗಡಿ. ಇದರಲ್ಲೇ ನಮ್ಮ ಜೀವನ. ನಿಮ್ಮ ಗಾಡಿ ಅಡ್ಡ ಇದ್ರೆ ಜನ ಹಾಗೇ ಹೊರಟುಹೋಗ್ತಾರೆ. ನನ್ನ ಹೊಟ್ಟೆ ಮೇಲೆ ಹೊಡಿಬೇಡಿ ಸರ್ ಅಂತ ಗೋಗರೆದ. ಸೋಮುಗೆ ಅಯ್ಯೋ ಪಾಪ ಅನಿಸಿ, ಆಯ್ತಪ್ಪ ಸ್ವಲ್ಪ ಪಕ್ಕದಲ್ಲೇ ಪಾರ್ಕ್ ಮಾಡ್ತೀನಿ ಅಂದು ಪಕ್ಕಕ್ಕೆ ಗಾಡಿ ನಿಲ್ಲಿಸಿ ನೋಡು ಒಂದೆರಡು ಕಟ್ಟು ಒಳ್ಳೇ ದಂಟಿನ ಸೊಪ್ಪು, ಸಬ್ಸಿಗೆ ಸೊಪ್ಪು ಇಟ್ಟಿರು ಬರ್ತೀನಿ ಅಂದು ಹೊರಟ.

ಸೋಮು ಇನ್ನೇನು ಕಛೇರಿ ಒಳಕ್ಕೆ ಹೋಗೋಕೂ ಆಫೀಸಿನವರೆಲ್ಲಾ ಅವರವರ ಲಂಚ್ ಬಾಕ್ಸ್ ತೆಗೆಯೋಕೂ ಸರಿಹೋಯ್ತು. ಸೋಮು ರಸೀತಿ ತೋರಿಸಿ ಮೇಡಂ ಈ ಸರ್ಟಿಫಿಕೇಟ್ ಕೊಡಿ ಅಂದ. ಅದಕ್ಕೆ ಅವಳು ಸರ ಈಗ ಲಂಚ ಬ್ರೇಕ ನೀವು ಹಿಂದಾಗಡಿಯಿಂದ ಬನ್ರೀ ಅಂದಳು. ಏನ್ ಮೇಡಂ ಈ ಕಛೇರಿಗೆ ಹಿಂದುಗಡೆಯಿಂದ ಒಂದು ಬಾಗಿಲು ಇದೆಯಾ ಅಂದು ತನ್ನ ಜೋಕಿಗೆ ತಾನೇ ನಕ್ಕು ಪರವಾಗಿಲ್ಲ ಮೇಡಂ ಬಲಗೈಲಿ ಲಂಚ ತಗೊಳ್ತಾ ಎಡಗೈನಿಂದ ಸರ್ಟಿಫಿಕೇಟ್ ಕೊಡಿ ಅಂದ. ಹಾಂಗೆ ಮಾಡಕ್ಕೆ ಬರ್ಡಾಂಗಿಲ್ಲ, ಈಗ ಲಂಚ ಬ್ರೇಕ ಸ್ವಲ್ಪ ವೈಟ್ ಮಾಡಿ. ನಾವು ಒಂದು ಬಾರಿಗೆ ಒಂದೇ ಕೆಲಸ ಮಾಡೋ ಮಂದಿ ಅಂದಳು. ಸೋಮು ಬೇರೆ ದಾರಿಯಿಲ್ಲದೇ ಸೋಫಾದಲ್ಲಿ ಕುಕ್ಕರಿಸಿದ. ಕಛೇರಿಯಲ್ಲಿದ್ದ ನಾಲ್ಕು ಜನರ ನಡುವೆ ಮಾತು ಸಾಗಿತ್ತು.



ಮೇಡಂ ನನ್ನ ಕ್ಯಾರಿಯರ್‌ನಲ್ಲಿ ಏನಿದೆ ಅಂತ ಗೆಸ್ ಮಾಡಿದ್ರೆ ನಿಮಗೂ ಟೇಸ್ಟ್ ಸಿಕ್ಕುತ್ತೆ ಅಂದ. ಮತ್ತೊಬ್ಬ ಎಲ್ಲರೂ ಬೇರೆಯವರ ಕ್ಯಾರಿಯರ್ ಗೆಸ್ ಮಾಡಿ ಆಗ

ಎಲ್ಲರೂ ಹಂಚಿಕೊಂಡು ತಿನ್ನಬಹುದು ಅಂದ. ಹುಡುಗಿ ಸರ ನಿಮ್ಮ ಕ್ಯಾರಿಯರಲ್ಲಿ ಉಪ್ಪಿಟ್ಟು ಅದೆ ಅಂದಳು. ತೆಗೆದು ನೋಡಿದರೆ ಅದೇ, ಅವಳು ಹೇಳಿದ ಉಪ್ಪಿಟ್ಟು. ಇನ್ನೊಬ್ಬ ಮೇಡಂ ನಿಮ್ಮ ಕ್ಯಾರಿಯರಲ್ಲಿ ಅನ್ನ ಹುಳಿ ಇದೆ ಅಂದ. ಆ ಹುಡುಗಿ ತೆಗೆದು ನೋಡಿದರೆ ಅದೇ ಅನ್ನ ಹುಳಿ. ಇನ್ನೊಬ್ಬ ಚಿತ್ರಾನ್ನ ಅಂದ ಅದೂ ಸರಿ. ಮತ್ತೊಬ್ಬನ ಕ್ಯಾರಿಯರಲ್ಲಿ ಏನಿದೆ ಅಂತ ಯಾರೂ ಊಹಿಸಲು ಆಗಲಿಲ್ಲ. ಸೋತೆ ಅಂತ ಒಪ್ಕೊಳಿ ನಾನು ಹೇಳ್ತೀನಿ ಅಂತ ಅವನು ಅಂದಾಗ ಸೋಮು ಮ್ಯಂತ್ಯೆ ಸೊಪ್ಪಿನ ಅನ್ನ ಅಂದ. ಎಲ್ಲರೂ ಸೋಮು ಕಡೆ ನೋಡಿದರು. ಏನಾಶ್ಚರ್ಯ ಅವನು ಕ್ಯಾರಿಯರ್ ಓಪನ್ ಮಾಡಿದರೆ ಅದರಲ್ಲಿ ಮ್ಯಂತ್ಯೆ ಸೊಪ್ಪಿನ ಅನ್ನವೇ ಇತ್ತು. ಆ ಹುಡುಗಿ ಸರ, ನಿಮಗೆ ಹ್ಯಾಂಗೆ ತಿಳೀತ್ರೀ ಅಂತ ಕೇಳಿದಳು. ಮೇಡಂ ಮೊದಲು ನನಗೆ ನನ್ನ ಸರ್ಟಿಫಿಕೇಟ್ ಕೊಡಿ ಆಮೇಲೆ ಹೇಳ್ತೀನಿ ಹಾಂಗೆ ತಿಳೀತು ಅಂತ ಅಂದ. ಆ ಹುಡುಗಿ ನಕ್ಕು, ಎಲ್ಲಾರ ಹಾಂಗ ಮಾಡಕ್ಕೆ ಬರ್ತದಾ. ನಾವು ಏನಿದ್ರೂ ಮೊದಲು ಲಂಚ ಮುಗಿಸಬೇಕು ಆಮೇಲೆ ಬ್ಯಾರೆ ಕೆಲಸ ಅಂದಳು. ಸೋಮು ತಲೆ ಕೆರೆದುಕೊಂಡು ಮೇಡಂ ನೀವು ಯಾವ ಪದಕ್ಕೆ ಅರ್ಧ ಅಕ್ಷರ ಉಪಯೋಗಿಸದಿದ್ದರೂ ಪರವಾಗಿಲ್ಲ ಚ ಅಕ್ಷರಕ್ಕೆ ಅರ್ಧ ಅಕ್ಷರ ಉಪಯೋಗಿಸೋದು ಕಲಿತುಕೊಳ್ಳಿ. ನೀವು ಲಂಚ ಅಂದರೆ ಅದು ಊಟ ಆಗೋಲ್ಲ ಮೇಡಂ ಲಂಚ ಆಗುತ್ತೆ ಬ್ರೈಬ್ ಅಂದ. ಸೋಮು ಮಾತಿಗೆ ಎಲ್ಲಾ ನಕ್ಕರು. ಮತ್ತೆ ಎಲ್ಲರೂ ಸೋಮು ಕಡೆ ನೋಡಿ ಇದೇನ್ಸಾರ್ ಹೀಗೆ ಗೆಸ್ ಮಾಡಿದ್ರಿ ಅಂತ ಕೇಳಿದರೆ ಸೋಮು ನಾನು ಅವರನ್ನು ನೆನ್ನೆ ಮಾರ್ಕೆಟಲ್ಲಿ ನೋಡಿದ್ದೆ. ಅವರ ಹೆಂಡ್ತಿ ಜೊತೆ ಮ್ಯಂತ್ಯೆ ಸೊಪ್ಪು ತಗೊತಾ ಇದ್ರು. ಮ್ಯಂತ್ಯೆ ಸೊಪ್ಪು ತಗೊಂಡ್ರೆ ಅದರಲ್ಲಿ ಅನ್ನನೇ ಕಲಸೋದು ಅಂತ ಗೊತ್ತು ಅಂದ. ಅವನು ಖುಷಿಯಿಂದ ಸರ್ ಬನ್ನಿ ನೀವೊಂದು ಚೂರು ಟೇಸ್ಟ್ ನೋಡಿ ಅಂತ ಸೋಮುನ ಬಲವಂತವಾಗಿ ಒಳಗೆ ಕರೆದು ಅವನ ಕೈಗೆ ಒಂದು ದಪ್ಪ ಪಿಡಚೆ ಅನ್ನ ಕೊಟ್ಟ. ಸೋಮು ಅದನ್ನು ಬಾಯಲ್ಲಿ ಹಾಕಿಕೊಂಡು ಅಗಿಯುತ್ತಾ ಅದ್ಭುತ. ನಿಮ್ಮ ಹೆಂಡ್ತಿ ಅನ್ನಪೂರ್ಣೇಶ್ವರಿ ಅಂದ. ಅವನು ಅದ್ಸರಿ ನೆನ್ನೆ ನನ್ನನ್ನೇನೋ ನೋಡಿದ್ರಿ ಆದರೆ ನಾನು ಇಲ್ಲಿ ಕೆಲಸ ಮಾಡ್ತಿದೀನಿ ಅಂತ ಹೇಗೆ ಗೊತ್ತು ಅಂತ ಕೇಳಿದ. ಇಲ್ಲ ಸರ್ ನನಗೇನೂ ಗೊತ್ತಿಲ್ಲ. ನಾನು ನನ್ನ ಹೆಂಡ್ತಿ ಮಾರ್ಕೆಟ್ಟಿಗೆ ಬಂದಿದ್ವಿ. ಆಗ ಯಾರೋ ಜೋರು ಜೋರಾಗಿ ಮಾತಾಡ್ಕೊಂಡು ಷಾಪಿಂಗ್ ಮಾಡ್ತಿದ್ರು. ಇದ್ಯಾರಪ್ಪ ಅಂತ ನೋಡಿದೆ. ನೀವು ನಿಮ್ಮ ಹೆಂಡ್ತಿ ಜೊತೆ ಮಾತಾಡ್ಕೊಂಡು ಸೊಪ್ಪು ತಗೋತಾ ಇದ್ರಿ. ಆಗ ನಿಮ್ಮ ಮುಖ ನಮ್ಮ ಮೈಂಡಲ್ಲಿ ರಿಜಿಸ್ಟರ್ ಆಗಿತ್ತು. ನಾನು ಇಲ್ಲಿ  ಸರ್ಟಿಫಿಕೇಟ್ ತಗೊಳೋಕೆ ಬಂದಾಗ ನಿಮ್ಮನ್ನು ಇಲ್ಲಿ ನೋಡಿದೆ. ಆಗ ಓಹೋ ಮ್ಯಂತ್ಯೆ ಸೊಪ್ಪಿನ ಪಾರ್ಟಿ ಇಲ್ಲಿದಾರೆ ಅಂತ ಗೊತ್ತಾಯ್ತು ಅಷ್ಟೆ. ಸರ್. ನನ್ನ ಸರ್ಟಿಫಿಕೇಟ್ ಕೊಟ್ಬಿಡಿ ಸರ್. ಹೋಗಬೇಕು. ಅಲ್ಲಿ ನನಗೂ ಲಂಚ್ ಬ್ರೇಕ್ ಇರುತ್ತೆ ಅಂದ. ಅದಕ್ಕೆ ಅವನು ಬೇಕಾದ್ರೆ ಇನ್ನೊಂದು ಪಿಡಚೆ ಮ್ಯಂತ್ಯೆ ಸೊಪ್ಪಿನ ಅನ್ನ ಕೊಡ್ತೀನಿ ಆದರೆ ಸರ್ಟಿಫಿಕೇಟ್ ಕೊಡೋದು ಆ ಹೆಂಗಸೇ ಅಂದ. ಸೋಮು ಅವಳ ಕಡೆ ನೋಡಿ ಮೇಡಂ ನಿಮಗೆ ಒಳ್ಳೇದಾಗುತ್ತೆ ನನಗೆ ಸರ್ಟಿಫಿಕೇಟ್ ಕೊಡಿ ಮೇಡಂ. ನನಗೆ ಹೊತ್ತಾಗುತ್ತೆ ಅಂದ.

ಅವಳು ತಲೆ ಅಲ್ಲಾಡಿಸಿ ಹಾಂಗೆ ಕೊಡಾಕ್ಕೆ ಬರವಲ್ದು ಸರ. ಸ್ವಲ್ಪ ಕೂಡ್ರಿ. ನಾನು ಬೇಗ ಬೇಗ ಲಂಚ ಮಾಡಿ ನಿಮಗೆ ಸರ್ಟಿಫಿಕೇಟ್ ಕೊಡ್ತೀನಿ ಅಂದ ಅವಳ ಕ್ಯಾರಿಯರ್ ಹರಡಿಕೊಂಡಳು. ಎಲ್ಲರಿಗೂ ಒಂದೆರಡು ಚಮಚ ಹುಳಿ ಅನ್ನ ಕೊಟ್ಟು ತಾನು ಒಂದು ಚಮಚ ಬಾಯಲ್ಲಿ ಇಟ್ಕೊಂಡ್ಳು. ತಕ್ಷಣನೇ ಓ ಮೈ ಗಾಡ್ ಅಂತ



ತಲೆ ಚಚ್ಚಿಕೊಂಡಳು. ಅವಳು ಕೊಟ್ಟ ಹುಳಿ ಅನ್ನ ತಿಂದವರೂ ಮುಖ ಹುಳ್ ಹುಳ್ಳಗೆ ಮಾಡ್ಕೊಂಡ್ರು. ಸೋಮು ಸುಮ್ಮನಿರಲಾರದೇ ಏನಾಯ್ತು ಮೇಡಂ ಅಂತ ಕೇಳಿದ. ಸರ್. ಈರುಳ್ಳಿ ಆಲೂಗೆಡ್ಡೆ ಹುಳಿ ಏನೋ ಛಲೋ ಐತಿ ಆದರೆ ಇದರಾಗೆ ಉಪ್ಪೇ ಕಾಣವಲ್ದು ಅಂದಳು. ಸೋಮು ಭುಜ ಕುಣಿಸಿ ಮೇಡಂ ಮೈಸೂರು ಪಾಕ್ ನಲ್ಲಿ ಹೇಗೆ ಮೈಸೂರು ಕಾಣೋಲ್ವೋ ಹಾಗೆ ಹುಳೀಲಿ ಉಪ್ಪು ಕಾಣೋಲ್ಲ. ಅದರಲ್ಲಿ ಬೆರೆತುಹೋಗಿರುತ್ತೆ. ಒಂದು ವೇಳೆ ಉಪ್ಪಿಲ್ದೆ ಹೋದರೂ ಪರವಾಗಿಲ್ಲ ಒಂದಿವಸ ಉಪ್ಪಿಲ್ದೆ ತಿನ್ನಿ ಮೇಡಂ. ನಲವತ್ತಾದ ಮೇಲೆ ಉಪ್ಪು ಕಡಿಮೆ ಮಾಡಿದರೆ ಒಳ್ಳೇದು ಅಂದ. ರೀ ನನಗೆಲ್ರಿ ನಲವತ್ತಾಗಿದೆ ಏನೋನೋ ಮಾತಾಡ್ಲಿಕ್ಕ ಹತ್ತೀರಲ್ರೀ ಅಂದಳು.

ಸೋಮು ನಗುತ್ತಾ ಏನ್ ಮೇಡಂ ತಮಾಷೆ ಮಾಡ್ತೀರಾ ನಲವತ್ತಾಗದೇ ಐವತ್ತಾಗುತ್ತಾ ಅಂದ. ಮತ್ತೆ ಅವಳಿಗೆ ಕೋಪ ಬಂತು. ರೀ ನಿಮ್ಮ ಮಾತು ಎತ್ತೆತ್ಲಾಗೋ ಹೊಂಟಿದೆ. ಹ್ಯಾಂಗಿದೆ ನಿಮ್ ಮೈಗೆ.  ನನಗೆ ಐವತ್ತಾಗಿದೆ ಅಂತೀರೇನ್ರೀ ಅಂತ ಕೇಳಿದಳು. ಹರಿದು ಹೋದ ನೀರು, ಕಳೆದು ಹೋದ ಸಮಯ, ಮತ್ತೆ ಬರಲ್ಲ ಮೇಡಂ. ನಿಮ್ಮ ಟೇಬಲ್ಲಲ್ಲಿ ಇರೋ ಒಂದು ಕಾಗದದಲ್ಲಿ ನಿಮ್ಮ ಪರಿಚಯ ಪತ್ರ ಇತ್ತು ನೋಡಿದೆ. ಅದರಲ್ಲಿ ನಿಮ್ಮ ಹೆಸರು ಮಂಜುಳಾರಾಜ್, ಹುಟ್ಟಿದ ದಿನಾಂಕ, ನಿಮ್ಮ ಮನೆಯ ವಿಳಾಸ ಎಲ್ಲ ಇದೆ. ಅದನ್ನು ನೋಡಿಬಿಟ್ಟೆ ಮೇಡಂ ನನ್ನ ಕಣ್ಣು ಸುಳ್ಳು ಹೇಳೊಲ್ಲ ಮೇಡಂ ಅಂದ. ಆಗ ಮಂಜುಳಾ ಬಾಯಿ ಮುಚ್ಕೊಬೇಕಾಯಿತು. ಆದರೆ ಅವಳ ಸಮಸ್ಯೆ ಈ ಉಪ್ಪಿಲ್ಲದ ಹುಳಿನ ಹೇಗೆ ತಿನ್ನೋದು ಅಂತ. ಸೋಮು ಮತ್ತೆ ಮೇಡಂ ನನ್ನ ಸರ್ಟಿಫಿಕೇಟ್ ಕೊಟ್ಬಿಡಿ ಮೇಡಂ ಅಂತ ಗೋಗರೆದ. ಇನ್ನಿಬ್ಬರೂ ಸಹ ಹೌದು ಮಂಜುಳಾ ಅವರೇ, ಅವರಿಗೆ ಸರ್ಟಿಫಿಕೇಟ್ ಕೊಟ್ಟು ಕಳಿಸಿಬಿಡಿ ಅಂದರು. ಮಂಜುಳಾ ತಲೆ ಕೊಡವಿ ಅದು ಹ್ಯಾಂಗೆ ಆಗುತ್ರಪ್ಪ. ಈಗ ನಾನು  ಊಟ ಮಾಡದೇ ಮುಂದಕ್ಕೆ ಕೆಲಸ ಮಾಡೋಕೇ ಆಗಲ್ಲ. ಈಗ ನನ್ನ ಮನಸ್ಸು ಏನಿದ್ರೂ ಹುಳಿ ಮ್ಯಾಲಿದೆ ಅಂದು ಮೊಬೈಲ್ ತೆಗೆದು ಅವರಮ್ಮನಿಗೆ ಫೋನ್ ಹಚ್ಚಿ ಯವ್ವಾ ನೀ ಏನ ಇವತ್ತು ಹುಳಿಗೆ ಉಪ್ಪು ಹಾಕದೇ ಮರೆತ್ಯೋ ಹ್ಯಾಂಗೆ ಅಂತ ಕೇಳಿದಳು. ಅವರಮ್ಮ ಏನು ಹೇಳಿದರೋ ನಂತರ ಅವಳ ಸಹೋದ್ಯೋಗಿಗಳ ಕಡೆ ನೋಡಿ ನಿಮ್ಮತ್ರ ಉಪ್ಪಿದ್ರೆ ಕೊಡ್ರೀ ಅಂತ ಕೇಳಿದಳು. ಒಬ್ಬ ಮೇಡಂ ನನ್ನ ಹತ್ರ ಉಪ್ಪಿಲ್ಲ. ಆದರೆ ನಾನು ಉಪ್ಪು ಇರೋ ಜಾಗ ತೋರಿಸಬಲ್ಲೆ ಅಂದ. ಎಲ್ಲಿ ಹೇಳಿ ಪುಣ್ಯ ಕಟ್ಕೊಳ್ರಪ್ಪ ಅಂತ ಕೇಳಿದ್ದಕ್ಕೆ ಬಾಸ್ ಛೇಂಬರಲ್ಲಿ. ಅವರಿಗೆ ಬಿಪಿ ಜಾಸ್ತಿ ಇದೆ. ಡಾಕ್ಟರು ಉಪ್ಪಿಲ್ದೆ ಊಟ ಮಾಡಿ ಅಂದಿದಾರೆ. ಅದಕ್ಕೆ ಅವರ ಹೆಂಡತಿ ಉಪ್ಪಿಲ್ದೆ ಅಡುಗೆ ಮಾಡಿ ಕಳಿಸಿರ್ತಾರೆ. ಆದರೆ ಈ ಬಾಸು ಇಲ್ಲಿ ಒಂದು ಸಣ್ಣ ಉಪ್ಪಿನ ಬಾಟಲ್ ತಂದಿಟ್ಕೊಂಡು ಹೆಂಡ್ತಿ ಕಳಿಸಿದ ಊಟಕ್ಕೆ ಉಪ್ಪು ಮಿಕ್ಸ್ ಮಾಡಿಕೊಂಡು ಊಟ ಜಮಾಯಿಸ್ತಾ ಇದಾರೆ ಅಂದ. ಮಂಜುಳ ಎದ್ದು ಹೋಗಿ ಬಾಸ್ ಮುಂದೆ ನಿಂತು ಸರ ಸ್ವಲ್ಪ ಉಪ್ಪು ಬೇಕಿತ್ರಿ ಅಂದಳು. ಅವರು ಕಣ್ಣು ಕೆಂಪಗೆ ಮಾಡಿ ವಾಟ್ ನಾನ್ಸೆನ್ಸ್ ಐ ಸೇ ಅಂದರು. ಸರ್ ನಮ್ಮಮ್ಮ ಉಪ್ಪಿಲ್ದೆ ಹುಳಿ ಕಳಿಸಿಬಿಟ್ಟಾಳೆ. ಅದನ್ನು ತಿನ್ನೋಕೆ ಆಗಲ್ಲ. ನನಗೆ ಬಿಪಿ ಇಲ್ಲ ಸರ್. ನಿಮ್ಮತ್ರ ಉಪ್ಪಿರುತ್ತೆ ಅಂತ ನಿರಂಜನ್ ಹೇಳಿದ್ರು ಅದಕ್ಕೆ ಕೇಳಿದೆ ಕೊಡ್ರಿ ಸರ ಅಂದಳು. ಉಪ್ಪೂ ಇಲ್ಲ ಪಪ್ಪೂ ಇಲ್ಲ ಗೆಟ್ ಔಟ್ ಐ ಸೇ ಅಂತ ಬಾಸ್ ಅರಚಿದ್ದು ಅವರ ಸೀಕ್ರೆಟ್ ಗೊತ್ತಾಗಿ ಹೋಯ್ತಲ್ಲ ಅಂತ. ಮಂಜುಳ ಪೆಚ್ಚು ಮೋರೆ ಹಾಕಿಕೊಂಡು ಆಚೆಗೆ ಬಂದಳು.



ನಿರಂಜನ ಐ ಆಮ್ ಸಾರಿ ಮೇಡಂ, ಹೋಗ್ಲಿ ಒಂದಿನ ಉಪ್ಪಿಲ್ದೆ ಊಟ ಮಾಡಿ ಏನೂ ಆಗೋಲ್ಲ ಅಂದ. ಮಂಜುಳ ತಲೆ ಕೊಡವಿ ನನಗೆ ವಾಂತಿನೇ

ಆಗಿಹೋಗುತ್ತೆ ನೋಡ್ರಪ್ಪ ಅಂದು ಅವತ್ತಿನ ಪೇಪರಿನಲ್ಲಿ ಭವಿಷ್ಯ ಓದುತ್ತಾ ಕೂತಿದ್ದ ಸೋಮು ಕಡೆ ನೋಡಿ ಸರ ಒಂದ್ನಿಮಿಷ ಬನ್ರೀ ಅಂದಳು. ಸೋಮು ಪೇಪರ್ ಬಿಸಾಕಿ ಎದ್ದು ಸರ್ಟಿಫಿಕೇಟ್ ಕೊಡ್ತೀರಾ ಮೇಡಂ ಅಂದು ಅವಳ ಟೇಬಲಿನತ್ತ ನೆಗೆದ. ಮಂಜುಳ ನಗುತ್ತಾ ನಿಮ್ಮ ಸರ್ಟಿಫಿಕೇಟ್ ಬಾಸ್ ಹತ್ರ ಇದೆ, ಒಂದ್ಐದು ನಿಮಿಷದಲ್ಲಿ ಕೊಡ್ತೀನಿ ಅಂದ್ರು ಅಷ್ಟೊತ್ತಿಗೆ ನೀವು ನನಗೊಂದು ಕೆಲಸ ಮಾಡಿಕೊಡ್ತೀರಾ ಸರ ಅಂತ ಕೇಳಿದಳು. ಸೋಮು ಏನು ಮೇಡಂ ಅಂದಿದ್ದಕ್ಕೆ ಹೊರಗೆ ಹೋಗಿ ದರ್ಶಿನಿನಲ್ಲಿ ಅಥವಾ ಅಂಗಡಿಯಿಂದ ಒಂಚೂರು ಉಪ್ಪು ತಂದುಕೊಡ್ರೀ ಮತ್ತಾ ಅಂತ ಕೇಳಿದಳು. ಮೇಡಂ ನನ್ನನ್ನು ಏನಂದುಕೊಂಡ್ರಿ ನಾನು ಹಾಗೆಲ್ಲಾ ಯಾರಿಗೂ ಉಪ್ಪು ಹಾಕೋನಲ್ಲ ಮೇಡಂ. ಅಲ್ಲ ಮೇಡಂ ದರ್ಶಿನಿನಲ್ಲಿ ಉಪ್ಪು ಯಾರು ಕೊಡ್ತಾರೆ. ಇನ್ನು ಸಕ್ಕರೆ ಬೇಕಾದರೆ ಕೊಡ್ತಾರೆ. ಇನ್ನು ಅಂಗಡೀಲಿ ಒಂದು ಕೆಜಿ ಪ್ಯಾಕೆಟ್ ತಗೋಬೇಕು. ಏನು ಹುಡುಗಾಟನಾ ಮೇಡಂ ಅಂತ ಸಣ್ಣಗೆ ರೇಗಿದ. ಅದಕ್ಕೆ ಮಂಜುಳ ಸರ ಅಮ್ಮ ಬಿಸಿಬಿಸಿ ಹುಳಿ ಕಳಿಸಿದಾರೆ ಆದರೆ ಅದು ಈಗ ಆರಿ ಹೋಗ್ಲಿಕ್ಕೆ ಹತ್ತಿದೆ.  ಹಸಿದಿರೋರನ್ನು ಕೆಣಕಬಾರದು ಸರ. ಪ್ಲೀಸ್ ಸರ ನಿಮ್ಮ ಮುಖಕ್ಕೆ ಯಾರು ಉಪ್ಪು ಕೊಡಲ್ಲ ಅಂತಾರೆ ಹೇಳಿ ನೋಡೋಣ, ಉಪ್ಪಿಟ್ಟವರನ್ನು ಮುಪ್ಪಿನ ತನಕ ನೆನೆ ಅಂತ ಗಾದೆ ಮಾತೇ ಐತಲ್ಲೋ ಅಂದಳು. ಅಲ್ಲಾ ಮೇಡಂ ನನ್ನ ಮುಖಕ್ಕೆ ಸರ್ಟಿಫಿಕೇಟನ್ನೇ ಕೊಡಲ್ಲ ಅಂತಿದೀರ ಅಂತ ಮರು ಪ್ರಶ್ನೆ ಹಾಕಿದ. ಮಂಜುಳ ಎದ್ದು ನಿಂತು ಸರ ನೀವು ಮನಸ್ಸು ಮಾಡಿದರೆ ಏನು ಬೇಕಾದರೂ ಮಾಡ್ತೀರ ಅಂತ ನಿಮ್ಮ ಮುಖ ನೋಡಿದ್ರೇ ತಿಳೀತದ. ಹೋಗಿ ಸರ. ಬೇಗ ಬನ್ನಿ ಸರ ಅಂತ ಗೋಗರೆಯುತ್ತಾ ಸೋಮು ಕೈ ಅದುಮಿದಳು. ಸೋಮು ಹಾಳಾಗಿ ಹೋಗ್ಲಿ ಈಯಮ್ಮ ಏನೋ ನನ್ನನ್ನು ಸರ ಸರ ಅಂತಿದಾಳೆ ನಾನು ಸರಸರ ಅಂತ ಹೋಗಿ ಉಪ್ಪು ತಂದುಕೊಡೋಣ ಅಂತ ಹೊರಗೆ ಬಂದ. ಅಂಗಡಿಗೆ ಹೋಗಿ ಸರ್ ಒಂದು ಚಿಕ್ಕ ಉಪ್ಪಿನ ಪ್ಯಾಕೆಟ್ ಇದ್ರೆ ಕೊಡಿ ಅಂದ. ಅದಕ್ಕೆ ಅವರು ಚಿಕ್ಕ ಪುಟ್ಟ ಪ್ಯಾಕೆಟ್ ಇಲ್ಲ ಇರೋದು ಒಂದು ಕೆಜಿ ಪ್ಯಾಕೆಟ್ ಅಂದರು. ಸರ್ ಇವತ್ತು ಹುಳಿಗೆ ಉಪ್ಪು ಹಾಕಿಲ್ಲ. ಒಬ್ಬರ ಊಟಕ್ಕೆ ಹಾಕ್ಕೊಂಡು ಊಟ ಮಾಡೋಷ್ಟು ಬೇಕು ಸರ್ ಅಂದ. ಅದಕ್ಕೆ ಅವರು ಎದುರಿನ ದರ್ಶಿನಿ ತೋರಿಸಿ ಅಲ್ಲಿ ಸಿಗಬಹುದು ಹೋಗಿ ಕೇಳಿ ಅಂದ. ಸೋಮು ದರ್ಶಿನಿಗೆ ಹೋದ. ಗಲ್ಲದಲ್ಲಿ ಕೂತಿದ್ದವನನ್ನು ಕಂಡು ಸರ್ ಒಂದು ಚಮಚ ಉಪ್ಪು ಬೇಕಾಗಿತ್ತಲ್ಲ ಅಂದ. ಅವರು ಇಡ್ಲಿ, ವಡೆ, ಖಾರಾಬಾತ್, ಬಿಸಿಬೇಳೆಬಾತ್, ಮೊಸರನ್ನ, ತೈರ್ ವಡೆ, ಪಕೋಡ ಇದೆ ಅಂದರು. ಮತ್ತೆ ಸೋಮು ಸರ್ ಒಂದು ಚಮಚ ಉಪ್ಪು ಅಂದ. ಗಲ್ಲದವನು ರೇಗಿ ಇಲ್ಲಿ ಉಪ್ಪು ಕೊಡೋಲ್ಲಾರೀ ಹೋಗ್ರೀ ಈಗ ಲಂಚ್ ಅವರಲ್ಲಿ ಬರೋ ಗಿರಾಕಿನ ನೊಡಬೇಕು ನಾನು ಅಂದು ರೇಗಿ ಕಳಿಸಿದ. ಸೋಮು ಪೆಚ್ಚು ಮೋರೆ ಹಾಕಿಕೊಂಡು ಆಚೆ ಬರುತ್ತಿದ್ದಾಗ ಬಾಗಿಲಿನಲ್ಲಿ ನಿಂತಿದ್ದವನು ಒಂದು ಚಮಚ ಉಪ್ಪು ಯಾಕೆ ಸರ್ ಅಂತ ಕೇಳಿದ. ಸೋಮು ಕಾರಣ ಹೇಳಿದಾಗ ಓಹೋ ಒಂದು ಚಮಚ ಉಪ್ಪು ತಗೊಂಡು ಹೋಗಿ ಕೊಟ್ಟು ಆ ಹುಡುಗೀನ ಉಪ್ಪೇರಿ ಮಾಡ್ಕೊಂಡು ಚಪ್ಪರಿಸೋಣ ಅಂತಿದೀರ ಅಂತ ಕೇಳಿದ್ದಕ್ಕೆ ಸೋಮು ಅಯ್ಯೋ ಸಾರ್ ಆ ಉಪ್ಪೇರಿಗೆ ಐವತ್ತು ಆಗಿದೆ ಸರ್. ಇನ್ನೇನು ಚಪ್ಪರಿಸೋದು ಅಂತ ನಾಲ್ಕು ಹೆಜ್ಜೆ ಇಟ್ಟಾಗ ರೀ ಬನ್ನಿ ಇಲ್ಲಿ ಅಂತ ಸೋಮುನ ಕರೆದ. ಸೋಮು ಅವನ ಮುಂದೆ ನಿಂತಾಗ ರೀ ನಮ್ಮ ಕೆಲಸ ಸಾಧಿಸಿಕೊಳ್ಳೋಕೆ ಬುದ್ಧಿವಂತಿಕೆ ಬೇಕ್ರೀ. ಈಗೇನು ನಿಮಗೆ ಒಂದು ಚಮಚ ಉಪ್ಪು ಬೇಕು ಅಷ್ಟೆ ತಾನೇ. ಗಲ್ಲದವನ ಹತ್ತಿರ ಹೋಗಿ ಒಂದು ಕಪ್ ಕಾಫಿಗೆ ಕೂಪನ್ ತಗೋಳಿ. ಕೌಂಟರಿಗೆ



ಹೊಗಿ ಕಾಫಿ ಕೊಡುವವನನ್ನು ಚನ್ನಾಗಿ ಹೊಗಳಿದ ನಂತರ ಒಂದು ಚಮಚ ಉಪ್ಪು ಕೊಡಣ್ಣಾ ಅನ್ನಿ. ನೆನಪಿಟ್ಕೊಳ್ಳಿ ನಿಮ್ಮ ಕೆಲಸ ಆಗಬೇಕಾದರೆ ಯಾರನ್ನಾದರೂ ಸರಿ ಅಣ್ಣ ಅನ್ನಬೇಕು. ಹೋಗಿ ನಿಮ್ಮ ಕೆಲಸ ಆಗುತ್ತೆ ಅಂದ.

ಸೋಮು ಇದೂ ಒಂದು ಐಡಿಯಾ ನೋಡೋಣ ಅಂತ ಗಲ್ಲದವನ ಹತ್ತಿರ ಹೋಗಿ ಒಂದು ಕಾಫಿಗೆ ಕೂಪನ್ ಪಡೆದ. ಕೌಂಟರಿಗೆ ಹೋದ. ಒಂದು ಕಪ್ ಸ್ಟ್ರಾಂಗ್ ಕಾಫಿ ಷುಗರ್ ಲೆಸ್ ಆದರೆ ವಿತ್ ಸಪರೇಟ್ ಉಪ್ಪು ಅಂದ. ಕೌಂಟರಿನವನು ಏನು ಸರ್ ಕಾಫಿ ಜೊತೆಗೆ ಉಪ್ಪು ಬೇಕಾ ಅಂತ ಕೇಳಿದ. ಹೌದಪ್ಪಾ ನನಗೆ ಅದೇನೋ ಕಾಹಿಲೆ ಆಗಿದೆ. ಅದಕ್ಕೆ ಡಾಕ್ಟರು ಷುಗರ್ ಲೆಸ್ ಕಾಫಿ ಕುಡಿದು ಒಂದು ಚಮಚ ಉಪ್ಪು ತಿನ್ನು ಅಂದಿದಾರೆ ಅಂದ. ಕೌಂಟರಿನವರು ಸೋಮು ಹೇಳ್ತಿರೋದು ನಿಜ ಅಂತಾನೋ, ಇಲ್ಲಾ ಇವನ ಉಸಾಬರಿ ನನಗೇಕೆ ಅಂತಾನೋ ಷುಗರ್ ಲೆಸ್ ಕಾಫಿ ಕಟ್ಟು ಒಂದು ಕಪ್ಪಲ್ಲಿ ಒಂದಿಷ್ಟು ಉಪ್ಪು ತಂದುಕೊಟ್ಟ. ಸೋಮು ಎರಡನ್ನೂ ತಗೊಂಡು ಉಪ್ಪನ್ನು ಯಾರಿಗೂ ಕಾಣದಂತೆ ಕೈಯಲ್ಲಿ ಮುಚ್ಚಿಟ್ಕೊಂಡು ಕಾಫಿ ಕುಡಿದ. ಎರಡು ಗುಟುಕು ಕಾಫಿ ಕುಡಿದಿದ್ನೋ ಇಲ್ವೋ ಹಲೋ ಸೋಮು ಏನ್ಸಾರ್ ಇಲ್ಲಿ ಅನ್ನುವ ಹೆಣ್ಣಿನ ಧ್ವನಿ ಕಂಡು ತಿರುಗಿದ. ಸುಭದ್ರ ಕಾಫಿ ಕುಡಿಯುತ್ತಿದ್ದವರು ಸೋಮು ಹತ್ತಿರ ಬಂದು ಇದೇನ್ ಸೋಮು ಇಲ್ಲಿ, ಇಷ್ಟು ಹೊತ್ನಲ್ಲಿ ಕಾಫಿ ಕುಡಿತಾ ಇದೀರ, ಸೋಮಿ ಎಲ್ಲಿ ಅಂತ ಕೇಳಿದರು. ಸೋಮು ನಗುತ್ತಾ ನಾನು ಆಫೀಸ್ ಕೆಲಸದ ಮೇಲೆ ಬಂದಿದ್ದೆ, ಸೋಮಿ ಮನೇಲಿದಾಳೆ ಅಂದ. ಅವರು ನಕ್ಕು ಹೌದಾ ಅಂದು ತಲೆ ಕುಣಿಸಿ ಹೊರಟುಹೋದರು. ಸೋಮು ತಲೆ ಮೇಲೆ ಹೊಡ್ಕೊಂಡು ಈಯಮ್ಮ ಫೋನಲ್ಲಿ  ಸೋಮಿಗೆ ನಿಮ್ಮ ಯಜಮಾನರು ದರ್ಶಿನಿಲಿ ಕಾಫಿ ಕುಡಿತಾ ಇದ್ರು ಅಂತ ಕಿವಿ ಊದ್ತಾಳೆ, ಆಮೇಲೆ ಸೋಮಿ ನನ್ನನ್ನು ಪ್ರಶ್ನೆ ಮಾಡೋಕೆ ಷುರು ಮಾಡ್ತಾಳೆ, ಒಂದೊಂದಲ್ಲ ನನ್ನ ಹಣೆ ಬರಹನೇ ಸರಿ ಇರೋಲ್ಲ ಅಂತ ಉಳಿದಿದ್ದ ಕಾಫಿನ ಬಾಯಿಗೆ ಸುರ್ಕೊಂಡು ಉಪ್ಪು ಜೋಪಾನ ಮಾಡಿಕೊಂಡು ಮತ್ತೆ ಇಲಾಖೆಗೆ ಹೊರಟ.

ಮಂಜುಳ ಮೇಡಂ ಟೇಬಲ್ ಖಾಲಿ. ಕ್ಯಾರಿಯರ್ ತೆರೆದೇ ಇತ್ತು. ಸೋಮು ನಿರಂಜನ್ ಬಳಿ ಹೋಗಿ ಸರ್ ಮೇಡಂ ಎಲ್ಲಿ ಅವರಿಗೆ ಉಪ್ಪು ತಂದಿದೀನಿ ಅಂದ. ನಿರಂಜನ್ ಸರ್ ಅವರು ಬಾಸ್ ಛೇಂಬರಲ್ಲಿದಾರೆ ಕೂತ್ಕೊಳ್ಳಿ ಅಂದ. ಸೋಮು ಕೂತ. ಸ್ವಲ್ಪ ಹೊತ್ತಿಗೆ ಇಲಾಖೆಯ ಫೋನ್ ರಿಂಗಾಯಿತು. ನಿರಂಜನ್ ಫೋನ್ ತಗೊಂಡು ಮಾತಾಡಿ ಹಾ ಸರ್, ಇಲ್ಲೇ ಇದಾರೆ ಆಗಲೇ ಬಂದರು ಉಪ್ಪು ತರೋಕೆ ಹೋಗಿದ್ರು ಸರ್. ಹೌದು ಸರ್. ನಮ್ಮ ಮಂಜುಳ ಮೇಡಂಗೆ ಉಪ್ಪು ಬೇಕಾಗಿತ್ತು ಇರಿ ಸರ್ ಅವರಿಗೇ ಫೋನ್ ಕೊಡ್ತೀನಿ ಅಂದು ಸೋಮು ಕಡೆ ನೋಡಿ ಸರ್ ನಿಮ್ಮ ಬಾಸ್ ಮಾತಾಡ್ತಾ ಇದಾರೆ ಅಂದ. ಸೋಮು ರಿಸೀವರ್ ಕಿವಿಗಿಟ್ಕೊಂಡ ತಕ್ಷಣವೇ ರೀ ಸೋಮು ನಿಮಗೆ ಸ್ವಲ್ಪನೂ ಕಾಮನ್ ಸೆನ್ಸ್ ಇಲ್ಲ ಕಣ್ರೀ, ಅದೇನ್ರೀ ಉಪ್ಪು, ಸರ್ಟಿಫಿಕೇಟ್ ತಗೊಂಡು ಬನ್ರೀ ಅಂದ್ರೆ ಏನ್ರೀ ಯಾರಿಗ್ರೀ ಉಪ್ಪು ಹಾಕೋಕ್ಕೆ ಹೋಗಿದ್ರಿ, ಅದೇನ್ರೀ ನಿಮ್ಮ ಅವಾಂತರ ಅಂತ ಕೇಳಿದಾಗ ಸೋಮು ನಡೆದದ್ದನ್ನೆಲ್ಲಾ ತಿಳಿಸಿದ. ಬಾಸ್ ಸಿಟ್ಟಿನಿಂದ ಬಡ್ಕೊಂಡ್ರು  ನೀವು ತಗುಲಿ ಹಾಕ್ಕೊಳ್ಳೋ ಕೆಲಸ ಒಂದೊಂದಲಾಲ್ಲಾ ಬೇಗ ಸರ್ಟಿಫಿಕೇಟ್ ತಗೊಂಡು ಬನ್ನಿ ಅಂದರು. ಸೋಮು ಇನ್ನೂ ಹತ್ತು ನಿಮಿಷ ಕಳೆದರೂ ಮಂಜುಳ ಮೇಡಂ ಬರೋ ಸೂಚನೆ ಕಾಣದೇ ಹೋದಾಗ ಸೋಮು ಸಿಟ್ಟಿನಿಂದ ಸಾಹೇಬರ ಕೋಣೆಗೇ ನುಗ್ಗಿ ಸರ್ ನನ್ನ ಸರ್ಟಿಫಿಕೇಟ್‌ಗೋಸ್ಕರ ನಾನಿಲ್ಲಿ ಒಂದು ಗಂಟೆಯಿಂದ ಕಾಯ್ತಾ ಇದೀನಿ ಅಂದ.



ಸಾಹೇಬರು ರಸೀತಿ ನೋಡಿ ಮಂಜುಳಗೆ ಯಾಕ್ರೀ ಇವರ ಸರ್ಟಿಫಿಕೇಟ್ ಕೊಟ್ಟಿಲ್ಲ. ನಾನು ನೆನ್ನೆನೇ ಸಹಿ ಮಾಡಿದ್ನಲ್ಲ ಅಂತ ಕೇಳಿದರು. ಅದಕ್ಕೆ ಮಂಜುಳ ಸರ್ ನೀವು ನೆನ್ನೆ ಸರ್ಟಿಫಿಕೇಟ್ ಸಹಿ ಮಾಡಿರಬಹುದು, ಅದರೆ ಇವರು ಬಂದಿದ್ದು ಇವತ್ತು ಅಂದಳು. ಸೋಮು ಸರ್ ನಾನು ಹೇಳ್ತೀನಿ ಅಂದು ಎಲ್ಲವನ್ನೂ ವಿವರವಾಗಿ ತಿಳಿಸಿದ. ಬಾಸ್‌ಗೆ ಸಿಕ್ಕಾಪಟ್ಟೆ ಕೋಪ ಬಂತು. ಮಂಜುಳ ಕಡೆ ನೋಡಿ ಏನ್ರೀ ನಮ್ಮ ಆಫೀಸಿಗೆ ಬರೋ ಜನಗಳನ್ನು ನೀವು ನಿಮಗೆ ಉಪ್ಪು ತರೋಕೆ, ಸಕ್ಕರೆ ತರೋಕೆ ಬಳಸ್ಕೊತೀರೇನ್ರೀ. ಏನಂದ್ಕೊಂಡಿದೀರ ಅವರನ್ನು. ಒಂದಿನ ಉಪ್ಪಿಲ್ದೆ ತಿಂದ್ರೆ ನಿಮ್ಮ ಸೌಂದರ್ಯ ಏನು ಬಾಡಿ ಹೋಗ್ತಿತ್ತೇನ್ರೀ ಹೋಗ್ರೀ ಮೊದಲು ಇವರಿಗೆ ಸರ್ಟಿಫಿಕೇಟ್ ಕೊಟ್ಟು ಕಳಿಸಿ ಆಮೇಲೆ ಮುಂದಿನ ಮಾತು ಅಂದರು. ಮಂಜುಳ ಏನೂ ಆಗೇ ಇಲ್ಲ ಅನ್ನುವಂತೆ ಸರ ಈಗ ಲಂಚ್ ಅವರ್ ಸರ ಅಂದಳು. ಬಾಸ್‌ಗೆ ಮತ್ತೆ ಕೋಪ ಬಂತು. ರೀ ಗಡಿಯಾರ ನೋಡ್ರೀ ಲಂಚ್ ಅವರ್ ಮುಗಿದು ಅರ್ಧ ಗಂಟೆ ಆಗಿದೆ. ಮೊದಲು ಇವರಿಗೆ ಸರ್ಟಿಫಿಕೇಟ್ ಕೊಟ್ಟು ಕಳಿಸಿ ಅಂದರು. ಮಂಜುಳ ನೆಲ ಕುಟ್ಟಿ ಆಚೆ ಬಂದಾಗ ಸೋಮು ಅವಳ ಹಿಂದೆಯೇ ಬಂದು ಮೇಡಂ ಉಪ್ಪು ತಂದಿದೀನಿ. ಇದನ್ನು ತರೋಕೆ ಎಷ್ಟು ಕಷ್ಟ ಆಯ್ತು ಗೊತ್ತಾ ಮೇಡಂ ಅಂದ. ಮಂಜುಳ ಭುಸುಗುಟ್ಟುತ್ತಾ ಇವತ್ತು ನನ್ನ ಊಟ ಖೋತಾ ಆತಲ್ರೀ. ತಣ್ಣಗಾಗಿರೋ ಹುಳಿ ಅನ್ನಾನ ಹ್ಯಾಂಗೆ ಉಣ್ಣೋದು ಅಂತ ಬೈಕೊಂಡು ಸೋಮು ಕೈನಿಂದ ಉಪ್ಪು ಕಿತ್ಕೊಂಡು ಸೋಮುಗೆ ಸರ್ಟಿಫಿಕೇಟ್ ಕೊಟ್ಟು ಸರ ಇನ್ಮೇಲೆ ನೀವು ನಮ್ಮಾಫೀಸಿಗೆ ಬರಬೇಕಾದರೆ ಲಂಚ ಅವರಲ್ಲಿ ಬರಬ್ಯಾಡ್ರೀ ಮತ್ತ ಅಂದಳು. ಇವಳು ಏನಾದ್ರೂ ಹೊಡ್ಕೊಳ್ಳಿ ನನ್ನ ಕೈಗೆ ಸರ್ಟಿಫಿಕೇಟ್ ಸಿಕ್ತಲ್ಲ ಅಂತ ಎರಡು ಹೆಜ್ಜೆ ಇಟ್ಟವನು ಉರಿಯುವ ಗಾಯದ ಮೇಲೆ ಉಪ್ಪು ಸವರೋಣ ಅಂತ ಮೇಡಂ ನಿಮ್ಮ ಹುಳಿ ಡಬ್ಬಿ ಕೊಡಿ ಎದುರಿನ ದರ್ಶಿನಿಲಿ ಅದಕ್ಕೆ ಉಪ್ಪು ಹಾಕಿ ಬಿಸಿ ಮಾಡಿಸಿ ತಂದುಕೊಡ್ತೀನಿ ಅಂದಾಗ ಮಂಜುಳ ಸಿಟ್ಟಿನಿಂದ ಕಣ್ಣು ಬಿಟ್ಟಾಗ ಸೋಮು ಅಲ್ಲಿಂದ ಕಾಲು ಕಿತ್ತ.

■



# ಮೇಘಾಲೋಕ

**ಅಣಕು ರಾಮನಾಥ್**

ಬ್ಲ್ಯಾಕ್ ಲೈವ್ಸ್ ಮ್ಯಾಟರ್!

ಆಕಾಶದತ್ತ ಗಮನ ಹರಿಸಿದಾಗಲೆಲ್ಲ ನನಗೆ ನೆನಪಾಗುವ ಸಾಲು ಇದು.

ಪೋಲಾರ್ ಬೇರ್ನಲ್ಲೋ, ಬ್ಯಾಸ್ಕಿನ್ ರಾಬಿನ್ಸ್ನಲ್ಲೋ ಕಂಡುಬರುವ ಸ್ನೋವೈಟ್ ಬಿಳುಪಿನ ವೆನಿಲಾ ಸ್ಕೂಪಿನಂತಹ ಮೋಡಗಳು 'ನಾಟಕದ ಕಂಪನಿಯ ರಾಜನ ಪಾರ್ಟ್' ಇದ್ದಹಾಗೆ. ನೋಡಕ್ಕೆ ಚೆನ್ನವೇ ಹೊರತು, ಕ್ರಿಕೆಟ್ ಪ್ರಿಯರ ಹೊರತಾಗಿ (ಸ್ವಿಂಗ್ ಬೋಲಿಂಗಿಗೆ ಅನುಕೂಲಕರವೆಂದು) ಮತ್ತಾರಿಗೂ ಪ್ರಯೋಜನವೇನಿಲ್ಲ. ಆದರೆ ಬೆಳ್ಳಿಯ ಚೌಕಟ್ಟಿನಲ್ಲಿ (ಎವೆರಿ ಕ್ಲೌಡ್ ಹ್ಯಾಸ್ ಎ ಸಿಲ್ವರ್ ಲೈನಿಂಗ್ ಅಂತೆ) ಕಾಂಟ್ರಾಸ್ಟ್ ಬಣ್ಣದಲ್ಲಿ ಕಂಡುಬರುವ ಕಪ್ಪನೆಯ ಮೋಡವೇ ಮೋಡ.

ಜನಪರ ಜೀವಿಗಳಿಗೆ ಸಂಕಟ ತಪ್ಪಿದ್ದಲ್ಲ ಎನ್ನುವುದಕ್ಕೆ ಮೋಡಗಳಿಗಿಂತ ಉತ್ತಮ ಉದಾಹರಣೆಗಳಿಲ್ಲ. ತನ್ನ ಪಾಡಿಗೆ ತಾನು ಓಡಾಡಿಕೊಂಡಿರುವ ಮೋಡವನ್ನು ಕಂಡು 'ಓಡುತಿರುವ ಮೋಡಗಳೆ... ಯಾರ ತಡೆಯೂ ನಿಮಗಿಲ್ಲ; ನಿಮ್ಮ ಭಾಗ್ಯ ನಮಗಿಲ್ಲ' ಎನ್ನುತ್ತಾ ಹೊಟ್ಟೆ ಉರಿದುಕೊಳ್ಳುವ ಮಂದಿಗೆ ನಮ್ಮಲ್ಲಿ ಕೊರತೆಯಿಲ್ಲ. ಮೋಡಗಳಿಗೂ 'ಒನ್ ವೇ', 'ನೋ ಎಂಟ್ರಿ' ಇತ್ಯಾದಿಗಳನ್ನೊಡ್ಡಿ, 'ಕ್ಲೌಡ್ ಮೂಮೆಂಟ್ ಕಂಟ್ರೋಲ್ ಅಥಾರಿಟಿ' ಒಂದನ್ನು ನಿರ್ಮಿಸಿ, ಆಗಾಗ್ಗೆ ಮೋಡಯ್ಯನಿಗೂ ದಂಡ ವಿಧಿಸಿದ್ದರೆ ಇಂತಹ ಪ್ರಭೃತಿಗಳಿಗೆ ಕೊಂಚ ನೆಮ್ಮದಿ ದೊರಕೀತೇನೋ.

ಮಂಜು, ಮೋಡ, ಮೇಘ, ಮುಗಿಲು ಎಂದೆಲ್ಲ ಕರೆಸಿಕೊಳ್ಳುವ ಈ ಘನಶೀತಲವಾರಿಪುಂಜವು ಒಂದು ವಿಧದಲ್ಲಿ ಸಾಹುಕಾರನ ಹದಗೆಟ್ಟ ಮಗನಂತೆ – ಸಿಕ್ಕಸಿಕ್ಕಲ್ಲಿ ಓಡಾಡಿಕೊಂಡಿರುವುದು, ಸಿಕ್ಕಸಿಕ್ಕವರಿಗೆ ಬಾಯಿಗೆ ಬಂದಂತೆ ಉಗಿಯುವುದು (ಇದೊಂದು ನನಗರ್ಥವಾಗದ ನುಡಿಗಟ್ಟು–ಬಾಯಿಗೆ ಬರದಿರುವುದನ್ನು ಉಗಿಯುವುದು ಹೇಗೆ?) ಇದರ ಜನ್ಮಜಾತ ಗುಣ. ಕೃಷ್ಣಮೂರ್ತಿಯನ್ನು ಕೃಷ್ಣ, ಕಿಟ್ಟು, ಕಿಟ್ಟಾ ಎಂದೆಲ್ಲಾ ಕರೆದರೂ ಗುಣದಲ್ಲಿ ವ್ಯತ್ಯಾಸವಿಲ್ಲ. ಆದರೆ ಮಂಜು, ಮೇಘ, ಮುಗಿಲುಗಳಿಗೆ ಮೇಲುಮೇಲಿನ ಅರ್ಥ ಒಂದೇ ಎನಿಸಿದರೂ ಕವಿಗಳು ಅವುಗಳಿಗೆ ವಿವಿಧ ಗುಣಗಳನ್ನು ಆರೋಪಿಸಿದ್ದಾರೆ. ಮೋಡಗಳು ಬಡಾವಣೆಯ ಪಾರ್ಕಿನಲ್ಲಿನ ಮಾರ್ನಿಂಗ್ ಜಾಗರ್ಸ್ ಇದ್ದಂತೆ; ಹೆಚ್ಚೆಂದರೆ ಬೆಂಗಳೂರಿನ ಸೆಂಟ್ರಲ್ ಸಿಲ್ಕ್ ಬೋರ್ಡ್ ಟ್ರಾಫಿಕ್ಕಿನಲ್ಲಿ ಸಿಲುಕಿದ ಕಾರಿನಂತೆ ನಿಧಾನವಾಗಿ ಚಲಿಸುತ್ತವಷ್ಟೆ. ಇವುಗಳಿಗೆ ಒಳ್ಳೆಯ ಹೆಸರಿಲ್ಲವೆನ್ನುವುದಕ್ಕೆ ಮಕ್ಕಳಿಗೆ 'ಮೋಡರಾಜ್, ಮೋಡ' ಎಂದೆಲ್ಲ ಹೆಸರಿಡದಿರುವುದೇ ಸಾಕ್ಷಿ. ಅವಕ್ಕೆಲ್ಲ 'ಮೇಘಾ', 'ಮೇಘರಾಜ್', 'ಮೇಘನಾ'ಗಳೇ ಸೂಕ್ತ. ಇಲ್ಲಿಯೂ ಒಂದು ಸೂಕ್ಷ್ಮತೆಯ ಬಗ್ಗೆ ಸಂದೇಹವೇಳುತ್ತದೆ. ಸಂಸ್ಕೃತದಲ್ಲಿ 'ಮೇ' ಎಂದರೆ ನನಗೆ; 'ಘಾ' ಎಂದರೆ ಏಟು ಎಂಬ ಅರ್ಥಗಳಿವೆ. ಮೇಘಗಳು ಮಳೆ ಸುರಿಸುವುದು ಮೇ ಆರ್ ಮೇ ನಾಟ್ ಎಂಬ ಸಂದರ್ಭ ಬಂದಾಗ ಕೃಷಿಭೂಮಿಯು 'ನನಗೆ ಪೆಟ್ಟು ಬಿದ್ದಂತೆಯೇ' ಎಂದು ಆಗಸವನ್ನು ನೋಡುತ್ತಾ ಹೇಳಿದ್ದರಿಂದಲೇ 'ಮೇಘಾ' ಪದವು ಹುಟ್ಟಿರಬಹುದೆಂಬುದು ಒಂದು ಸಂದೇಹವಾದರೆ, 'ಕ್ಲೌಡ್ ಬರ್ಸ್ಟ್' ಆಗಿ ನೆರೆ ಬಂದು ಬೆಳೆದುದೆಲ್ಲ ಕೊಚ್ಚಿಹೋಗಿದ್ದರಿಂದ ಬುವಿಯು ಅಳುತ್ತಾ 'ಮೇಘಾ–ನನಗೆಂತಹ ಹೊಡೆತವಿದು!'



ಎಂದುದರಿಂದ ಈ ಪದವು ಚಾಲ್ತಿಗೆ ಬಂದಿರಬಹುದೆಂಬುದು ಇನ್ನೊಂದು ಸಂದೇಹ. ಸರಿಯಾದ ಸಮಯಕ್ಕೆ ಸರಿಯಾದ ಸ್ಥಳದಲ್ಲಿ ಸರಿಯಾದ ಪ್ರಮಾಣದಲ್ಲಿ ಮೇಘವು ಮಳೆ ಸುರಿಸಿದರೆ ಸಸ್ಯಗಳು ಗಲಗಲನೆಂದು ಬೆಳೆಯುತ್ತಾ 'ನಾನು ಗಲಗಲನೆಂದಿರಲು ನೀನೇ ಕಾರಣ ಮೇಘ' ಎನ್ನುವುದೂ ಸಾಧ್ಯವೇ; ಮೇ –ನನಗೆ; ಘ–ಗಲಗಲವೆಂಬ ಸದ್ದು; ಈ ಅರ್ಥವನ್ನೂ ಕೃಷಿಯ ಖುಷಿಗೆ ಅನ್ವಯಿಸಬಹುದು.

ಮೇಘವು ಸೋಮಾರಿತನವೇ ಮೈವೆತ್ತಂತೆ ಬಾನಿನ ಪಥದಲ್ಲಿ ವಿಹರಿಸಿಕೊಂಡು ಚೆನ್ನಾಗಿಯೇ ಇತ್ತು–ಯಕ್ಷನೊಬ್ಬನ ಕಣ್ಣಿಗೆ ಬೀಳುವವರೆಗೆ! ಯಕ್ಷನು ಕಾಳಿದಾಸನ ಮನೆಯ ಬಾಗಿಲನ್ನು ತಟ್ಟಿದ; ಮೇಘಕ್ಕೆ ಗ್ರಹಚಾರ ಮೆಟ್ಟಿಕೊಂಡಿತು.

'ಎಲೈ ಮೇಘವೆ, ನಾನು ಸೀತೆಯು ಸ್ನಾನ ಮಾಡಿದ ಕಾರಣದಿಂದ ಪುಣ್ಯಜಲವಾದ ನದಿಯಲ್ಲಿ ಮೀಯುತ್ತಾ ರಾಮಗಿರಿಯೆಂಬ ಸ್ನಿಗ್ಧಛಾಯೆಯುಳ್ಳ ಪಚ್ಚತರುಗಳುಳ್ಳ ಪ್ರದೇಶದಲ್ಲಿ ಸ್ವಸ್ಥವಾಗಿದ್ದೇನೆಂದು ನನ್ನಿನಿಯಳಿಗೆ ತಿಳಿಸು' ಎಂದು ವಿನಂತಿರೂಪದ ಆರ್ಡರ್ ಹೊರಡಿಸಿದ ಯಕ್ಷನಿಗೆ ಕಿವಿಯಾದುದೇ ಮೇಘದ ಕಷ್ಟಗಳ ಸರಮಾಲೆಗೆ ನಾಂದಿಯಾಯಿತು.

'ಅದೋ ಆ ಊರಿನಲ್ಲಿ ನಲ್ಲೆಯರು ನಲ್ಲನ ತೆಕ್ಕೆಯಲ್ಲಿ ಸುಖಿಸುತ್ತಿದ್ದಾರೆ. ನೀನು ಅಲ್ಲೆಲ್ಲಿಯೂ ಗುಡುಗಬೇಡ; ಜೋರಾಗಿ ಮಳೆ ಸುರಿಸಬೇಡ. ಅವರ ಪ್ರೇಮಧ್ಯಾನಕ್ಕೆ ಭಂಗ ಬರದ ರೀತಿಯಲ್ಲಿ ಮುಂದಕ್ಕೆ ಚಲಿಸು' ಎಂದು ಈಗಿನ ಆಸ್ಪತ್ರೆಗಳ ಮುಂದೆ ಹಾಕಿರುವ 'ಸೈಲೆಂಟ್ ಝೋನ್' ಮಾದರಿಯ ಆದೇಶಗಳನ್ನೊಮ್ಮೆ;

'ಅದೋ ಆ ಗುಡ್ಡದ ಮೇಲಿರುವ ಬುಡಕಟ್ಟು ಜನರು ನೃತ್ಯಗೀತೆಗಳಲ್ಲಿ ನಿರತರಾಗಿದ್ದಾರೆ. ಅವನ್ನು ನೋಡಿ ಆನಂದಿಸು. ಆದರೆ ಒಂದು ರಾತ್ರಿಗಿಂತ ಹೆಚ್ಚು ನಿಲ್ಲಬೇಡ' ಎಂದು ಟೂರ್ ಐಟಿನರಿ ಯನ್ನೊಮ್ಮೆ;

'ಅದೋ ನೋಡು, ಶಿವಪಾರ್ವತಿಯರು ವಾಕಿಂಗ್ ಹೊರಟಿದ್ದಾರೆ. ಅವರದು ಆರೋಹಣಪ್ರವಾಸ. ಅವರ ನಡಿಗೆಗೆ ಅನುವಾಗುವಂತೆ ನೀನು ಮಣಿಖಚಿತ ಮೆಟ್ಟಿಲುಗಳ ಆಕಾರವನ್ನು ಪಡೆದು ನೀನೇ ಮುಂದಾಗಿ ಅವರನ್ನು ಆ ಮೆಟ್ಟಿಲನ್ನು ಮೆಟ್ಟಲು ಆಹ್ವಾನಿಸು' ಎಂಬ ಆದೇಶ ಮಗದೊಮ್ಮೆ, ಹೀಗೆ ಐವತ್ತಕ್ಕೂ ಹೆಚ್ಚು ಪದ್ಯಗಳಲ್ಲಿ ಕಾಳಿದಾಸನು ಮೇಘದ ಜಾಲಿ ಟೂರ್ ಅನ್ನು ದುರ್ಭರ ಆಫೀಸ್ ಟ್ರಿಪ್ ಆಗಿ ಬದಲಿಸಿಬಿಟ್ಟ.

ಬಡಪಾಯಿ ಮೇಘವು ಯಕ್ಷನಿತ್ತ ಸಂದೇಶವನ್ನು ಯಥಾವತ್ತಾಗಿ ರಕ್ಷಿಸಿಕೊಳ್ಳಬೇಕು; ಆಕಾರವೂ ಬದಲಾಗಬೇಕು! ಮೇಘಕ್ಕೆ ಮೆದುಳೆಂಬುದೊಂದಿದ್ದು, ಅದರಲ್ಲೊಂದಿಷ್ಟು ಮೆಮೊರಿ ಚಿಪ್ಸ್ ಇದ್ದರೆ ಪರವಾಯಿಲ್ಲ; ಇಲ್ಲವಾದರೆ ಮೈಮೇಲೆ ಸಂದೇಶವನ್ನು ಬರೆದುಕೊಂಡೇ ಸಾಗಬೇಕು. ಹೀಗೆ ಸಂದೇಶಲಿಖಿತವಾದ ಮೈಯ ಆಕಾರವನ್ನು ಬದಲಿಸಿದಾಗ ಸಂದೇಶವ್ಯತ್ಯಯವಾದರೆ ಮೇಘ ಹೊಣೆಯೋ, ಯಕ್ಷ ಹೊಣೆಯೋ? ನಿಜಕ್ಕೂ ಮೇಘಕ್ಕೆ ಮನಸ್ಸೆಂಬುದೊಂದಿದ್ದರೆ ಅದು ಕಾಳಿದಾಸನಿಗೆ 'ಮೈಂಡ್ ಯುವರ್ ಓನ್ ಬಿಸಿನೆಸ್. ಐ ವಿಲ್ ಟ್ರಾವಲ್ ವೇರ್ ಐ ವಾಂಟ್, ವೆನ್ ಐ ವಾಂಟ್! ಐ ಯಾಮ್ ನೋ ಸರ್ವೆಂಟ್ ಆಫ್ ಎನಿ ಮಾಸ್ಟರ್' ಎಂದು ಗುಡುಗುತ್ತಿತ್ತೋ ಏನೋ!



ಕಾಳಿದಾಸನ ಮಾತನ್ನು ನಿಜವಾಗಿಯೂ ಮೇಘವು ಕೇಳಿತ್ತೆಂಬುದಕ್ಕೆ

ದಾಖಲೆಯಿದ್ದರೆ ನಮ್ಮ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಮಂದಿ ಸುಮ್ಮನಿರುತ್ತಿದ್ದರೆ? 'ಹೇ ಮಿಸ್ಟರ್ ಕ್ಲೌಡ್, ಮುನಿಯಪ್ಪನ ಗದ್ದೆಯ ಭತ್ತಕ್ಕೆ ಹೆಚ್ಚು ನೀರನ್ನು ಸ್ಪ್ರಿಂಕಲಿಸು; ಪಕ್ಕದಲ್ಲಿರುವ ತಿಮ್ಮಯ್ಯನ ಕಲ್ಲಂಗಡಿಹಣ್ಣಿನ ಬೆಳೆಗೆ ಹೆಚ್ಚು ನೀರು ಬೇಕಾಗಿಲ್ಲವಾದ್ದರಿಂದ ಕ್ಷೌರಿಕನು ಗಿರಾಕಿಯ ಮುಖದ ಶೇವ್ ಮಾಡುವುದಕ್ಕೆ ಮುಂಚೆ ಮುಖಕ್ಕೆ ಸಿಂಪಡಿಸುವ ನೀರಿನಷ್ಟೇ ಪ್ರಮಾಣದ ನೀರನ್ನು ಅಲ್ಲಿ ಉದುರಿಸಿ ಮುಂದಕ್ಕೆ ಸಾಗು. ಗೋಯಿಂದಯ್ಯನ ಹೊಲದಲ್ಲಿ ಕಬ್ಬಿನ ಬೆಳೆ ಇದೆ. ನಿನ್ನೊಂದು ಮೋಡತುಕುಡಿಯನ್ನು ಇಲ್ಲಿ ಪರ್ಮನೆಂಟಾಗಿ ನಿಲ್ಲಿಸಿ ಅವಶ್ಯವಿದ್ದಾಗಲೆಲ್ಲ ಹನಿಸುತ್ತಿರು' ಎಂದೆಲ್ಲ ಖಡಕ್ ಆದೇಶಗಳನ್ನು ಹೊರಡಿಸುತ್ತಿದ್ದುದು ನಿಶ್ಚಿತ.

ಕಾಳಿದಾಸನ 'ಕ್ಲೌಡ್ ಮೆಸೇಜ್' ಮುಂದೆಯೂ ಅಲ್ಲಲ್ಲಿ ಕಂಡುಬಂದಿದೆ. ಪುಟ್ಟಣ್ಣ ಕಣಗಾಲರ ಚಿತ್ರವೊಂದರಲ್ಲಿ 'ಸಂದೇಶ; ಮೇಘಸಂದೇಶ' ಎಂಬ ಗೀತೆಯು ಯಕ್ಷನ ಮೇಘವನ್ನು ನೆನಪಿಸಿದರೆ, 'ಶೃಂಗಾರ ಕಾವ್ಯ' ಚಿತ್ರದ ಗೀತೆಯೊಂದರ ಮೂಲಕ ಹಂಸಲೇಖರು ಮೇಘಕ್ಕೆ ಮತ್ತೆ ಪೋಸ್ಟ್ಮ್ಯಾನ್ ಡ್ಯೂಟಿಯನ್ನು ಒಪ್ಪಿಸಿದ್ದಾರೆ. ಅಂತೂ ಸೂರ್ಯಚಂದ್ರರೊಡನೆ ಹೈಲೆವೆಲ್ ಮೀಟಿಂಗ್ ನಡೆಸಿಕೊಂಡು ಹಾಯಾಗಿದ್ದ ಮೋಡವು ಕವಿಗಳ ಕೈಬಾಯಿಗೆ ಸಿಕ್ಕಿ ಮೆಸೆಂಜರ್ ಬಾಯ್ ಆಗಬೇಕಾಯಿತು!

ಮೋಡದ ಹೆಸರುಗಳಲ್ಲೆಲ್ಲ ಮೋಸ್ಟ್ ಫೇಮಸ್ ಆಗಿರುವುದೇ ಮಂಜು. ಅಸಲಿಗೆ ಅದು ಮೋಡವಲ್ಲದೆ ಮೋಡದ ಬೈಪ್ರಾಡಕ್ಟ್ ಆದರೂ ಅದರ ಜನಪ್ರಿಯತೆಗೆ ಎಣೆಯಿಲ್ಲ. ಮಂಜಿಗೆ ಕನ್ನಡದಲ್ಲೇನೋ ಮಂಜು ಎನ್ನುವುದು ಸರಿಯೇ. ಆದರೆ ಆಂಗ್ಲದಲ್ಲಿ? ಇದನ್ನು ಕರೆಯುವ ಪರಿಗೂ, ಇದು ಕೆಲವೊಮ್ಮೆ ಇರುವ ಪರಿಗೂ ಸಂಬಂಧವೇ ಇಲ್ಲ. ವೈನಿನ ಲೋಟವನ್ನು ವೈನವಾಗಿ ಏರಿಸುತ್ತಾ ಕಿಟಕಿಯಿಂದಾಚೆಗೆ ದೃಷ್ಟಿ ಹರಿಸಿ 'ಲುಕ್ ಎಟ್ ದ ಸ್ನೋ' ಎನ್ನುತ್ತಾರೆ. ಹೊರಹೋಗಿ ನೋಡಿದರೆ ಬಿದ್ದ ಸ್ನೋ ಪುಡಿಪುಡಿಯಾಗಿರುತ್ತದೆ. 'ಪೇಸ್ಟಿನಂತಿರುವುದು ಸ್ನೋ; ಪುಡಿಪುಡಿಯಾಗಿರುವುದು ಪೌಡರ್. ನೆಲಕ್ಕಿಳಿದ ಪುಡಿಯನ್ನು ಪೌಡರ್ ಎನ್ನುವುದರ ಬದಲು ಸ್ನೋ ಎನ್ನುವ ಪರಮದಡ್ಡರೇ ಬ್ರಿಟಿಷರು' ಎನ್ನುವುದು ಮೇಕಪ್ ಆರ್ಟಿಸ್ಟೊಬ್ಬನ ಖಚಿತ ಅಭಿಪ್ರಾಯ!

ಮಂಜು ವಿಸ್ಮಯಗಳ ಆಗರವೇ ಸೈ. ಇಳೆಯು ಚಳಿಯೆಂದು ನಡುಗಿದಾಗ ನಭನೆಂಬ ಪ್ರಿಯಕರನು ತನ್ನಿನಿಯಳಿಗೆ ಹೊದೆಯಲೆಂದು ನೀಡುವ ಶ್ವೇತವರ್ಣದ ದಪ್ಪನೆಯ ಹಚ್ಚಡವೇ ಮಂಜು ಎಂದರೆ ಹಿಮವತ್ಪರ್ವತವು ಅಹುದಹುದೆಂದೀತು. ಆದರೆ ಆ ಹಚ್ಚಡವು ಗಗನದಲ್ಲಿ ತಯಾರಾದುದಲ್ಲ; ನಭನು ನೀಡಿದ ಮೋಡದ ಎಳೆಗಳನ್ನು ದಾರವಾಗಿಸಿಕೊಂಡು ಗಾಳಿಯು ಶೈತ್ಯದ ಮಗ್ಗದಲ್ಲಿ ತಯಾರಿಸುವ 'ಎಡಿಬಲ್' ಚಾದರ. ಎಳೆಯ ಕೈಗಳಿಂದ ಎಳೆಯ ಮನಸ್ಸಿನಂತೆಯೇ ಸುಲಭವಾಗಿ ಮೌಲ್ಡ್ ಮಾಡಲ್ಪಡುವ ಸಾಮಗ್ರಿಯಾಗಿ 'ಚೂರ್ಣದಿಂದ ಪೂರ್ಣದವರೆಗೆ' ಮನುಷ್ಯನ ಆಕಾರ ತಳೆದು ಸ್ನೋಮ್ಯಾನ್ ಅನಿಸಿಕೊಳ್ಳಬಲ್ಲ ವಸ್ತು; ಕುಳಿರ್ಗಾಳಿಯಲ್ಲೂ ಕ್ರೀಡಾಸಕ್ತರಾದವರ ಹಸ್ತದಲ್ಲೇ ತಯಾರಾಗುವ ಇನ್ಸ್ಟಂಟ್ ಚೆಂಡು ಉರುಫ್ ಸ್ನೋಬಾಲ್; ಗಿರಿಪರ್ವತಗಳ 'ಈಸಿ ಛೇರ್' ಭಂಗಿಗೆ ತಕ್ಕಂತೆ ಹೊದಿಸಲಾಗಿರುವ, ಸ್ಕೀಯಿಂಗ್ ಆಟಗಾರರು ಹೊಕ್ಕಲು ಅನುಕೂಲವಾಗುವ ಹಾಸು; ಸೂಕ್ಷ್ಮ ಪ್ರದೇಶಗಳಲ್ಲಿ ಜೋರಾಗಿ ಕೂಗಿದರೂ ಕಂಪನಗಳಿಂದಲೇ ಜನ್ಮತಳೆದು ಶಿಖರದಿಂದ ತೀವ್ರವೇಗದಲ್ಲಿ ಉರುಳುತ್ತಾ ಸಾಗಿ ಅಪ್ಪಳಿಸುವ ಅವಲಾಂಚೆ! ರೌದ್ರವೂ, ಮೋಹಕವೂ, ಕ್ರೀಡಾಸ್ಪದವೂ ಆದ ಮಂಜಿಗೆ ಮನಸೋತ ರಾಜರತ್ನಂ ಮಂಜನ್ನು ವರ್ಣಿಸಿರುವ ಪರಿಗೆ ಸಾಟಿಯುಂಟೇಂ?



ಭೂಮೀನ್ ತಬ್ಬಿದ್ ಮೋಡಿದ್ದಂಗೆ
ಬೆಳ್ಳಿ ಬಳಿದಿದ್ ರೋಡಿದ್ದಂಗೆ
ಸಾಫಾಗಳ್ಳಿತಿಟ್ಟಿಲ್ದಂಗೆ
ಮಡ್ಕೇರೀಲೀ ಮಂಜು...
ಮಡಗಿದ್ದಲ್ಲೇ ಮಡಗಿದ್ದಂಗೆ
ಲಂಗರ್ಬಿದ್ದಿದ್ದಡಗಿದ್ದಂಗೆ
ಸೀತಕ್ ಸಕ್ತಿ ಉಡುಗೋದಂಗೆ
ಅಳ್ಳಾಡಲ್ದು ಮಂಜು !

ಎನ್ನುತ್ತಾ ಸಾಗುವ ಪದ್ಯವನ್ನು ಮುಂದುವರಿಸುತ್ತಾ 'ತಾಯಿ ಮೊಗೀನ್ ಎತ್ಕೊಂಡಂಗೆ; ಒಂದಕ್ಕೊಂದು ಆತ್ಕೊಂಡಂಗೆ' ಎನ್ನುತ್ತಾರೆ ರಾಜರತ್ನಂ. ಪರಸ್ಪರ ಆತ್ಮೀಯ ಬೆಸುಗೆಗೆ ಇದಕ್ಕಿಂತಲೂ ಉತ್ತಮ ಉದಾಹರಣೆ ದುರ್ಲಭ.

ನಾರದರ ಹೈವೇ ಆದ ಮೋಡಗಳು ವಿವಿಧ ಕವಿಗಳ ಕೈಯಲ್ಲಿ ವಿವಿಧ ಪಾತ್ರಗಳನ್ನು ಪಡೆದಿವೆ. 'ಮಾತಿಗೊಂದು ಅರ್ಥವೇಕೆ ಅರ್ಥವಿದ್ದರಷ್ಟೆ ಸಾಕೆ; ಮೋಡಗಳನು ನೋಡಿ ಕಲಿ; ಅರ್ಥ ಅಲ್ಪವೆಂದು ತಿಳಿ' ಎನ್ನುತ್ತಾ ಕುವೆಂಪು ಮೋಡಗಳಿಗೆ ಗುರುವಿನ ಸ್ಥಾನವನ್ನು ಕಲ್ಪಿಸಿದರೆ, ವಸಂತಲಕ್ಷ್ಮಿ ಚಿತ್ರದಲ್ಲಿ ಬೆಳ್ಳಿ ಮೋಡವೆ,ಎಲ್ಲಿ ಓಡುವೆ,ನನ್ನ ಬಳಿಗೆ ನಲಿದು ಬಾ ನನ್ನ ನಲ್ಲನ, ಕಂಡು ಈ ಕ್ಷಣ,ನನ್ನ ಒಲವ ತಿಳಿಸಿ ಬಾ' ಎನ್ನುತ್ತಾ ಮೋಡಕ್ಕೆ ಮತ್ತೆ ಅಂಚೆಯವನ ಕೆಲಸವನ್ನು ಕೊಡಮಾಡಿದ್ದಾರೆ. ಹಿಂದಿಯ ಕವಿಗಳಂತೂ ಮೋಡಗಳಿಗೆ ಕೆಲಸವನ್ನು ಹಚ್ಚುವುದರಲ್ಲಿ ನಿಸ್ಸೀಮರು. 'ಏ ಬಾದಲ್ ಝೂಮಕೇ ಚಲ್' ಎಂದು ಸೋಮಾರಿ ಮೋಡಕ್ಕೆ ಆತುರಪಡಿಸುವ ಇವರಿಗೆ ಕಪ್ಪುಮೋಡಗಳು ಪ್ರೇಮ ಋತುವಿನ ಆಗಮನದ ಸಂಕೇತ. 'ಕಾಲಿ ಘಟಾ ಛಾಯಿ; ಪ್ರೇಮ್ ಋತು ಆಯಿ' ಎನ್ನುತ್ತಾ ಪ್ರೇಮಕವನಗಳ ರಚನೆಗೆ ತೊಡಗಿಬಿಡುತ್ತಾರೆ. ಈ ಕವಿಗಳಿಗೆ ದುಃಖದ ಸನ್ನಿವೇಶದಲ್ಲಂತೂ ಮೋಡಗಳು ಇರಲೇಬೇಕು. ಪ್ರೇಮವಂಚಿತನಾದ ನಾಯಕನಿಗೆ ಕಣ್ಣೀರಿನ ಸ್ಟಾಕ್ ಕಡಿಮೆಯಾದರೆ ಅದನ್ನು ತುಂಬಿಕೊಡಲು ಮೋಡಗಳು ಇರಬೇಕು. 'ಘಟಾವೋ ತುಮ್ಹೇ ಸಾಥ್ ದೇನಾ ಪಡೇಗಾ; ಮೈ ಫಿರ್ ಆಜ್ ಆಸೂ ಬಹಾನೇ ಚಲಾ ಹೂ' ಎಂದು ನಾಯಕನು ಗೋಳ್ಹಾಡುವುದೇ ಇದಕ್ಕೆ ನಿದರ್ಶನ. ಮಿಸ್ಟರ್ & ಮಿಸೆಸ್ 55 ಚಿತ್ರದಲ್ಲಿ ಮಾತ್ರ 'ಠಂಡಿ ಹವಾ ಕಾಲಿ ಘಟಾ ಆ ಹಿ ಗಯೀ ಝೂಮ್ ಕೇ' ಎಂದು ಮೋಡಕ್ಕೆ ಯಾವುದೇ ಕೆಲಸವನ್ನು ಹಚ್ಚದೆ ಸಂತೋಷದಿಂದ, ಮೋಡವನ್ನು ಸ್ವಾಗತಿಸಿರುವುದು ಕಂಡುಬರುತ್ತದೆ.

ಇವೆಲ್ಲವೂ ಆಗಸದಲ್ಲಿ ಕಲೆಯುವ, ಅಲೆಯುವ ಮೋಡಗಳದ್ದಾಯಿತು. ತಾಂತ್ರಿಕವಾಗಿಯೂ ಮೋಡಗಳು ನಮಗೆ ಅನಿವಾರ್ಯವಾಗಿವೆ. 'ಕ್ಲೌಡ್ ಕಂಪ್ಯೂಟಿಂಗ್, ಕ್ಲೌಡ್ ಟ್ರಾನ್ಸಫರ್, ಕ್ಲೌಡ್ ಸ್ಟೋರೇಜ್' ಇಲ್ಲದಿದ್ದರೆ ಕಂಪ್ಯೂಟರಿಗಳು ಹ್ಯಾಂಗ್ ಆಗಿ ಹ್ಯಾಂಗ್ಯ್ಯಾಂಗೋ ಆಡ್ತಾವು; ಮೊಬೈಲ್ ಫೋನುಗಳ ಕೆಪ್ಯಾಸಿಟಿ ತುಂಬಿ ಮುಷ್ಕರಕ್ಕೆ ಬಿದ್ದಾವು. ವರುಣನ ಫೇವರಿಟ್ ವೆಹಿಕಲ್ ಆದ ಮೋಡವು 'ಇನ್ ವಿಥ್ ದಿ ಟೈಮ್ಸ್' ಆಗುವುದರ ಮೂಲಕ ಕಾಳಿದಾಸನ ಕಾಲದಿಂದ ಖಾಲಿದೋಸೆಯ




ಕಾಲದವರೆಗೆ ಪ್ರಸ್ತುತವೆನಿಸಿಕೊಂಡಿದೆ. ಅಮೀಬಾದಂತೆ ಆಕಾರ ಬದಲಿಸುತ್ತಾ, ರಾಜಕಾರಣಿಗಳಂತೆ ದಿಕ್ಕು ಬದಲಿಸುತ್ತಾ, ಕನ್ನಡ ಟೆಲಿಸೀರಿಯಲ್ಗವಳಂತೆ ಖಿನ್ನತೆಯ ಭಂಡಾರವೇ ಆಗಿರುತ್ತಾ, ಸಮಯಕ್ಕೆ ಸರಿಯಾಗಿ ಒದಗಿಬಂದು ಎಷ್ಟೋ ಕ್ರಿಕೆಟ್ ಟೀಮುಗಳನ್ನು ಗ್ಯಾರಂಟಿ ಸೋಲಿನಿಂದ ಬಚಾವ್ ಮಾಡುತ್ತಾ, 'ಆಷಾಢಸ್ಯ ಪ್ರಥಮ ದಿವಸೇ' ಸಾಹಿತ್ಯಪ್ರೇಮಿಗಳಿಗೆ ತಪ್ಪದೆ ಕಾಳಿದಾಸನ ನೆನಪನ್ನು ಮಾಡಿಕೊಡುತ್ತಾ, ರಸಿಕಶಿಖಾಮಣಿಗಳ ಬೇಡಿಕೆಗೆ ಕರಗಿ ನೀರಾಗಿ 'ಝಿಂದಗೀ ಭರ್ ನಹೀ ಭೂಲೇಗಿ ಓ ಬರಸಾತ್ ಕಿ ರಾತ್; ಏಕ್ ಅಂಜಾನ್ ಹಸೀನಾ ಸೇ ಮುಲಾಕಾತ್ ಕೀ ರಾತ್' ಎಂದು ಹಾಡಲೋ, 'ಬಾ ಮಳೆಯೆ ಬಾ; ಇಷ್ಟು ಬಿರುಸಾಗಿ ಬಾರದಿರು; ನನ್ನ ನಲ್ಲೆ ಬರಲಾಗದಂತೆ; ಅವಳಿಲ್ಲಿ ಬಂದೊಡನೆ ಬಿರುಸಾಗಿಬಿಡು; ಅವಳು ಹಿಂತಿರುಗಿ ಹೋಗದಂತೆ' ಎಂದು ಪ್ರಾರ್ಥಿಸಲೋ ಪ್ರೇರಣೆ ನೀಡುವ ಮೋಡಗಳ ಜಗತ್ತು ಅನೂಹ್ಯ, ಅಪಾರ, ಅವರ್ಣನೀಯ.

■

## ಬರದ ಬಗ್ಗೆ ಮೀಟಿಂಗ್

ಸುದ್ದಿ



# ಹಕ್ಕಿ ಕಳ್ಳ ಹೊಕ್ಕಿ ಹೋದ್ನಾ?

**ವೈ.ಎನ್. ಗುಂಡೂರಾವ್**

ಮನುಷ್ಯನಿಗೆ ತನ್ನ ಜೀವನದಲ್ಲಿ ಕೊಂಚ ನೆಮ್ಮದಿ ಜೊತೆಗೆ ಕೈಯಲ್ಲಿ ಕಾಂಚಾಣವೂ ಕುಣಿಯತೊಡಗಿದರೆ ಮನಸ್ಸು ಒಳ್ಳೆಯದರತ್ತವೂ ಹರಿಯಬಹುದು ಇಲ್ಲವೇ ದುಶ್ಚಟಗಳತ್ತವೂ ಹರಿಯಬಹುದು. ಇಂಥ ಸಂದರ್ಭದಲ್ಲಿ ಮಾರ್ಗದರ್ಶ–ಕರಾಗುವವರು ನೆರೆಹೊರೆ, ಸ್ನೇಹಿತರು ಗುಂಪು, ನಾವು ಬೆಳೆದ ವಾತಾವರಣ ಮುಂತಾದವುಗಳ ಮೇಲೆ ಅವಲಂಬಿತವಾಗಿರುತ್ತದೆ.

ನನ್ನ ಕಾಲೇಜ್ ಮೇಟ್ ಆಗಿದ್ದ ಸತ್ಯಮೂರ್ತಿ ಯು ಟ್ರಾಕ್ ಮಾಡಲು ಸಿಗದ, ಉಡಾಯಿಸಿದ ರಾಕೆಟ್‌ನಂತೆ ಕೆಲ ವರ್ಷ ಕಾಣಲೇಯಿಲ್ಲ.

ಇದ್ದಕ್ಕಿದ್ದಂತೆ ಒಂದು ದಿವಸ ನಾನು ವಾಕಿಂಗ್ ಹೋಗುತ್ತಿದ್ದಾಗ ಪಾರಿವಾಳವೊಂದನ್ನು ಹಿಡಿದುಕೊಂಡು ಬಂದ ಸತ್ಯಮೂರ್ತಿ ಎದುರಾದಾಗ ನನಗಾದ ಆಶ್ಚರ್ಯಕ್ಕಿಂತ ಪಾರಿವಾಳವನ್ನು ಸಾಕುವಂತಹ ಕಸುಬಿಗೇಕೆ ಇಳಿದ ಎಂಬ ನಿಕೃಷ್ಟ ಭಾವವೂ ಮನಸ್ಸಿನ ಮೂಲೆಯಲ್ಲಿ ಹಾದುಹೋಯಿತು.

"ಏನಯ್ಯಾ ಸತ್ಯಮೂರ್ತಿ ಹೇಗಿದ್ದೀಯಾ ? ಬಹಳ ವರ್ಷ ಕಾಣಲೇಯಿಲ್ಲ . ಎಲ್ಲಿದ್ದೀಯಾ, ಹೇಗಿದ್ದೀಯಾ?" ಎಂದೆ.

"ಅಯ್ಯೋ, ನಿಮ್ಮ ಏರಿಯಾದಲ್ಲೇ, ನಾಲ್ಕನೆಯ ಬ್ಲಾಕ್ ನಲ್ಲಿ. ನೀನು ಸ್ಕೂಟರಿನಲ್ಲಿ ಓಡಾಡುವುದನ್ನು ಎಷ್ಟೋ ಸಾರಿ ನೋಡಿದ್ದೆ. ಸ್ಕೂಟರ್ ಓಡಿಸುತ್ತಿರುವಾಗ ಡಿಸ್ಟರ್ಬ್ ಮಾಡಬರದೂಂತ ಕರೆದಿರಲಿಲ್ಲ ಎಂದ."

"ಸರಿ, ಸರಿ. ಏನ್ಮಾಡ್ತಿದ್ದೀಯ? ಇದೇನು ಪಾರಿವಾಳ ಸಾಕುವ ಹುಚ್ಚಿಗೆ ಬಿದ್ದಿದ್ದೀಯ ಹೇಗೆ?"

"ಎಲ್ಲಾ ಬಿಟ್ಟು ಬಂಗಿ ನೆಟ್ಟ" ಅನ್ನೋರೀತಿ ಎಂದು ಕಿಚಾಯಿಸಿದೆ.

ಸ್ನೇಹಿತರೊಬ್ಬರಿಂದ ಹೀಗೆ.... ನನಗೂ ಈ ಹವ್ಯಾಸ ಅಂಟಿಕೊಂಡಿತು ಎಂದು ಸ್ನೇಹಿತರಿಂದ ಪ್ರಭಾವಿತನಾಗಿ ಪಾರಿವಾಳ ಸಾಕುವ ಹವ್ಯಾಸಕ್ಕೆ ಬಿದ್ದದ್ದು; ಸಬ್ನಾ, ರೇಖ್ದಾರ್, ಧೂಮ, ಗುಲ್ವಾರ್, ಮಕ್ಷಿ, ತಿರಾವಲ್ ಮುಂತಾದ ಜಾತಿಯ ಪಾರಿವಾಳಗಳನ್ನು ಸಾಕುವ ವಿಧಾನ, ಒಂದು ನಿರ್ದಿಷ್ಟ ಜಾಗದಲ್ಲಿ ಅದನ್ನು ಕೂರಲು ಕಲಿಸಿ, ನಂತರ ಅಲ್ಲಿಂದ ಹಾರಿಸಿ ಆಕಾಶದಲ್ಲಿ ಸ್ಥಿರವಾಗಿ ಹಾರಾಡುವ ಕಾಲಾವಧಿಯನ್ನು ಕ್ರಮವಾಗಿ ಹೆಚ್ಚಿಸುತ್ತಾ ಹೋಗುವುದು; ನಂತರ ಕುಳಿತಿದ್ದ ಸ್ಥಳಕ್ಕೆ ಹಿಂದಿರುಗುವಂತೆ ಮಾಡುವ ತರಬೇತಿ: ಹೀಗೆ ಪರಿಣಿತಿ ಪಡೆದನಂತರ ಇದಕ್ಕಾಗಿಯೇ ಇರುವ ಕ್ಲಬ್ಗಳ ಮುಖಾಂತರ ಹಾರಾಟದ ಸ್ಪರ್ಧೆಯಲ್ಲಿ 10–12 ಗಂಟೆ ಆಕಾಶದಲ್ಲಿ ಹಾರಾಟ ನಡೆಸಿದರೂ ಸುಸ್ತಾಗದಂತಹ ಕ್ಷಮತೆಯ ಶಕ್ತಿಯನ್ನು ಪ್ರದರ್ಶಿಸುವ ಪಾರಿವಾಳಕ್ಕೆ ಸ್ಕೂಟರ್, ಬೈಕ್‌ಗಳನ್ನು ಗೆಲ್ಲುವ ಅವಕಾಶದವರೆಗೂ ಸತ್ಯಮೂರ್ತಿ ವಿವರಿಸಹೊರಟಾಗ ದಂಗು ಬಡಿದುಹೋದೆ.

ನನಗೆ ಪಾರಿವಾಳ ಸಾಕುವಿಕೆ, ಸ್ಪರ್ಧೆ ಮುಂತಾದವುಗಳ ಬಗ್ಗೆ ಅಂತಹ ಜ್ಞಾನವಿಲ್ಲದ್ದರಿಂದ ಪಾರಿವಾಳ ಸಾಕುವುದರಲ್ಲಿಯೂ ಇಷ್ಟೊಂದು ವೈವಿಧ್ಯಗಳಿದೆಯಾ ಎನಿಸಿತು. ಸರಿ ಗುಡ್ ಲಕ್ ಎಂದು ಹೇಳಿ ಹೊರಟು ಹೋದೆ.



ಪುನಃ ಸತ್ಯಮೂರ್ತಿ ಕೆಲವು ತಿಂಗಳು ಕಾಣದಾದ. ಒಮ್ಮೆ ಪೆಟ್ರೋಲ್ ಬಂಕ್ ಬಳಿ ಸಿಕ್ಕಿಬಿದ್ದ. ಎಲ್ಲಯ್ಯಾ ಫೋನ್ ನಂಬರ್ ಕೂಡ ತಿಳಿಸಲಿಲ್ಲ. ಹೋಗಲಿ ಮನೆ ಎಲ್ಲಿ ಎಂದೆ. ಹಿಂದಿನ ರಸ್ತೆಯಲ್ಲೇ. ಬಾ ಎಂದು ಕರೆದೊಯ್ದ. ಸುಂದರವಾದ ಮನೆ. ಮನೆಯನ್ನೆಲ್ಲಾ ತೋರಿಸಿ ಮಹಡಿ ಮೇಲೆ ಕರೆದೊಯ್ದ. ಕಿಚಿಪಿಚಿ, ಕಿಚಿಪಿಚಿ ಎಂಬ ಹಕ್ಕಿಗಳ ಶಬ್ದ ಕೇಳಿ ಇದೇನಿದು ಗುಬ್ಬಚ್ಚಿ ಶಬ್ದದಂತಿದೆಯಲ್ಲಾ ಎಂದೆ. ಹೌದು, ನೋಡುಬಾ ಪೆಟ್ ಬರ್ಡ್ಸ್ ಎಂದು ವಿವಿಧ ರೀತಿಯ ಪುಟ್ಟ ಹಕ್ಕಿಗಳನ್ನು ತೋರಿಸಿದಾಗ ಮತ್ತೊಮ್ಮೆ ದಂಗಾದೆ.

"ಅಲ್ಲಯ್ಯಾ, ಪಾರಿವಾಳ ಸಾಕಿದ್ದೆಯಲ್ಲಾ ಅದೇನಾಯ್ತು. ಈ ಪೆಟ್ ಬರ್ಡ್ಸ್ ಹವ್ಯಾಸ ಯಾವಾಗಿನಿಂದ? ಅದೆಲ್ಲಿ ಹೋಯ್ತು ಪಾರಿವಾಳಗಳು?" ಎಂದೆ.

"ಅಯ್ಯೋ ಅದೊಂದು ದೊಡ್ಡ ಕಥೆ. ಪಾರಿವಾಳ ಸಾಕಿದೆ. ಹಲವಾರು ಸ್ಪರ್ಧೆಗಳಲ್ಲೂ ಗೆದ್ದೆ. ನನಗೆ ಪಾರಿವಾಳ ಕೊಟ್ಟಿದ್ದ ನನ್ನ ಸ್ನೇಹಿತನೇ ನನ್ನ ಏಳಿಗೆಯನ್ನು ಸಹಿಸದೆ ಪಾರಿವಾಳಕ್ಕೆ ಏನೋ ತಿನ್ನಿಸಿ, ಅದು ನಿಷ್ಕ್ರಿಯವಾದಾಗ ಅದರ ದಾರುಣಾವಸ್ಥೆಯನ್ನು ನೋಡಲಾಗದೆ ಬೇಸರದಿಂದ ಪಾರಿವಾಳ ಮತ್ತು ಸಾಕುವ ಪರಿಕರ ಎಲ್ಲವನ್ನೂ ಪಾರಿವಾಳ ಸಾಕುವವರೊಬ್ಬರಿಗೆ ಕೊಟ್ಟು ಬಿಟ್ಟೆ" ಎಂದ.

"ಮತ್ತೆ ಈ ಪೆಟ್ ಬರ್ಡ್ಸ್?" ಎಂದೆ.

"ಹವ್ಯಾಸವನ್ನು ರೂಢಿಸಿಕೊಂಡಿರುವವನಿಗೆ ಹಾಗೇ ಸುಮ್ಮನೆ ಕೂಡಲು ಬಿಡುತ್ತದೆಯಾ?. ಹೀಗೆ ಒಂದು ಸಾರಿ ಹಕ್ಕಿಗಳನ್ನು ನೋಡಿದಾಗ ಸಾಕುವ ಮನಸ್ಸಾಗಿಕೊಂಡು ತಂದೆ ಎಂದ.

ಬಣ್ಣ ಬಣ್ಣದ ಪುಕ್ಕ, ತಲೆಯ ಮೇಲೆ ಕಿರೀಟದಂತಹ ಹೊಳೆವ ವರ್ಣ–ದುಂಗುರಗಳು, ಮೈಮೇಲೆಲ್ಲಾ ಕಲಾವಿದ ಚಿತ್ರಬಿಡಿಸಿದಂತಹ ಬಣ್ಣಗಳ ಓಕುಳಿ; ಜೊತೆಗೆ ಅಪ್ಯಾಯಮಾನವಾದ ಕಲರವ. ದೊಡ್ಡವರು ಹಾಗಿರಲಿ ಪೆಟ್ ಪಕ್ಷಿಗಳ ಶಬ್ದ, ಬಣ್ಣ, ಕುಕಿಲು, ಅದರ ಓಡಾಟಕ್ಕೆ ಮಕ್ಕಳ ಮನಸ್ಸು ಕೂಡ ಸೋತು ಹೋಗುವುದು ಖಂಡಿತ.

ಅಂತೂ ಏನಾದರೊಂದು ಮಾಡ್ತಾನೆ ಇರ್ತೀಯಲ್ಲ ಎಂದು ಅವನ ಹವ್ಯಾಸವನ್ನು ಕಂಡು ಬೆರಗಾಗಿ, ಒಂದಷ್ಟು ಹೊತ್ತು ಹಕ್ಕಿಗಳ ಕಲರವವನ್ನು ಕಂಡು ಮನಸ್ಸಿಗೆ ಮುದವೆನಿಸಿ ಸತ್ಯಮೂರ್ತಿಯಿಂದ ಬೀಳ್ಕೊಂಡೆ.

* * *

ಒಂದು ದಿನ ಮಧ್ಯಾಹ್ನ ನಾಲ್ಕು ಗಂಟೆ ಸುಮಾರಿಗೆ ಸತ್ಯಮೂರ್ತಿ ಓಡಿ ಬಂದ.

"ನಿನ್ನೆದಿನ ಒಬ್ಬ ಕಳ್ಳ ಬಂದು ಬಿಟ್ಟಿದ್ದ ನಮ್ಮ ಮನೆಗೆ" ಎಂದ.

"ಹೌದಾ, ಮತ್ತೆ ಹಿಡಿದು ಪೊಲೀಸರಿಗೆ ಕೊಟ್ಟಿಯಾ" ಎಂದೆ ಗಾಬರಿಯಿಂದ.

"ಕಂಡಿದ್ದರೆ ತಾನೆ ಹಿಡಿದು ಕೊಡೋದು!"

ಎಂದ ನಗುತ್ತಾ .



"ಮತ್ತೆ ಕಂಡಿಲ್ಲ, ಹಿಡೀಲಿಲ್ಲ. ಕಳ್ಳ ಬಂದಿದ್ದ ಅಂತ ಹೇಗೆ ಹೇಳ್ತೀಯ"

"ಅಲ್ಲೇ ಇರೋದು ತಮಾಷೆ. ಹೇಳ್ತೀನಿ ಕೇಳು ಎಂದು ಪ್ರಾರಂಭಿಸಿದ.

ಸಾಮಾನ್ಯವಾಗಿ ಮಧ್ಯಾಹ್ನ ಕೊಂಚ ರಿಲ್ಯಾಕ್ಸ್ ಮಾಡೋಕ್ಕೆ ಮುಂಚೆ ಹಕ್ಕಿಗಳನ್ನು ನೋಡಿ ಅವುಗಳನ್ನು ಮಾತನಾಡಿಸಿ ಬರೋದು ರೂಢಿ. ನಿನ್ನೆ ನಾನು ಹಾಗೆ

ಹೋದಾಗ ಇದ್ದ ಎಂಟು ಹಕ್ಕಿಗಳಲ್ಲಿ ನಾಲ್ಕು ಕಾಣ್ತಾನೆಯಿಲ್ಲ.

ನೀನೆ ನೋಡಿದ್ದೀಯಲ್ಲ, ಮಹಡಿ ಮೇಲಿನ ಹಿಂಭಾಗದ ಬಾಲ್ಕನಿಯಂತಹ ಜಾಗಕ್ಕೆ ಫೆನ್ಸಿಂಗ್ ಮಾಡಿಸಿ ಒಂದೆಡೆ ವಾಷ್‌ರೂಂ ಮತ್ತೊಂದು ಮೂಲೆಯಲ್ಲಿ ಹಕ್ಕಿಗೂಡು, ಇವುಗಳ ಮಧ್ಯೆ ವಾಷ್ ಬೇಸಿನ್ ಇತ್ತಲ್ವಾ?

ನಿನ್ನೆ ದಿನ ಗೂಡಿನಲ್ಲಿ ನಾಲ್ಕು ಹಕ್ಕಿಗಳು ಕಾಣಿಸದಾಗಿದ್ದರೂ ಎಲ್ಲೋ ಸಂದಿಯಲ್ಲಿ ಕುಳಿತಿರ ಬಹುದೆಂದು, ಕಣ್ಣೆಳೆಯುತ್ತಿದ್ದುದರಿಂದ ಹಾಗೇ ದಿಂಬಿಗೆ ಒರಗಿದೆ. ಸೆಖೆಯಾದ್ದರಿಂದ ಬಾಗಿಲು ತೆರೆದಿದ್ದೆ. ನಮ್ಮ ಮನೆಯವರೂ ಊರಲ್ಲಿರಲಿಲ್ಲ.

ನಿದ್ದೆಯಿಂದ ಎದ್ದವನು ಬಾಲ್ಕನಿಗೆ ಹೋಗುವ ಬಾಗಿಲಿತ್ತಲ್ಲ ಅದರ ಬೋಲ್ಟ್ ಹಾಕಿ ಕಾದಂಬರಿ ಓದುತ್ತಾ ಕುಳಿತೆ. ಅಷ್ಟರಲ್ಲಿ ಎರಡು ಹಕ್ಕಿಗಳು ಕಿಟಕಿಯ ಮೇಲೆ ಬಂದು ಕುಳಿತಿದ್ದ ಕಂಡು ಆಶ್ಚರ್ಯವಾಯಿತು. ಅರೆ, ಮಲಗುವ ಮುಂಚೆ ಇರದಿದ್ದುದು ಎಲ್ಲಿಂದ ಬಂತು?

ಓಹೋ! ಯಾರೋ ಹಕ್ಕಿ ಕಳ್ಳ ಬಂದಿರಬಹುದಾ ಎನಿಸಿತು. ಏಕೆಂದರೆ ಕೆಲ ದಿವಸಗಳ ಹಿಂದೆ ಪಕ್ಕದ ಮನೆಯ ಸಿಟ್‌ಔಟ್‌ನಿಂದ ಹಕ್ಕಿಗಳನ್ನು ಕದ್ದುಕೊಂಡು ಹೋಗಿದ್ದು ಜ್ಞಾಪಕಕ್ಕೆ ಬಂತು. ಕಳ್ಳ ಹಕ್ಕಿಗಳನ್ನು ಕದ್ದು ವಾಷ್ ರೂಂ ಸೇರಿಕೊಂಡಿರಬೇಕು. ನಾನು ಮಧ್ಯದ ಬಾಗಿಲು ಹಾಕಿದ್ದರಿಂದ ಆತನಿಗೆ ಹೊರಗಡೆ ಬರಲಾಗದೆ, ಹಕ್ಕಿಯನ್ನು ಈಚೆ ಬಿಟ್ಟಾಗ ಬಾಗಿಲು ತೆಗೆದರೆ ಓಡಿಹೋಗಲು ಪ್ರಯತ್ನಿಸಬಹುದು ಎಂದು ಉಪಾಯ ಮಾಡಿರಬಹುದಾ ಎನಿಸಿತು.

ಕಳ್ಳನ ಬಳಿ ಏನು ಆಯುಧವಿದೆಯೋ ಗೊತ್ತಿಲ್ಲ. ಯಾವುದಕ್ಕೂ ಇರಲಿ ಎಂದು ಬಾಗಿಲ ಮೂಲೆಯಲ್ಲಿ ಸುರಕ್ಷತೆಗಾಗಿ ಸದಾ ಇಟ್ಟಿರುತ್ತಿದ್ದ ಕಂಬಿಯೊಂದನ್ನು ತೆಗೆದುಕೊಂಡೆ. ಮಧ್ಯದ ಬಾಗಿಲು ತೆರೆದು ದೂರದಿಂದಲೇ ವಾಷ್ ರೂಂ ಕಡೆ ನೋಡಿದರೆ ಬಾಗಿಲು ಭದ್ರಪಡಿಸಿದಂತಿತ್ತು. ಜೊತೆಗಿರಲಿ ಎಂದು ಕೆಳ ಅಂತಸ್ತಿನಲ್ಲಿದ್ದ ಮೊಮ್ಮಗಳಿಗೆ ತಿಳಿಸೋಣವೆಂದು ಕೆಳಗಿಳಿದು ಹೋದೆ. ಅವಳಿಗೆ ಹಕ್ಕಿ ಕಾಣಿಸದಿದ್ದದನ್ನು ತಿಳಿಸಿದ್ದು, ಈಗ ಎರಡು ಹಕ್ಕಿ ಸಿಕ್ಕಿದೆ. ಆದರೆ ಕಳ್ಳ ಬಂದಿರಬಹುದೆಂಬ ಸಂಶಯವಿದೆ ಎಂದೆ.

ನಾನು ಬರ್ತೀನೆ ತಾಳು ಎಂದು ಅವಳೂ ಬಂದಳು. ಇಬ್ಬರೂ ಹೋಗಿ ವಾಷ್ ರೂಂ ಬಾಗಿಲಬಳಿ ಹೊಡೆಯಲು ಸಿದ್ಧರಿರುವವರಂತೆ ಆಯುಧಗಳನ್ನು ಹಿಡಿದು ಮೆಲ್ಲನೆ ಬಾಗಿಲು ನೂಕಿದೆ. ಪೂರ್ತಿ ತೆರೆದುಕೊಂಡಿತು. ಖಾಲಿ ಖಾಲಿ. ಯಾರೂ ಇಲ್ಲವೆಂಬುದು ತಿಳಿದಾಗ ಬೇಸ್ತು ಬಿದ್ದೆ ಎನಿಸಿತು ಎಂದ.

"ಅಲ್ಲಯ್ಯಾ ಮದ್ಯದ ಬಾಗಿಲು ತೆರೆದು ನೀನು ಹೊರಗಡೆ ಹೋಗಿದ್ದರಿಂದ ಕಳ್ಳ ಓಡಿಹೋಗಲು ಅವಕಾಶ ಮಾಡಿಕೊಟ್ಟಂತಾಗಿ ಪರಾರಿಯಾಗಿರಬಹುದಲ್ಲವಾ? ಎಂದೆ.

ಹೌದು, ನಾನು ಮಾಡಿದ ತಪ್ಪು ಅದೇ ಬಾಗಿಲು ಭದ್ರ ಪಡಿಸಿಹೋಗಿದ್ದರೆ ಕಳ್ಳನನ್ನು ಹಿಡಿಯಬಹುದಿತ್ತೆಂದು ಅಲವತ್ತುಕೊಂಡ.

ಹೋದ್ರೆ ಹೋಗ್ಲಿ ಬಿಡು ತಾತ. ಆ ಕಳ್ಳ ಏನೇನು ಆಯುಧ ಇಟ್ಟುಕೊಂಡಿದ್ದನೋ!




ತಪ್ಪಿಸಿಕೊಳ್ಳುವ ಭರದಲ್ಲಿ ನಮಗೆ ಅಪಾಯ ಮಾಡಿಹೋಗಿದ್ದರೆ ಏನು ಗತಿ ? ಎರಡು ಹಕ್ಕಿ ಕಾಣದಾಗಿದೆ ಅಲ್ವಾ. ಸುಮ್ಮನಿದ್ದು ಬಿಡು. ನಾನೆ ತರಿಸಿಕೊಡುತ್ತೇನೆ

ಎಂದು ಸಮಾಧಾನಪಡಿಸಿ ಕೆಳಗಿಳಿದು ಹೋದಳು.

ಕಳ್ಳ ಪ್ರವೇಶಿಸಲು ಒಂದೇ ದಾರಿಯಿದ್ದರೂ ನಾವಿರುವಾಗಲೇ ಹೇಗೋ ಬಂದು ಎರಡು ಹಕ್ಕಿಗಳನ್ನು ಹಾರಿಸಿಕೊಂಡು ಹೋದನಲ್ಲ! ಇನ್ನು ಇತರ ಹಕ್ಕಿಗಳನ್ನು ಅವನು ಬಿಡಲಾರ ಎಂಬ ಭಯದ ಜೊತೆಗೆ ಅನ್ಯಾಯವಾಗಿ ಅಷ್ಟು ದುಡ್ಡು ಸುರಿದು ತಂದ ಪೆಟ್ ಬರ್ಡ್ಸ್‌ಗಳನ್ನು ಕಳೆದುಕೊಳ್ಳಲು ಮನಸ್ಸಾಗಿದೆ ಇವತ್ತು ಬೆಳಿಗ್ಗೆ ಹೋಗಿ ನೋಡಿದರೆ ನಿನ್ನೆ ಸಿಕ್ಕ ಆ ಎರಡು ಹಕ್ಕಿಗಳೂ ಕಾಣದಾಗಿ ಗಾಬರಿಯಾದೆ.

ನನ್ನ ಸಂಶಯ ಗಟ್ಟಿಯಾಯಿತು. ಹೇಗೋ ಕಳ್ಳ ನುಗ್ಗಿ ಹಕ್ಕಿಗಳನ್ನು ಹಾರಿಸಿಕೊಂಡು ಹೋಗುತ್ತಿದ್ದಾನೆ. ಇದಕ್ಕೆ ಅವಕಾಶ ಕೊಡಬಾರದು ಎಂದು ಯೋಚಿಸುತ್ತಾ ಇರುವ ನಾಲ್ಕು ಹಕ್ಕಿಗಳನ್ನು ಕಾಪಾಡಲು ಇಟ್ಟಿದ್ದ ಶೆಲ್ಫ್ ರೀತಿಯ ಗೂಡುಗಳನ್ನು ಸರಿಪಡಿಸಿ, ಹಕ್ಕಿಗಳು ಈಚೆಗೆ ಬಾರದಂತೆ ಬಂದೋಬಸ್ತ್ ಮಾಡುತ್ತಾ ಕೆಳ ಶೆಲ್ಫಿನಲ್ಲಿ  ನೀಟಾಗಿ ಹಾಸಿದ್ದ ಹುಲ್ಲು ಹಾಸನ್ನು ಸರಿಪಡಿಸಲು ನೋಡಿದರೆ ನಾಲ್ಕು ಹಕ್ಕಿಗಳೂ ರೆಕ್ಕೆ ಮುಚ್ಚಿ ಪಿಳಿಪಿಳಿ ಕಣ್ಣು ಬಿಡುತ್ತಾ ಕುಳಿತಿವೆ. ಇದನ್ನು ಕಂಡ ನನಗಾದ ಆಶ್ಚರ್ಯ, ಸಂತಸ ಹೇಳತೀರದಾಗಿತ್ತು. ಕಳ್ಳ ಬಂದಿರಬಹುದು, ಮುಂದೆಯೂ ಬರಬಹುದು ಎಂದು ಯೋಚಿಸಿ ಹೈರಾಣಾವಾಗಿದ್ದ ನನ್ನ ಮನಸ್ಸಿಗೆ ನೆಮ್ಮದಿ ಎನಿಸಿತು. ಔತಿಟ್ಟುಕೊಂಡು ನನಗೇ ಕಣ್ಣಾಮುಚ್ಚಾಲೆಯಾಟ ಆಡಿಸಿಬಿಟ್ಟವಲ್ಲ ಈ ನಾಕು ಹಕ್ಕಿಗಳು ಎನಿಸಿದಾಗ ನನ್ನ ಪೆದ್ದುತನಕ್ಕೆ ನನಗೇ ನಗು ಬಂತು ಎಂದ ಸತ್ಯಮೂರ್ತಿ ತನ್ನ ಕತೆಯನ್ನು ಪೂರ್ತಿಗೊಳಿಸಿದಾಗ ನನಗೂ ನಗು ತಡೆಯಲಾಗಲಿಲ್ಲ. ಏನಪ್ಪಾ ಸತ್ಯಮೂರ್ತಿ ಬರದಿರುವ ಕಳ್ಳನ ಬಗ್ಗೆ ಯೋಚಿಸಿ ಇಷ್ಟೊಂದು ಫೂಲ್ ಆಗಿಬಿಟ್ಟೆಯಲ್ಲ ಎಂದು ನಗುತ್ತಲೇ ಛೇಡಿಸಿದೆ. ■



# ಪಕೋಡಾ ತಂದ ಭೀತಿ

**ಡಾ. ಡಿ.ವಿ.ಗುರುಪ್ರಸಾದ್**

ಹಿರಿಯ ನಾಗರಿಕರ ಕುಟುಂಬಗಳ ಗುಂಪೊಂದಕ್ಕೆ ನಾನೂ ಮೆಂಬರ್. ಹಲವಾರು ವರ್ಷಗಳಿಂದ ತಿಂಗಳಿಗೊಮ್ಮೆ ಯಾರಾದರೂ ಒಬ್ಬರ ಮನೆಯಲ್ಲಿ ಭೇಟಿಯಾಗುತ್ತಿದ್ದೇವೆ. ಪ್ರತಿಯೊಬ್ಬರೂ ತಮ್ಮತಮ್ಮ ಮನೆಗಳಿಂದ ಏನಾದರೊಂದು ತಿನಿಸನ್ನು ಮಾಡಿಕೊಂಡು ಬರುತ್ತಾರೆ. ಅತಿಥೇಯರ ಮನೆಯಲ್ಲಿ ಎಲ್ಲರೂ ಅದನ್ನು ಸೇವಿಸಿ ಸ್ವಲ್ಪ ಹರಟೆ, ಹಾಡು, ಮೋಜು ಮಸ್ತಿ ಮಾಡಿ ಹೌಸಿ ಆಟವಾಡಿ ಎಂಜಾಯ್ ಮಾಡುತ್ತೇವೆ.

2020ರ ಮಾರ್ಚ್‌ನಲ್ಲಿ ನಮ್ಮ ಮನೆಯಲಿ ್ಲಈ ಗುಂಪಿನ ಭೇಟಿ ನಿಗದಿಯಾಯಿತು. ಆಗ ತಾನೇ ಕರೋನಾ ಎಲ್ಲೆಡೆಯಲ್ಲಿಯೂ ನಿಧಾನವಾಗಿ ಆವರಿಸುತ್ತಿತ್ತು. ಮೀಟಿಂಗ್ ನಡೆಸಬೇಕೋ ಬೇಡವೋ ಎಂಬ ಜಿಜ್ಞಾಸೆ ನನಗಾದಾಗ ನಾನು ಗುಂಪಿನ ಸದಸ್ಯರಿಗೆ ಕರೆ ಮಾಡಿ ಅವರ ಸಲಹೆ ಕೇಳಿದೆ. ಮುಂದೇನಾಗುತ್ತದೋ ಏನೋ ನಮಗೆ ತಿಳಿದಿಲ್ಲ, ಈಗಂತೂ ಯಾವುದೇ ರೀತಿಯ ತೊಂದರೆಯಿಲ್ಲದಿರುವುದರಿಂದ ನಾವೆಲ್ಲರೂ ನಿಮ್ಮ ಮನೆಯಲ್ಲಿ ಸೇರಿ ಎಂದಿನಂತೆ ಆನಂದ ಪಡೋಣ ಎಂದು ಒಂದು ಕುಟುಂಬದ ಹೊರತಾಗಿ ಎಲ್ಲರೂ ಅಭಿಪ್ರಾಯಪಟ್ಟರು.

ಮಾರ್ಚ್ ತಿಂಗಳ ಮೊದಲ ವಾರದಲ್ಲಿ ನಮ್ಮ ಮನೆಯಲ್ಲಿ ಎಲ್ಲರೂ ಸೇರಿದೆವು. ಕರೋನಾದ ಕರಿನೆರಳಿನಲ್ಲಿಯೇ ಎಲ್ಲರೂ ನಕ್ಕು ನಲಿದು ಆನಂದಿಸಿದೆವು. ಅಂದು ವಿನೋದಾ ಶರ್ಮಾತಮ್ಮ ಮನೆಯಿಂದ ಬಿಸಿ ಬಿಸಿ ಪಕೋಡಾಗಳನ್ನು ಮಾಡಿಕೊಂಡು ಬಂದು ಊಟದ ಮುಂಚೆಯೇ ಎಲ್ಲರಿಗೂ ಹಂಚಿದರು. ಆ ಪಕೋಡಾಗಳು ಎಷ್ಟು ರುಚಿಯಾಗಿದ್ದವೆಂದರೆ ಹತ್ತೇ ನಿಮಿಷಗಳಲ್ಲಿ ಎಲ್ಲ ಪಕೋಡಾಗಳೂ ಖಾಲಿಯಾದವು. ನೆರೆದಿದ್ದ ಎಲ್ಲರೂ ವಿನೋದಾರಿಗೆ ಬಾಯ್ತುಂಬಾ ಹೊಗಳಿ ಆಗಸಕ್ಕೇರಿಸಿದರು. ಮುಖವನ್ನು ಹೂವಿನಂತೆ ಅಗಲ ಮಾಡಿಕೊಂಡ ವಿನೋದಾ ನಾಚುತ್ತಾ, "ಈ ಪಕೋಡ ಮಾಡಿದ್ದು ನಾನಲ್ಲ, ನನ್ನ ಮಗಳು ರಶ್ಮಿ. ನಿಮ್ಮ ಹೊಗಳಿಕೆ ಅವಳಿಗೆ ಹೋಗಬೇಕು"ಎಂದರು. ರಶ್ಮಿ ಎಂಬ ಹೆಸರು ಕೇಳಿದ ಕೂಡಲೇ ನಾನು ತಬ್ಬಿಬ್ಬಾದೆ. "ವಿನೋದಾ ಅವರೇ, ರಶ್ಮಿ ಪ್ಯಾರಿಸ್‌ನಲ್ಲಿ ಇದ್ದಾಳಲ್ಲವೇ? ಅವಳು ಹೇಗೆ ಪಕೋಡಾ ಮಾಡಿದಳು?"ಎಂದೆ. "ಓಹ್, ನಿಮಗೆ ಹೇಳುವುದನ್ನೇ ಮರೆತೆ. ಮೊನ್ನೆಯಷ್ಟೇ ಬೆಂಗಳೂರಿಗೆ ಬಂದಳು" ಎಂದರು. "ನಿಮ್ಮ ಮನೆಯಲ್ಲಿಯೇ ಇದ್ದಾಳೆಯೇ?"ಎಂದು ಕೇಳಿದೆ. "ನಮ್ಮಲ್ಲಿಲ್ಲದೆ ಮತ್ತೆಲ್ಲಿರಬೇಕು?" ಎಂದರು. "ಅಲ್ಲಾ ವಿದೇಶದಿಂದ ಬಂದಿರುವವರನ್ನು ಕ್ವಾರಂಟೈನಿನಲ್ಲಿಡುತ್ತಿದ್ದಾರೆಂದು ಪೇಪರಿನಲ್ಲಿ ಓದಿದೆ. ರಶ್ಮಿಗ 'ಇಡಲಿಲ್ಲವೇ?" ಎಂದೆ. "ಇಲ್ಲ" ಎಂದರು.

ಈ ಸಂಭಾಷಣೆ ಕೇಳಿದ ಕೂಡಲೇ ಚುರುಕಾದ ನಾರಾಯಣ್,"ನಿಮ್ಮ ಮಗಳಿಗೆ ಕರೋನಾ ಟೆಸ್ಟ್ ಮಾಡಿಸಲಿಲ್ಲವೇ?" ಎಂದು ಪ್ರಶ್ನಿಸಿದರು. "ಆಕೆ ಪ್ಯಾರಿಸ್‌ನಿಂದ ಹೊರಡುವಾಗಲೇ ಟೆಸ್ಟ್ ಮಾಡಿಸಿದ್ದಳಂತೆ, ನೆಗೆಟಿವ್ ಬಂದಿತ್ತಂತೆ. ಬೆಂಗಳೂರಿನಲ್ಲಿ ಅದೇನೋ ರಾಂಡಮ್ ಪರೀಕ್ಷೆ ಎಂದು ಹೇಳಿ ಕೆಲವರಿಗೆ ಮಾತ್ರ ಮಾಡಿದರಂತೆ. ರಶ್ಮಿ ತಪ್ಪಿಸಿಕೊಂಡಳು" ಎಂದರು ವಿನೋದಾ ಖುಷಿಯಿಂದ. ಇದನ್ನು ಕೇಳಿದ ವಸಂತಾ"ರಶ್ಮಿ ಸ್ವಯಂ ಕ್ವಾರಂಟೈನ್ ಮಾಡಲಿಲ್ಲವೇ? ಪ್ಯಾರಿಸ್ಸಿನಲ್ಲೇ ಅತಿ ಹೆಚ್ಚು



ಕರೋನಾ ಕೇಸುಗಳು" ಅಂತ ನಿನ್ನೆಯೇ ಟಿ.ವಿ.ಯಲ್ಲಿ ಬಂದಿತ್ತು" ಎಂದರು ಅಚ್ಚರಿಯಿಂದ. ವಿನೋದಾ ತಲೆಯಲ್ಲಾಡಿಸಿದರು.

ಅಷ್ಟರಲ್ಲಿ ಊಟ, ಆಟಗಳು ಮುಗಿದಿದ್ದ ಕಾರಣ ಎಲ್ಲರೂ ತಮ್ಮ ಮನೆಗಳಿಗೆ ಹೋದರು. ಅಂದು ಭಾನುವಾರವಾದ್ದರಿಂದ ಮನೆಯಲ್ಲಿದ್ದ ನನ್ನ ಮಗ ನನ್ನನ್ನು ತರಾಟೆಗೆ ತೆಗೆದುಕೊಂಡ. "ಅಪ್ಪಾ ನಿನಗೆ ಗೊತ್ತಿಲ್ಲವೇ ಯೂರೋಪಿನಲ್ಲಿ ಕರೋನಾದಿಂದ ದಿನಾ ಸಾವಿರಾರು ಜನ ಸಾಯುತ್ತಿದ್ದಾರೆ. ಅಲ್ಲಿಂದಲೇ ರಶ್ಮಿ ಬಂದಿದ್ದಾಳೆ. ಅವಳಿಗೆ ಪ್ಯಾರಿಸ್ಸಿನಲ್ಲಿ ನೆಗೆಟಿವ್ ವರದಿ ಬಂದಿದ್ದರೂ ವಿಮಾನದಲ್ಲಿ ಆಕೆಗೆ ಕೋವಿಡ್ ತಗಲಿರಬಹುದಲ್ಲವೇ? ಬೆಂಗಳೂರಿನಲ್ಲಿ ಅವಳ ಪರೀಕ್ಷೆಯನ್ನೇ ಮಾಡಿಸಿಲ್ಲ. ನಗಂತೂ ತುಂಬಾ ಹೆದರಿಕೆಯಾಗುತ್ತಿದೆ"ಎಂದ. ಅವನಿಗೆ ಜತೆಯಾದ ನನ್ನ ಪತ್ನಿ, "ರೀ ನಾನಂತೂ ವಿನೋದಾ ಪಕ್ಕದಲ್ಲಿಯೇ ಕುಳಿತಿದ್ದೆ, ಪಕೋಡಾ ಚೆನ್ನಾಗಿದೆ ಎಂದು ಅವರ ಕೈಗಳನ್ನೂ ಕುಲುಕಿದೆ" ಎಂದಳು. "ಅಯ್ಯೋ ನಾನು ಬಕಾಸುರನಂತೆ ಎಂಟು ಪಕೋಡಾತಿಂದೆ, ಆಹಾರದಿಂದಲೂ ಕೊರೋನಾ ಹಬ್ಬುತ್ತದೆ ಎಂದು ಇಂಟರ್‌ನೆಟ್ಟಿನಲ್ಲಿತ್ತು" ಎಂದು ನಾನೂ ದನಿಗೂಡಿಸಿದೆ.

ಇಡೀ ಮನೆಯಲ್ಲಿ ಕರೋನಾ ಭಯದ ವಾತಾವರಣ ಪಸರಿಸಿತು. ಮುಂದೇನು ಮಾಡುವುದೆಂದು ಗೊತ್ತಾಗಲಿಲ್ಲ. ನಮ್ಮ ಮನೆಗೆ ಬಂದಿದ್ದ ಎಲ್ಲರಿಗೂ ಕರೆ ಮಾಡಿ ಸಲಹೆ ಕೇಳಿದೆ. "ಏನ್ರೀ ಇಷ್ಟು ಬೇಜವಾಬ್ದಾರಿ ಕೆಲಸ ಮಾಡಿದಿರಿ, ನಿಮ್ಮ ಮನೆಯಲ್ಲಿ ಮೀಟಿಂಗ್ ಮಾಡಲೇ ಬಾರದಾಗಿತ್ತು" ಎಂದರು ನರಹರಿ. "ರಶ್ಮಿ ಬಂದಿದ್ದಾಳೆಂದು ನನಗೇನು ಕನಸು ಬಿದ್ದಿತ್ತೇ? ನೀವಂತೂ ವಿನೋದಾರ ಪಕ್ಕದಲ್ಲೇ ಕುಳಿತಿದ್ದರಿ, ನೀವು ಹುಷಾರಾಗಿರಿ. ಅದಿರಲಿ. ಈಗ ಮುಂದೇನು ಮಾಡುವುದು?"ಎಂದು ಕೇಳಿದೆ.

"ನೀವು ರಿಟೈರಾದ ಮೇಲೆ ಆಸ್ಪತ್ರೆ ನಡೆಸುವ ಸಂಸ್ಥೆಯ ಮುಖ್ಯಸ್ಥರಾಗಿದ್ದಿರಲ್ಲವೇ? ನೀವೇ ಯಾರಾದರೂ ದೊಡ್ಡ ವೈದ್ಯರನ್ನು ಸಂಪರ್ಕಿಸಿ ಮುಂದೇನು ಮಾಡಬೇಕೆಂದು ಕೇಳಿ ನಮಗೆಲ್ಲಾ ಹೇಳಿ"ಎಂದರು. ನಾನು ವೈದ್ಯರಿಗೆ ಕರೆ ಮಾಡಿದೆ. ಅವರು "ನಿಮಗೆಲ್ಲಾ ಕರೋನಾ ರಿಸ್ಕ್ ಇದ್ದೇ ಇದೆ. ನೀವು ವಿದೇಶದಿಂದ ಬಂದವಳಿಗೆ ಕರೋನಾ ಪರೀಕ್ಷೆ ಮಾಡಿಸಿಕೊಳ್ಳಲು ಹೇಳಿ ವರದಿ ಬಂದ ನಂತರ ಮಾತನಾಡಿ" ಎಂದರು. ಸರಿ ಎಂದು ರಶ್ಮಿಗೆ ಕರೆ ಮಾಡಿ ತಿಳಿಸಿದೆ. ಆಕೆ ಖಡಾಖಂಡಿತವಾಗಿ"ಇಲ್ಲ, ಮಾಡಿಸುವುದಿಲ್ಲ ಅಂಕಲ್. ಟೆಸ್ಟ್ ಮಾಡಿಸಿಕೊಳ್ಳಲು ಹೋದರೆ ಮುನಿಸಿಪಾಲಿಟಿಯವರು ಹುಚ್ಚು ನಾಯಿಯನ್ನು ಹಿಡಿದು ಬೋನಿಗೆ ಹಾಕುವಂತೆ ನನ್ನನ್ನು ಕ್ವಾರಂಟೈನ್‌ಗೆ ಹಾಕುತ್ತಾರೆ. ನಾನು ಒಂದು ವಾರದ ನಂತರ ಪ್ಯಾರಿಸ್ಸಿಗೆ ವಾಪಸಾಗಲೇ ಬೇಕು. ನನಗೇನೂ ಆಗಿಲ್ಲ. ಮೊದಲೇ ನೆಗೆಟಿವ್ ವರದಿ ಬಂದಿದೆ" ಎಂದಳು. ಇದನ್ನು ವೈದ್ಯರಿಗೆ ತಿಳಿಸಿದೆ.

ಅವರುನಮ್ಮ ಮನೆಗೆ ಬಂದಿದ್ದ ಗುಂಪಿನಲ್ಲಿರುವರೆಲ್ಲರೂ ಪ್ರತಿದಿನವೂ ಮೂರು ಬಾರಿ ತಮ್ಮ ಟೆಂಪರೇಚರ್ ಚೆಕ್ ಮಾಡಲು ಸೂಚಿಸಿದರು.ಯಾರಿಗಾದರೂ ನೆಗಡಿ, ಕೆಮ್ಮು ಜ್ವರ ಬಂದರೆ ಕೂಡಲೇ ಆರ್.ಟಿ.ಪಿ.ಸಿ.ಆರ್ ಪರೀಕ್ಷೆ ಮಾಡಿಸಿ ತಮಗೆ ತಿಳಿಸಿಲು ಹೇಳಿದರು. ಅವರ ಸೂಚನೆಗಳನ್ನು ಮನೆಗೆ ಬಂದಿದ್ದ ಎಲ್ಲರಿಗೂ ಕೊಟ್ಟೆ. ಕೂಡಲೇ ನಾನು ವಾಟ್ಸಪ್ ಗುಂಪೊಂದನ್ನು ಹುಟ್ಟು ಹಾಕಿ ನಮ್ಮ ಗುಂಪಿನ ಎಲ್ಲರನ್ನೂ ಅದರಲ್ಲಿ ಸೇರಿಸಿದೆ, ಪ್ರತಿ ಸಂಜೆ ಎಲ್ಲರಿಗೂ ಕರೆ ಮಾಡಿ ನಿಮ್ಮ ಮನೆಯವರೆಲ್ಲರೂ ಕ್ಷೇಮವೇ, ಯಾರಿಗೂ ಜ್ವರ ಬಂದಿಲ್ಲವೇ ಎಂದು ವಿಚಾರಿಸತೊಡಗಿದೆ. ಒಂದೆರಡು ದಿನ ವಿನೋದಾರೇ ನನ್ನ ಕರೆ ಸ್ವೀಕರಿಸಿ ತಾವೆಲ್ಲರು ಅರಾಮವಾಗಿರುವುದಾಗಿ




ತಿಳಿಸಿದರು. ಆಗ ಅವರ ಪತಿ ಶರ್ಮಾ ನನ್ನನ್ನು ಬೈಯ್ಯುತ್ತಿದ್ದುದನ್ನೂ ಕೇಳಿಸಿಕೊಂಡೆ.

ಏತನ್ಮಧ್ಯೆ ಗಾಬರಿಯಾಗಿದ್ದ ಗುಂಪಿನ ಕೆಲವು ಸದಸ್ಯರು ತಮಗೆ ಕರೋನಾ ಬರಬಾರದೆಂದು ಯಾರು ಯಾರೋ ಹೇಳಿದ ಔಷಧಿಗಳನ್ನು ತೆಗೆದುಕೊಳ್ಳಲು ಪ್ರಾರಂಭಿಸಿದರು. ಪ್ರಫುಲ್ಲಾ ಅವರಂತೂ ಯಾವುದೋ ಕಷಾಯವನ್ನು ಮಾಡಿ ದಿನಕ್ಕೈದು ಬಾರಿ ಕುಡಿಯತೊಡಗಿದರು. ಒಂದು ದಿನ ನಾನು ಫೋನ್ ಮಾಡಿದಾಗ ಅವರ ಗಂಟಲು ಬಿದ್ದು ಹೋಗಿ ಮಾತನಾಡಲೇ ಸಾಧ್ಯವಾಗದೆ ವಾಟ್ಸಪ್ ಸಂದೇಶಕೊಟ್ಟರು. ರಾಮದಾಸ್ ಗಂಟೆಗೊಮ್ಮೆ ಹಬೆಯನ್ನು ಸೇವಿಸಿ ಮೂಗು ಮತ್ತು ಬಾಯನ್ನು ಸುಟ್ಟುಕೊಂಡರು. ನಾಗರಾಜ್ ತಿಂದ ಝಿಂಕ್ ಮಾತ್ರೆಗಳಿಗೆ ಲೆಕ್ಕವೇ ಇಲ್ಲ.

ಐದು ದಿನಗಳ ನಂತರ ವಿನೋದಾ ನನ್ನ ಕರೆಯನ್ನು ಕಟ್ ಮಾಡತೊಡಗಿದರು. ಆದರೇನು? ನಾನು ಪೋಲೀಸ್ ಅಧಿಕಾರಿಯಾಗಿರಲಿಲ್ಲವೇ? ಅವರ ಪಕ್ಕದ ಮನೆಯವರ ಫೋನ್ ನಂಬರ್ ಪಡೆದು ಅವರ ಮೂಲಕ ವಿನೋದಾರ ಮನೆ ಸಮಾಚಾರವನ್ನು ತಿಳಿಯತೊಡಗಿದೆ. ಏತನ್ಮಧ್ಯೆ ರಶ್ಮಿ ಪ್ಯಾರಿಸ್ಸಿಗೆ ವಾಪಸಾದಳು. ಆದರೆ ನಮ್ಮ ಆತಂಕ ಇನ್ನೂ ಹೋಗಿರಲಿಲ್ಲ. ನಮ್ಮ ಪಕೋಡಾ ಪಾರ್ಟಿಮುಗಿದು 14 ದಿನಗಳು ಕಳೆದವು. ನಮ್ಮ ಮನೆಗೆ ಬಂದಿದ್ದ ಯಾರಿಗೂ ಜ್ವರ ಬಂದಿರಲಿಲ್ಲ. ಬದುಕಿದೆಯಾ ಬಡಜೀವವೇ ಎಂದು ನಿಟ್ಟುಸಿರಿಟ್ಟು ಫೋನ್ ಮಾಡುವುದು ಬಂದ್ ಮಾಡಿದೆ.

ಏತನ್ಮಧ್ಯೆ ಲಾಕ್‌ಡೌನ್ ಅನೌನ್ಸ್ ಆಗಿದ್ದರಿಂದ ಸಭೆಗಳು ನಿಂತವು. ಈಗಷ್ಟೇ ಗುಂಪಿನ ಸಭೆಗಳನ್ನು ಪುನರಾರಂಭಿಸಿದ್ದೇವೆ. ವಿನೋದಾ ಸದಸ್ಯತ್ವಕ್ಕೆ ರಾಜೀನಾಮೆಯಿತ್ತಿದ್ದಾರೆ. ನಮಗಂತೂ ಅವರ ಮನೆಯ ಪಕೋಡಾ ತುಂಬಾ ಮಿಸ್ ಆಗುತ್ತಿದೆ.

■



# ಪೊರೆ ಕಳಚಿದಾಗ..

**ವಸುಮತಿ ಉಡುಪ, ಮೈಸೂರು**

ವಿಷಕಂಠಯ್ಯ ವಾಪಸು ಹಳ್ಳಿಗೆ ಬಂದಿದ್ದಾರೆ ಎನ್ನುವ ಸುದ್ದಿ ಗೊತ್ತಾಗುತ್ತಿದ್ದಂತೆ ಹಿತೈಷಿಗಳು ಅವರನ್ನು ನೋಡಿ ಯೋಗಕ್ಷೇಮ ವಿಚಾರಿಸಲು ಮನೆಗೆ ಬರುವುದು ಸಾಮಾನ್ಯವಾಯ್ತು.

ಹಳ್ಳಿ ಮನೆಗಳಲ್ಲಿ ಹೀಗೆ ಜನ ಬಂದರೆ ಒಂದು ಲೋಟ ಕಾಫಿ ಕೊಟ್ಟು ಸತ್ಕಾರ ಮಾಡಿ ಕಳಿಸುವುದು ದೊಡ್ಡ ಸಂಗತಿಯೇನಲ್ಲ. ಕೊಟ್ಟಿಗೆಯಲ್ಲಿ ಕರಾವು ಇದೆ. ಹಾಲು ಹೈನಕ್ಕೆ ತೊಂದರೆಯಿಲ್ಲ. ಮೊದಲೆಲ್ಲಾ ದೊಡ್ಡ ದಬರಿಯಲ್ಲಿ ನೀರಿಟ್ಟು, ಬೆಲ್ಲದುಂಡೆ ಮುಳುಗಿಸಿ, ಕುದ್ದುಕುದ್ದು ಬೆಲ್ಲದ ಹಸಿ ವಾಸನೆ ಹೋದ ಮೇಲೆ ಕಾಫಿಪುಡಿ ಕದರಿ ಮುಚ್ಚಿಟ್ಟು, ಹಣಿಯಾದ ಮೇಲೆ ಬಟ್ಟೆಯಿಂದ ಸೋಸಿ, ಮಂದಗಿನ ಹಾಲು ಹಾಕಿದ ಕಾಫಿ ತಪ್ಪಲೆ ಒಲೆ ಬುಡದಲ್ಲಿ ಖಾಯಮ್ಮಾಗಿರುತ್ತಿತ್ತು. ಕಾಪಿ ಬಿಸಿ ಇರಬೇಕೆಂಬ ಕಡ್ಡಾಯ ಇರಲಿಲ್ಲ. ಉಗುರು ಬೆಚ್ಚಗಿದ್ದರೂ ಸಾಕು. ಈಗ ಮಕ್ಕಳೆಲ್ಲಾ ಸಿಟಿ ಸೇರಿಕೊಂಡು ಲಕ್ಷಗಟ್ಟಲೆ ಸಂಬಳ ಎಣಿಸತೊಡಗಿದ ಮೇಲೆ ಆಧುನಿಕ ಸಾಮಗ್ರಿಗಳು ಮನೆ ಸೇರಿವೆ. 'ವ್ಯಾಕ್, ಬೆಲ್ಲದ ಕಾಫೀನಾ..' ಎಂದು ಮೂಗು ಮುರಿಯುತ್ತಿದ್ದವರಿಗೋಸ್ಕರ ಕಾಫಿ ಫಿಲ್ಟರು. ಬೇಕೆನಿಸಿದಾಗ ನಾಲಿಗೆ ಚುರ್ರ್ ಅನ್ನುವಷ್ಟು ಬಿಸಿಬಿಸಿ ಕಾಫಿ ಕುಡಿಯುವ ಸುಖಕ್ಕೆ ಜೀವ ಒಗ್ಗಿಕೊಂಡಿದೆ. ನಾನು ಹೇಳಹೊರಟಿದ್ದು ಇದನ್ನಲ್ಲ, ವಿಷಯಾಂತರವಾಯ್ತು, ಕ್ಷಮಿಸಿ. ವಿಷಕಂಠಯ್ಯನಿಗೆ ಕಣ್ಣಲ್ಲಿ ಪೊರೆ ಬಂದಿದೆ, ಆಪರೇಷನ್ನು ಮಾಡಿಸಬೇಕು ಎಂದು ಸಲಹೆ ಕೊಟ್ಟಿದ್ದು ಅವರು ವರ್ಷಕ್ಕೋ, ಎರಡು ವರ್ಷಕ್ಕೋ ಒಮ್ಮೆ ಕಣ್ಣು ಪರೀಕ್ಷೆ ಮಾಡಿಸಿಕೊಳ್ಳಲು ಹೋಗುತ್ತಿದ್ದ ಡಾಕ್ಟ್ರು. ಆಪ್ರೇಷನ್ ಅನ್ನುವ ದೊಡ್ಡ ಪದ ಕೇಳುತ್ತಿದ್ದಂತೆ ಹೆದರಿ ಹೋದರು ಹಳ್ಳಿ ಮುಗ್ಧೆ ಸುಂದರಮ್ಮ. ಮಕ್ಕಳಿಗೆ ಫೋನ್ ಹೋಯ್ತು. 'ಬಂದ್ಬಿಡಿ ಇಲ್ಲಿಗೇ..'ಅಂದರು ಮಕ್ಕಳು. ಮನೆ ಕಡೆಯಲ್ಲಿ ಬೇಕಾದ ವ್ಯವಸ್ಥೆ ಮಾಡಿ ದಂಪತಿಯ ಸವಾರಿ ಬೆಂಗಳೂರಿಗೆ ಹೋಯ್ತು. ಅಪ್ಪನ ಕಣ್ಣಾಪ್ರೇಷನ್ನನ್ನು ತಜ್ಞ ವೈದ್ಯರಿಂದ ಮಾಡಿಸಬೇಕೆಂದು ಮಕ್ಕಳಲ್ಲಿ ಭಾರೀ ಉತ್ಸುಕತೆ. ಜಾಲತಾಣಗಳಲ್ಲಿ ಜಾಲಾಡಿ 'ಅಲ್ಲಿ ಆಗಬಹುದು, ಇಲ್ಲಿ ಆಗಬಹುದು'ಎನ್ನುವ ಪಟ್ಟಿ ತಯಾರಾಯ್ತು. ಹಿರಿಯವನು ತನ್ನ ಮನೆಗೆ ಸಮೀಪದಲ್ಲಿದ್ದ, ಹೆಸರಿಗೆ ಹೋದ ಒಂದು ಕಣ್ಣಾಸ್ಪತ್ರೆಗೆ ಕರೆದುಕೊಂಡು ಹೋದ. ಚಿಕಿತ್ಸೆಯ ಮೊದಲ ಹೆಜ್ಜೆಯಾಗಿ ಎರಡೂ ಕಣ್ಣಿಗೆ ಯಾವುದೋ ದ್ರಾವಣದ ಒಂದೊಂದು ಹನಿ ಹಾಕಿ ಕಣ್ಣುಮುಚ್ಚಿ ಕೂರಲು ಹೇಳಲಾಯ್ತು. ಅರ್ಧಗಂಟೆ, ಗಂಟೆಗೊಮ್ಮೆ ನರ್ಸ್ ಬಂದು ಕಣ್ಣು ರೆಪ್ಪೆ ತೆರೆದು ನೋಡಿ ಮತ್ತೆ ಒಂದೊಂದು ಹನಿ ಹಾಕಿ ಹೋಗುತ್ತಿದ್ದಳು. ಆಗ ಅಭ್ಯಾಸವಾಗಿದ್ದು ಕಣ್ಣುಮುಚ್ಚಿ ಕೂತು ಶ್ರವಣೇಂದ್ರಿಯಗಳಿಂದಷ್ಟೇ ಬಾಹ್ಯಜಗತ್ತಿನ ವಿದ್ಯಮಾನಗಳನ್ನು ಗಮನಿಸುವ ಅಭ್ಯಾಸ. ಮೊದಲನೆಯವನು ಗುರ್ತಿಸಿದ ಆಸ್ಪತ್ರೆಯಲ್ಲಿ ಜನರ ಗಜಿಬಿಜಿ ಜಾಸ್ತಿ ಎಂದು ಎರಡನೆಯವನು ಮತ್ತೊಂದು ಕಡೆ ಕರೆದುಕೊಂಡು ಹೋದ. ಯಥಾಪ್ರಕಾರ ಕಣ್ಣಿಗೆ ಎಣ್ಣೆಬಿಟ್ಟುಕೊಂಡು, ಅಲ್ಲಲ್ಲ, ಔಷಧದ ಹನಿ ಹಾಕಿಸಿಕೊಂಡು ಗಂಟೆಗಟ್ಟಲೆ ಕೂರಬೇಕಾದ ಪ್ರಮೇಯ. ಮೂರನೆಯ ಹಾಗೂ ಕೊನೆಯ ಮಗ ಕೈಕಟ್ಟಿ ಕೂರಲಿಲ್ಲ. ವರ್ಷಕ್ಕೊಮ್ಮೆ ಹರಕೆ ಹೇಳಿಕೊಂಡಂತೆ ಕಟ್ಟುತ್ತಿದ್ದ ಆರೋಗ್ಯ ವಿಮೆಯನ್ನು ಈ ಸಲವಾದರೂ ಸದುಪಯೋಗ ಪಡಿಸಿಕೊಳ್ಳಬೇಕೆಂದು ಅವನ ಯೋಚನೆ ಯೋಜನೆ. ಎಲ್ಲರ ಕಂಪೆನಿಗಳಲ್ಲೂ ಹೆತ್ತವರ ಹೆಸರಲ್ಲಿ ವಿಮೆಯ ಸೌಲಭ್ಯವಿದ್ದರೂ ಸಣ್ಣವನ



ಮಾತಿಗೆ ಅಂಗೀಕಾರದ ಮುದ್ರೆ ಬಿತ್ತು. ಅವನು ಹೆಕ್ಕಿ ತೆಗೆದ ಆಸ್ಪತ್ರೆಯಲ್ಲಿ ಮತ್ತೆ ಕಣ್ಣಿಗೆ ಹನಿ ಹಾಕಿಸಿಕೊಂಡು ಗಂಟೆಗಟ್ಟಲೆ ತಪಸ್ಸು ಮಾಡಿ, ಕ್ಷಮಿಸಿ, ನಿಮ್ಮ ತಾಳ್ಮೆ ಪರೀಕ್ಷಿಸುವ ಉದ್ದೇಶ ನನಗಿಲ್ಲ. ಕಣ್ಣಾಪ್ರೇಷನ್ನು ಮಾಡಿಸಿಕೊಂಡು, ಒಂದು ತಿಂಗಳು ಮಗನ ಮನೆಯಲ್ಲಿ ಠಿಕಾಣಿಹೂಡಿ, ವಾಪಸು ಬಂದರು ದಂಪತಿ. ಲೇಖನದ ಶುರುವಿನಲ್ಲಿ ಪ್ರಸ್ತಾಪಿಸಿದ, ಹಿತೈಷಿಗಳೆಂಬುವವರು ಮನೆಗೆ ಬಂದು ಮಾತಾಡಿಸಿಕೊಂಡು ಹೋಗುತ್ತಿದ್ದ ಸಂದರ್ಭಕ್ಕೆ ಈಗ ಮರಳುತ್ತಿದ್ದೇನೆ. ಕಣ್ಣಿಗೆ ಔಷಧಿ ಹಾಕಿಸಿಕೊಂಡು ಗಂಟೆಗಟ್ಟಲೆ ಬಿಮ್ಮಗೆ ಕೂತಿರುತ್ತಿದ್ದ ಅಭ್ಯಾಸ ಬಲದಿಂದಲೋ, ಅಥವಾ ಆಪರೇಷನ್ ಆದ ಮೇಲೂ ಕಡ್ಡಾಯವಾಗಿ ಕಣ್ಣಿಗೆ ಔಷಧ ಹಾಕಿಸಿಕೊಂಡು ಕಣ್ಣು ಮುಚ್ಚಿಕೊಂಡಿರಬೇಕಾದ ಪರಿಸ್ಥಿತಿಯ ಪ್ರಭಾವದಿಂದಲೋ, ಕಣ್ಣು ಬಿಟ್ಟುಕೊಂಡು ಕೂರುವುದಕ್ಕಿಂತಾ ಕಣ್ಣುಮುಚ್ಚಿಕೊಂಡು ಕೂತಿರುವುದೇ ವಿಷಕಂಠಯ್ಯನಿಗೆ ಪ್ರಿಯವೆನಿಸತೊಡಗಿತು. ಅದೊಂದು ಥರಾ ಜೂಗರಿಕೆ. ಬಾಹ್ಯ ಪ್ರಪಂಚದ ಅರಿವಿದ್ದೂ ಇಲ್ಲದ ಹಿತವಾದ ಅಮಲು. ಮುಂಜಗುಲಿಯ ತಮ್ಮ ಕುರ್ಚಿಯಲ್ಲಿ, ಮಧ್ಯಾಹ್ನ ಉಂಡ ನಂತರದ ವಿರಾಮದ ಹೊತ್ತನ್ನುಳಿದು, ಬೆಳಗಿಂದ ರಾತ್ರಿಯವರೆಗೆ ಪ್ರತಿಷ್ಠಾಪನೆಯಾಗಿರುತ್ತಿದ್ದ ವಿಷಕಂಠಯ್ಯ ಮನೆಗೆ ಬಂದವರನ್ನು ಅದೇ ಅರೆಗಣ್ಣು ಮುಚ್ಚಿದ ಸ್ಥಿತಿಯಲ್ಲಿ ಸ್ವಾಗತಿಸುತ್ತಿದ್ದರು. ಅವರ ಕುತೂಹಲದ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು. ಮಿಕ್ಕಂತೆ ಮತ್ತದೇ ಮೌನ. ಮತ್ತದೇ ಏಕಾಂತ. ಒಳಗಣ್ಣಿನ ನೋಟದಿಂದಲೇ ಹೊರಗಿನ ಚಟುವಟಿಕೆಗಳಿಗೆ ಸಾಕ್ಷಿ ಪ್ರಜ್ಞೆಯಾಗಿರುವ ವಿಪರ್ಯಾಸ. 'ಪಾಪ, ವಿಷಕಂಠಯ್ಯ ಮಾತು ಕಡಿಮೆಮಾಡಿದಾರೆ'ಎಂದು ಕೆಲವರಾದರೂ ಲೊಚಗುಟ್ಟಿದ್ದರು. ಸುಂದರಮ್ಮ ಅಂದುಕೊಳ್ಳುವುದೇ ಬೇರೆ. 'ಪುಣ್ಯಾತ್ಮರು ಹಾಗೇ ಬೆಲ್ಲ ಜಜ್ಜಿದ ಕಲ್ಲಿನ ಹಾಗೆ ಕೂತಿದ್ರೆ ಎಷ್ಟೋ ವಾಸಿ. ಇಲ್ದಿದ್ರೆ ಶುರು ಮಾಡಿ ಬಿಡ್ತಾರೆ ಕರ್ಕರೆ..'

ಈ ಮಾತು ಸುಳ್ಳೇನಲ್ಲ. ಅಪರೂಪಕ್ಕೆ ಕಣ್ಣು ಬಿಟ್ಟುಕೊಂಡು ಕೂತರೆ ವಿಷಕಂಠಯ್ಯನಿಗೆ ಮನೆಯಲ್ಲಿ ಕಾಣುವುದೆಲ್ಲಾ ವಾರೆಯಾಗಿ ಬಿಡುತ್ತದೆ. 'ಬಾರೇಇಲ್ಲಿ..' ಎನ್ನುತ್ತಾ ಎಲ್ಲೋ ತೋರು ಬೆರಳು ಚಾಚುತ್ತಾರೆ. 'ಅಲ್ಲಿ ಬಲೆ ನೇತಾಡ್ತಿರೋದು ಕಾಣಲ್ವಾ? ನಿಂಗೂ ಆಪ್ರೇಷನ್ ಆಗ್ಬೇಕಾ?'ದಬಾವಣೆ ಹಾಕುತ್ತಾರೆ. ಇದೇ ಅಂತಲ್ಲ, ಓಡಾಡುವ ಕಡೆಯಲ್ಲೆಲ್ಲಾ ಅವರಿಗೆ ಏನೋ ಹುಳುಕು ಕಾಣುತ್ತದೆ. 'ಬಚ್ಚಲು ತಿಕ್ಕದೆ ಯಾವ ರಾಯನ ಕಾಲ ಆಯ್ತು?' ಅಂತಲೋ, 'ಅಡುಗೆ ಮನೆ ಇಟ್ಕೊಂಡಿರೋ ಚಂದ ನೋಡು'ಅಂತಲೋ, ಹಿಂಗಿದ್ದೇ ಏನೋ ಒಂದು.

'ನಮ್ಮನೆ ಅಂದ್ರೆ ಭಾಳ ಚೊಕ್ಕ, ಶುಭ್ರ ಅಂದ್ಕೊಂಡಿದ್ದೆ. ಆಪ್ರೇಷನ್ ಆದ್ಮೇಲೆ ಸತ್ಯ ಗೊತ್ತಾಗ್ತಿದೆ'ಎನ್ನುವಂತಾ ಮಾತೂ ಅವರ ಬಾಯಿಂದ ಉದುರಿ ಬಿದ್ದಿದ್ದಿದೆ. ಈ ರಗಳೆಗಿಂತಾ ಗಂಡಯ್ಯ ಕಣ್ಣು ಮುಚ್ಚಿಕೊಂಡೇ ಕೂತಿರಲಿ ಎಂದು ಆ ಗರತಿ ಹಾರೈಸಿದರೆ ತಪ್ಪು ಅನ್ನಲಾದೀತೇ? ■

**ಡಬ್ಬಿ**

ಹಾಸ್ಟೆಲ್ಗೆ ಮಗನ ಕಳಿಸುವಾಗ ಅಪ್ಪನೆಂದ ಚೆನ್ನಾಗಿ ಓದು.... ಮರೀಬೇಡ
ನಮ್ಮ ಸಂಸ್ಕೃತಿ~ಹಬ್ಬ
ಅಮ್ಮನೆಂದಳು ಮರೀದೇ ತಗೊಂಡ್ಬಾ ನಾ ಕಳಿಸಿದ ತಿಂಡಿ ಡಬ್ಬ

**–ಜ್ಯೋತಿ ರಾಜೇಶ್**



# ‘ಯಜಮಾನಂ ಭವತಿ....’

**ಗಣೇಶ ಹೆಗ್ಗಡೆ, ಮೈಸೂರು**

ನಾನು ಇಂದು, ಯಾವ ಮಹಿಳಾ ಸಾಹಿತಿಯೂ ಇದುವರೆವಿಗೆ ಚಿಂತನೆಯ ಧೈರ್ಯವೇ ಮಾಡಿರದ ಕಥಾ ವಸ್ತುವನ್ನು ಆಯ್ಕೆ ಮಾಡಿಕೊಂಡಿದ್ದೇನೆ, ಗಾಬರಿಬಿದ್ದಿರಾ? ಸಹಜವೆ, ಈವರೆಗೆ ನನ್ನ ಚಿಂತನೆ–ಸಮಾಜದ ಅಂಕು–ಡೊಂಕುಗಳು ರಾಜಕೀಯ ವೈಪರೀತ್ಯ, ದೈನಂದಿನ ಬದುಕಿನ ಅನುಭವಗಳು...ಇತ್ಯಾದಿ ಸುತ್ತಾ ಬುಗುರಿಯಂತೆ ಸುತ್ತುತ್ತಿದ್ದು ಈ ದಿನ ಅಚಾನಕ್ಕಾಗಿ ನನ್ನ ದೃಷ್ಟಿ ನಮ್ಮೆಜಮಾನರತ್ತ ಹರಿದಿದ್ದು ಆಕಸ್ಮಿಕವೋ? ಅಥವಾ ಉದ್ದೇಶ ಪೂರ್ವಕವೋ? ಸತ್ಯವಾಗಿ ನನಗೆ ತಿಳಿಯದು. ಈ ನಿಟ್ಟಿನಲ್ಲಿ ಯೋಚಿಸುತ್ತಾ ಬರೆಯಲು ಕುಳಿತಾಗ ನನಗಾದ ಅನುಭವ ಬೆಚ್ಚಿ ಬೀಳಿಸುವಂಥಾದ್ದು. ಮೊದ ಮೊದಲಿಗೆ ವಾಮನನಾಗಿ ಗೋಚರಿಸಿದ ಯಜಮಾನರು ನಂತರದಲ್ಲಿ ತ್ರಿವಿಕ್ರಮನಂತೆ ಬೆಳೆದು ಮುಂದೆ ನಿಂತಾಗ ಒಂದು ನೀಳ್ಗತೆ, ಪ್ರಬಂಧ ಅಥವಾ ಒಂದು ಕಾದಂಬರಿಗಾಗುವಷ್ಟು ಕಥಾವಸ್ತು ಇಲ್ಲಿ ಹರಡಿದೆ ಎಂದೆನಿಸಿ ಸೋಜಿಗವಾಯಿತು. ಆದರೆ ಸಣ್ಣ ಲೇಖನದಲ್ಲೇ ಸತ್ಯ ದರ್ಶನ ಸಾಧ್ಯ ಎಂಬ ನಂಬಿಕೆಯಲ್ಲಿ ನನ್ನ ಲೇಖನಿ ಹಾಳೆಯ ಪುಟಗಳ ಮೇಲೆ ಹೀಗೆ ಹರಿದಾಡಿತು.

ನಮ್ಮೆಜಮಾನರ ಊರು ತರ್ಲೆ ಕುಂಟನಹಳ್ಳಿ ಎಂಬ ಹೋಬಳಿ ಮಟ್ಟದ ಹಳ್ಳಿ. ಅಲ್ಲಿಯೇ ಇವರ ಜನನ ಹಾಗೂ ಪ್ರೌಢಶಾಲೆಯವರೆಗೆ ವಿದ್ಯಾಭ್ಯಾಸ ಕೂಡ. ಇತ್ತೀಚೆಗಷ್ಟೇ ವಿಧಿವಶರಾಗಿದ್ದ ಇವರ ಸೋದರ ಮಾವ ಪ್ರಸಿದ್ಧ ಹಾಸ್ಯ ಸಾಹಿತಿಗಳೂ, ವಿಡಂಬನಕಾರರೂ ಆಗಿದ್ದು, ಅವರ ಅನೇಕ ಲೇಖನಗಳಲ್ಲಿ ಈ ಹಳ್ಳಿಯ ಹೆಸರಿನ ಬಗ್ಗೆ ಪ್ರಸ್ತಾಪವಿರುತ್ತಿದ್ದುದನ್ನು ಸಾಹಿತ್ಯಾಸಕ್ತರಾದ ನೀವೆಲ್ಲರೂ ಬಲ್ಲಿರಿ. ನನ್ನ ಮತ್ತು ನಮ್ಮೆಜಮಾನರ ವಿವಾಹ ಪೂರ್ವ ಮೊದಲ ಸಂದರ್ಶನಕ್ಕೆ ಕಾರಣೀಭೂತರಾದವರೆ ಇವರ ಸೋದರಮಾವ. ಕಾರಣ, ನಾನು ಎಂ.ಎ. (ಇಂಗ್ಲೀಷು) ಮಾಡಿ ಕನ್ನಡ ಮತ್ತು ಆಂಗ್ಲ ಸಾಹಿತ್ಯದ ಬಗ್ಗೆ ಅಪಾರ ಒಲವಿರುವಳೆಂಬ ವಿಚಾರ ಅವರ ಕಿವಿಗೆ ಅದು ಹ್ಯಾಗೊ ಬಿದ್ದದ್ದು, ನಮ್ಮ ಏಕಾಂತ ಭೇಟಿಗೆ ಮುನ್ನ ಇವರ ಸೋದರಮಾವ.

"ನೋಡಮ್ಮ, ನಮ್ಮೂರಿನ ಒರಿಜನಲ್ ಹೆಸರು ಕುಂಟನಹಳ್ಳಿ ಎಂದು ಮಾತ್ರ. ಆದರೆ ನಿನ್ನ ಭಾವೀ ಗಂಡನ ಜನ್ಮವಾದ ಮೇಲೆ ಈ ಹಳ್ಳಿ ತರ್ಲೆ ಕುಂಟನಹಳ್ಳಿಯೆಂದು ಪ್ರಸಿದ್ಧಿ ಪಡೆಯಿತು" ಎಂಬ ಕಠೋರ ಸತ್ಯವನ್ನು ಹಾಸ್ಯ ರೂಪದಲ್ಲಿ ನನ್ನ ಬಳಿ ನಿವೇದನೆ ಮಾಡಿಕೊಂಡಿದ್ದರು’.

"ಅಂಕಲ್ ಐ ನೊ ಹೌ ಟು ಟೇಮ್ ಎಷ್ಯೂರ್ಡ್ ಹಾರ್ಸ್" ಎಂದುತ್ತರಿಸಿದಾಗ ಮೆಚ್ಚುಗೆ ಸೂಸಿದ್ದರು ಇವರ ಮಾವ. ಆ ದಿನ ನಾನು ಮರೆಯುವ ಹಾಗೇ ಇಲ್ಲ. ನಾವಿಬ್ಬರೂ ಎದುರು ಬದಿರು ಕುಳಿತರೂ, ತಲೆ ಎತ್ತಿ ಮಾತನಾಡಲು ಬಲು ಪ್ರಯಾಸ ಪಡುತ್ತಿದ್ದಾನಲ್ಲಾ ಈ ಸಂಕೋಚದ ಪ್ರಾಣಿ ಎಂದು ಭಾಸವಾದರೂ ಈ ವ್ಯಕ್ತಿಯ ಹೃದಯ ನಿಷ್ಕಲ್ಮಶ ಎನ್ನುವುದು ಮೊದಲ ಭೇಟಿಯಲ್ಲೇ ಸಾಬೀತಾಗಿ ಹೋಗಿತ್ತು. ವೃತ್ತಿಯಲ್ಲಿ ಇವರು ಎಂಜಿನಿಯರ್, ನಾನು ಶಿಕ್ಷಕಿ. ನಮ್ಮ ವಿಚಾರಧಾರೆಗಳ ದಿಕ್ಕು, ರೈಲ್ವೆ ಹಳಿಗಳಂತೆ ಬೇರೆ ಬೇರೆ ಎಂದೂ ಸಂಧಿಯಾಗದು. ನಮ್ಮಿಬ್ಬರ ಜಾತಕ ತುಲನೆ ಮಾಡಿದ ಪುರೋಹಿತರು ಗಣಕೂಟ ಸೊಗಸಾಗಿದೆ ಎಂದು ಮದುವೆಗೆ ಹಸಿರು ನಿಶಾನೆ ತೋರಿದ್ದರು. ಆದರೆ ಜ್ಞಾನ ಕೂಟದ ಬಗ್ಗೆ ಚಕಾರವೂ ಎತ್ತಲಿಲ್ಲವಲ್ಲ ಎಂಬ ಕೊರಗು ಇಂದಿಗೂ ನನಗೆ, ಅದು ಹೇಗೆ ಒಪ್ಪಿಕೊಂಡೇ ಎಂದಿರಾ. ಒಮ್ಮೆ ಮಾತ್ರ ಮದುವೆಯ ಹುಡುಗ ತಲೆಎತ್ತಿ ನನ್ನತ್ತ ಕನಿಕರ ದೃಷ್ಟಿ ಬೀರಿ,



‘ಮೇಡಮ್, ಇದುವರೆವಿಗೂ ನನ್ನನ್ನು ಹತ್ತು ಹುಡುಗಿಯರು ಬಂದು ನೋಡಿಕೊಂಡು ಹೋದರು. ಆದರೆ ಯಾರೂ ಒಪ್ಪಲಿಲ್ಲ’ ಎಂಬ ಸತ್ಯ ನುಡಿದಾಗ,

ಹೃದಯ ಕರಗಿ, ನಾನು ಹನ್ನೊಂದನೆಯವಳಾಗಬಾರದು ಎಂಬ ನಿರ್ಧಾರ ತೆಗೆದುಕೊಂಡಾಗಿತ್ತು. ಇವರ ಮಾವ ಇವರನ್ನು ಪರಿಚಯಿಸಿದ ರೀತಿಯಲ್ಲೇ ನನಗೆ ದೋಷ ಗೋಚರಿಸಿತು. ಸ್ವಭಾವದಲ್ಲಿ ಕೊಂಚ ತರಲೆಯಿರಬಹುದು, ಆದರೆ ಮ್ಯಾನೇಜಬಲ್ ಎನಿಸಿತು. ಆದರೆ ಭಾವಿ ಗಂಡ ಎಂಬುದು ತಪ್ಪು ಗ್ರಹಿಕೆ. ಬಾವಿಗಂಡ ಎಂದಿರಬೇಕು, ಇವರ ಧನಿ ಮತ್ತು ಮಾತು ಕೇಳುವ ಅಪರಿಚಿತರಿಗೆ. ಯಾರೊ ನೂರಡಿ ಬಾವಿಯೊಳಗೆ ಕುಳಿತು ಮಾತನಾಡುತ್ತಿರುವ ಭಾಸ. ಆದರೆ, ಕರುಣಾಮಯಿ ಆ ಭಗವಂತ ನನಗೆ ಚುರುಕು ಕಿವಿ ಕೊಟ್ಟಿರುವನಲ್ಲಾ ಎಂಬ ದೃಢ ನಂಬುಗೆಯೆ ನಾನು ಮುಂದುವರೆದಿದ್ದಕ್ಕೆ ಸಕಾರಣ.

ಇನ್ನು ಮನೆ ತುಂಬಿಸಿಕೊಳ್ಳುವ ಶಾಸ್ತ್ರದ ಸಂದರ್ಭದಲ್ಲಿ ಇವರ ಸೋದರ ಮಾವ,

'ತಾಯಿ, ಹೊಸ್ತಿಲಲ್ಲಿ ಒಂದು ಸೇರಲ್ಲಿ ಅಕ್ಕಿ ತುಂಬಿಸಿ ಇಟ್ಟಿದ್ದೇವೆ. ಆ ಸೇರಿನ ಹಿಂದೆ ನಿನ್ನ ಶ್ರೇಯಸ್ಸನ್ನು ಸದಾ ಕೋರುವ, ಒಂದು ಕುಟುಂಬವಿದೆ. ನೀನು ಸೇರನ್ನಷ್ಟೇ ಒದ್ದು ಒಳಗೆ ಬಾ" ಎಂಥಾ ಮಾರ್ಮಿಕ ನುಡಿಗಳು ಅವು. ಇದರ ಅನುಭವ ಮೂವತ್ತು ವರ್ಷಗಳ ನಂತರ ಮತ್ತೆ ನನಗಾಗಿತ್ತು. ಇರುವ ಒಬ್ಬನೇ ಮಗನ ವಿವಾಹ ಸಂದರ್ಭದಲ್ಲಿ ನನ್ನ ಸೊಸೆ, ಮನೆ ತುಂಬಿಸಿಕೊಳ್ಳುವ ಶಾಸ್ತ್ರದಲ್ಲಿ ಸೇರಿನ ಜತೆಗೆ ಮನೆಯವರನ್ನೆಲ್ಲಾ ಒದ್ದು ವಾರದಲ್ಲೇ ವಿದೇಶಕ್ಕೆ ಹಾರಿಹೋಗಿದ್ದಳು ಮತ್ತೆ ಹಿಂತಿರುಗಿಬರಲಿಲ್ಲ, ಗಂಡನನ್ನೂ ಕಳುಹಿಸಲಿಲ್ಲ. ಈ ಘಟನೆ ಇಲ್ಲಿ ಅಪ್ರಸ್ತುತವೆನಿಸಿದರೂ, ಅನೇಕ ಕೌಟುಂಬಿಕ ವ್ಯವಹಾರಗಳಲ್ಲಿ ಇದು ಸತ್ಯವಲ್ಲವೆ?

ವಾಪಸ್ಸು ಈ ಲೇಖನದ ಮೂಲ ವಿಚಾರಧಾರೆಗೇ ಬಂದರೆ, ನನ್ನ ಮದುವೆಯಾದ ಹಲವು ತಿಂಗಳ ಬಳಿಕ, ನಮ್ಮತ್ತೆ, ನನ್ನನ್ನು ಏಕಾಂತದಲ್ಲಿ ಕುಳ್ಳಿರಿಸಿಕೊಂಡು,

"ಮಗು ಅನ್ಯಥಾ ಭಾವಿಸಬೇಡ. ನೀನು ತುಂಬಾ ಸುಟಿ. ಜಗತ್ತನ್ನೇ ಗೆದ್ದು ಬರುವ ದಾರ್ಷ್ಟ್ಯ. ಆದರೆ ನನ್ನ ಮಗ ತದ್ವಿರುದ್ಧ. ತುಂಬಾ ಮಖೇಡಿ, ಆದರೆ ಕಪಟವಿಲ್ಲದವನು, ಸಂಬಾಳಿಸಿಕೊಂಡು ಹೋಗು, ನಿಮ್ಮಿಬ್ಬರ ಜೋಡಿ ಹಸು–ಹುಲಿಯ ಜೋಡಿ. ಆದರೆ ಪ್ರಯತ್ನಪಟ್ಟರೆ ಹುಲಿ ಹಸುವಾಗಬಲ್ಲದು" ಎಂದು ದೈನ್ಯ ಭಾವದಲ್ಲಿ ಬೇಡಿಕೊಂಡಿದ್ದರು. ಈ ಸಂದರ್ಭದಲ್ಲಿ ಕೊಂಚವೂ ವಿಚಲಿತಳಾಗದ ನನ್ನ ಕವಿ ಚಿಂತನೆ, ಮಖೇಡಿ ಎಂಬ ಶಬ್ದಾರ್ಥದ ಬೆನ್ಹತ್ತಿ ಹೋಗಿತ್ತು. ಈ ಪದದ ಸೂಕ್ಷ್ಮಾರ್ಥದ ಅನುಭವ, ಹನಿಮೂನಿನ ಸಂದರ್ಭದಲ್ಲೇ ನನಗರಿವಾಗಿ ಹೋಗಿತ್ತು. ಇವರಿಗೆ ಜನ ಜಂಗುಳಿಯೇ ಆಗದು. ಸಭೆ, ಸಮಾರಂಭಗಳಲ್ಲಿ ಯಾರನ್ನೂ ಹುಡುಕಿಕೊಂಡು ಹೋಗಿ ಮಾತನಾಡಿಸುವ ಪ್ರವೃತ್ತಿಯೆ ಇರಲಿಲ್ಲ. ಬದಲಿಗೆ, ಅಂಥಹವರ ಜತೆ ಒಂದೈದು ನಿಮಿಷ ಸಂಭಾಷಿಸಿ, ಮೌನದ ಜಾರುಗುಪ್ಪೆಯ ಮೇಲೆ ಹತ್ತಿ ಕೂಡುವ ಸ್ವಭಾವ. ಆದರೆ ನಾನು ಇದಕ್ಕೆ ತದ್ವಿರುದ್ಧ. ಯಾವ ಕಲ್ಲು ಬಂಡೇನಾದ್ರೂ ಮಾತನಾಡಿಸಿಕೊಂಡು ಬರುತ್ತಾಳೆ ಎಂಬ ಪಟ್ಟ ನನಗೆ. ಇವರಿಗೆ ಕನ್ನಡಬಿಟ್ಟರೆ ಬೇರ್‍ಯಾವ ಭಾಷೆಯೂ ಸಲೀಸಾಗಿಬರದು. ಇಂಗ್ಲಿಷನ್ನೇ ಕನ್ನಡದಲ್ಲಿ ಚಿಂತಿಸಿ ಸಂಭಾಷಿಸಲು ಹರಸಾಹಸ ಮತ್ತು ಪರದಾಟ. ನಾನೋ ಬೆಂಗಳೂರಿನ ಒಂದು ಕಂಟೋನ್ಮೆಂಟು ಬಡಾವಣೆಯಲ್ಲಿ ಬೆಳೆದು, ನೆರೆಹೊರೆಯವರ ಸಾಮೀಪ್ಯದಿಂದ ಚತುರ್ಭಾಷಾ ಚತುರೆಯೆನ್ನಿಸಿಕೊಂಡವಳು. ಎತ್ತಣ ಮಾಮರ, ಎತ್ತಣ ಕೋಗಿಲೆ ಎಂದುಕೊಂಡಿರಾ? ಈ ವಿಚಾರ ಹಾಗಿರಲಿ.

ಬಾಲ್ಯದಲ್ಲಿ ಇವರು ಸೈಕಲ್ಲು ಕಲಿಯುವಾಗ ಆಕಸ್ಮಿಕವಾಗಿ ಬಿದ್ದು ಮೂಳೆ ಮುರಿದು ಕೊಂಡಿದ್ದನ್ನೇ ನೆಪವನ್ನಾಗಿಸಿಕೊಂಡು ಮುಂದೆಂದೂ ತಮ್ಮ ಜೀವನದಲ್ಲಿ ಯಾವ ವಾಹನದ ಚಾಲನೆಯನ್ನೂ ಕಲಿಯದೇ ಇದ್ದುದು ಕಲಿಯುಗದ ದೊಡ್ಡ ದುರಂತ. ನಿರ್ವಾಹವಿಲ್ಲದ ನಾನು ತೌರು ಮನೆಯಲ್ಲಿ ಅನಾಥವಾಗಿ ಬಿದ್ದಿದ್ದ ನನ್ನ



ಹೋಂಡಾ ಆಕ್ಟೀವಾ ಸ್ಕೂಟರಿನ ಮರು ಆಸರೆ ಪಡೆಯಬೇಕಾಗಿ ಬಂದದ್ದು ಅನಿವಾರ್ಯ. ಮೊದ ಮೊದಲು ನನ್ನ ಹಿಂದೆ ಕುಳಿತುಕೊಳ್ಳಲು ಭಯ ಮತ್ತು ಸಂಕೋಚಪಟ್ಟು ಕೊಳ್ಳುತ್ತಿದ್ದ ಇವರು ಕ್ರಮೇಣ ಈ ಅಭ್ಯಾಸಕ್ಕೆ ಒಗ್ಗಿಹೋಗಿದ್ದರು. ಹಿಂಬದಿ ಸೀಟಿನವರೂ ಹೆಲ್ಮೆಟ್ಟು ಧರಿಸಬೇಕೆಂಬ ಕಾನೂನು ಕಡ್ಡಾಯವಾದ ಮೇಲಂತೂ ಇವರಿಗೆ ನಿರಾಳವಾಗಿ, ತಮ್ಮ ಮುಖ ಯಾರಿಗೂ ಕಾಣದಿರುವ ಸತ್ಯದ ಅರಿವಾಗಿ ಇನ್ನೂ ಧೈರ್ಯ ಬಂದಿತ್ತು. ಕಛೇರಿಗೆ ತಡವಾದ ದಿನದಂದು ನಾನೇ ಖುದ್ದಾಗಿ ಇವರನ್ನು ಸ್ಕೂಟರಿನಲ್ಲಿ ಕರೆದುಕೊಂಡು ಹೋಗಬೇಕಾದ ಪರಿಸ್ಥಿತಿ ಎದುರಾಯ್ತು. ಕಛೇರಿಗೆ ನೂರು ಮೀಟರ್ ಅನತಿ ದೂರದಲ್ಲೇ ಡ್ರಾಪ್ ತೆಗೆದಕೊಳ್ಳುವ ಇವರ ಜಾಣತನ ಕಂಡು ಒಳಗೊಳಗೆ ನಗು ಬಂದರೂ ಮನುಷ್ಯನ ನಿಸ್ಸಹಾಯಕ ಪರಿಸ್ಥಿತಿಯನ್ನು ಎಂದಿಗೂ ಗೇಲಿ ಮಾಡಬಾರದೆಂಬ ವಿವೇಕ ನನ್ನನ್ನು ಎಚ್ಚರಿಸುತ್ತಲೇ ಇತ್ತು. ಇಂಥಹ ಸಂದರ್ಭದಲ್ಲೇ ಒಂದು ದಿನ, 'ನೀನು ಕಾರ್ ಡ್ರೈವಿಂಗ್ ಕಲಿತು, ಒಂದು ಕಾರು ಕೊಳ್ಳಬಾರದೆ? ನಾನು ದುಡ್ಡು ಕೊಡುತ್ತೇನೆ' ಎಂದಾಗ ಪಿತ್ಥ ಕೆರಳಿ ನೆತ್ತಿಗೇರಿತ್ತು. ಆದರೆ ನಿಧಾನವಾಗಿ ಯೋಚಿಸಿದಾಗ, ನಮ್ಮ ಒಳಿತಿಗಲ್ಲವೇ? ಇವರು ಹಾಗೆ ಹೇಳಿದ್ದು ಎಂದೆನಿಸಿ ಸಮಾಧಾನವಾಯ್ತು. ಗುಂಡಿ ಭಯಕ್ಕೆ ಬಿದ್ದು, ಜಾಣರಾದ ಬೆಂಗಳೂರಿನ ಸತ್ಪ್ರಜೆಗಳಲ್ಲಿ ನನ್ನ ಪತಿರಾಯರೂ ಒಬ್ಬರು ಎಂಬ ಹೆಮ್ಮೆ ನನ್ನ ಮುಡಿಗೇರಿತು. ಡ್ರೈವಿಂಗ್ ಕಲಿತು, ಕಾರನ್ನು ಕೊಳ್ಳಲು ತಡವೇನೂ ಆಗಲಿಲ್ಲ. ಆದರೆ ಕಾರು ಡೆಲಿವರಿಯ ದಿವಸ ಒಂದು ಆಭಾಸವಾಯ್ತು. ಕಂಪೆನಿಯ ಮ್ಯಾನೇಜರ್ ಭಕ್ತಿ ಪೂರ್ವದಿಂದ ಪತಿರಾಯರ ಕೈಗೆ ಕಾರ್ ಕೀಯನ್ನಿತ್ತು, ಕಾರಿನ ವಿಶೇಷ ಸುರಕ್ಷತಾ ಉಪಕರಣಗಳ ಬಗ್ಗೆ ದೀರ್ಘ ಭಾಷಣ ಆರಂಭಿಸಿದಾಗ ಕಾರಿನ ಬಗ್ಗೆ ಎಳ್ಳಷ್ಟೂ ಗಂಧವಿರದ ಇವರು ಕಕ್ಕಾಬಿಕ್ಕಿಯಾಗಿದ್ದನ್ನು ಕಂಡ ನನಗೆ, ಏರ್‌ಬ್ಯಾಗೇ ಇಲ್ಲದ ಇವರ ಹಾರ್ಟು ಎಲ್ಲಿ ವಡೆದು ಹೋಗುತ್ತೊ? ಎಂಬ ಭಯ ಕಾಡಿತ್ತು. ಕೊನೆಗೆ ಆ ಮಹಾಶಯ ಹೊಸ ಕಾರಿನ ಡ್ರೈವರ್ ಸೀಟಿನ ಬಾಗಿಲನ್ನು ತೆರೆದಾಗ ಗಕ್ಕನೆ ನಾನು ಹೋಗಿ ಕುಳಿತು ಕೊಂಡಿದ್ದನ್ನು ಕಂಡು ಬೆಚ್ಚಿ ಬೀಳುವ ಸರದಿ ಅವನದ್ದಾಗಿತ್ತು. ಇತ್ತೀಚಿನ ದಿನಗಳಲ್ಲಿ ಯಾವಾಗಲೂ ಡ್ರೈವರ್ ಸೀಟಿನ ಪಕ್ಕದಲ್ಲಿ ಕೂಡುವ ಇವರು, ಹೆಜ್ಜೆ ಹೆಜ್ಜೆಗೂ ನನಗೇ ಡೈರೆಕ್ಷನ್ ಕೊಡುವುದು ಕೋಪ ತರಿಸುವ ವಿಚಾರವಾದರೂ, ಬಂಡವಾಳ ಹಾಕಿದವರ ಮುಂದೆ ಭಂಡತನ ಸಲ್ಲದು ಎಂಬ ಹಿತೋಕ್ತಿ ಸದಾಕಾಲ ನನ್ನನ್ನು ಎಚ್ಚರಿಸುತ್ತಲೇ ಇರುತ್ತದೆ.

ಇನ್ನೂ ಪತಿರಾಯರ ಬಗ್ಗೆ ಹೇಳಬೇಕೆಂದರೆ ಮೊಬೈಲಿನ ಉಪಯೋಗದಲ್ಲಿ ಇವರ ಕಲಿಕೆ ಇನ್ನೂ ಶೈಶಾವಸ್ಥೆಯಲ್ಲೇ ಇರುವುದು ಮತ್ತು ಕಲಿಯಲು ಆಸಕ್ತಿಯೆ ಇಲ್ಲದಿರುವುದು, ಅಡುಗೆ ವಿಚಾರದಲ್ಲಿಯೂ ಹೀಗೆಯೆ ಮಹಾಸ್ವಾಮಿ ಎಂದೂ ಒಲೆಯನ್ನೇ ಹಚ್ಚಿದವರಲ್ಲ. ಇಂದಿಗೂ ಇವರಿಗೆ ಸೊಪ್ಪು, ತರಕಾರಿ, ಬೇಳೆಗಳ ವಿಚಾರದಲ್ಲಿ ಭಯಂಕರ ಕನ್‌ಫ್ಯೂಷನ್ ...ಅಂಗಡಿ ಮುಗ್ಗಟ್ಟುಗಳಿಗೆ ಒಬ್ಬರನ್ನೇ ಕಳುಹಿಸಲು ನನಗೇ ಭಯ. ಹೀಗೆ ಸ್ವಾಮಿ ನಮ್ಮ ದಾಂಪತ್ಯ ಗಾಥೆಯನ್ನು ವಿವರಿಸುತ್ತಾ ಹೋದರೆ, ಸಮಯ ಹೋದದ್ದೇ ನನಗೆ ತಿಳಿಯದು. ನೆನಪಿನ ಬತ್ತಳಿಕೆಯಿಂದ ಹೀಗೆ ನಾನು ಹೊರ ತೆಗೆದ ಬಾಣಗಳೆಷ್ಟೊ? ಮುಚ್ಚಿಟ್ಟ ಬಾಣಗಳೆಷ್ಟೋ?



ಇತ್ತೀಚಿನ ದಿನಗಳಲ್ಲಿ ನಾನು ಕಾಯಿಲೆ ಬಿದ್ದಾಗ, ದಡಕ್ಕೆ ಬಿದ್ದ ಮೀನಿನಂತೆ ಇವರು ಚಡಪಡಿಸುವುದನ್ನು ನಾನು ಗಮನಿಸಿದ್ದೇನೆ. ನನ್ನ ನಂತರ ಊಟ, ತಿಂಡಿಗೆ ಇವರು ಪಡುವ ಪಾಡನ್ನು ದೂರದೃಷ್ಟಿಯಾಗಿಟ್ಟುಕೊಂಡು ಒಂದುಪಾಯ ಮಾಡಿದ್ದೇನೆ. ಮನೆಯ ಮುಂದಿನ ಖಾಲಿ ಜಾಗದಲ್ಲಿ, ಒಂದು ದೊಡ್ಡ ಲಾನನ್ನು ಬೆಳೆಸಿದ್ದೇನೆ. ಯಾಕೆಂದರೆ, ಹುಟ್ಟಿಸಿದ ದೇವರು ಹುಲ್ಲು ಮೇಯಿಸದೇ ಇರುವುದಿಲ್ಲ" ಎಂಬ ಗಾದೆಯನ್ನು ನಾನು ಸಂಪೂರ್ಣ ನಂಬಿ ಬಿಟ್ಟಿದ್ದೇನೆ. ■

## ಕಾರ್ಟೂನ್ ಗ್ಯಾಲರಿ –ಎಚ್.ಬಿ.ಮಂಜುನಾಥ್, ದಾವಣಗೆರೆ












# ದಾರಿ ಯಾವುದಯ್ಯಾ?

ಸಂಪಟೂರು ವಿಶ್ವನಾಥ್

ಎಪ್ಪತ್ತು ಮತ್ತೆರಡು ವಸಂತಗಳನ್ನು ಮುಗಿಸಿ, ಕುಂಟುತ್ತಾ ನೆಡೆಯುತ್ತಿದ್ದ ಎಲ್ಲಪ್ಪನ ಮುಖದಲ್ಲಿ ನಗೆಮಿಂಚು ಸುಳಿಯಿತು!

ಪಕ್ಕದಮನೆ ಮುಂಬಾಗಿಲಿನಲ್ಲಿ ಅನಾಥವಾಗಿ ಬಿದ್ದಿದ್ದ ದಿನಪತ್ರಿಕೆಯ ಶೀರ್ಷಿಕೆ ಅವನ ನಗೆಮಿಂಚಿಗೆ ಕಾರಣವಾಗಿತ್ತು.

ಕೇಂದ್ರ ಮತ್ತು ರಾಜ್ಯಸರ್ಕಾರದವರು, ಎಲ್ಲರಿಗೂ ವೈದ್ಯಕೀಯ ಸೌಲಭ್ಯವನ್ನು ಉಚಿತವಾಗಿ ಒದಗಿಸುವ ಯೋಜನೆಯನ್ನು ಪ್ರಕಟಿಸಿದ್ದರು, 'ಎ' ನಿಂದ ಕೆಳಗೆ 'ಬಿ'ಪಿಎಲ್‌ಗೆ ಸೇರಿದ್ದ ತನಗೆ 'ಉಚಿತ ಸೌಲಭ್ಯ' ಸಿಗುವುದನ್ನು ಓದಿ, ಒಂದರೆಕ್ಷಣ ಸಂತೋಷವಾಯಿತು. ಚುನಾವಣಾ ಆಯೋಗ ನೀಡಿದ್ದ ಗುರ್ತಿನ ಚೀಟಿ, ಹಿರಿಯ ನಾಗರೀಕರ ಚೀಟಿ, ಇಎಸ್‌ಐ ಕಾರ್ಡು ಇತ್ಯಾದಿಗಳು ತನ್ನ ಬಳಿ ಇದ್ದಿದ್ದರಿಂದ ತನಗಿಂತ ಹೆಚ್ಚು ಅರ್ಹರು ಈ ಯೋಜನೆಯ ಪ್ರಯೋಜನ ಪಡೆಯಲು ಯಾರಿದ್ದಾರೆ ಎಂದು, ದಿನಪತ್ರಿಕೆಯನ್ನು ಸ್ವಸ್ಥಾನದಲ್ಲಿಟ್ಟು, ತನ್ನ ಮನೆಯೊಳಕ್ಕೆ ಬಲಗಾಲಿಟ್ಟು ಪ್ರವೇಶಿಸಿದ.

ಒಂದು ಕಡೆ ಮಾತ್ರ ಹರಿದಿದ್ದ, ಇತ್ತೀಚಿಗಷ್ಟೇ ಬೀದಿ ನಲ್ಲಿಯ ನೀರಿನಲ್ಲಿ ತೊಳೆದಿದ್ದ, ಸಡಿಲವಾದ ಅರ್ಧಅಂಗಿ, ಖಾದಿಲುಂಗಿ ತೊಟ್ಟು ಮೂರು ಅಂತಸ್ತಿನ, ನೂರಾರು ಕೊಠಡಿಗಳು, ಹತ್ತಾರು ಕಾವಿಬಣ್ಣದ ಉಡುಪಿನ ತಜ್ಞರು ಇದ್ದ ದೊಡ್ಡಾಸ್ಪತ್ರೆಯ ಹೆಬ್ಬಾಗಿಲಿನಲ್ಲಿ ನಿಂತ. ತಿರುಪತಿ ವೆಂಕಟೇಶ್ವರಸ್ವಾಮಿಗೆ ತೋರುವ ದೈನ್ಯ ಎಲ್ಲಪ್ಪನ ಮುಖದಲ್ಲಿತ್ತು. ಕ್ಯಾಲೆಂಡರಿನ, ಕೊನೆಯ ತಿಂಗಳಿನ ಕೊನೆಯ ತಾರೀಖಿಗಿಂತ ಒಂದು ಹೆಚ್ಚಾಗಿದ್ದ ತನ್ನ ಖಾಯಿಲೆಗಳ ಚಿಹ್ನೆಗಳು ಕ್ಷಣಕಾಲ ಮಿಂಚಿ ಮಾಯವಾದುವು. ಹೆಬ್ಬಾಗಿಲಿಗೆ ತೆರೆದುಕೊಂಡಿದ್ದ ಆಸ್ಪತ್ರೆಯ ಹಜಾರ ಇಂದ್ರ ಸಭೆಯನ್ನು ನೆನಪಿಸಿತು ಎಲ್ಲಪ್ಪನಿಗೆ ಥರಹೆವಾರಿ ಕುರ್ಚಿಗಳು, ದೀಪಗಳು, ನವ ನವೀನ ದ್ವಾರಗಳು, ಎರಡು ಭಾಷೆಗಳಲ್ಲಿದ್ದ ಫಲಕಗಳು, ಕನ್ನಡಿಯಂತೆ ಹೊಳೆಯುತ್ತಿದ್ದ ನೆಲ, ಬಿಳಿಯುಡುಗೆಯ ದಾದಿಯರು ಅವನನ್ನು 'ಸ್ವಾಗತಿಸಿದರು(ವು)'.

ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡುತ್ತ ಮುಂದೆಹೋದಾಗ ಮೂರು ಚಕ್ರದ ಕುರ್ಚಿಗಳು, ಮೋಟಾರು ಚಾಲಿತ ಉದ್ದ ಗಾಡಿಗಳು, ಮೇಲಕ್ಕೆ (ತಮ್ಮಷ್ಟಕ್ಕೆ ತಾವೇ) ಏರುವ ಮಾಮೂಲಿ ಮೆಟ್ಟಿಲುಗಳು, ಜಾರುಬಂಡೆಯಂಥಾ ಮೆಟ್ಟಿಲುಗಳು, ಊರಗಲದ ಗಾಜಿನ ಗೋಡೆಗಳು, ಕಾಣಿಸಿದವು.ಇದನ್ನೆಲ್ಲಾ ನೋಡುತ್ತಿದ್ದಾಗ ಇಲ್ಲಿ ಚಿಕಿತ್ಸೆ ಪಡೆಯುವವರು, ಆದರಲ್ಲೂ ಉಚಿತ ಚಿಕಿತ್ಸೆ ಪಡೆಯುವವರು, ಪೂರ್ವಜನ್ಮದಲ್ಲಿ ಪಾಪದ ಜೊತೆಗೆ ಸ್ವಲ್ಪ ಪುಣ್ಯವನ್ನೂ ಖಂಡಿತ ಮಾಡಿರಬೇಕು ಅಂದುಕೊಂಡ ಎಲ್ಲಪ್ಪ.

ಕನ್ನಡದಲ್ಲಿ ಕೆಲವು ಬೋರ್ಡುಗಳನ್ನು ಗಟ್ಟಿಯಾಗಿಯೇ ಓದಿಕೊಂಡ. 'ತುರ್ತುನಿಗಾ ಚಿಕಿತ್ಸೆ' ಅಪಘಾತ, ಜಠರರೋಗಿಗಳು, ಕಣ್ಣು, ಕಿವಿ, ಮೂಗು, ಹೃದಯರೋಗಿಗಳು, ಮೂತ್ರಪಿಂಡರೋಗಿಗಳು ಅರ್ಬುದರೋಗಿಗಳು, ಅರಿವಳಿಕೆ ವಿಭಾಗ, ಎಕ್ಸರೇ, ಎಂಆರ್‌ಐ, ಓ.ಟಿ, ಓಪಿಡಿ, ಮೇಲಕ್ಕೆ ದಾರಿ. ತಾನು ಎಲ್ಲಿಗೆ ಹೋಗಬೇಕು ಅಥವಾ ಯಾವುದಾದ ಮೇಲೆ ಯಾವ ಕೊಠಡಿಗೆ ಹೋಗಬೇಕು ಎಂದು ನಿಶ್ಚಯಿಸಲು ಒಂದು ನಿಮಿಷ ತೆಗೆದುಕೊಂಡ. ಹಾಗೆಯೇ ಅವನ ದೃಷ್ಟಿ



ಪಕ್ಕದಲ್ಲಿದ್ದ ಬೋರ್ಡಿನ ಕಡೆಗೆ ಹರಿಯಿತು.

ಮೇಲಿನಿಂದ ಕೆಳಗಿನವರೆಗೂ ಇದ್ದ ಹೆಸರುಗಳಿಗೆ ಮೊದಲು ಡಾ॥ ಎಂದಿದ್ದನ್ನೂ ತಕ್ಷಣಕ್ಕೆ ದಿ॥ ಅಂತ ಓದಿಕೊಂಡು, 'ಛೀ' ಅಂತ ತನ್ನ ಅಜ್ಞಾನವನ್ನು ತಾನೇ ಬಯ್ದುಕೊಂಡ, ಪ್ರತಿಯೊಬ್ಬ ಡಾಕ್ಟ್ರ ಹೆಸರಿನ ನಂತರ ಅವನು ಅನೇಕ ವರ್ಷ ಕಷ್ಟಪಟ್ಟು ಸಂಪಾದಿಸಿದ್ದ ಡಿಗ್ರಿ ರೂಪದ ಅಕ್ಷರಗಳನ್ನು ಓದಿಕೊಂಡ. ಅಕ್ಷರಗಳು ಅಕಾರಾದಿಯಾಗಿ ಮಾತ್ರ ಇರಲಿಲ್ಲ.

ಯಾರು, ಯಾವ ಕೋಣೆಯಲ್ಲಿ, ಎಷ್ಟು ಹೊತ್ತಿನಿಂದ ಎಷ್ಟು ಹೊತ್ತಿನವರೆಗು, ಯಾವ ದಿನ ಸಿಗುತ್ತಾರೆಂದು ಬರೆದಿದ್ದನ್ನು ಓದುತ್ತಿದ್ದಾಗ ಅಪರಿಚಿತರೊಬ್ಬರೊಬ್ಬರು ಎಲ್ಲಪ್ಪನ್ನ ಕೇಳಿದರು–"ಮೇಲಕ್ಕೆ ಹೋಗಬೇಕಾ, ನಾನೂ ಹೋಗ್ತಿದ್ದೀನಿ, ಬನ್ನಿ". ಆತ ಲಿಫ್ಟ್ ಚಾಲಕ.

"ಈಗಾಗಲೇ ಬೇಡ. ಮೊದಲು ಡಾಕ್ಟ್ರನ್ನ ನೋಡಬೇಕು" ಎಂದ ಎಲ್ಲಪ್ಪ ವಿಚಲಿತವಾಗಿ.

"ಮೊದಲು ಅಲ್ಲಿಗೆ ಹೋಗಿ ಚೀಟಿ ತೊಗೊಳ್ಳಿ. ಆಮೇಲೆ ಮೇಲಕ್ಕಾದರೂ ಹೋಗಿ ಕೆಳಕ್ಕಾದರೂ ಹೋಗಿ", ಅಂತ ಸಹಾಯಹಸ್ತ ಚಾಚಿದ ನೌಕರ.


"ಮೇಲಕ್ಕೆ ಹೋಗೋಕ್ಕೂ ಇಲ್ಲಿ ಚೀಟಿ ತೊಗೊಬೇಕಾ" ಅಂತ ಸಿನಿಕತೆಯಿಂದಲೇ, ತನ್ನ ಗುರ್ತಿನ ಚೀಟಿಗಳನ್ನು ಪ್ರದರ್ಶಿಸಿ, ಚೀಟಿ ತೆಗೆದುಕೊಂಡ. ತನ್ನ ಅಸ್ತಿತ್ವಕ್ಕೆ ಸಂಬಂಧಿಸಿದ ಐಡಿ ಕಾರ್ಡುಗಳನ್ನು ಭದ್ರವಾಗಿ ಮತ್ತೆ ಜೇಬಿಗೆ ಸೇರಿಸುವುದನ್ನು ಎಲ್ಲಪ್ಪ ಮರೆಯಲಿಲ್ಲ.

ನನ್ನ ಹೊಟ್ಟೆಯ ನೋವೇ ಮೊದಲು ವಾಸಿಯಾಗಲಿ, ಅಂದುಕೊಂಡು, 'ಜಠರರೋಗಿಗಳು' ಎನ್ನುವ ಕೋಣೆಯ ಮುಂದಕ್ಕೆ ಬಂದ. ಅಲ್ಲಿ ಎರಡು ಬಾಗಿಲುಗಳಿದ್ದದ್ದವು. ಒಂದರ ಮೇಲೆ, 'ಸ್ತ್ರೀಯರು' ಎಂದೂ ಇನ್ನೊಂದರ ಮೇಲೆ 'ಪುರುಷರು' ಎಂತಲೂ ಬರೆದಿದ್ದರು. ಓದಲು ಬಾರದವರ, ಹೆಬ್ಬೆಟ್ಟಪ್ಪ (ಹೆಬ್ಬೆಟ್ಟಮ್ಮ)ಗಳ ಅನುಕೂಲಕ್ಕಾಗಿ ಬಾಗಿಲ ಮೇಲೆ ಗಂಡಸಿನ, ಹೆಂಗಸಿನ ಚಿತ್ರವನ್ನೂ ಬಿಡಿಸಿದ್ದರು.

'ಪುರುಷರು' ಎಂದಿದ್ದ ಬಾಗಿಲನ್ನು ಪಕ್ಕಕ್ಕೆ ಸರಿಸಿ ಮತ್ತೆರಡು ಹೆಜ್ಜೆ ಮುಂದಿಟ್ಟ ಎಲ್ಲಪ್ಪ. ಅಲ್ಲೊಂದು ವರಾಂಡ. ಪುನಃ ಎರಡು ಬಾಗಿಲು, ಎಡಕ್ಕೊಂದು ಬಲಕ್ಕೊಂದು. ಒಂದರಮೇಲೆ, ಸಣ್ಣವರು, ಇನ್ನೊಂದರ ಮೇಲೆ ಹಿರಿಯರು ಎಂದಿತ್ತು. ತಾನು ಹಿರಿಯ ಅಂದುಕೊಂಡು ಎಲ್ಲಪ್ಪ ಒಳಕ್ಕೆ ಕಾಲಿಟ್ಟ.

ಮತ್ತೆರಡು ದ್ವಾರಗಳು ಹಠಾತ್ತಾಗಿ ಕಣ್ಣಿಗೆ ಬಿದ್ದವು. ಒಂದರ ಮೇಲೆ, ಈ 'ಮೊದಲೇ ಬಂದಿದ್ದವರು, ಎಂದು, ಇನ್ನೊಂದರ ಮೇಲೆ ಮೊದಲ ಬಾರಿಗೆ ಬಂದಿರುವವರು' ಎಂದೂ ಬರೆದಿತ್ತು. ಈ ಭೇದಭಾವ ಯಾಕೆ ಅಂದುಕೊಂಡ ಎಲ್ಲಪ್ಪ.

'ಮೊದಲನೆಯ ಬಾರಿ ಬಂದಿರುವವರು' ಎನ್ನುವ ಕಡೆ ಸರಸರ ನುಗ್ಗಿದ. ಹೊಟ್ಟೆನೋವು ಕ್ರಮೇಣ ಹೆಚ್ಚುತ್ತಲೇ ಇತ್ತು. ಎದುರಿಗೆ ಕಾಣಿಸಿದವನು, ಪಾಚಿಹಲ್ಲು ತೋರಿಸುತ್ತಾ ಹೇಳಿದ, "ಯಜಮಾನ್ರೇ ನೀವು ಕಟ್ಟುವವರಾಗಿದ್ದರೆ ಪ್ಯಾನ್‌ಕಾರ್ಡು ತೋರಿಸಿ, ಇಲ್ಲದಿದ್ದರೆ ಪೆನ್ಷನ್ ಸರ್ಟಿಫಿಕೇಟ್ ತೋರಿಸಿ. ಎರಡೂ ಇಲ್ದಿದ್ರೆ ಇಲ್ಲಿ ಬೆಡ್‌ಪ್ಯಾನ್ ಕೂಡ ಕೊಡಲ್ಲ".



ಹೆಚ್ಚಾಗುತ್ತಿದ್ದ ಅಸಹನೆಯನ್ನು ಹತ್ತಿಕ್ಕಿದ ಎಲ್ಲಪ್ಪ "ಮುವ್ವತ್ತಾರು ವರ್ಷ,

ಮೂಗಿಗೆ ಕವಡೆ ಕಟ್ಟಿಕೊಂಡು ದುಡಿದರೂ ಆದಾಯ ತೆರಿಗೆ ಸಮಸ್ಯೆಗೆ ಸಿಕ್ಕಿಹಾಕಿಕೊಳ್ಳಲಿಲ್ಲ. ಹೀಗಿದ್ದಾಗ ಪ್ಯಾನ್ ಕಾರ್ಡ್ ಎಲ್ಲಿರತ್ತೇ? ಪ್ರೈವೇಟ್ ಕಂಪನಿಯಲ್ಲಿ ಚಾಕರಿ ಬಡಿದಿದ್ದರಿಂದ ಪೆನ್ಷನ್ ಎಲ್ಲಿ ಬರುತ್ತೆ". ಅಂದ ಗಟ್ಟಿಯಾಗೇ ಗೊಣಗಿ.

"ಅಜ್ಜ ನಿಮ್ಮ ಜೀವನ ಚರಿತ್ರೆ ತಿಳಿದುಕೊಂಡು ನನಗೇನಾಗಬೇಕು? ಹೋಗಲಿ ನಿಮಗೆ ಮದುವೆಯಾಗಿದ್ದರೆ ಆ ಬಾಗಿಲಿನ ಮೂಲಕ ಹೋಗಿ, ಇಲ್ಲದೆ ಇದ್ರೆ ಈ ಬಾಗಿಲಿನ ಮೂಲಕ ಹೋಗಿ"

ಧ್ವನಿ ಬಂದ ಕಡೆ ನೋಡಿ, "ಯಾಕಪ್ಪಾ ಇಷ್ಟೆಲ್ಲಾ? ಮದುವೆಯಾಗಿದ್ದರೆ ಏನು, ಆಗದಿದ್ದರೆ ಏನು? ಇದು, ಔಷಧ ಕೊಡೊ ಆಸ್ಪತ್ರೆ ತಾನೇ?" ಅಂದ.

"ನೋಡಿ ಸ್ವಾಮಿ ಅದೆಲ್ಲ ನನಗೊತ್ತಿಲ್ಲ. ನನಗೊಪ್ಪಿಸಿರೋ ಕೆಲ್ಸ ನಾನು ಮಾಡದೇ ಇದ್ರೆ, ನನಗೂ ಪೆನ್ಷನ್ ಇರೊಲ್ಲ, ನಿಮ್ಮ ಹಾಗೆ. ಈಗ ಮುಂದಕ್ಕೆ ಹೋಗಿ"

ಏನು ಇವ್ನು, ಒಳ್ಳೆ ಭಿಕ್ಷುಕರಿಗೆ ಹೇಳೋ ಹಾಗೆ, 'ಮುಂದಕ್ಕೆ ಹೋಗಿ' ಅಂತಾನಲ್ಲ. ಸರಿ ಹೋಗೇಬಿಡೋಣ, ಅಂತ ಎದುರಿಗೆ ಕಾಣಿಸಿದ ಚಿಕ್ಕ ಬಾಗಿಲಿನೊಳಕ್ಕೇ ತೂರಿದ.ಅದು ಆಸ್ಪತ್ರೆ ನೌಕರ ತೋರಿಸಿದ ಬಾಗಿಲು ಆಗಿರಲಿಲ್ಲ!

ಎಲ್ಲಪ್ಪ ಇದಕ್ಕಿದ್ದ ಹಾಗೆ ಉದ್ದಕ್ಕೆ ಗವಿಯಂತಹ ಓಣಿಯೊಳಕ್ಕೆ ಕಾಲಿಟ್ಟ. ಸ್ವಲ್ಪದೂರ ಕತ್ತಲಲ್ಲಿ ಹೆಜ್ಜೆಯಿಟ್ಟ ನಂತರ ಜರ್‍ರಂತ ಜಾರುತ್ತಾ ಮುಂದೆ ಸಾಗಿ ಒಂದು ನಿಮಿಷ ಕತ್ತಲು ಕಳೆದು ಬೆಳಕು ಬಂತು. ಧಪ್ಪಂತು ಕುಕ್ಕರಿಸಿ, ಸಾವರಿಸಿಕೊಂಡು ಎದ್ದು ನಿಂತ. ಈ ಓಣಿ, ವೈದ್ಯರು ಬಳಸಿ ಎಸೆದ ಕಸವನ್ನು ಸಾಗಿಸುವ ದಾರಿ, ಅಂತ ತಿಳಿಯಿತು.

ಪಿಳಿಪಿಳಿ ಅಂತ ಎರಡೂ ಕಡೆ ನೋಡಿದ. ಒಂದು ಕಡೆ 'ಹೊರಕ್ಕೆ ದಾರಿ' ಅನ್ನುವ ಬೋರ್ಡು, ದಿಕ್ಸೂಚಿ, ಇನ್ನೊಂದು ಕಡೆ 'ಶವಾಗಾರಕ್ಕೆ' ಅನ್ನುವ ಬೋರ್ಡು ಕಾಣಿಸಿತು.

ಸದ್ಯಕ್ಕೆ ಹೊರಕ್ಕೆ ಹೋಗುವುದೇ ಲೇಸು ಎಂದುಕೊಂಡ ಎಲ್ಲಪ್ಪ ಇಲ್ಲಿರುವುದು ಮಾತ್ರ ಬೇಡಪ್ಪ ಎಂದುಕೊಂಡು ಹೊರಬಿದ್ದ. ಹೊಟ್ಟೆನೋವು ಇದ್ದಕ್ಕಿದ್ದಂತೆ ಮಾಯ ಆಗಿತ್ತು. ಉಚಿತ ವೈದ್ಯಕೀಯ ಸೇವಾ ಕ್ಷೇತ್ರದಿಂದ ಹೊರಬಂದಾಗ ಎಲ್ಲಪ್ಪ ನೇರವಾಗಿ ಮನೆಯ ಕಡೆ ಹೆಜ್ಜೆ ಹಾಕಿದ. ■



# ಪರಿಹಾರವೇ ಸಮಸ್ಯೆಯಾದಾಗ

ಜಿ.ವಿ. ಅರುಣ

ಪ್ರಪಂಚದಲ್ಲಿ ಅತ್ಯದ್ಭುತಘಟನೆಯೊಂದು ಅಂದು ಬೆಳಿಗ್ಗೆ ಘಟಿಸಿತ್ತು. ಲೇಟಪ್ಪ ಬೆಳಗ್ಗೆ ಅಷ್ಟು ಹೊತ್ತಿಗೆ ಫೋನ್ ಮಾಡಿದ್ದ. ಅದು ಮೊದಲನೆಯ ಸರ್‌ಪ್ರೈಸ್. ಅವನ ಕಡೆಯಿಂದ ಜನರು ಮಾತನಾಡುತ್ತಿರುವ ಧ್ವನಿ ಕೇಳಿಸುತ್ತಿತ್ತು. ಅಂದರೆ ಅವನು ಮನೆಯಲ್ಲಿ ಇಲ್ಲ, ಎಲ್ಲೋ ಹೊರಗಡೆ ಇರುವುದು ಸ್ಪಷ್ಟವಾಗಿತ್ತು. ಬೆಳಗ್ಗೆ ಬೇಗ ಎದ್ದಿರುವುದಲ್ಲದೆ, ಮನೆಯ ಹೊರಗೆ ಬಂದು ಫೋನ್ ಮಾಡುತ್ತಿರುವುದು ಇದೇ ಮೊದಲನೆಯ ಬಾರಿ ಇರಬೇಕು! ಹಾಗಾಗಿ ಅದು ಎರಡನೆಯ ಅದ್ಭುತ ಘಟನೆ ಎನ್ನಿಸಿತು.

"ನಿಜವಾಗಲೂ ಇದು ನೀನೇನಾ?" ಲೇಟಪ್ಪನನ್ನು ಕೇಳಿದೆ.

"ಹೌದಪ್ಪಾ, ಆಶ್ಚರ್ಯ ಪಡಬೇಡ. ನಾನೇ ಫೋನ್ ಮಾಡಿರೋದು. ಅಂಥ ಪರಿಸ್ಥಿತಿ ಬಂದು ಬಿಟ್ಟಿದೆ" ಎಂದ ಅವನ ಆತಂಕದ ಧ್ವನಿಯನ್ನು ಕೇಳಿ ನನಗೂ ಬಹಳ ಗಾಬರಿಯಾಗಿತ್ತು.

"ಹುಷಾರಾಗಿದಿಯಾ ತಾನೇ. ಕೊರೋನ ಏನಾದ್ರೂ...?" ಆತಂಕದಿಂದ ವಿಚಾರಿಸಿದೆ.

"ಇಲ್ಲಪ್ಪ, ಅಂತದೇನು ಇಲ್ಲ. ನಾವೆಲ್ಲರೂ ಆರೋಗ್ಯವಾಗಿದೀವಿ. ಆದರೆ ನನ್ನ ಹಣ ಉಳಿಸಲು, ನನ್ನ ಮಗನನ್ನು ಉಳಿಸಲು ನಿನ್ನ ಸಹಾಯ ಬೇಕಾಗಿತ್ತು" ಎಂದ.

ಅಮೆರಿಕಾದಲ್ಲಿದ್ದ ಅವನ ಮಗ ಏನಾದರುಎಡವಟ್ಟು ಮಾಡಿಕೊಂಡನಾ? ಅಂತ ನನಗೆ ಮಾತೆ ಹೊರಡಲಿಲ್ಲ. ಸಾವರಿಸಿಕೊಂಡು, "ಯಾಕೆ? ಅಲ್ಲಿ ಏನು ಮಾಡಿಕೊಂಡ?" ಎಂದು ಉಗುಳು ನುಂಗುತ್ತಾ ಕೇಳಿದೆ.

"ಅಯ್ಯೋ ಅಂತದೇನು ಇಲ್ಲ. ಅಲ್ಲಿ ಏನೂ ತೊಂದರೆ ಇಲ್ಲ. ಎಲ್ಲಾ ಇಲ್ಲೇ, ನನ್ನ ಮನೆಯಲ್ಲೇ. ಸ್ವಲ್ಪ ನಿಮ್ಮ ಮನೆ ಹತ್ತಿರ ಇರೋ ಉದ್ಯಾನಕ್ಕೆ ಬರ್ತೀಯಾ? ಎಲ್ಲ ಇಲ್ಲೇ ಹೇಳ್ತೀನಿ" ಎಂದ.

ಸ್ವಲ್ಪ ನಿರಾಳವಾಯಿತು. ತಕ್ಷಣ ಎದ್ದು ತಯಾರಾಗಿ, "ಈಗ ಬಂದೆ ಕಣೇ. ಪಾರ್ಕ್‌ಲ್ಲಿ ಒಂದು ರೌಂಡ್ ಹಾಕೊಂಡು ಬರ್ತೀನಿ" ಎಂದು ನನ್ನವಳ ಉತ್ತರಕ್ಕೂ ಕಾಯದೆ ಉದ್ಯಾನಕ್ಕೆ ಓಡಿದೆ.

ಪಾರ್ಕಿನ ಮುಖ್ಯ ದ್ವಾರದ ಎಡಗಡೆ ಇದ್ದ ಕಲ್ಲು ಬೆಂಚಿನ ಮೇಲೆ ಪೆಚ್ಚು ಮೋರೆ ಹಾಕಿಕೊಂಡು ಲೇಟಪ್ಪ ಕುಳಿತಿದ್ದ. ಏನೇ ಆದರೂ ಮೀಸೆ ಮಣ್ಣಾಗಲಿಲ್ಲ ಎನ್ನುವ ಮುಖದಲ್ಲಿ ಮೊದಲ ಬಾರಿ ಈ ರೀತಿಯ ರೂಪ ನೋಡಿ ನನಗೆ ಖೇದವಾಗಿದ್ದು ಸಹಜ.

"ಬಾ ಕೂತ್ಕೋ " ಎಂದು ತನ್ನ ಬಲಗೈಯನ್ನು ಕಲ್ಲು ಬೆಂಚಿನ ಮೇಲೆ ತಟ್ಟಿದ.

"ಏನಪ್ಪಾ ಇದು? ನಿನ್ನ ಮುಖ ನೋಡೋಕೆ ಆಗ್ತಾ ಇಲ್ವಲ್ಲ" ಅಂದೆ.



"ಹೇಳ್ತೀನಿ ಕೇಳು; ನನ್ನ ಮಗ ಅಮೆರಿಕದಲ್ಲಿ ಓದಿ ಕೆಲಸಕ್ಕೆ ಸೇರಿದ್ದನಲ್ಲ, ಅದು ಮೂರು ತಿಂಗಳ ಹಿಂದೆ ಹೋಯಿತು. ಬೇರೆ ಕೆಲಸ ಈ ಕೊರೋನ ಸಮಯದಲ್ಲಿ ಎಲ್ಲೂ ಸಿಗುತ್ತಾ ಇಲ್ಲ. ಇಲ್ಲೂ ಕೆಲವು ಕಡೆ ಹಾಕಿದ್ದ. ಒಂದಿಬ್ಬರು ಅಲ್ಲಿ ಸದ್ಯಕ್ಕೆ

ಯಾವುದೇ ಕೆಲಸ ಇಲ್ಲ, ಇಲ್ಲಿಗೆ ಬಂದರೆ ಸಂಪರ್ಕ ಮಾಡು ಅಂತ ಈ ಮೇಲ್ ಕಳಿಸಿದಾರಂತೆ."

"ಅವನು ಒಳ್ಳೆಯ ಹುಡುಗ, ಸ್ವಲ್ಪ ತಾಳ್ಮೆಯಿಂದ ಇರು ಅಲ್ಲೇ ಸಿಕ್ಕಬಹುದು" ಎಂದೆ.

"ಹೌದಪ್ಪ. ಆದರೆ ಅವನ ಜೊತೆ ಮನೆ ಮಾಡಿಕೊಂಡಿದ್ದ ಇನ್ನಿಬ್ಬರಲ್ಲಿ ಒಬ್ಬನಿಗೆ ಬೇರೆ ಊರಲ್ಲಿ ಕೆಲಸ ಸಿಕ್ಕಿದೆ. ಮುಂದಿನ ವಾರ ಅವನ ಅಲ್ಲಿಗೆ ಹೋಗ್ತಾ ಇದ್ದಾನೆ. ಇನ್ನೊಬ್ಬನ ಕೆಲಸವೂ ಹೋಗಿದೆ. ಅವನು ಇನ್ನು ಹದಿನೈದು ದಿನದಲ್ಲಿ ಕೆಲಸ ಸಿಕ್ಕದೆ ಇದ್ದರೆ, ಪೂನಾಗೆ ಹಿಂದಕ್ಕೆ ಹೋಗ್ತೀನಿ ಅಂತ ಹೇಳಿದಾನಂತೆ."

"ಹೋಗ್ಲಿ ಬಿಡು, ನಿನ್ನ ಮಗ ಇನ್ನೊಂದೆರಡು ತಿಂಗಳು ಅಲ್ಲೇಇದ್ದು ಕೆಲಸ ಹುಡುಕಲಿ"

"ಅವನು ಅಲ್ಲೇ ಇದ್ದರೆ ಮೂರು ಜನರ ಮನೆ ಬಾಡಿಗೆ ಇವನೇ ಕೊಡಬೇಕು. ಬೇರೆ ಮನೆಗೆ ಇವನು ಹೋಗಬಹುದು, ಆದರೆ ನನ್ನ ಹೆಂಡ್ತಿ ಒಪ್ಪುತ್ತಾ ಇಲ್ಲ!"

ನನಗೆ ನಗು ಬಂತು. "ಅಲ್ಲಪ್ಪ ನಿನ್ನ ಹೆಂಡ್ತಿ ಇಲ್ಲೇ ಇದ್ದಾಳೆ. ಅವನು ಅಲ್ಲಿ ಮನೆ ಬದಲಾಯಿಸಲು ಏನು ತೊಂದರೆ?"

"ಅದಕ್ಕೆ ಸಲಹೆ ಕೇಳಲು ನಿನ್ನ ಕರೆದದ್ದು" ಎಂದ.

"ಅದೇನು ಹೇಳಪ್ಪ" ಎಂದು ಅವನ ಮಾತುಗಳನ್ನು ಕೇಳತೊಡಗಿದೆ.

"ನಿನಗೆ ಗೊತ್ತಲ್ಲ, ನನ್ನ ಮಗನಿಗೆ ಇವಳ ಅಣ್ಣನ ಮಗಳನ್ನು ತಂದುಕೋ ಬೇಕು ಅಂತ ಹಿಂದೆಯೇ ಮಾತು ಕತೆಯಾಗಿತ್ತು. ಹುಡುಗ ಹುಡುಗಿಯರು ಒಪ್ಪಿದ್ದರು. ಓದಿ, ಕೆಲಸಕ್ಕೆ ಸೇರಿದ ಮೇಲೆ ಮದುವೆಅಂತ ನಿಶ್ಚಯವಾಗಿತ್ತು "

"ಹೌದು, ಅದು ಗೊತ್ತು"

ಅವನು ವಿವರವಾಗಿ ಹೇಳಿದ ಸಮಾಚಾರದ ಸಾರಾಂಶ ಇಷ್ಟು: ಲೇಟಪ್ಪನ ಹೆಂಡತಿಯು ಮಗನಿಗೆ ಮದುವೆ ಮಾಡಿ, ಸೊಸೆ, ಅವಳ ತಂದೆ ತಾಯಿಯರು, ಅತ್ತೆ ಮಾವನವರ ಜೊತೆಯಾಗಿ ಅಮೆರಿಕಾಗೆ ಪ್ರಯಾಣ ಮಾಡುವುದಾಗಿ ನಿಶ್ಚಯಿಸಿಕೊಂಡಿದ್ದಳು. ಅದನ್ನು ತನ್ನ ಸ್ನೇಹಿತೆಯರು, ನೆಂಟರಿಷ್ಟರೆಲ್ಲರ ಬಳಿ ಹೇಳಿಕೊಂಡು ಬಂದಿದ್ದಳು. ಹಾಗಾಗಿ ಮಗ ಒಬ್ಬನೇ ಕೆಲಸವಿಲ್ಲದಿದ್ದರೂ ದೊಡ್ಡ ಮನೆಯಲ್ಲೇ ಇರುವಂತೆ ಒತ್ತಾಯಿಸುತ್ತಿದ್ದಳು. ಅದರ ಖರ್ಚನ್ನು ಗಂಡನೇ ವಹಿಸಿಕೊಳ್ಳುವಂತೆ ಆಗ್ರಹಿಸಿದ್ದಳು. ಈ ಹುಚ್ಚು ಯೋಚನೆ ಅವರ ಮಗನಿಗೆ ಇಷ್ಟವಾಗಿರಲಿಲ್ಲ. ಅಲ್ಲೇ ಕೆಲಸ ಸಿಕ್ಕುವುದು ಕಷ್ಟವಾದುದರಿಂದ, ಭಾರತಕ್ಕೆ ಬಂದು ಕೆಲಸ ಹುಡುಕುವ ಇರಾದೆ ಅವನದು. ಈ ಯೋಜನೆಗೆ ಹೆಂಡತಿ ಒಪ್ಪಿರಲಿಲ್ಲ. ಎಲ್ಲರೂ ಅಮೆರಿಕಕ್ಕೆ ಒಟ್ಟಿಗೆ ಹೋಗಿ ಸೊಸೆಯನ್ನು ಅಲ್ಲಿ ಮನೆ ತುಂಬಿಸಿಕೊಳ್ಳುವ ಅವಳ ಆಲೋಚನೆಯಿಂದ ಉಬ್ಬಿದ್ದ ಬೆಲೂನಿಗೆ ಮುಳ್ಳನ್ನು ಚುಚ್ಚಿಸಿಕೊಳ್ಳಲು ಆಕೆ ತಯಾರಿರಲಿಲ್ಲ. ಇದೇ ಸಮಸ್ಯೆ!



'ಹಾಗಾಗಿ ಏನಾದರೂ ಪರಿಹಾರ ಹುಡುಕಬೇಕು' ಎಂದು ಲೇಟಪ್ಪ ಬೇಡಿಕೊಂಡ. ಅವನ ಸೊಸೆಯಾಗುವ ಹುಡುಗಿ, ಅವಳ ಅಪ್ಪ–ಅಮ್ಮಂದಿರು ಪರಿಚಯ ನನಗೆ ಬಹಳ ಚೆನ್ನಾಗಿತ್ತು. ನಾನು ಹುಡುಗಿ ಗ್ರಾಜುಯೇಟ್ ಆದದ್ದಕ್ಕೆ ಅವಳಿಗೆ ಶುಭಾಶಯ ಕೋರುವ ನೆಪದಲ್ಲಿ ಅವರ ಮನೆಗೆ ಹೋದೆ. ಹುಡುಗಿಗೆ

ಅಮೆರಿಕಾದ ಜನ ಸಾಮಾನ್ಯರು ಕೊರೋನಾಗೆ ಯಾವುದೇ ಎಚ್ಚರಿಕೆಯನ್ನು ವಹಿಸದಿರುವ ವಿಚಾರ, ಅವಳು ಅಲ್ಲಿ ಕಡೆಯ ಪಕ್ಷ ಇನ್ನೂ ಎರಡು ವರ್ಷಓದದೆ ಕೆಲಸ ಸಿಕ್ಕುವುದಿಲ್ಲ ಎಂಬ ವಿಚಾರ, ಮದುವೆಯ ಖರ್ಚಲ್ಲದೆ ಈಗ ಬೇಡದ ನಾಲ್ಕು ಜನರ ಅಮೆರಿಕ ಪ್ರಯಾಣದ ಖರ್ಚು, ನೀವಿಬ್ಬರು ಅಲ್ಲಿದ್ದರೆ ಇಲ್ಲಿನವರಿಗೆ ನೀವು ಕೊರೋನ ಸಮಯದಲ್ಲಿ ಹೇಗಿರುವಿರೋ ಎಂಬ ಆತಂಕ, ಹಾಗೆಯೇ ನಿಮ್ಮಿಬ್ಬರಿಗೂ ಇಲ್ಲಿರುವವರು ಹೇಗಿದ್ದಾರೆ ಎಂಬ ಆತಂಕ  ಇತ್ಯಾದಿ ಇತ್ಯಾದಿ ವಿಚಾರಗಳನ್ನು ಎಳೆ ಎಳೆಯಾಗಿ ಎಳೆದು ತಿಳಿಸಿದೆ. ಕೊನೆಗೆ ಅವಳೇ 'ಇವೆಲ್ಲಕ್ಕೂ ಒಂದೇ ಪರಿಹಾರ ಅಂದರೆ ತನ್ನನ್ನು ಮದುವೆಯಾಗುವ ಗಂಡು ಅಮೆರಿಕ ಬಿಟ್ಟು, ಭಾರತಕ್ಕೆ ಬಂದು, ಕೆಲಸಕ್ಕೆ ಸೇರಿ, ಮದುವೆ ಮಾಡಿಕೊಂಡು ಇಲ್ಲೇ ಇರುವುದು' ಎಂಬುದನ್ನು ಸ್ಪಷ್ಟವಾಗಿ ತಿಳಿಸುವಂತೆ ಮಾಡಿದೆ. "ಹಾಗಾಗುವುದಿದ್ದರೆ ಮಾತ್ರ ಮದುವೆ" ಎಂದು ಹುಡುಗಿ ಹಠ ಹಿಡಿದಾಗ ಇಲ್ಲಿರುವವರೆಲ್ಲ ಒಪ್ಪಿದರು. ಲೇಟಪ್ಪನ ಹೆಂಡತಿಗೂ ತವರು ಮನೆಯ ವ್ಯಾಮೋಹ ಒಪ್ಪಿಸಿಬಿಟ್ಟಿತು.

ಲೇಟಪ್ಪ ಮತ್ತೆ ಭೇಟಿಯಾಗಿ ನನ್ನನ್ನು ಅಪ್ಪಿಕೊಂಡು "ನೀನೊಬ್ಬ ಜೀನಿಯಸ್! ಎಲ್ಲಾ ಸಮಸ್ಯೆಗಳಿಗೂ ನಿನ್ನಲ್ಲಿ ಸುಲಭೋಪಾಯ ಇರುತ್ತೆ" ಎಂದು ಹೊಗಳಿದ್ದ.

ಒಂದು ವಾರದ ಅನಂತರ ಕರೆ ಮಾಡಿ ಮತ್ತೆ ಉದ್ಯಾನಕ್ಕೆ ಬರಲು ಲೇಟಪ್ಪ ಹೇಳಿದ. ನಾನು ಅಲ್ಲಿಗೆ ಹೋದೆ.

"ಈಗ ಇನ್ನೊಂದು ಹೊಸ ಸಮಸ್ಯೆ ಬಂದಿದೆ" ಎಂದ.

"ನಾನು ಅದೇನು ಬಿಡಿಸಿ ಹೇಳಪ್ಪ, ಪರಿಹಾರವಿಲ್ಲದ ಸಮಸ್ಯೆ ನನ್ನ ಎದುರು ಇದುವರೆಗೆ ಬಂದಿಲ್ಲ" ಎಂದು ಕೊಚ್ಚಿಕೊಂಡೆ.

"ಮಗನಿಗೆ ಸರ್‌ಪ್ರೈಸ್ ಕೊಡೋಣ ಅಂತ, 'ಅವನು ಇಲ್ಲಿಗೆ ಹಿಂದಿರುಗಿ ಕೆಲಸ ಹುಡುಕಿ ಮದುವೆಯಾಗುವ ವಿಚಾರಕ್ಕೆ ನಮ್ಮೆಲ್ಲರ ಒಪ್ಪಿಗೆ ಇದೆ' ಎನ್ನುವುದನ್ನು ಅವನಿಗೆ ಯಾರು ಹೇಳಿರಲಿಲ್ಲ. ಆದರೆ ನಿನ್ನೆರಾತ್ರಿ ಅವನು ಫೋನ್ ಮಾಡಿ ಖುಷಿಯಾಗಿ ಮಾತನಾಡಿದ. ಅವನಿಗೆ ಅಲ್ಲೇ ಯಾವುದೋ ಅಂತರರಾಷ್ಟ್ರೀಯ ಕಂಪನಿಯಲ್ಲಿ ಕೆಲಸ ಸಿಕ್ಕಿದೆ. 'ಅದಕ್ಕೆ ಬೇಕಾದಕಾಗದ ಪತ್ರಗಳನ್ನು ಇಷ್ಟರಲ್ಲೇ ಕಳಿಸ್ತೀವಿ ಮೂವತ್ತು ದಿನಗಳಲ್ಲಿ ಭಾರತಕ್ಕೆ ಹೋಗಿ, ವೀಸಾ ಸ್ಟ್ಯಾಂಪಿಂಗ್ ಮಾಡಿಸಿಕೊಂಡು ಬಂದು ಸೇರಿಕೊಂಡು ಬಿಡು. ನಿನಗೆ ಬೇರೆ ದೇಶಗಳಿಗೆ ಪ್ರಯಾಣವು ಇರುವುದರಿಂದ ವೀಸಾ ಸ್ಟ್ಯಾಂಪಿಂಗ್ ಅತ್ಯಗತ್ಯ' ಎಂದು ಹೇಳಿದ್ದಾರೆ ಎಂದು ತಿಳಿಸಿದ. 'ಇನ್ನೊಂದು ತಿಂಗಳಲ್ಲಿ ಬಂದು ಮದುವೆ ಮಾಡಿಕೊಂಡು ಹೋಗ್ತೀನಿ' ಅಂತ ಹೇಳಿದ" ಎಂದು ಪೆಚ್ಚುಮೋರೆ ಹಾಕಿಕೊಂಡು ಹೇಳಿದ.

ಈ ಸಮಸ್ಯೆಗೆ ನನ್ನ ಬಳಿ ಪರಿಹಾರಇಲ್ಲ. ನಾನು ಮಾತನಾಡುವ ಹಾಗೂ ಇಲ್ಲ. ನಿಮಗೇನಾದರೂ ಪರಿಹಾರ ಹೊಳೆದರೆ ದಯವಿಟ್ಟು ತಿಳಿಸಿ, ನಿಮಗೆ ಲೇಟಪ್ಪನ ಮೊಬೈಲ್ ಸಂಖ್ಯೆ ತಿಳಿಸ್ತೀನಿ.

ಹೆಂಗಸರು ಗಂಡಸರಿಗೆ ತಾಳಿ ಕಟ್ಟುವ ದಿನವೂ ಬರಬಹುದೆ?
ಸಾಧ್ಯವಿಲ್ಲ. ಪ್ರಾಣಿಗಳಿಗೆ ಯಾರೂ ತಾಳಿ ಕಟ್ಟುವುದಿಲ್ಲ,
ಮೂಗುದಾರ ತೊಡಿಸುತ್ತಾರಷ್ಟೆ! **–ರಾಮ್‌ಬಾಣ**



# “ಬದಲಾ(ಗ)ದ ಭಾಗ್ಯ!”

ಗಣೇಶ ಎಸ್. ಹೆಗಡೆ, ಶಿರಸಿ

“ಹೋಯ್........ನೀರು ಕಾಲೀ ಆಯ್ತು, ಪನ್ನೇಶನ್ನ ಬೇಗ ಕೆಳಗೆ ಕಳಿಸಿ ಓನರ್ ಹತ್ರ ನೀರಿನ ಪಂಪ್ ಆನ್ ಮಾಡಲು ಹೇಳು”. ಸ್ನಾನಕ್ಕಿಳಿದಿದ್ದ ಬೋಳೇಶ, ಹೆಂಡತಿಗೆ ಕೂಗಿ ಹೇಳಿದ. ತುಂಬಾ ಹೊತ್ತಾದರೂ ನೀರು ಬಾರದಿದ್ದರಿಂದ ಮತ್ತೆ ಕೂಗಿದ– “ಅರೇ, ನಾನು ಕೂಗಿದ್ದು ಕೇಳಲಿಲ್ವೇ? ಇನ್ನೂ ನೀರು ಬರ್ತಾ ಇಲ್ಲಾ, ಬೇಗ ಪುಟ್ಟನ್ನ ಕೆಳಗೆ ಓನರ್ ಹತ್ತಿರ ಕಳಿಸು”. “ಪುಟ್ಟ (ಪನ್ನೇಶ) ಆಗಲೇ ಕೆಳಗೆ ಹೋಗಿ ಓನರ್‌ಗೆ ಹೇಳಿ ಪಂಪ್ ಸ್ವಿಚ್ ಹಾಕಿಸಿದ್ದೂ ಆತು, ಇನ್ನೂ ನೀರು ಬರಲಿಲ್ವೇ?” ಆಶ್ಚರ್ಯದಿಂದ ಕೇಳಿದಳು ಬೋಳೇಶನ ಹೆಂಡತಿ. ಹದಿನೈದು ನಿಮಿಷದ ಅನಂತರ ನಲ್ಲಿಯಲ್ಲಿ ಕಡ್ಡಿಯ ಹಾಗೆ ನೀರು ಜಿನುಗಲು ಹಿಡಿಯಿತು. ಗೀಸರ್‌ದಲ್ಲಂತೂ ನೀರಿನ ಸುಳಿವೇ ಇರಲಿಲ್ಲ. ಅದರಲ್ಲೂ ಅಂದು ಬೇಗ ಕೆಲಸಕ್ಕೆ ತೆರಳಬೇಕಿದ್ದ ಬೋಳೇಶ ಬಕೇಟಿನಲ್ಲಿ ಇದ್ದಬದ್ದ ತಣ್ಣೀರಿನಲ್ಲಿ ಹೇಗೋ ಸ್ನಾನದ ಶಾಸ್ತ್ರ ಮುಗಿಸಿ ಬೈದುಕೊಳ್ತಾ ಹೊರಬಂದ. ಎಲ್ಲರೂ ಗಡಿಬಿಡಿಯಲ್ಲಿ ತಮ್ಮ ತಮ್ಮ ಕೆಲಸಗಳಿಗೆ ತೆರಳಿದರು.

ಮರುದಿನ ಪನ್ನೇಶ ತನ್ನ ಕೂದಲು ಕತ್ತರಿಸಿಕೊಂಡು ಬಂದು ಎಲ್ಲರಿಗಿಂತಲೂ ಕಡೇಯದಾಗಿ ಸ್ನಾನಕ್ಕಿಳಿದಿದ್ದ, ಮತ್ತೆ ನೀರು ಖಾಲಿ! ತಣ್ಣೀರು ಕಡ್ಡಿಯ ಹಾಗೆ ಬಂದರೂ, ಮತ್ತೆ ಗೀಸರಿನ ನೀರಂತೂ ಪೂರ್ತಿ ಖಾಲಿ ಆಗಿತ್ತು. ಆತನ ಶಾಲೆಗೆ ಬೇರೆ ತಡವಾಗಿತ್ತು. ಓನರ್ ಹತ್ರ ಹೇಳಿ ಪಂಪನ್ನು ಚಾಲೂ ಮಾಡಿಸಿದ್ದಾಯ್ತು. ಓನರ್– ‘ಜುಗ್ಗೂರಾಯರ’ ಹೆಸರು ಅನ್ವರ್ಥನಾಮವೇ ಆಗಿತ್ತು! ನಿವೃತ್ತ ನೌಕರರಾಗಿದ್ದ ಅವರಿಗೆ ಸದಾ ಹಣ ಉಳಿಸುವ ಹೊಸ ಹೊಸ ಮಾರ್ಗಗಳನ್ನು ಅನ್ವೇಶಿಸುವುದೇ ದೈನಂದಿನದ ಕಾಯಕವಾಗಿರುತ್ತಿತ್ತು, ಅದಕ್ಕೆ ಅವರ ಹೆಂಡತಿ ‘ಮಹಾಲಕ್ಷ್ಮಿ’ಯ ಸಾತ್ ಬೇರೆ ಇರುತ್ತಿತ್ತು. ಮನೆಯ ಮಹಡಿಯಲ್ಲಿ ಬಾಡಿಗೆಗಿದ್ದ ಬೋಳೇಶನ ಹೆಂಡತಿಯ ಬಳಿ ಓನರತಿ– ಮಹಾಲಕ್ಷ್ಮಿಯವರು ವಾರಕ್ಕೆ ಎರಡು ಬಾರಿಯಾದರೂ “ಅಯ್ಯೋ ಇವತ್ತು ಆಟೋಗೆ 50 ರೂಪಾಯಿ ಕೊಟ್ಟೆ ರೀ” ಅಥವಾ “ತರಕಾರಿಯವರು ಏನು ಕಾಸ್ಟ್ಲೀ ಆಗಿದ್ದಾರ್ರೀ” ಎಂದು ತೀವ್ರ ಬೇಸರದಿಂದ ಬಾಯಿಸೆಳೆಯುತ್ತಿದ್ದರು! ಪನ್ನೇಶ ಬಚ್ಚಲ ಮನೆಯಿಂದಲೇ ಮತ್ತೆ ಅಮ್ಮನಿಗೆ ಕೂಗಿದ. ಬೋಳೇಶನ ಹೆಂಡತಿ ಬಯ್ದುಕೊಳ್ತಾ ಮತ್ತೆ ಕೆಳಗೆ ಓಡಿದಳು. ಅಲ್ಲಿ ನೋಡ್ತಾಳೇ– ಜುಗ್ಗೂರಾಯರು, ಪಂಪ್ ಆನ್ ಮಾಡಿದ್ದೇನೋ ಸರಿ, ಅದೇ ಸಮಯದಲ್ಲಿ ತಮ್ಮ ಗಾರ್ಡನ್ ಪೈಪ್ ಹಿಡಿದು ಗಿಡಗಳಿಗೆ ನೀರು ಹಾಕ್ತಾ ಇದ್ರು. ಪಂಪನ್ನು ಪದೇ ಪದೇ ಚಾಲೂ ಮಾಡಿದರೆ ಕರೆಂಟು ವೇಸ್ಟ್ ಆಗುತ್ತದೆಂಬುದು–ಜುಗ್ಗೂರಾಯರ ಫಿಲಾಸಪಿ! ಬೋಳೇಶನ ಹೆಂಡತಿ– ಬಚ್ಚಲಿಳಿದ ಪನ್ನೇಶನ ಸ್ಥಿತಿ ವಿವರಿಸಿ, ಜುಗ್ಗೂರಾಯರ ನೀರಾವರಿಯನ್ನು ತಾತ್ಕಾಲಿಕವಾಗಿ ಬಂದ್ ಮಾಡಿಸುವಷ್ಟರಲ್ಲಿ ಹೈರಾಣಾದಳು. ಆ ದಿನ ಪನ್ನೇಶನ ಶಾಲಾಬಸ್ ತಪ್ಪಿಹೋಯ್ತು, ‘ಶಿರ್ಸಿ’ ಪೇಟೆಯ ಹೊರವಲಯದ ಎಂಟು ಕಿಲೋಮೀಟರ್ ದೂರದ ಶಾಲೆಗೆ ಬೋಳೇಶನೇ ಕಾರಲ್ಲಿ ಬಿಟ್ಟುಬರಬೇಕಾಯ್ತು.



ಸುಮಾರು 4–5 ವರ್ಷಗಳಿಂದ ಬಾಡಿಗೆಗಿದ್ದರೂ ನೀರಿಗೆ ಇಂಥಹ ಸಮಸ್ಯೆ ಬಂದಿರಲಿಲ್ಲ. ಗದ್ದೆ ಜಾಗದಲ್ಲಿನ ಮನೆಯಾದ್ದರಿಂದ ನೀರಿಗೆ ಕೊರತೆಯೂ ಇರಲಿಲ್ಲ. ಕಾರಣವೇನೆಂದು ವಿಚಾರಿಸಿದಾಗ ತಿಳಿದದ್ದು– ಜುಗ್ಗುರಾಯರು ಹೆಚ್ಚುತ್ತಿರುವ ಕರೆಂಟು ಬಿಲ್ಲಿನ ಹಿಂದೆ ಬಿದ್ದಿದ್ದರು! ಅಲ್ಲಿಯವರೆಗೆ ಪಂಪ್ ಚಾಲೂ ಹಾಗೂ ಬಂದ್

ಮಾಡಲ್ ಸೆನ್ಸರ್ ಅಳವಡಿಸಿದ್ದರು, ಟಾರಸಿಮೇಲಿದ್ದ ನೀರಿನ ಟಾಕಿಯಲ್ಲಿ ಒಂದು ಕನಿಷ್ಠ ಪ್ರಮಾಣದ ನೀರು ಸದಾ ಇರುವಂತೆ ಹಾಗೂ ಅದಕ್ಕಿಂತ ಕೆಳಗಿಳಿದಾಗ ತಾನಾಗಿಯೇ ಪಂಪ್ ಚಾಲೂ ಆಗುತ್ತಿತ್ತು. ಇದು ಈಗ ಎಲ್ಲ ಕಡೆಯೂ ಸಾಮಾನ್ಯವಾಗಿರುವ ಉಪಕರಣ. ಆದರೆ ಆ ಸೆನ್ಸರ್‌ನ ಬೋರ್ಡ್ ಮೇಲೆ ನೀರಿನಮಟ್ಟವನ್ನು ಸೂಚಿಸುವ ಒಂದರೆಡು ಹಸಿರು–ಕೆಂಪು ಬಣ್ಣದ ನೀರಿನ ಮಟ್ಟ ಸೂಚಿಸುವ ಎಲ್.ಇ.ಡಿ.ಗಳು ಹತ್ತಿರುತ್ತಿದ್ದವು. ತಮ್ಮ ಮನೆಯ ಧನಲಕ್ಷ್ಮಿಯ ಉಳಿತಾಯದ ಚಿಂತೆ/ಚಿಂತನೆಯಲ್ಲೇ ಇರುತ್ತಿದ್ದ ಜುಗ್ಗೂರಾಯರ ಕಣ್ಣಿಗೆ ಸದಾ ಹತ್ತಿಕೊಂಡೇ ಇರುತ್ತಿದ್ದ ಈ ಎಲ್.ಇ.ಡಿ.ಗಳು ಕಣ್ಣಿಗೆ ಬಿದ್ದವು. ಈ ಸೆನ್ಸರ್‌ದಿಂದಾಗಿಯೇ ತನ್ನ ಕರೆಂಟು ಬಿಲ್ಲು ಹೆಚ್ಚಾಗುತ್ತಿದೆ, ಜೊತೆಗೆ ಇದು ಪದೇ ಪದೇ ಪಂಪನ್ನು ಚಾಲೂ ಮಾಡಿಸುವುದೂ ಇದರ ಮತ್ತೊಂದು ಸಮಸ್ಯೆ ಎಂಬ ತೀರ್ಮಾನಕ್ಕೆ ಬಂದ ಜುಗ್ಗೂರಾಯರು ಮರುದಿನದಿಂದಲೇ ಸೆನ್ಸರ್‌ಅನ್ನು ಬಂದ್ ಮಾಡಿಟ್ಟರು! ತಾವೇ ಪಂಪ್ ಚಾಲೂ–ಬಂದ್ ಮಾಡುವ ಕೆಲಸ ರೂಢಿಸಿಕೊಂಡರು. ಆದರೆ ಟಾಕಿಯಲ್ಲಿ ನೀರಿನ ಕನಿಷ್ಠಮಟ್ಟವನ್ನು ಸದಾ ಕಾದುಕೊಳ್ಳುವುದು ಅವರಿಗೆ ಸಾಧ್ಯವಾಗಲಿಲ್ಲ, (ಪದೇ ಪದೇ ಪಂಪ್ ಸ್ವಿಚ್ ಹಾಕಿದರೂ ಕರೆಂಟು ಜಾಸ್ತಿ ಬೇಕಲ್ವೇ, ಮತ್ತೆ?!). ಟಾಕಿಯಲ್ಲಿ ನೀರು ಪೂರ್ತಿ ಕಾಲಿ ಆಗಿ ಬೋಳೇಶನ ಮನೆಯಿಂದ ಸೈರನ್ ಬಂದಮೇಲೇ ಪಂಪ್ ಚಾಲೂ ಮಾಡಹತ್ತಿದರು. ಆದರೆ ಈ ಬದಲಾವಣೆಯ ನೇರ ದುಷ್ಪರಿಣಾಮ ಮಾತ್ರ ಬೋಳೇಶನ ಕುಟುಂಬದ ಮೇಲಾಗಿತ್ತು!

ಟಾಕಿ ಹಾಗೂ ಪೈಪಿನಲ್ಲೂ ನೀರು ಕಾಲಿ ಆದಮೇಲೇ ಪಂಪ್‌ಅನ್ನು ಚಾಲೂ ಮಾಡಿದರೆ– ಟಾಕಿಯನ್ನು ಪೂರ್ತಿ ತುಂಬಿಸಿದರೂ ಪೈಪಿನಲ್ಲಿ ಸಿಲುಕಿಕೊಳ್ಳುವ ಗಾಳಿಯು ಟಾಕಿಯಿಂದ ನೀರು ಸರಾಗವಾಗಿ ಕೆಳಗೆ ಹರಿಯದಂತೆ ತಡೆಯುತ್ತಿತ್ತು. ಪೈಪಿನಲ್ಲಿ ಸಿಲುಕಿದ ಗಾಳಿಯು ನಿಧಾನವಾಗಿ ಟಾಕಿಯ ಮುಖಾಂತರ ಹೊರಹೋಗಿ ಅದರಲ್ಲಿ ಪೂರ್ಣವಾಗಿ ನೀರು ತುಂಬುವವರೆಗೂ ಕೆಳಗೆ ನೀರು ಪೂರ್ಣ ಪ್ರಮಾಣದಲ್ಲಿ ಹರಿಯಲಾರದು! ಯಾವಾಗಲೂ ನೀರು ಮೊದಲು ಕಾಲಿಯಾಗುವುದು ಮೇಲಿನ ಮನೆಗೆ, ಮೇಲೆ ಕಾಲಿಯಾದರೂ ಕೆಳಗಿನವರಿಗೆ ಪೈಪಿನಲ್ಲಿ ನೀರು ಇರುತ್ತದೆ. ಅದರಲ್ಲೂ ಬೆಳಿಗ್ಗೆ ಬೇಗ ಸ್ನಾನ ಮಾಡಿ ತಯಾರಾಗಿ ಶಾಲೆ / ನೌಕರಿಗೆ ತೆರಳಬೇಕಾದ ಗಡಿಬಿಡಿ ಇರುವುದು ಕೂಡ ಬೋಳೇಶನ ಕುಟುಂಬಕ್ಕೆ. ತಣ್ಣಗೆ ಕೆಳಗಿರುವ ನಿವೃತ್ತ ರಾಯರ ದಂಪತಿಗೆ ಅಂತಹ ಯಾವ ದರ್ದೂ ಇರಲಿಲ್ಲ! ಗೀಸರ್ ಕೂಡ ಎತ್ತರದಲ್ಲಿದ್ದರಿಂದ ಅದರಲ್ಲಿ ನೀರು ಹರಿಯಲು ಮತ್ತಷ್ಟು ತಡ, ಕೆಲವೊಮ್ಮೆ 2–3 ದಿನವೇ ಹಿಡಿಯುತ್ತಿತ್ತು. ಮೊದಲೇ ಹಿಡಿದಿಟ್ಟ ನೀರು ಇದ್ದರೆ ಅದನ್ನು ಒಲೆಯಮೇಲೆ ಕಾಸಿಕೊಂಡು ಸ್ನಾನ ಮಾಡುವ ಅನಿವಾರ್ಯತೆ ಸೃಷ್ಟಿಯಾಗುತ್ತಿತ್ತು.

ಸಂಜೆಯ ಹರಟೆಗೆ 'ಓನರತಿ'ಯು ಬೋಳೇಶನ ಹೆಂಡತಿಯನ್ನು ಕರೆದಾಗೆಲ್ಲಾ– ಬೆಳಿಗ್ಗೆ ನೀರು ಖಾಲಿ ಆದರೆ ಆಗುವ ಸಮಸ್ಯೆಯನ್ನು ವಿವರಿಸಹತ್ತಿದಳು. ಅದೇನು ಹೇಳಿದರೂ ಓನರತಿಯು "ಅದೇಕೆ ಹಾಗಾಗುತ್ತದೇನೋ ಅಲ್ವಾ? ನೀವು ಹೇಳಿದ ಕೂಡಲೇ ನಾವು ಪಂಪ್ ಅನ್ನು ಚಾಲೂ ಮಾಡಿ ತಕ್ಷಣ ನೀರನ್ನು ತುಂಬಿಸ್ತೀವಲ್ಲಾ? ನಿಮ್ಮ ಗೀಸರ್ರೇ ಹಾಳಾಗಿದೆಯೋ ಏನೋ" ಎಂದು ರಾಗಬದಲಿಸಿಬಿಡುತ್ತಿದ್ದರು. ಅನಂತರ, 'ನೀರು–ಖಾಲಿ' ಪ್ರಹಸನದ ದಿನ ಓನರತಿ ಹೊರಗೆ ಕಾಣಿಸಿಕೊಳ್ಳುತ್ತಲೇ ಇರಲಿಲ್ಲ! ಬೆಳಿಗ್ಗೆ ಎದ್ದಕೂಡಲೇ ಒಮ್ಮೆ ಪಂಪು ಚಾಲೂ ಮಾಡಿಬಿಡಿ ಎಂದು ಹೇಳಿದರೂ ಐದಾರು ದಿನಗಳ ಅನಂತರ ಮತ್ತೆ ಯಥಾಸ್ಥಿತಿ. ಬೋಳೇಶನ ಹೆಂಡತಿಯೂ ಹೀಗೆ 'ನೀರು–ಖಾಲಿ' ಆದಾಗಲೆಲ್ಲ ಅಸಮಾಧಾನದಿಂದ ಅದು ಕೆಳಗೂ



ಕೇಳುವಂತೆ ಕೊಂಚ ಜೋರಾಗಿಯೇ ಮಾತನಾಡುವುದನ್ನ ರೂಢಿಸಿಕೊಂಡಳು. ಮನೆ ಬದಲಿಸಿ ಬಿಡೋಣವೆಂಬ ಪ್ರಸ್ತಾಪವೂ ಬಲವಾಯ್ತು. ಬೋಳೇಶನಿಗೂ ಮಂಡೆ ಬಿಸಿಯಾಗ ಹತ್ತಿತು. ಒಮ್ಮೆ ಓನರ್ ಬಳಿ ಪೈಪಿನಲ್ಲಿ ಸಿಲುಕುವ ಗಾಳಿಯ ವರ್ತನೆಯ ವಿಜ್ಞಾನವನ್ನು ಹೇಳಲು ಪ್ರಯತ್ನಿಸಿದರೂ, ರಾಯರು ಸರಿಯಾಗಿ ಕಿವಿಗೆ ಹಾಕಿಸಿಕೊಳ್ಳುತ್ತಿರಲಿಲ್ಲ, ತಮ್ಮ ಮೇಲಿನ ಸಿಟ್ಟಿಗೆ ಇವರು ಸುಳ್ಳು ಹೇಳುತ್ತಾರೆ, ಎಂದು ಬಗೆದಂತೆ ವರ್ತಿಸುತ್ತಿದ್ದರು!

ನೀರ–ಪ್ರಹಸನ ನಡೆದಾಗ ಹೆಂಡತಿ–ಮಗರನ್ನು ಶಾಲೆಗೆ ಕಾರಲ್ಲಿ ಬಿಟ್ಟು ಬರಬೇಕಾಗಿತ್ತು, ಅದರಿಂದಾಗುವ ಖರ್ಚನ್ನು ಬರುವ ತಿಂಗಳಿನ ಬಾಡಿಗೆಯಲ್ಲಿ ಮುರಿದು ಕೊಳ್ಳೋಣವೆಂದು ಒಮ್ಮೆ ಜೋರಾಗಿ ಮಾತಾಡಿಕೊಂಡಿದ್ದರು. ಅದು ಕೇಳಿಹೋಗಿತ್ತೊ ಏನೊ, ಬಾಡಿಗೆ ಹಾಕುವ ಆಸು ಪಾಸಿನ ದಿನಗಳಲ್ಲಿ ಜುಗ್ಗೂರಾಯರು ಎಚ್ಚರದಿಂದಿದ್ದು ಸರಿಯಾಗಿ ನೀರು ಬಿಡಹತ್ತಿದರು. ಆದರೂ ತಿಂಗಳಲ್ಲಿ 3–4 ಬಾರಿಯಾದರೂ ಈ ಪ್ರಕರಣ ಮರುಕಳಿಸುತ್ತಿತ್ತು. ತಲೆಕೆಟ್ಟ ಬೋಳೇಶ– ಒಮ್ಮೆ ಊರಿಗೆ ಹೋಗುವಾಗ ಮನೆಯ ಛಾವಿಯನ್ನು ಜುಗ್ಗೂರಾಯರ ಕೈಯಲ್ಲಿಟ್ಟು ಹೇಳಿದ "ರಾಯರೇ, ನಾವಿಲ್ಲದಾಗ ಟಾಕಿಯ ನೀರನ್ನು ಪೂರ್ತಿ ಕಾಲಿ ಮಾಡಿ, ಅನಂತರ ತುಂಬಿಸಿ, ಆ ಸಮಯದಲ್ಲಿ ನೀವು ಮೇಲಿನ ಬಚ್ಚಲಮನೆಯಲ್ಲಿ ಸ್ನಾನಕ್ಕಿಳಿದು ನೋಡಿ, ಹಾಗೆಯೇ ಸೆನ್ಸರ್‌ನ ಸೂಚಕ ಬೆಳಕಿಗೆಲ್ಲಾ ಹೆಚ್ಚು ವಿದ್ಯುತ್ ಬೇಕಾಗುವುದಿಲ್ಲ, ಹೆಚ್ಚೊ ಅಂದರೆ ಕೆಲವು ಚಿಲ್ಲರೆ ರೂಪಾಯಿಗಳಾದೀತು ಅಷ್ಟೇ" ಎಂದು ಹೇಳಿ ಹೊರಟ!

ಅದಾಗಿ ಊರಿನಿಂದ ಬಂದ ಬೋಳೇಶನ ಕುಟುಂಬ ತಮ್ಮ ಹಲ್ಲಂಡೆಗಳಲ್ಲಿ ಮುಳುಗಿದ್ದರು. ಕೆಲ ದಿನಗಳ ಅನಂತರ ನೀರಿನ ಪ್ರಕರಣವೇ ಆಗದಿರುವುದು, ಹಾಗೂ ಪಂಪ್ ತಾನಾಗಿಯೇ ಚಾಲೂ ಆಗುತ್ತಿರುವುದೂ ಬೋಳೇಶನ ಗಮನಕ್ಕೆ ಬಂತು! ಅರೇ ಹಿಗಾಗಲು ಹೇಗೆ ಸಾಧ್ಯ? ಎಂದು ಯೋಚಿಸಿ ಮತ್ತೆ ಎರಡುದಿನ ಸೂಕ್ಷ್ಮವಾಗಿ ಗಮನಿಸಿದಾಗ ಕಾತ್ರೀ ಆಯ್ತು– ಜುಗ್ಗೂರಾಯರು ಪಂಪ್‌ನ ಸೆನ್ಸರ್‌ಅನ್ನು ಆನ್ ಮಾಡಿಟ್ಟಿದ್ದರು. ಸಮಸ್ಯೆ ಬಗೆಹರಿದಿದ್ದಕ್ಕೆ ಬೋಳೇಶನಿಗೆ ಸಂತಸವಾಯ್ತು. ಆದ್ರೂ ಜುಗ್ಗುರಾಯರು ಹೀಗೆ ಮಾಡಲು ಸಾಧ್ಯವೇ? ಎಂಬ ಕುತೂಹಲವಿತ್ತು. ಏನೇ ಆಗಲಿ ತಾನು ಊರಿಗೆ ಹೋಗುವಾಗ ಸಿಟ್ಟಿನಿಂದ ಮಾತನಾಡಿದ್ದು, ಬಹುಶಃ ಅನಂತರ ರಾಯರು ತಾನು ಹೇಳಿದ ಪ್ರಯೋಗ ಮಾಡಿ ಆಗುತ್ತಿರುವ ಸಮಸ್ಯೆಯನ್ನು ಅರಿತು ಕೊಂಡಿರಬೇಕು, ಎಂದು ಕೊಂಡ. ಅವರ ಮೇಲೆ ಮುನಿಸು ಕಡಿಮೆ ಮಾಡಿಕೊಂಡು ಹೊರಗೆ ಕಂಡಾಗ ಕುಶಲೋಪರಿ ಮಾತನಾಡಿಸಿದ. ಆದರೂ ಜುಗ್ಗೂರಾಯರ ಅಪಾರ ಜುಗ್ಗತನದ ವಿರಾಟ ಪರಿಚಯವಿದ್ದ ಬೋಳೇಶನಿಗೆ ಮೂಲೆಯಲ್ಲೆಲ್ಲೋ ಇನ್ನೂ ಕೊಂಚ ಅನುಮಾನವಿತ್ತು. ಕೆಲದಿನ ಕಾದು ನೋಡಬೇಕು, ಮತ್ತೆ ಪಂಪ್‌ನ ಸೆನ್ಸರ್ ಬಂದ್ ಅದ್ರೂ ಆದೀತು ಎಂದು ಗಮನಿಸತೊಡಗಿದ.

ತಿಂಗಳಾದರೂ ನೀರಿನ ಸಮಸ್ಯೆ ಮತ್ತೆ ತಲೆದೂರಲೇ ಇಲ್ಲ. ಸೆನ್ಸರ್ ನಿರಂತರ ಚಾಲೂ ಆಗಿತ್ತು! ಆಗ ನಿಧಾನವಾಗಿ ಬೋಳೇಶ ಜುಗ್ಗೂರಾಯರ ಕುರಿತು ಗೌರವ ಬೆಳೆಸಿಕೊಳ್ಳಲು ತೊಡಗಿದ. ಅಯ್ಯೋ ಪಾಪ ಅವರಿಗೂ ವಯಸ್ಸಾಯ್ತು, ಇದ್ದವರು ಇಬ್ಬರೆ, ಮಕ್ಕಳೆಲ್ಲಾ ಹೊರಗೆ, ಈ ವಯಸ್ಸಿನಲ್ಲಿ ತಿಂಗಳಿಗೆ ಜುಜುಬಿ 10ರೂಪಾಯಿ ಉಳಿಸಿ ಮಾಡುವುದೇನು, ಎಂಬ ಪರಿಜ್ಞಾನ ಅವರಿಗೆ ಮೂಡಿರಬಹುದು. ಹಾಗಾಗಿ ನಮಗೆ ಮತ್ತೆ ತೊಂದರೆಮಾಡದಂತೆ ಪಾಪ ಬದಲಾಗಿದ್ದಾರೆ. ಎಂದು ಯೋಚಿಸಿ, ಹೆಂಡತಿಗೂ ಓನರ್– ರಾಯರ ಬದಲಾದ ಎತ್ತರದ ನಿಲುವಿನ ಕುರಿತು ಹೇಳಿದ.



ಬೋಳೇಶನ ಹೆಂಡತಿ ಸುಲಭವಾಗಿ ಒಪ್ಪದಿದ್ದರೂ, ಬೇರಾವ ಸಾಕ್ಷಿಯೂ ದೊರೆಯದ ಕಾರಣ ಮೂಗುಮುರಿಯುತ್ತಾ– "ಹ್ಞೂಂ... ಇದ್ದರೂ ಇರಬಹುದು, ಭೂಮಿ ಏನಾದರೂ ಉಲ್ಟಾ ತಿರುಗುತ್ತಿರಬಹುದು ನಾಳೆ ನೋಡಿ ಹೇಳುತ್ತೇನೆ" ಎಂದಳು, ಅನುಮಾನದಿಂದ. 'ಅನುಮಾನಕ್ಕೂ ಒಂದು ಮಿತಿ ಇರಬೇಕು' ಎಂದು ಬೋಳೇಶ ಹಾಗೂ ಮಗ ಪನ್ನೇಶ ಇಬ್ಬರೂ ಅವಳಿಗೆ ಬೈದರು.

ಮರುದಿನ ಎಂದಿನಂತೆ ಬೋಳೇಶನ ಕುಟುಂಬ ಓಟದ ದಿನಚರಿ ಮುಗಿಸಿ ಸಂಜೆ ಮನೆಗೆ ಬಂದು ಎಲ್ಲರೂ ಅವರವರ ಆಸಕ್ತಿಯ ಕೆಲಸದಲ್ಲಿ ನಿರತರಾಗಿದ್ದರು. ಬೋಳೇಶನ ಹೆಂಡತಿ ಓನರ್ ಆಂಟಿ ಕರೆದರೆಂದು ಕೆಳಗೆಹೋಗಿ ಬಂದಳು. ಆಗ ತಟ್ಟನೆ ಹಿಂದಿನ ದಿನದ ಮಾತುಗಳನ್ನು ನೆನಪಿಸಿಕೊಂಡ ಬೋಳೇಶ, ಓದುತ್ತಾ ತನ್ನ ಕುರ್ಚಿಯಲ್ಲಿ ಕುಳಿತೇ "ಏನೇ ಭೂಮಿ ಉಲ್ಟಾ ಏನಾದ್ರೂ ತಿರುಗ್ತಾ ಇದೆಯೇನೇ ಮತ್ತೇ, ಕೆಳಗೆ ಹೋಗಿದ್ಯಲ್ಲಾ ನೋಡಿ ಬಂದ್ಯಾ?" ಎಂದು ಲಹರಿಯಲ್ಲಿ ಕೇಳಿದ. ಬಳಿ ಬಂದ ಹೆಂಡತಿ ಟೇಬಲ್ಲಿನ ಮೇಲೆ ಒಂದು ಚೀಟಿಯನ್ನು ಕುಕ್ಕುತ್ತಾ ಹೇಳಿದಳು– "ಹ್ಞೂಂ ಹೌದೂ ರೀ... ಭೂಮಿ ಸರಿಯಾಗಿಯೇ ತಿರುಗ್ತಾ ಇದೆ, ಎಲ್ಲರೂ ಅವರವರು ಇರುವ ಹಾಗೇ ಇದ್ದಾರೆ" ಎಂದಳು! ಬೋಳೇಶ, ಪನ್ನೇಶ ಇಬ್ಬರೂ ಏನೂ ತಿಳಿಯದೇ ಮುಖ–ಮುಖ ನೋಡಿಕೊಂಡು, ಏನಾಯ್ತೆಂದು?! ಕೈ ಸನ್ನೆಯಲ್ಲೇ ಕೇಳಿದರು.

"ನಿಮ್ಮ ಟೇಬಲ್ ಮೇಲಿನ ಕರೆಂಟ್‌ಬಿಲ್ಲನ್ನು ನೋಡಿ" ಅಂದಳು. ಬೋಳೇಶ ಬಿಲ್ಲನ್ನು ನೋಡಿ ಚಕಿತನಾದ ಬರೀ 'ಮೂರು ರೂಪಾಯಿ' ಬಂದಿತ್ತು. "ಏನೇ ಇದು?" ಅಂದ!

"ಈ ತಿಂಗಳಿನದು ಸೊನ್ನೆ, ಹಿಂದಿನ ಬಾಕಿಯ ಚಿಲ್ಲರೆ ಹಣವಾಗಿ ಕೇವಲ ಮೂರು ರೂಪಾಯಿ, ತುಂಬಬೇಕು ಅಷ್ಟೇ", ಎಂದು ವಿವರವಾಗಿ ಓದಿದ ಬೋಳೇಶ. "ಹೌದೂ, ಇದು ಹೇಗಾಯ್ತೇ?" ಎಂದು ಕೇಳಿದ. ಹೆಂಡತಿ ಹೇಳಿದಳು– "ಅದನ್ನೇ ನಾನು ಹೇಳಿದ್ದು, ಯಾರೂ ಬದಲಾಗಿಲ್ಲ, ಭೂಮಿಯೂ ಸರಿಯಾಗೇ ತಿರುಗ್ತಾ ಇದೆ, ಬೋಳೇಶ, ಜುಗ್ಗೂರಾಯ ಇಬ್ಬರೂ ಹೆಸರಿಗೆ ತಕ್ಕಹಾಗೇ ಇದ್ದಾರೆ, ಯಾರೂ ಬದಲಾಗಿಲ್ಲ" ಅಂದಳು! "ಸ್ವಲ್ಪ ಬಿಡಿಸಿ ಹೇಳಬಾರದೇ?" ಅಂದ. "ಅಲ್ರೀ, ಹೊಸ ಸರ್ಕಾರ ಕರೆಂಟ್ ಬಿಲ್ಲನ್ನು ಮನ್ನಾ ಮಾಡಿಲ್ವೇ?" "ಹ್ಞೂಂ ಹೌದು", "ಅದಕ್ಕೇ ಹೇಳಿದ್ದು, ನಿಮಗೆ ಸುಮಾರಿಗೆ ವ್ಯಾವಹಾರ ಅರ್ಥ ಆಗೊಲ್ಲ ಅಂತ". "ನೋಡೀ ಯಾವಾಗ ಕರೆಂಟ್‌ಬಿಲ್ ಮನ್ನಾ ಆಯ್ತೋ ಅವತ್ತಿನಿಂದ ನಿಮ್ಮ 'ವಾನರ್ರು' ಅಂದರೆ ಜುಗ್ಗೂರಾಯರು, ನಿಮ್ಮ ಪಾಲಿಗೆ ಪಾಪದವರು, ದೊಡ್ಡ ವ್ಯಕ್ತಿಗಳೂ, ಆದ್ರೂ, ತಿಳೀತೇ"? ಎಂದಳು. ಅರ್ಥವಾಗದ ಬೋಳೇಶ ಕಣ್ಣು ಬಿಟ್ಟು ಕೂತ. "ಅರ್ಥವಾಗಲಿಲ್ಲವೇನ್ರೀ, ನಮಗೆ 'ನೀರಿನ–ಭಾಗ್ಯ' ಸಿಕ್ಕಿದ್ದು ನಿಮ್ಮ ಜುಗ್ಗೂರಾಯರಿಂದಲ್ಲ, ಸರ್ಕಾರದೋರ 'ಜ್ಯೋತಿ–ಭಾಗ್ಯ'ದ ಪರಿಣಾಮ ಇದು, ಕರೆಂಟೇ ಫ್ರೀ ಆದಮೇಲೆ, ನಿಮ್ಮ ಪಂಪ್‌ನ ಸೆನ್ಸರ್ ಅನ್ನು ಚಾಲೂ ಇಟ್ಟರೆ, ಅವರಪ್ಪನಮನೆ ಗಂಟೇನಾದ್ರೂ ಕರಗತ್ತೇನ್ರೀ?!" "ಇವೆಲ್ಲ ಇಷ್ಟು ಬಿಡಿಸಿ ಹೇಳಬೇಕಲ್ಲಾ ನಿಮಗೆ, ಅದಕ್ಕೇ ಹೇಳಿದ್ದು ಯಾರೂ ಬದಲಾಗಿಲ್ಲ, ಬದಲಾಗಿದ್ದು ಸರ್ಕಾರ ಮಾತ್ರ!" ಬೋಳೇಶ ಬೆಪ್ಪಾಗಿದ್ದ, ಪನ್ನೇಶ ಕೂದಲನ್ನೇರಿಸಿ ಅಮ್ಮನೊಂದಿಗೆ ನಗುತ್ತಾ ನಿಂತಿದ್ದ! ■



# ಸವಿನೆನಪಿನಲ್ಲೊಂದು ಹೇನು ಪುರಾಣ..!!

ಧಾರಿಣಿ ಮಾಯಾ

ಪ್ರತೀ ಬೇಸಿಗೆ ರಜೆಯಲ್ಲಿ ನಾನು ಅಜ್ಜಿ ಊರಿಗೆ ಹೋಗುತ್ತಿದ್ದೆ. ಅದು ನನ್ನ ತಂದೆಯ ಹುಟ್ಟೂರು. ನನ್ನ ಓರಗೆಯವರೆಲ್ಲರೂ ಬೇರೆಬೇರೆ ಊರುಗಳಿಂದ ಅಜ್ಜಿಮನೆಗೆ ರಜಕ್ಕೆ ಬರುತ್ತಿದ್ದರು. ನಾವೆಲ್ಲರೂ ಮನೆಯೊಳಗೂ ಹೊರಗೂ ಗುಂಪು ಕಟ್ಟಿಕೊಂಡು ದಾಂಧಲೆ ಎಬ್ಬಿಸುತ್ತಿದ್ದೆವು. ಒಮ್ಮೆ ನಮಗೆಲ್ಲಾ ಯಾವುದಾದರೊಂದು ಸಿನಿಮಾ ನೋಡಬೇಕೆಂಬ ಆಸೆಯಾಯಿತು. ಆದರೆ ನನ್ನ ತಂದೆ ಬಹಳ ಸ್ಟ್ರಿಕ್ಟ್ ಆಗಿದ್ದರಿಂದ ಅವರು ನಮ್ಮನ್ನು ಸಿನಿಮಾಕ್ಕೆ ಕಳುಹಿಸುವುದಿಲ್ಲ ಎಂದು ನಮಗೆಲ್ಲ ಗೊತ್ತಿತ್ತು. ಸಿನಿಮಾ ನೋಡಿದರೆ ಮಕ್ಕಳು ಹಾಳಾಗ್ತಾರೆ, ದಾರಿ ತಪ್ಪುತ್ತಾರೆ ಎಂಬುದು ಅವರ ಅಭಿಮತ. ಆದರೆ ಅದೆಲ್ಲಾ ನಮ್ಮ ಪುಟ್ಟ ತಲೆಗೆ ಹೇಗೆ, ಯಾಕೆ ತಾನೇ ಇಳಿದೀತು!! ನಮಗೆ ಬೇಕಿದ್ದಿದು ನಾವೆಲ್ಲರೂ ಒಟ್ಟಿಗೆ ಯಾವುದಾದರೂ ಒಂದು ಸಿನಿಮಾ ನೋಡುವ ಮಜ ಅಷ್ಟೇ.

ನಮ್ಮದೇ ಒಂದು ರೌಂಡ್ ಟೇಬಲ್ ಕಾನ್ಫರೆನ್ಸ್‌ನಲ್ಲಿ ಬಿಸಿಬಿಸಿ ಚರ್ಚೆಯಾಗಿ ಕೊನೆಗೆ 'ಸತಿ ಸಕ್ಕೂಬಾಯಿ' ಸಿನಿಮಾ ನೋಡುವುದೆಂದು ನಿರ್ಧಾರವಾಯಿತು. ಅಂತೂ ಹೇಗೋ ಕದ್ದುಮುಚ್ಚಿ ಗುಬ್ಬಿಗಳು ಗೂಡಿನಿಂದ ಹೊರಗೆ ಹಾರಲು ಸಿದ್ಧವಾದವು. ನಾವೆಲ್ಲಾ ಗುಬ್ಬಿಗಳ ದಂಡು ಸೇರಿ ಒಟ್ಟು ಆರು ಮಂದಿ; ಮಕ್ಕಳದೇ ಸೈನ್ಯ. ಊರ ಕೆರೆಯನ್ನು ದಾಟುವಾಗ ಕಾಣುತ್ತಿದ್ದುದು ಈಜಾಡುತ್ತಿದ್ದ ಲಂಗೋಟಿ ಕಟ್ಟಿಕೊಂಡ ಹೈಕಳು, ಸಾಲಾಗಿ ಕಲ್ಲು ಬಂಡೆಯ ಮೇಲೆ ಕುಳಿತು ಬಟ್ಟೆ ಒಗೆಯುತ್ತಿದ್ದ ಹೆಂಗಸರು. ಆ ಬಟ್ಟೆ ಒಗೆತದ ರಪ್... ರಪ್... ಸದ್ದು ಕಿವಿಗೆ ಹಿತಕರವಾಗಿರುತ್ತಿತ್ತು. ನಡಿಗೆಯಲ್ಲೇ ಎರಡು, ಮೂರು ಮೈಲಿ ಸವೆಸಿ ಅಂತೂ ಸಿನಿಮಾ ಟಾಕೀಸು ತಲುಪಿದೆವು. ಸಿನಿಮಾದ ಮೊದಲಿಂದ ಕೊನೆಯದಾಗಿ ಭಗವಂತ ಪ್ರತ್ಯಕ್ಷವಾಗುವವರೆಗೂ ಸಕ್ಕೂಬಾಯಿಯ ಯಾತನೆ ನೋಡೀ ನೋಡೀ, ಮಜವಿರಲಿ ಅಶ್ರುಧಾರೆ ಹರಿಸಿದ್ದೇ ಬಂತು ನಮ್ಮ ಭಾಗ್ಯ. ಧಾರಾಕಾರವಾಗಿ ಹರಿದ ಕಂಬನಿಯನ್ನೊರೆಸಿಕೊಳ್ಳಲು ಕರ್ಚೀಫು ಇಲ್ಲದೇ ಫ್ರಾಕು, ಅಂಗಿಗಳನ್ನೇ ಮುದ್ದೆಯಾಗುವಷ್ಟು ನೆನೆಸಿದ್ದೆವು. ಅಂತೂ ಒಟ್ಟಿಗೆ ಒಡನಾಡಿಗಳೆಲ್ಲಾ ಕೂತು ಸಿನಿಮಾ ನೋಡಿದೆವು ಎಂಬ ಹೈ ಫೀಲಿಂಗ್ ಮನಸ್ಸಿಗೆ ಒಂಥರಾ ಕಿಕ್ ಕೊಟ್ಟಿತ್ತು. ಆದರೆ ಸಿನಿಮಾ ನೋಡುವಾಗಿನ ಖುಷಿ–ಮಜಾ, ವಾಪಸ್ಸು ಮನೆಗೆ ಬರುವಾಗ ಹಾರಿಹೋಗಿತ್ತು. ಇಷ್ಟು ಹೊತ್ತು ಎಲ್ಲಿ ಹೋಗಿದ್ದೆವು ಎಂಬ ನನ್ನ ತಂದೆಯ ಪ್ರಶ್ನೆಗೆ ಉತ್ತರ ತಯಾರು ಮಾಡಿಕೊಳ್ಳಬೇಕಿತ್ತು. ಮನೆಯ ಮುಂಬಾಗಿಲಿಗೆ ಅಡಿಯಿಟ್ಟರೆ ಕಳ್ಳರು ಸಿಕ್ಕಿಹಾಕಿಕೊಳ್ಳುತ್ತೇವೆಂದು, ದನದ ಕೊಟ್ಟಿಗೆಗೆ ತೆರೆದುಕೊಂಡಿದ್ದ ಹಿತ್ತಲ ಬಾಗಿಲಿನಿಂದ ಎಲ್ಲರೂ ಕಳ್ಳಹೆಜ್ಜೆ ಇಡುತ್ತಾ ಒಳಗೆ ಹೋಗುವಾಗ, ಅಶರೀರವಾಣಿಯಂತೆ ಒಂದು ಆವಾಜ್? ತೂರಿ ಬಂತು,

'ಏಯ್... ಎಲ್ಲಿ ಹೋಗಿದ್ರೋ?'



ನಮ್ಮ ಜಂಘಾಬಲವೇ ಉಡುಗಿಹೋದಂತಾಯಿತು.

'ದೇವರ ಸಿನಿಮಾಕ್ಕೆ ಹೋಗಿದ್ದೆವು' ಎಂದು ಗುಂಪಿನಿಂದ ಒಂದು ಕೀರಲು ಧ್ವನಿ ಹೊರಬಂದಿತು. ಆ ದನಿ ಬೇರೆ ಯಾರದ್ದೂ ಅಲ್ಲ, ನನ್ನದೇ ಆಗಿತ್ತು.

'ಓಹ್, ಹೌದಾ...' ಎಂದರು.

ಅಷ್ಟು ಬೇಗ ಅವರ ಗಂಟುಹುಬ್ಬು ಸಡಿಲವಾಗುವುದಕ್ಕೆ ಒಂದೇ ಕಾರಣ. ಅದು "ದೇವರ ಸಿನಿಮಾ" ಎಂದು ಅವರ ತಲೆಯಲ್ಲಿ ರಿಂಗಣಿಸಿ ನೆಮ್ಮದಿಯುಸಿರುಬಿಟ್ಟಿದ್ದರು. ಅಂತೂ ದೇವರ ಸಿನಿಮಾ ಎಂಬ ಟ್ಯಾಗ್ ಲೈನ್ ಚೆನ್ನಾಗಿಯೇ ವರ್ಕೌಟ್ ಆಗಿತ್ತು.

'ಸರಿ, ಕಾಲು ತೊಳ್ಕೊಂಡು ಒಳಗೆ ಹೋಗಿ. ಸ್ವಲ್ಪ ಓದೋ ಕೆಲಸ ಮಾಡಿ, ಆಗ್ಲಾದ್ರೂ ಉದ್ಧಾರ ಆಗ್ತೀರಾ' ಅಂತ ಎಂದಿನ ಸ್ವಲ್ಪ ಗಡುಸು ಧ್ವನಿಯಲ್ಲೇ ಹೇಳಿದರು.

ಸದ್ಯ ಹೆಚ್ಚಿನ ಬೈಗುಳ ಆಗಲಿಲ್ಲವಲ್ಲ... ಬದುಕಿದೆಯಾ ಬಡಜೀವ ಎಂದು ಎಲ್ಲರೂ ಉಸಿರು ಬಿಗಿಹಿಡಿದು ಒಳಗೋಡಿದೆವು. ಕೊಠಡಿ ಸೇರಿದ ನಾವು ನೆಪಕ್ಕೆ ಪುಸ್ತಕ ಮಾತ್ರ ಮುಂದಿಟ್ಟುಕೊಂಡು ಗಣಿತದ ಲೆಕ್ಕ ಬಿಡಿಸುವ ಬದಲು ಸಿನಿಮಾ ಟೆಂಟಿನಲ್ಲಿ ಕೂತು ಯಾರು ಎಷ್ಟೆಷ್ಟು ಕಣ್ಣೀರು ಹಾಕಿದೆವು ಎಂದು ಲೆಕ್ಕ ಹಾಕುತ್ತ, ಸತಿ ಸಕ್ಕೂಬಾಯಿಯನ್ನು ಗೋಳುಹೊಯ್ದುಕೊಂಡ ಗಯ್ಯಾಳಿ ಅತ್ತೆಗೆ ಹಿಡಿಶಾಪ ಹಾಕುತ್ತಾ ನಮ್ಮ ರೌಂಡ್ ಟೇಬಲ್ ಕಾನ್ಫರೆನ್ಸ್ ಮುಂದುವರೆಯಿತು.

* * *

ಆ ಪುಟ್ಟ ಹಳ್ಳಿಯಲ್ಲಿ ಆಗಾಗ ಜಾತ್ರೆ ನಡೆಯುತ್ತಿತ್ತು. ಅಲ್ಲಿಗೆ ಹೋಗುವ ಅದಮ್ಯ ಆಸೆ ನಮ್ಮೆಲ್ಲರಿಗೂ. ಹೋದ ಮೇಲೆ ಏನಾದರೂ ಕೊಂಡುಕೊಳ್ಳುವ ಬಯಕೆ ಇದ್ದೇ ಇರುತ್ತದಲ್ಲವೇ. ಆದರೇನು ಮಾಡುವುದು. ಕೈ ಮಾತ್ರ ಖಾಲಿ, ನಯಾ ಪೈಸೆ ಇಲ್ಲ. ಹಣಕ್ಕಾಗಿ ಮನೆಯ ಕ್ಯಾಪ್ಟನ್ ತಾತನನ್ನು ಕೇಳಬೇಕಿತ್ತು. ಅವರು ನನ್ನ ತಂದೆಯ ತಂದೆ. ನಮ್ಮ ತಾತ ಸ್ವಲ್ಪ ಜಿಪುಣಾಗ್ರೇಸರ ಎಂದು ನಮಗೆಲ್ಲ ಗೊತ್ತಿದ್ದರೂ ಹೇಗೋ ಕೇಳುವ ಧೈರ್ಯ ಮಾಡಿ ಅವರ ಆಫೀಸ್ ರೂಮಿನ ಮುಂದೆ ನಿಂತು ನಮ್ಮ ಬೇಡಿಕೆಯನ್ನು ಮಂಡಿಸಿದೆವು. ಕೈಗೆ ಸಿಕ್ಕಿದ್ದು ಮಾತ್ರ ಐದು ಪೈಸೆ.., ಹತ್ತು ಪೈಸೆ. ಆಗೆಲ್ಲಾ ನಮ್ಮ ಮುಖ ಚಿಕ್ಕದಾಗುತ್ತಿತ್ತು. ಹಾಗಂತ ನಮಗೇನೂ ಹೆಚ್ಚಿನ ಕಾಂಚಾಣ ನೋಡುವ ಭಾಗ್ಯವೇನೂ ಸಿಗುತ್ತಿರಲಿಲ್ಲ. ವಿಧಿಯಿಲ್ಲ, ಸಿಕ್ಕಿದ್ದೇ ಪಂಚಾಮೃತ ಎಂದು ಕರ್ಚೀಫಿನಲ್ಲಿ ಚಿಲ್ಲರೆಯನ್ನೆಲ್ಲಾ ಗಂಟು ಕಟ್ಟಿ ಜಾತ್ರೆಗೆ ಓಡುತ್ತಿದ್ದೆವು. ಎಲ್ಲರ ನಾಣ್ಯಗಳನ್ನು ಒಟ್ಟು ಮಾಡಿ ಅದರಲ್ಲಿ ಬಣ್ಣದ ಪೀಪಿ, ಕಡಲೆ ಪುರಿ, ಬತ್ತಾಸು ಕೊಂಡು ತಿಂದು ಸಂಭ್ರಮಿಸುತ್ತಿದ್ದೆವು.

ಆದರೆ ಈ ಜಮಾನದ ಕಥೆ ನೋಡಿ. ಹಣ ಕೊಡುವಾಗ ಚಿಲ್ಲರೆ ಇಲ್ಲವೆಂದು ಎಲ್ಲೆಡೆ ಪೇ ಟಿಎಮ್, ಗೂಗಲ್ ಪೇ ಗಳದೇ ದರ್ಬಾರು. ಇಂದು ನಮ್ಮೆಲ್ಲರ ಜೇಬು, ಪರ್ಸಿನಲ್ಲಿ ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್‌ಗಳು ಖಾಯಂ ಇರುತ್ತವೆ. ಅದರಲ್ಲಿ ಕಣ್ಣಿಗೆ ಕಂಡ, ಮನಸ್ಸಿಗೆ ಬೇಕೆನಿಸಿದ ವಸ್ತುಗಳು ಎಷ್ಟು ದುಬಾರಿಯಾದರೂ ಕೊಂಡು ಸಂಭ್ರಮಿಸುತ್ತೇವೆ. ಆದರೆ ಅದೆಲ್ಲ ಕ್ಷಣಿಕ ಮಾತ್ರ. ಗಾಳಿ ಬಿಟ್ಟ ಬಲೂನಿನಂತೆ ಉತ್ಸಾಹ ಬಹುಬೇಗನೇ ಜರ್‍ರ್ರೆಂದು ಇಳಿದುಬಿಡುತ್ತದೆ. ಇಂದು ಎಂತಹ ದುಬಾರಿ ಬೆಲೆಯ ವಸ್ತು ಖರೀದಿ ಮಾಡಿದರೂ, ಅಂದಿನ ಆ ಹತ್ತು ಪೈಸೆಯಲ್ಲಿ ಕೊಂಡುಕೊಳ್ಳುತ್ತಿದ್ದ ವಸ್ತುಗಳು ಕೊಡುತ್ತಿದ್ದ ರಸಾನುಭವ ಯಾವುದಕ್ಕೂ ಸಾಟಿಯಿಲ್ಲ.

* * *

ಬಾಲ್ಯದಲ್ಲಿ ಗೆಳತಿಯರೊಡನೆ ಆಡುತ್ತಿದ್ದ 'ಅಮ್ಮನ ಆಟ,' ಮನೆಯ ಕಾಂಪೌಂಡಿನ ಒಂದು ಮೂಲೆಯಲ್ಲಿದ್ದ ಸಣ್ಣ ಗೂಡಿನಲ್ಲಿ ಪುಟ್ಟ ಪುಟ್ಟ ಅಡುಗೆ ಪರಿಕರಗಳನ್ನು ಇಟ್ಟುಕೊಂಡು, ಕಾಗದ, ಕಡ್ಡಿಚೂರುಗಳನ್ನು ಇಟ್ಟು ಬೆಂಕಿ ಹೊತ್ತಿಸಿ



ನಾಲ್ಕು ಅಕ್ಕಿ ಕಾಳನ್ನು ಬೇಯಿಸಿ, ಅಮ್ಮನಂತೆ ನಾನೂ ಪಾಕಪ್ರವೀಣೆ ಎಂದು ಬೀಗುತ್ತಿದ್ದೆ.

ನನ್ನಮ್ಮನ ಜತನದಿಂದ ಕಂಗೊಳಿಸುತ್ತಿದ್ದ ಹೂದೋಟದಲ್ಲಿ ಸಾಲಾಗಿ ಜೋಡಿಸಿಟ್ಟ ಹೂಕುಂಡಗಳನ್ನು ವಿದ್ಯಾರ್ಥಿಗಳೆಂದು ಪರಿಗಣಿಸಿ ಅವುಗಳಿಗೆ ನನ್ನ ಸಹಪಾಠಿಗಳ ನಾಮಧೇಯವ ಅಂಟಿಸಿ ಮಾರುದ್ದದ ಕಡ್ಡಿ ಹಿಡಿದು ಅಮ್ಮನ ಸೀರೆಯುಟ್ಟು ನನ್ನ ಕ್ಲಾಸ್ ಟೀಚರಿನ ಸ್ಥಾನವನ್ನಲಂಕರಿಸಿ, ಅವರದೇ ಹಾವಭಾವಗಳನ್ನು ಅನುಕರಿಸುತ್ತ ವಿದ್ಯಾರ್ಥಿ(ಹೂಕುಂಡ)ಗಳಿಗೆ ಜಬರ್ದಸ್ತು ಮಾಡುತ್ತಿದ್ದ ನೆನಪಿನ ಬುತ್ತಿಯನ್ನು ಹ್ಯಾಂಗಾ ಮರೆಯಲಿ

* * *

ಬೇಸಿಗೆ ರಜೆಯಲ್ಲಿ ಅಜ್ಜಿ ಮನೆಗೆ ಹೋದಾಗ, ನಾವು ಓರಗೆಯವರೆಲ್ಲಾ ಸಾಲಾಗಿ ಹಾಸಿಕೊಂಡು ಕಥೆ ಹೇಳಿಕೊಳ್ಳುತ್ತಾ ಮಲಗುತ್ತಿದ್ದೆವು. ಆ ಗುಂಪಿನಲ್ಲಿ ಒಬ್ಬಳಿಗೆ ಮಾತ್ರ ಮಾರುದ್ದದ ಜಡೆ. ಅವಳ ಪಕ್ಕದಲ್ಲೇ ಮಲಗುತ್ತಿದ್ದ ನನಗೆ, ಅವಳು ಹೇರಳವಾಗಿ ಸಾಕಿಕೊಂಡಿದ್ದ ಅವಳ ತಲೆಯಲ್ಲಿನ ಹೇನುಗಳು ಜಂಪ್ ಮಾಡಿ ನನ್ನ ತಲೆಗೆ ಏರಿಬಿಡುತ್ತಿದ್ದವು. ನನಗೋ ಹೇನಿನ ಕಡಿತ ತಡೆಯಲಾರದೆ ತಲೆ ಕೆರೆದು ಬುರುಡೆಯೆಲ್ಲಾ ಪರಚಿದ ಗಾಯಗಳಾಗುತ್ತಿದ್ದವು. ಮಾರನೆಯ ದಿನದಿಂದ ಅವಳಿಂದ ಒಂದಷ್ಟು ದೂರದಲ್ಲಿ ಮಲಗಹತ್ತಿದೆ. ನಮ್ಮಿಬ್ಬರ ಮಧ್ಯೆ ಮತ್ತಿಬ್ಬರನ್ನು ನುಸುಳಿಸಿ ನಾನು ಸೇಫ್ ಆಗಲು ಹವಣಿಸಿದ್ದೆ. ಆಗಲಾದರೂ ಅವಳ ತಲೆಯ ಹೇನಿನಿಂದ ನಾ ಪಾರಾಗಬಹುದೆಂಬ ಉಮೇದಿತ್ತು. ಅಯ್ಯೋ ಭಗವಂತಾ! ಇಷ್ಟ್ಯಾಗ್ಯೂ ಮರುದಿನ ನನ್ನ ತಲೆಕೆರೆತ ತಪ್ಪಲಿಲ್ಲ. ಈ ಹೇನುಗಳು ಲಾಂಗ್ ಜಂಪ್ ಮಾಡಿ ನನ್ನ ತಲೆ ಹೊಕ್ಕುತ್ತಿದ್ದವು.

ಅಂತೂ ರಜೆ ಮುಗಿಸಿ ನಮ್ಮೂರಿಗೆ ಬಂದ ನಂತರ ನನ್ನಮ್ಮನಿಗೆ ನನ್ನ ತಲೆಯ ಹೇನು ತೆಗೆಯುವ ತಲೆನೋವು. ದಿನವೂ ಶಾಲೆಯಿಂದ ಬಂದ ಕೂಡಲೇ ನನ್ನ ತಲೆಗೆ ಚೆನ್ನಾಗಿ ಎಣ್ಣೆ ತಟ್ಟಿ ಬಾಚಣಿಗೆಯಲ್ಲಿ ಬಾಚಿ ಬಾಚಿ ಹೇನು ತೆಗೆಯುತ್ತಿದ್ದಳು. ನನ್ನ ತಲೆಯಲ್ಲಿ ಅವುಗಳ ದೊಡ್ಡ ಸಂಸಾರವೇ ಬೀಡುಬಿಟ್ಟಿತ್ತು. ನನ್ನ ಅಜ್ಜಿ ಮನೆಯಂತೆಯೇ ಅವುಗಳದ್ದೂ ಜಾಯಿಂಟ್ ಫ್ಯಾಮಿಲಿ. ಅಪ್ಪ, ಅಮ್ಮ, ಅಜ್ಜಿ, ತಾತ, ಮಕ್ಕಳು, ಮೊಮ್ಮಕ್ಕಳು, ಆಂಟಿ, ಅಂಕಲ್, ಕಸಿನ್ಸ್... ಎಲ್ಲರನ್ನೂ ಎಳೆದೆಳೆದು ಒಂದು, ಎರಡು, ಮೂರು, ನಾಲ್ಕು... ಹೀಗೆ ಲೆಕ್ಕಕ್ಕೇ ಸಿಗದಷ್ಟು ಅವುಗಳನ್ನು ದಿನಪತ್ರಿಕೆಯ ಮೇಲೆ ಉರುಳಿಸಿ ಪಟ್... ಪಟ್... ಎಂದು ಕುಕ್ಕುತ್ತ ಹೀಗೆ ಎಲ್ಲವನ್ನೂ ಮಾರಣಹೋಮ ಮಾಡುವಷ್ಟೊತ್ತಿಗೆ ಒಂದಷ್ಟು ದಿನಗಳು ಹಿಡಿದು ನನ್ನಮ್ಮ ಹೈರಾಣಾಗುತ್ತಿದ್ದಳು. ಪುನಃ ನನ್ನ ಅಜ್ಜಿ ಊರಿಗೆ ಬೇಸಿಗೆ ರಜೆಗೆ ಹೋದಾಗ ಮಾರುದ್ದ ಜಡೆಯ ಓರಗೆಯವಳಿಂದ ನನ್ನ ತಲೆ ತುಂಬ ಹೇನಿನ ಸಂಸಾರ ತುಂಬಿಸಿಕೊಂಡು ನನ್ನೂರಿಗೆ ಬರುತ್ತಿದ್ದೆ.

ನನ್ನ ಬಾಲ್ಯದ ಪ್ರತೀ ಬೇಸಿಗೆ ರಜೆ ಕಳೆದ ಕೂಡಲೇ 'ನನ್ನಮ್ಮನಿಗೆ ಮತ್ತದೇ ಕೆಲಸ, ಪಟ್... ಪಟ್...'

ಇಷ್ಟೆಲ್ಲಾ ಸವಿಸವಿ ನೆನಪಿನ ಮಧ್ಯೆ ಈ ಹೇನಿನ ಪುರಾಣ ಒಂದು ಕಿರಿಕಿರಿ ನೆನಪಾಗಿ ಉಳಿದುಬಿಟ್ಟಿದೆ.



ಸಿಹಿ–ಕಹಿಯ ಮಿಶ್ರಣವೇ ಬದುಕಿನ ಹೂರಣವಲ್ಲವೇ..!!

■

# ಪಾದುಕಾ ಪುರಾಣ

**ರಾಜೇಶ್ವರಿ ಹುಲ್ಲೇನಹಳ್ಳಿ**

ಅಂದ ಹಾಗೆ ನಮ್ಮ ಪಾದಗಳು ಮೆಟ್ಟುವ, ಪಾದಗಳನ್ನು ರಕ್ಷಿಸುವ, ಮೆಟ್ಟಿಗೆ ಅದೆಷ್ಟೊಂದು ಹೆಸರು! ಪಾದುಕೆ, ಪಾದರಕ್ಷೆ, ಹಾವುಗೆ, ಚಪ್ಪಲಿ, ಮೆಟ್ಟು, ಎಕ್ಕಡ, ಹೀಗೆ ನಾನಾ ಹೆಸರುಗಳಿಂದ ಕರೆಯಲ್ಪಡುವ ಈ ಉಪಯುಕ್ತ ಪರಿಕರವನ್ನು ಇಂದು ಮೆಟ್ಟದವರು ಯಾರೂ ಇಲ್ಲವೆಂದೇ ಹೇಳಬಹುದು. ಮರದಿಂದ, ಎಮ್ಮೆಯ, ದನದ ಚರ್ಮದಿಂದ, ಇತ್ತೀಚೆಗೆ ಪ್ಲಾಸ್ಟಿಕ್ನಿಂದಲೂ ತಯಾರಿಸುವ ಚಪ್ಪಲಿಗಳ ಆವಿಷ್ಕಾರವಾಗಿದೆ. ಚಪ್ಪಲಿ ಇಂದು ಅನಿವಾರ್ಯವಾಗಿವೆ. ಅಂತಹ ಚಪ್ಪಲಿಗಳನ್ನು ಅಂಗಡಿಗಳಲ್ಲಿ ಕೊಳ್ಳಬಹುದಿತ್ತು. ಅಂತೆಯೇ ನಮ್ಮೂರಿನಲ್ಲಿ ಬಹಳ ಹಿಂದೆ ನಮ್ಮ ಶಾಲಾ ದಿನಗಳಲ್ಲಿ ಚಪ್ಪಲಿ ಹೊಲಿಯುವ ಮೋಚಿಗಳು ಅವರದೇ ಅಂಗಡಿಗಳಲ್ಲಿ ಚಪ್ಪಲಿಗಳನ್ನು ಬೇಕಾದ ಅಳತೆಗಳಲ್ಲಿ ಹೊಲಿದು ಕೊಡುತ್ತಿದ್ದರು.

ಅದು ಹೈ ಹೀಲ್ಡ್ ಚಪ್ಪಲಿಯ ಜಮಾನ. ಗಂಡು, ಹೆಣ್ಣು ಮಕ್ಕಳಾದಿಯಾಗಿ ಹೈ ಹೀಲ್ಡ್ (ಹಿಮ್ಮಡಿ ಎತ್ತರದ) ಚಪ್ಪಲಿಯನ್ನು. ಮೆಟ್ಟಿ ಟಕ್ ಟಕ್.. ಎಂದು ಸದ್ದು ಮಾಡುತ್ತಾ ಕುದುರೆ ನಡಿಗೆಯಲ್ಲಿ ನಡೆಯುವುದೇ ಒಂದು ಮೋಜು ಮತ್ತು ಫ್ಯಾಷನ್ ಆಗಿತ್ತು. (ಹಿಂದಿನ ಸಿನೆಮಾಗಳಲ್ಲಿ ನೀವು ಗಮನಿಸಿರಬಹುದು ಗಂಡು ಮಕ್ಕಳು ಬೆಲ್ಬಾಟಮ್ ಪ್ಯಾಂಟು ಎತ್ತರದ ಹಿಮ್ಮಡಿಯ ಚಪ್ಪಲಿ,ಅಥವಾ ಶೂ, ಹೆಣ್ಣು ಮಕ್ಕಳು ಮ್ಯಾಕ್ಸಿ, ಹಿಮ್ಮಡಿ ಎತ್ತರದ ಚಪ್ಪಲಿ ಮೆಟ್ಟಿ ಟಾಕು ಟೀಕಾಗಿ ನಡೆಯುವುದೆಂದರೆ ಅದರ ವೈಖರಿಯೇ ಬೇರೆಯಾಗಿತ್ತು.) ಹೀಗೆ ಸುಮಾರು 80 ರ ದಶಕದಲ್ಲಿ ನಮ್ಮೂರಿನ ನಮ್ಮ ಮನೆಯ ಹತ್ತಿರವೇ ಇದ್ದ ಒಂದು ಚಪ್ಪಲಿ ಅಂಗಡಿಯಲ್ಲಿ ಈ ರೀತಿಯ ಹೊಸ ನಮೂನೆ ಚಪ್ಪಲಿಗಳನ್ನು ಹೊಲಿದು ಕೊಡುತ್ತಿದ್ದರು. ಅಂತೆಯೇ ಅಂದಿನ ಫ್ಯಾಷನ್ ಆದ ಹೈ ಹೀಲ್ಡ್ ಚಪ್ಪಲಿಗಳನ್ನು ಒಳಗೆ ಬೆಂಡು ಮರ ಹಾಕಿ, ಅದಕ್ಕೆ ಚರ್ಮದ ಮೇಲು ಹೊದಿಕೆ ಹಾಕಿ ಬಿಗಿ ಭದ್ರತೆಗೆ ಸುಮಾರು ಅಡ್ಡ ಪಟ್ಟಿಗಳು, ಬೆಲ್ಟ್ ಹಾಗೂ ಬಕಲ್ ಹಾಕಿ ಮೆರೂನ್, ಬ್ರೌನ್, ಬ್ಲಾಕ್, ರೆಡ್, ಹೀಗೆ ಹಲವು ಬಣ್ಣಗಳಲ್ಲಿ ನಮ್ಮ ನಮ್ಮ ಪಾದದ ಅಳತೆಗೆ ಹೊಲಿದುಕೊಡುತ್ತಿದ್ದರು. ಅಂದು ಆ ಚಪ್ಪಲಿಯ ಬೆಲೆ ಎರಡಂಕೆ ಮಾತ್ರ. ಆಗ ಅದೇ ದೊಡ್ಡದು ಎನ್ನಿ! ನಮ್ಮ ಮನೆಗೆ ಹತ್ತಿರವೇ ಇದ್ದ ಜಾಲಿ ಫುಟ್‌ವೇರ್ ಎಂಬ ಹೆಸರಿನ ಚಪ್ಪಲಿ ಹೊಲೆಯುವ ಅಂಗಡಿಯಲ್ಲಿ ಎಲ್ಲರೂ ಪಾದದಳತೆಗೆ ಚಪ್ಪಲಿ ಹೊಲಿಸಿಕೊಂಡು ಹಾಕಿಕೊಳ್ಳುತ್ತಿದ್ದನ್ನು ನೋಡಿ ಮೊದಲೇ ತುಸು ಕುಳ್ಳಗಿದ್ದ ನನಗೆ ನಾನೂ ಕೂಡ ಅದೇ ತರಹದ ಹಿಮ್ಮಡಿ ಎತ್ತರದ ಚಪ್ಪಲಿ ಹಾಕಬೇಕೆಂಬ ಬಯಕೆ ಮೂಡಿತು.

ಆ ಅಂಗಡಿಗೆ ಹೋಗಿ ಚಪ್ಪಲಿಗೆ ಎಷ್ಟು ಬೆಲೆ, ಹಣದ ಪಾವತಿ ಹೇಗೆ ಎಂಬುದನ್ನು ವಿಚಾರಿಸಿದಾಗ ಸ್ವಲ್ಪ ಹಣ ಅಡ್ವಾನ್ಸ್ ಕೊಡಬೇಕು, ಉಳಿದದ್ದು ಚಪ್ಪಲಿ ರೆಡಿಯಾದ ನಂತರವೆಂದು ತಿಳಿಸಿದರು. ಅದನ್ನು ಮನೆಯಲ್ಲಿ ತಿಳಿಸಿ ಹೇಗೋ ಹಣ ಕೇಳಿಕೊಂಡೆ. ಅಡ್ವಾನ್ಸ್ ಹಣವನ್ನು ಕೊಟ್ಟು ಚಪ್ಪಲಿ ಹೊಲಿಯಲು ಹಾಕಲೆಂದು ಬೀದಿಯ ಓರಗೆಯ ಹೆಣ್ಣು ಮಕ್ಕಳೆಲ್ಲ ಹೋದೆವು. ಏನಾದರೂ ಕೊಳ್ಳಲು ಎಲ್ಲರೂ ಕೂಡಿ ಹೋಗುವುದು ಸಾಮಾನ್ಯವಾಗಿತ್ತು. ನಮ್ಮ ಬಾಲ್ಯವೆಂದರೆ ಹಾಗೇ ಒಬ್ಬರು ಒಂದುವಸ್ತುವನ್ನು ಕೊಳ್ಳಬೇಕೆಂದರೂ ಎಲ್ಲ ಓರಗೆಯವರೂ ಒಟ್ಟಾಗಿ ಹೋಗುತ್ತಿದ್ದೆವು. ಅಲ್ಲಿ ಈಗಾಗಲೆ ಹಲವಾರು ಬಾರಿ ಹೋಗಿ ವಿಚಾರಿಸಿ ಬಂದಂತೆ ಮೊದಲು ಪಾದದ



ಅಳತೆಗಾಗಿ ಒಂದು ರಟ್ಟನ್ನು ಇಟ್ಟು ಅದರ ಮೇಲೆ ನಮ್ಮ ಪಾದವನ್ನು ಇಡಲು ಹೇಳಿದರು. ನನ್ನವೋ ಪುಟ್ಟ ಪಾದಗಳು. ಆಗ ನಾನೊಂದು ಪ್ರಶ್ನೆ ಕೇಳಿದೆ ಪಾದ ಎಷ್ಟು ದೊಡ್ಡದಿದ್ದರೂ, ಚಿಕ್ಕದಿದ್ದರೂ ಒಂದೇ ರೇಟಾ ? ಎಂದು. ಹೌದು ಎಂದರು.


ಕೂಡಲೇ ನಾವು ಗೆಳತಿಯರೆಲ್ಲ ಒಬ್ಬರಿಗೊಬ್ಬರು ಮುಖ ನೋಡಿಕೊಂಡು ಮಾತನಾಡಿಕೊಂಡು, ಹೊರಗೆ ಬಂದು ನೋಡ್ರೆ ಚಿಕ್ಕ ಚಪ್ಪಲಿಗೂ ದೊಡ್ಡ ಚಪ್ಪಲಿಗೂ ಒಂದೇ ರೇಟಂತೆ, ಪರವಾಗಿಲ್ಲ ಹೆಂಗೆ ಹೇಳ್ತಾರೆ ನೋಡು? ಅದಕ್ಕೆ ನಾವು ಒಂದು ಕೆಲ್ಸ ಮಾಡೋಣ, ಯಾರ ಕಾಲು ದೊಡ್ಡದಿದೆ ಅವರ ಅಳತೆಗೆ ಹೊಲಿಸೋಣ ಎಂದು ಚರ್ಚಿಸಿ ತೀರ್ಮಾನಿಸಿದೆವು. ಚಪ್ಪಲಿ ಹಾಕಬೇಕಾದವಳು ನಾನು ಅಳತೆ ಬೇರೆಯವರ ಪಾದದ್ದು ! ಹೇಗಿದೆ ನೋಡಿ ನಮ್ಮ ತರಲೆ ತಲೆ. ! ಆಗ ನಮ್ಮ ಲೆಕ್ಕಾಚಾರವಿಷ್ಟೆ. ದೊಡ್ಡ ಪಾದಕ್ಕೂ ಚಿಕ್ಕ ಪಾದದಳತೆಗೂ ಒಂದೇ ಬೆಲೆಯಾದರೆ ಪುಟ್ಟ ಪಾದದ ಅಳತೆ ಚಪ್ಪಲಿಗೇಕೆ ಅವರಿಗೆ ಅಷ್ಟೇ ಹಣ ಕೊಡಬೇಕು? ಎಂಬುದು. ಸರಿ ನನಗೆ ಒಂದು ಯೋಚನೆ ದೊಡ್ಡ ಪಾದಕ್ಕೂ ಅಷ್ಟೆ ಚಿಕ್ಕ ಪಾದಕ್ಕೂ ಅಷ್ಟೇ ಆದಮೆಲೆ ನಾನ್ಯಾಕೆ ಸ್ವಲ್ಪ ದೊಡ್ಡ ಅಳತೆ ಹೊಲಿಸಿಕೊಳ್ಳಬಾರದು? ಎನಿಸಿ, ಮುಂದೆ ನನ್ನ ಕಾಲು, ಪಾದ ಬೆಳೆಯಬಹುದೆಂಬ ಭಾವನೆಯಿಂದ ನನ್ನ ಪುಟ್ಟ ಪಾದಗಳಿಗೆ ಬದಲಾಗಿ ನೆರೆಮನೆಯ ನನ್ನ ಗೆಳತಿಯ ದೊಡ್ಡ ಪಾದಗಳ ಅಳತೆ ಕೊಟ್ಟು ಅಡ್ವಾನ್ಸ್ ಹಣ ಕೊಟ್ಟು ಬಿಲ್ ಪಡೆದು ಗೆಳತಿಯರೆಲ್ಲ, ಚಪ್ಪಲಿ ಸಿಗುವ ದಿನ, ಘಳಿಗೆ, ವಾರ ಎಲ್ಲವನ್ನೂ ಕೇಳಿಕೊಂಡು ಮನೆಗೆ ವಾಪಸಾದೆವು. ಚಪ್ಪಲಿ ಸಿಗುವ ದಿನದವರೆಗೂ ಬರೀ ಎತ್ತರದ ಚಪ್ಪಲಿಯನ್ನು ತೊಟ್ಟು ನೆಡೆಯುವ ಕನಸೇ ಕನಸು. ನಮ್ಮ ಬಾಲ್ಯ ಎಷ್ಟು ಸೊಗಸಾಗಿತ್ತೆಂದರೆ ಚಿಕ್ಕ ಚಿಕ್ಕದನ್ನೂ ದೊಡ್ಡದಾಗಿ ಅದೆಷ್ಟು ಸಂಭ್ರಮಿಸುತ್ತಿದ್ದೆವು.! ಆ ಸಂಭ್ರಮವೀಗ ಭ್ರಮೆಯೇ ಸರಿ. ಇಂದಿನ ಕೊಳ್ಳುಬಾಕ ಸಂಸ್ಕೃತಿಯಲ್ಲಿ ತೃಪ್ತಿಗೇ ಕೊರತೆ! ಅಪರೂಪದ ಹೋಳಿಗೆ ಅದೆಷ್ಟು ರುಚಿ! ನಿತ್ಯವೂ ಹೋಳಿಗೆಯಾದರೆ ಅದೆಲ್ಲಿದೆ ಖುಷಿ?

ಅಂದಿನ ನಮ್ಮ ಬಾಲ್ಯದ ವಿಶೇಷವೆಂದರೆ ಒಬ್ಬರಿಗೆ ಒಂದು ವಸ್ತು ಬೇಕೆಂದರೆ ಇಡೀ ಬೀದಿಯ ಓರಗೆಯ ಮಕ್ಕಳೆಲ್ಲಾ ಒಟ್ಟಾಗಿ ಕಪಿ ಸೈನ್ಯದಂತೆ ಹೋಗುತ್ತಿದ್ದುದು. ಮೋಚಿ ಹೇಳಿದ ಚಪ್ಪಲಿ ಕೊಡುವ ಆ ದಿನ ಬಂದೇ ಬಿಟ್ಟಿತು. ಅವರು ಕೊಟ್ಟ ಬಿಲ್ ಜೋಪಾನವಾಗಿರಿಸಿಕೊಂಡು ಎಲ್ಲ ಗೆಳತಿಯರೂ ಒಟ್ಟಾಗಿ ಹೋದೆವು ಅಂದು ರೆಡಿಯಾಗಿರಲಿಲ್ಲ. ಮತ್ತೆರೆಡು ದಿನಗಳ ನಂತರ ಹೋದಾಗ ಚಪ್ಪಲಿ ರೆಡಿ ಎಂದರು .ಎಲ್ಲರಿಗೂ ಹೇಗಿದೆಯೋ ಎಂದು ನೋಡುವ ತವಕ ಅತ ಚಪ್ಪಲಿಯನ್ನು ತೋರಿಸಿದ. ಎಲ್ಲರೂ ಮುಟ್ಟಿ ಮುಟ್ಟಿ ನೋಡಿದೆವು ಮೆಟ್ಟಿ ನೋಡೋಣವೆನ್ನುವಷ್ಟರಲ್ಲಿ ಮೋಚಿ ಸ್ವಲ್ಪ ಪಾಲೀಷ್ ಆಗಬೇಕು ಕುಳಿತುಕೊಳ್ಳಿ ಎಂದರು. ಎಲ್ಲರೂ ಆತ ಪಾಲೀಷ್ ಮಡುವುದನ್ನೇ ಕುತೂಹಲ ಮತ್ತು ಕಾತರದಿಂದ ನೋಡುತ್ತಾ ಕುಳಿತೆವು. ನನಗೋ ಅ ಎತ್ತರದ ಹಿಮ್ಮಡಿ ಚಪ್ಪಲಿಯನ್ನು ಯವಾಗ ಧರಿಸುತ್ತೇನೊ ಎಷ್ಟು ಉದ್ದ ಕಾಣುತ್ತೇನೋ ಎಂಬ ಕಾತುರ. ಪಾಲಿಷ್ ಆದ ಮೇಲೆ ಅತ ಉಳಿಕೆ ಹಣ ಪಡೆದುಕೊಂಡು ಚಪ್ಪಲಿಯನ್ನು ಹಾಕಿ ನೋಡಿ ಎಂದ. ಸಂಭ್ರಮದಿಂದ ಚಪ್ಪಲಿಯನ್ನು ಬೆಳ್ಳನೆಯ ಪುಟ್ಟ ಪಾದಗಳಿಗೆ ಮೆಟ್ಟಿದರೆ ನನ್ನ ಪಾದಗಳಿಗಿಂತ ಎರಡು ಇಂಚು ಉದ್ದ.! ಅಯ್ಯೋ ದೇವರೇ ಅಗಲವನ್ನೇನೋ ಬೆಲ್ಟು ಬಕಲಿನಿಂದ ಸರಿಹೊಂದಿಸಿಕೊಳ್ಳಬಹುದು ಆದರೆ ಉದ್ದವನ್ನು ಹೇಗೆ ಹೊಂದಿಸಿಕೊಳ್ಳಲಿ? ನನ್ನ ಮುಖ ಇಂಗು ತಿಂದ ಮಂಗನಂತಾಯ್ತು. ಎಲ್ಲರೂ ಮುಖ ಮುಖ ನೋಡಿಕೊಂಡೆವು. ಅವನನ್ನು ಕೇಳುವಂತಿಲ್ಲ ಬಿಡುವಂತಿಲ್ಲ ಏಕೆಂದರೆ ಅವನದೇನೂ ತಪ್ಪಿರಲಿಲ್ಲ ನಾವು ಕೊಟ್ಟ



ಅಳತೆಯೇ ಹಾಗಿತ್ತು. ಏನೂ ಮಾತನಾಡದೆ ಮನೆಗೆ ತಂದೆವು. ಮನೆಯಲ್ಲಿ ಹಾಕಿ ತೋರಿಸಿದಾಗ ಏನಿದು ಅಷ್ಟು ದುಡ್ಡು ಕೊಟ್ಟು ಹೊಲಿಸಿಕೊಂಡಿರೋ ಚಪ್ಪಲಿ ಹಿಂದೆ ಇಷ್ಟುದ್ದ ದೊಡ್ಡದು ಮೊದ್ಲು ಹೋಗಿ ವಾಪಸ್ ಕೊಟ್ಟು ಸರಿಯಾಗಿರೋ ಅಳತೆ ತಗೊಂಡು ಬಾ ಎಂದರು. ಏನೂ ಹೇಳುವಂತಿಲ್ಲ ಬಿಡುವಂತಿಲ್ಲ. ಇಲ್ಲ. . ಇಲ್ಲ ನನ್ನ ಪಾದ ಈಗ ಚಿಕ್ಕದು ಕಾಲೇಜಿಗ್ಹೋದ ಮೇಲೆ ಇನ್ನೂ ಬೆಳೀಬೌದು ಅಂತ ಒಂಚೂರು ದೊಡ್ಡ ಅಳತೆ ಕೊಟ್ಟಿದ್ದೆ ಎಂದು ಸುಳ್ಳು ಹೇಳಿದೆ.

ಅಳತೆ ಮೀರಿದ ಅ ಚಪ್ಪಲಿಯನ್ನು ಅಂತೂ ಸುಮಾರು ದಿನ ಹಾಗೇ ಇಟ್ಟು ಭರತ ರಾಮನ ಪಾದುಕೆಯನ್ನು ಇಷ್ಟರ ಮಟ್ಟಿಗೆ ಜೋಪಾನ ಮಾಡಿರಲಿಲ್ಲವೋ ಏನೋ ನಾನಂತೂ ಆಗಾಗ್ಗೆ ರಟ್ಟಿನ ಪೆಟ್ಟಿಗೆಯಿಂದ ತೆಗೆದು ಬಟ್ಟೆಯಲ್ಲಿ ಒರೆಸಿ ಒರೆಸಿ ಇಡುತ್ತಾ ನಾಳೆ ನನ್ನ ಕಾಲಿನ ಪಾದ ದೊಡ್ಡದಾಗಬಹುದೆನೋ ಎಂಬ ನಿರೀಕ್ಷೆಯಲ್ಲೇ ಇದ್ದೆ. ಆದರೆ ವರುಷ ಕಳೆದರೂ ಪಾದ ಇದ್ದಷ್ಟೇ ಇದ್ದು ಬೆಳೆಯಲೇ ಇಲ್ಲ ನೋಡಿ. ಪಾದ ಬೆಳೆಯುವ ಸೂಚನೆಯೇ ಕಾಣದಾದಾಗ, ಮಾಡಿದ ತಪ್ಪಿಗೆ, ಓಡಿಸಿದ ತರಲೆ ಬುದ್ಧಿಗೆ, ವಿಧಿಯಿಲ್ಲದೆ ಚಪ್ಪಲಿಯನ್ನು ಹಾಕಿಕೊಂಡು, ಪಾದಕ್ಕಿಂತ ಚಪ್ಪಲಿ ಉದ್ದ ಇರುವುದು ಯಾರಿಗೂ ತಿಳಿಬಾರದೆಂದು, ಹಾಕುತ್ತಿದ್ದ ಲಂಗ, ಮ್ಯಾಕ್ಸಿ (ಈಗಿನ ಗೌನ್) ಯನ್ನು ಚಪ್ಪಲಿ ಕಾಣದಂತೆ ಉದ್ದವಾಗಿ ಧರಿಸಿಕೊಂಡು ಉಪಯೋಗಿಸಿದೆ. ಎಂದೋ ಒಂದು ದಿನ ಚಪ್ಪಲಿಗೆ ಕೊಟ್ಟ ಅಳತೆಯ ನಿಜ ಸಂಗತಿಯನ್ನು ಮನೆಯಲ್ಲಿ ಎಲ್ಲರಿಗೂ ತಿಳಿಸಿದಾಗ ಎಲ್ಲರೂ ಆಹಾ ನಿನ್ನ ತಲೆಗೆ, ನಿನ್ನ ದೂರಾಲೋಚನೆಗೆ ಪ್ರಶಸ್ತಿ ಕೊಡಬೇಕೆಂದು ಮನೆ ಮಂದಿಯೆಲ್ಲಾ ಅಣಕಿಸಿದರು. ಈಗಲೂ ಒಮ್ಮೊಮ್ಮೆ ನಾನೇನಾದರೂ ಯಾವುದೇ ವಿಷಯದಲ್ಲಿ ಸಜೆಷನ್ ಕೊಡಲು ಹೋದರೆ ಎಲ್ಲರೂ ಅಮ್ಮಾ ತಾಯಿ ಬೇರೆಯವರ ದೊಡ್ಡ ಪಾದದಳತೆಗೆ ನೀನು ಚಪ್ಪಲಿ ಹೊಲಿಸಿಕೊಂಡ ಹಾಗಲ್ಲ ! ಎಂದು ಅಪಹಾಸ್ಯ ಮಾಡಿ ರೇಗಿಸುವುದು ನಮ್ಮ ಮನೆಯಲ್ಲಿ ಆಗಾಗ್ಗೆ ನಡೆಯುತ್ತಲೇ ಇರುತ್ತದೆ. ಅದರೊಂದಿಗೆ ಬಂಧು ಬಳಗದವರಿಗೆ ಮತ್ತು ಈಗಿನ ನಮ್ಮ ಮಕ್ಕಳಿಗೂ ಕೂಡ ಹೇಳಿ ಅಣಕಿಸುತ್ತಾರೆ! ■



# ಸಂದರ್ಶನ

ಡಾ. ಎ. ಭಾನು

ಉದ್ಯೋಗಾಕಾಂಕ್ಷಿಗಳು ಸಂದರ್ಶನಕ್ಕೆಂದು ಕುಳಿತಿದ್ದರು. ಐಐಟಿ, ಎನ್ ಐ ಟಿ ಪದವೀಧರರು ಮತ್ತು ಯಡಿಯೂರು ಸರ್ಕಾರಿ ಕಾಲೇಜಿನ ಯಂಗ್ಟ ಕಾದಿದ್ದರು.

ಮೊದಲಿಗೆ ಐಐಟಿ ಕುಲಭೂಷಣನ ಸರದಿ ಬಂತು. ಅವನು ಒಳಗಡೆ ಹೋದನು.

ಆಫೀಸರ್: "ನೀನು ರೈಲಿನಲ್ಲಿ ಪ್ರಯಾಣ ಮಾಡುತ್ತಿರುವೆ ಅಂದುಕೋ. ಇದ್ದಕ್ಕಿದ್ದಂತೆ ನಿನಗೆ ತುಂಬಾ ಸೆಖೆ ಆಗತ್ತೆ. ಆಗ ನೀನು ಏನು ಮಾಡುತ್ತೀಯಾ??"

ಐಐಟಿ: "ಆಗ ನಾನು ಕಿಟಕಿಯನ್ನು ತೆರೆಯುತ್ತೇನೆ"

ಆಫೀಸರ್: "ಬಹಳ ಸಂತೋಷ" ಈಗ ಹೇಳು, "ಆ ಕಿಟಕಿಯ ಕ್ಷೇತ್ರ 1.5ಚ.ಮೀ ಇದೆ ಮತ್ತು ರೈಲು ಗಂಟೆಗೆ 80ಕಿಮೀ ಪಶ್ಚಿಮಾಭಿಮುಖವಾಗಿ ಹೋಗುತ್ತಿದೆ, ಮತ್ತೆ ಗಾಳಿಯ ವೇಗ ಸೆಕೆಂಡಿಗೆ 5ಮೀ ದಕ್ಷಿಣಾಭಿಮುಖವಾಗಿ ಚಲಿಸುತ್ತಿದೆ. ಹಾಗಿದ್ದರೆ ಆ ಭೋಗಿಯ ಒಳಗಿನ ಉಷ್ಣಾಂಶ ಎಷ್ಟು ನಿಮಿಷದಲ್ಲಿ 22 ಡಿಗ್ರಿ ಸೆಂಟಿಗ್ರೇಡ್ ಆಗುತ್ತದೆ??"

ಐಐಟಿ ಭೂಪ ಉತ್ತರಿಸಲಾಗದ ಕಾರಣದಿಂದ ಅವನನ್ನು ಫೇಲ್ ಮಾಡಲಾಯಿತು .

ಅವನು ಹೊರಗಡೆ ಬಂದು ಆ ಪ್ರಶ್ನೆಯನ್ನು ಎನ್ ಐ ಟಿ ಮುಕುಟಪ್ರಾಯನಿಗೆ ಹೇಳಿದನು. ಸ್ವಲ್ಪ ಸಮಯದ ನಂತರ ಎನ್.ಐ.ಟಿ ಪ್ರಯಳಾಂತಕನ ಸರದಿ ಬಂದಿತು.

ಆಫೀಸರ್: "ನೀನು ರೈಲಿನಲ್ಲಿ ಪ್ರಯಾಣ ಮಾಡುತ್ತಿರುವೆ ಅಂದುಕೋ. ಆಗ ನಿನಗೆ ಇದ್ದಕ್ಕಿದ್ದ ಹಾಗೆ ಸೆಖೆ ಆಗತ್ತೆ. ನೀನು ಏನು ಮಾಡುತ್ತೀಯಾ??"

ಎನ್ ಐ ಟಿ: "ನಾನು ನನ್ನ ಕೋಟನ್ನು ತೆಗೆಯುತ್ತೇನೆ"

ಆಫೀಸರ್: "ಆದರೂ ಸೆಖೆ ಆಗುತ್ತಿದೆ. ಆಗೇನು ಮಾಡುತ್ತೀಯಾ??"

ಎನ್ ಐ ಟಿ: "ನಾನು ನನ್ನ ಶರ್ಟನ್ನು ಬಿಚ್ಚುತ್ತೇನೆ"

ಆಫೀಸರ್: (ಸಿಟ್ಟಿನಿಂದ) "ಆದರೂ ಸೆಖೆ ಆಗುತ್ತಿದೆ. ಆಗೇನು ಮಾಡುತ್ತೀಯಾ??"

ಎನ್ ಐ ಟಿ: "ನಾನು ನನ್ನ ಬನಿಯನ್ ಕೂಡಾ ತೆಗೆಯುತ್ತೇನೆ"

ಆಫೀಸರ್: (ಮುಖ ಸಿಂಡರಿಸಿಕೊಂಡು) "ಆದರೂ ಸೆಖೆ ಆಗುತ್ತಿದೆ. ಆಗ??"

ಎನ್ ಐ ಟಿ: "ಸೆಖೆಯಿಂದ ಸಾಯುತ್ತೇನೆ. ಆದರೆ ಕಿಟಕಿ ಮಾತ್ರ ತೆಗೆಯುವದಿಲ್ಲ!!!"

ಎನ್ ಐ ಟಿ ಔಟ್!

ಈಗ ಯಡಿಯೂರು ಯಂಗ್ಟನ ಸರದಿ....



ಆಫೀಸರ್: "ನೀನು ರೈಲಿನಲ್ಲಿ ಪ್ರಯಾಣ ಮಾಡುತ್ತಿರುವೆ ಅಂದುಕೋ. ನಿನಗೆ ತುಂಬಾ ಸೆಖೆ ಆಗತ್ತೆ. ಆಗ ನೀನು ಏನು ಮಾಡುತ್ತೀಯಾ??"

ಯಂಗ್ಟ: "ತಂಗಾಳಿ ಒಳಬರಲು ನಾನು ಕಿಟಕಿಯನ್ನು ತೆರೆಯುತ್ತೇನೆ"

ಆಫೀಸರ್: (ಖುಷಿಯಿಂದ) "ವೆರಿ ಗುಡ್, ಐ ಸೇ"

ಈಗ ಹೇಳು "ಆ ಕಿಟಕಿಯ ಅಳತೆ 1.5ಚ.ಮೀ ಇದೆ ಮತ್ತು ರೈಲು ಗಂಟೆಗೆ 80ಕಿಮೀ ಉತ್ತರಾಭಿಮುಖವಾಗಿ ಹೋಗುತ್ತಿದೆ, ಮತ್ತೆ ಗಾಳಿಯ ವೇಗ ಸೆಕೆಂಡಿಗೆ 5ಮೀ ದಕ್ಷಿಣಾಭಿಮುಖವಾಗಿ ಚಲಿಸುತ್ತಿದೆ.. ಹಾಗಿದ್ದರೆ ಆ ಭೋಗಿಯ ಒಳಗಿನ ಉಷ್ಣಾಂಶ ಎಷ್ಟು ನಿಮಿಷದಲ್ಲಿ 22 ಡಿಗ್ರಿ ಸೆಂಟಿಗ್ರೇಡ್ ಆಗುತ್ತದೆ??"

ಯಂಗ್ಟ: "ಮತ್ತಷ್ಟು ಮಾಹಿತಿ ಕೊಟ್ಟರೆ ಉತ್ತರ ಹೇಳ್ತೀನಿ"

ಆಫೀಸರ್: "ಯಾವ ಅಂಶಗಳ ವಿವರ ಬೇಕು?"

ಯಂಗ್ಟ: "ಬೋಗಿಯ ಉದ್ದ ಅಗಲ ಎತ್ತರ ಮಿ.ಮಿ.ನಲ್ಲಿ ಎಷ್ಟು ? ಬೋಗಿಯ ಒಳಗಿನ ತಾಪಮಾನ ಏನು? ಹೊರಗಡೆ ತಾಪಮಾನ ಎಷ್ಟು? ಬೀಸುವ ಗಾಳಿಯ ತಾಪಮಾನ ಎಷ್ಟು? ರೈಲು ಚಲಿಸುತ್ತಿರುವುದು ಬೆಳಗ್ಗೇನಾ, ಮಧ್ಯಾಹ್ನವಾ, ಸಂಜೆಯಾ, ರಾತ್ರಿಯಾ? ಎಷ್ಟು ಕಿಟಕಿಗಳಿವೆ? ಎಷ್ಟು ತೆರೆದಿವೆ? ಯಾವ ದಿಕ್ಕಿನಲ್ಲಿ ತೆರೆದಿವೆ? ಬೋಗಿಯಲ್ಲಿ ಎಷ್ಟು ಜನ ಇದ್ದಾರೆ ? ಮಕ್ಕಳೆಷ್ಟು, ಹೆಂಗಸರೆಷ್ಟು, ಗಂಡಸರೆಷ್ಟು ? ಅವರವರ ವಯಸ್ಸೇನು? ಅವರ ತೂಕ, ಎತ್ತರ ಎಷ್ಟು? ಬೋಗಿಯಲ್ಲಿ ಎಷ್ಟು ಫ್ಯಾನ್ ಇವೆ? ಬೋಗಿಯ ಬಾಗಿಲು ಎಷ್ಟು ತೆರೆದಿವೆ? ಬೋಗಿಯ ಹೊರಗಿನ ಬಣ್ಣ ಏನು? ಕಿಟಕಿಯ ಗಾಜು ಪಾರದರ್ಶಕವೋ ಅಥವಾ ಬಣ್ಣದ್ದೋ?"

"ಇಷ್ಟೆಲ್ಲಾ ನಿಮಗೆ ಗೊತ್ತಿಲ್ಲದಿದ್ದರೆ ನಾನೇ ಲೆಕ್ಕ ಮಾಡಿಕೊಂಡು ಉತ್ತರ ಹೇಳ್ತೀನಿ. ಬೋಗಿಯ ಒಳಗಿನ ತಾಪಮಾನ 22 ಡಿಗ್ರಿ ಸೆಲ್ಸಿಯಸ್ ಆಗಲು 13ನಿಮಿಷ 47 ಸೆಕೆಂಡ್ ಬೇಕು"

ಆಫೀಸರ್ ಸ್ವಲ್ಪ ಟಾಯ್ಲೆಟ್ ಕಡೆ ಹೋಗಿ ಬರುತ್ತೇನೆ ಅಂತ ಎದ್ದು ಹೋದರು. ಅಲ್ಲಿ ಅವರಿಗೆ ತಲೆ ಸುತ್ತಿ ಬಂದಂತಾಗಿ ನೇರವಾಗಿ ಮನೆಗೆ ಹೋಗಿಬಿಟ್ಟರಂತೆ. ಇನ್ನೊಮ್ಮೆ ಸಂದರ್ಶನಕ್ಕೆ ಕೂರಲಿಲ್ಲ...

******

ಯಡಿಯೂರು ಯಂಗ್ಟ ಈಗ ಆ ಕಂಪನಿಯಲ್ಲಿ ಸಂದರ್ಶನಕಾರನಂತೆ! ■



# ಮಹಿಳೆಯರ ಪುಣ್ಯಕ್ಷೇತ್ರ ಟೂರ್!

**ಇ.ಆರ್. ರಾಮಚಂದ್ರನ್**

ಅಜ್ಜಿ ಫಾರಿನ್ ಟೂರ್ ಮುಗಿಸಿ ಕೆಂಪೇಗೌಡ ಟರ್ಮಿನಲ್‌ಗೆ ಬಂದು ಇಳಿದರು.

'ನಿನ್ನ ವರ್ಲ್ಡ್ ಟೂರ್ ಮುಗಿಸಿ ಕೆಂಪಗೆ ಆಗಿದ್ದೀಯ ಅಜ್ಜಿ! ಕೆಂಪಜ್ಜಿ ಅಂತ ಕರೀಬಹುದು ನಿನ್ನ ಈಗ! ನೀನಿಲ್ಲದ್ದೆ ಮನೆಯಿರಲಿ, ಬೆಂಗಳೂರೇ ಬಿಕೋ ಅಂತ ಇತ್ತು. ನಿನ್ನ ಸಾಫ್ಟ್ ವೇರ್, ಹಾರ್ಡವೇರ್ ಪಟಾಲಂ ಯಾರೂ ಇಲ್ಲಿ ತಲೆ ಹಾಕಿಲ್ಲ.'

'ನೀನು ದೊಣ್ಣೆ ಆಗಿದೀಯ! ಸೀತಮ್ಮ ಬಂದ್ರೆ ಇಲ್ಲಿ ಯಾರ ಹತ್ರ ಮಾತಾಡ್ತಾರೋ? ಅವರೀಗ – ಆರ್ಟಿಫಿಸಿಯಲ್ ಇಂಟೆಲಿಜೆನ್ಸ್ – ಏ.ಐ. ಬಗ್ಗೆ ಚೆನ್ನಾಗಿ ತಿಳ್ಕೊಂಡಿದಾರೆ. ನೀನು ಏ. ಐ. ಅಂದ್ರೆ ಹಸೂಗೋ ಕರೂಗೋ ಓಡ್ಸಕ್ಕೆ 'ಏಯ್' ಅಂತ ಕೂಗ್ತಾರಲ್ಲಾ ಅದು ಅಂತ ನೀನು ಅದರ ವಿಚಾರ ಎಲ್ಲಿ ಲಾಂಗ್ ಕ್ಲಾಸ್ ತೊಗೋಳ್ತಿಯೋಂತ ಹೆದರಿ ಅವರು ಬಂದಿರಲ್ಲ. ಹಾರ್ಡವೇರ್ ಹರಿಣಿ ಈಗ ಆನ್–ಲೈನ್ ಹಾರ್ಡವೇರ್ ಕ್ಲಾಸ್ ತೊಗೋಳ್ತಾರೇಂತ ಹೇಳಿದ್ರು. ನಿನ್ಗೆ ಗೊತ್ತಿರೋ ಹಾರ್ಡ್ವೇರ್ ಅಂದ್ರೆ ಕೊಳಾಯಿ, ಪೈಪು, ನಲ್ಲಿ ಅಷ್ಟೆ. ನಿನಗೆ ಆಫ್–ಲೈನೇ ಕಷ್ಟ. ಇನ್ನೂ ಆನ್–ಲೈನ್ ಕೇಳ್ಲೇ ಬೇಡ. ಅದಕ್ಕೇ ಅವ್ರೂ ಇತ್ಲಾ ಕಡೆ ತಲೆಹಾಕಿರಲ್ಲ'.

ಈಗ ಬಂದು ಇಳಿತಾ ಇದಾರೆ; ಕಾಲು ಕೆರೆದು ಕೊಂಡು ಜಗಳಕ್ಕೆ ಬಂದ ಓಪನ್ ಇನ್ವಿಟೇಷನ್ನ ಇಗ್ನೋರ್ ಮಾಡ್ದೆ. ಹಲ್ಲೂ ಕಡೀಲಿಲ್ಲ. ಏನಾದ್ರೂ ಹೆಚ್ಚು ಕಡಿಮೆ ಆದ್ರೆ ಸುಮ್ನೆ ಡೆಂಟಿಸ್ಟ್ಗೆ ಹಣ ಸುರೀಬೇಕು.

ಮನೇಗೆ ಹೋಗಿ ಫಿಲ್ಟರ್ ಕಾಫಿ ಗಂಟಲಿಗೆ ಬಿದ್ದ ಮೇಲೆ ಅಜ್ಜಿ ಹೈ– ಟೆಕ್ ನಿಂದ ಸ್ಪಿರಿಚುಅಲ್ ಅಜ್ಜಿ ಆದ್ರು.

'ಅಲ್ವೋ! ಮಹಿಳೆಯರಿಗೆ ಊರು ಒಳಗೆ, ರಾಜ್ಯದಲ್ಲಿ ಎಲ್ಲಿಗೆ ಬೇಕಾದ್ರೂ ಹೋಗೋದಕ್ಕೆ ನಮ್ಮ ಹೊಸ ಗವರ್ನಮೆಂಟ್ ಬಸ್ ಪ್ರಯಾಣಾನ ಫ್ರೀ ಮಾಡೀದಾರಂತೆ, ಹೌದೇನೋ?'

'ಹೌದು ಅಜ್ಜಿ! ಬಿಎಮ್‌ಟಿಸಿ ಮತ್ತು ಕೆಎಸ್‌ಆರ್‌ಟಿಸಿಲಿ ಕೂತ್ಕೊಂಡು ಎಲ್ಲಿಗೆ ಬೇಕಾದೂ ಹೋಗ್ಬಹುದು. ಒಂದು ಬಿಡಿ ಕಾಸು ಕರ್ಚಿಲ್ಲ.'

'ಹೌದಾ?'

'ಅಷ್ಟೇ ಅಲ್ಲ ಅಜ್ಜಿ. ಹೆಂಗಸರು ಈಗ ರಾಜ್ಯದಲ್ಲಿ ಯಾವ ಪುಣ್ಯಕ್ಷೇತ್ರಕ್ಕೂ ಹೋಗ್ಬಹುದು. ಹೋಗಿ ಬರೋದಕ್ಕೆ ಎಲ್ಲಾ ಫ್ರೀ.'

'ಪರ್ವಾಗಿಲ್ಲ ಕಣೋ! ರಾಮರಾಜ್ಯ ಎಷ್ಟು ಬೇಗ ತಂದು ಬಿಟ್ರು ನೋಡು.'

'ಎಷ್ಟು ರಷ್ ಆಗಿದೇ ಅಂದ್ರೆ ಬಸ್ಸುಗಳು ಸಾಲಲ್ಲಾ ಅಂತ ಇನ್ನೂ 120 ಹೊಸಾ ಬಸ್ ಆರ್ಡರ್ ಮಾಡ್ತಾರಂತೆ!'



'ನೀನು ಏನೇ ಹೇಳು ನಮ್ ಗವರ್ನಮೆಂಟು ಸ್ವಲ್ಪ ಪೆದ್ದು ಕಣೋ'!

'ನೀನು ಏನು ಹೇಳ್ತಿದೀಯ ಅಜ್ಜಿ? ಹೋಲ್ ಸ್ಟೇಟಲ್ಲಿ ಎಲ್ಲಾರೂ ಗವರ್ನಮೆಂಟನ್ನ ಹೊಗಳ್ತಾ ಇದಾರೇ!'

'ಅಲ್ವೋ! ಇಷ್ಟೆಲ್ಲಾ ಮಾಡ್ದೋವ್ರು ಇಲ್ಲಿಂದ ಕೊಲ್ಲೂರು ಮೂಕಾಂಬಿಕೆ

ದೇವಸ್ಥಾನಕ್ಕೆ ಮಹಿಳೆಯರ್ನ ಫ್ರೀ ಆಗಿ ಕರ್ಕೊಂಡು ಹೋಗಿ ಅಲ್ಲಿ ತೆಂಗಿನಕಾಯಿ, ಹೂವು ಹಣ್ಣು. ಕರ್ಪೂರ, ಊದುಕಡ್ಡಿ, ಕುಂಕುಮ, ಅರಿಶಿನ ಅವ್ರೇ ಪೂಜೆಗೆ ಕೈಯಿಂದ ದುಡ್ಡು ಹಾಗ್ಬೇಕೂಂದ್ರೆ ನಾಚಿಕ್ಗೇಡಲ್ವಾ? 'ಎಲ್ಲಾ ಜಾಣ ತುಸಾ ಕೋಣ' ಅಂತ ಆಗಲ್ವಾ ನಮ್ಮ ಸರ್ಕಾರ? ಅದು ಅವರಿಗೆ ಫ್ರೀಯಾಗಿ ಕೊಡ್ಸೋದು ನ್ಯಾಯ ಅಲ್ವಾ? ಇಲ್ದಿದ್ರೆ ಯಾವ ದೇವ್ರೂ ಇದನ್ನ ಮೆಚ್ಚಲ್ಲ'.

'ನಿಜ ಅಜ್ಜಿ'.

'ಅದಕ್ಕೆ ದೇವರ ಭಾಗ್ಯ ಅಂತ ಕೊಡ್ಲಿ. 'ಸರ್ಕಾರದ ಕೆಲಸ ಮತ್ತು ದೇವ್ರ ಕೆಲಸ' ಎರಡೂ ಆಗುತ್ತೆ. ಒಂದು 300 ರೂಪಾಯಿ ಆಗುತ್ತೆ ಅಷ್ಟೆ'.

'ಒಳ್ಳೆ ಐಡಿಯ ಅಜ್ಜಿ.'

'ಆಮೇಲೆ ದೇವಸ್ಥಾನಕ್ಕೆ ಹೋದ್ಮೇಲೇ ಪ್ರಸಾದ ತೊಗೋಬೇಡ್ವಾ? 'ಅನ್ನಂ ಬ್ರಹ್ಮ, ರಸೋ ವಿಷ್ಣು... ಅಂತ ಶ್ಲೋಕಾನೆ ಇದೆಯಲ್ಲ.. ಈಗ ಎಲ್ಲಾ ಕಡೆ ಕಲ್ಲುಂಡು ತರಹ ಇರೋ ಲಾಡು ಮಾಡ್ತಾರೆ. ಜೊತೆಗೆ ಎರಡು ವಡೇನೂ ಕೊಡ್ತಾರೆ. ಇದನ್ನು ಕೊಡಿಸಿದ್ರೆ ಟೆಂಪಲ್ ಟೂರ್ ಕಂಪ್ಲೀಟ್ ಆಗುತ್ತೆ. ಇಲ್ದಿದ್ದರೆ ಯಾವ ದೇವ್ರು ಮೆಚ್ಚತಾನೋ?'

'ಇದನ್ನ ಈಗ ಸರ್ಕಾರ ಕೊಡ್ಬೇಕೂ ಅಂತ ಹೇಳ್ತೀದಿಯಾ?'

'ನಾನ್ಯಾಕೆ ಹೇಳ್ಳೋ? ಭಗವದ್ಗೀತೇಲಿ 3ನೇ ಅಧ್ಯಾಯದಲ್ಲಿ 13ನೆ ಶ್ಲೋಕದಲ್ಲಿ ಪೂಜೆ ಆದ್ಮೇಲೆ ದೇವರ ಪ್ರಸಾದ ಅಂತ ಕೈ ಮುಗಿದು ತಿನ್ನ ಬೇಕೂಂತ ಕೃಷ್ಣ ಪರಮಾತ್ಮ ಹೇಳಿದಾನೆ'.

'ಹೌದು. ದೇವಸ್ಥಾನಕ್ಕೆ ಹೋದವ್ರು ಪ್ರಸಾದ ತೊಗೊಳ್ತೀವಲ್ಲ.. ಪ್ರಸಾದ ಭಾಗ್ಯಕ್ಕೆ ಒಂದು 200 ರೂಪಾಯಿ ದೇವಸ್ಥಾನಕ್ಕೆ ಹೋಗೋ ಹೆಂಗಸ್ರಿಗೆಲ್ಲಾ ಕೊಡ್ಬೇಕು ಸರ್ಕಾರ. ಅದು ನ್ಯಾಯಾನೆ.'

'ಇಲ್ದಿದ್ರೆ ರಾಹು, ಕೇತು ಕಂಬೈನ್ಡ್ ಆಗಿ ಆಮೇಲೆ ಶನಿ ಬಂದು ಸರ್ಕಾರಕ್ಕೆ ಒದಿಯುತ್ತೆ.. ಆಮೇಲೆ..'

'ಆಮೇಲೇನು ಆಜ್ಜಿ? ಇನ್ನೊಂದು ಶುರುಮಾಡ್ದಿಯೆಲ್ಲಾ...?'

'ಯಾರಾದ್ರೂ ಹಾಸ್ಸನಾಂಬೆ ದರ್ಶನ ಆದಮೇಲೆ ಹಾಸನದಿಂದ ಒಂಟಿ ಹೆಂಗಸು ಬಸ್ ಹತ್ತಿ ರಾತ್ರಿ ಒಬ್ಬೇ ಅವ್ಳ ಊರ್ಗೆ ಹೋಗ್ಬೇಕಾ? ಮಹಿಳೆಯರಿಗೆ ಇಷ್ಟೆಲ್ಲಾ ಅನುಕೂಲ ಮಾಡ್ಕೊಟ್ಮೇಲೆ ಅವರ್ನ ಹಾಗೆ ಬಿಟ್ಟಿಬಿಡೋದಾ? ಇದು ಗವರ್ನಮೆಂಟಿಗೇ ಅವಲಕ್ಷಣ ಅಲ್ವೇನೋ'?

'ಅದಕ್ಕೆ ಈಗ ಅವ್ರು ಏನ್ ಮಾಡ್ಬೇಕೂ ಅಂತಿಯಾ? ನಿಂದು ಲಿಸ್ಟ್ ಬೆಳೀತಾ ಇದೆ'.

'ನಾನು ಸೂಪರ್ ಸೀನಿಯರ್ ಸಿಟಿಝುನ್ ಆಗಿ ಹೇಳ್ತಿದೀನಿ.. ನಾಳೆ ಏನಾದ್ರೂ ಅದ್ರೆ ಹೆಚ್ಚು ಕಡಿಮೆ ಆಗಿ ಮಾನ ಮರ್ಯಾದೆ ಹೋದ್ರೆ ಅಸೆಂಬ್ಲಿಲಿ ಗದ್ದಲ ಆಗಿ ಗವರ್ನಮೆಂಟಿಗೆ ಕೆಟ್ಟ ಹೆಸರು ಆಗಿ ಅದು ಉಳಿಯುತ್ತಾ ಅಂತ ಪ್ರಶ್ನೆ ಬರುತ್ತೆ.'



'ಹೌದು. ಅದು ನಿಜ'.

'ಅದಕ್ಕೆ ನಾ ಹೇಳೊದು ಅವ್ರಿಗೆ ರಾತ್ರಿ ಇರೋದಕ್ಕೆ ಎಲ್ಲಾ ಕಡೆ ಗವರ್ನಮೆಂಟ್

ಗೆಸ್ಟ್ ಹೌಸ್ ಏರ್ಪಾಡು ಮಾಡಿದ್ರೆ ಇಬ್ಬರಿಗೂ ಕ್ಷೇಮ. ಆವತ್ತು ಅವ್ರು ರಾತ್ರಿ ಅಲ್ಲಿದ್ದು ಊಟ ಮಾಡಿ..'

'ಊಟ?'

'ಮತ್ತೆ ಆಕೆ ಉಪವಾಸ ಮಲಗ್‌ಬೇಕೇನೊ? ಶಾಸ್ತ್ರದಲ್ಲಿ ಹೇಳಿದೆ. ಭಗವದ್ಗೀತೆ 6ನೇ ಅಧ್ಯಾಯ ಸಂಖ್ಯಾ ಯೋಗದಲ್ಲಿ ಮನುಷ್ಯ ಸ್ನಾನ ಮಾಡಿ ಪೂಜೆ/ಪ್ರಾರ್ಥನೆ ಮಾಡಿದಮೇಲೆ ಆಹಾರನ ಮಿತವಾಗಿ ತಿನ್ಬೇಕು, ಉಪವಾಸ ಮಲಗ್ಬಾರ್ದು ಅಂತ. ತೀರ್ಥಯಾತ್ರೆಗೆ ಹೋದವ್ರು ಉಪವಾಸ ಮಲಗೋದು ಯಾರಿಗೆ ಇಷ್ಟ ಆಗುತ್ತೋ? ನಮ್ ಗವರ್ನಮೆಂಟಿಗೆ ಇಷ್ಟ ಆಗುತ್ತಾ?'

'ಖಂಡಿತ ಇಷ್ಟ ಆಗಲ್ಲ ಅಜ್ಜಿ'.

'ಅದಕ್ಕೆ ಗೆಸ್ಟ್ ಹೌಸ್‌ನಲ್ಲಿ ಅವರು ಸ್ನಾನ ಮಾಡಿ ಮಡೀ ಉಟ್ಕೊಂಡು ಭೋಜನ ಮಾಡ್ಬೇಕು. ಇದನ್ನ ನಾನು ಹೇಳ್ತಿಲ್ಲ ದೂರ್ವಾಸ ಮುನಿ ಹೇಳಿದಾರೆ. ಅವರ ಸಾವಿರಾರು ಶಿಷ್ಯವೃಂದ ಕರ್ಕೊಂಡು ಗಂಗೆಲಿ ಸ್ನಾನ ಮಾಡಿದ್ರು. ಅಲ್ಲಿಂದ ಅವ್ರು ಪಾಂಡವರು ಇರೋಕಡೆ ಕಾಡ್ನಲ್ಲಿ ಊಟಕ್ಕೆ ಹೋಗೋದಿತ್ತು..... ಅದು ಆಗ್ಲಿಲ್ಲ..ಅದು ಬೇರೆ ಸಮಾಚಾರ'.

'ಅಂದ್ರೆ ಅಜ್ಜಿ ನೀನು ಹೇಳೋದು ಗೆಸ್ಟ್ ಹೌಸ್ ಈಸ್ ಎ ಮಸ್ಟ್ ಅಂತ. ಒಂದು 150–200 ಆದ್ರೂ ಕಟ್ಬೇಕಾಗುತ್ತೆ.'

'ಮಹಿಳೆಯರ ರಕ್ಷಣೆ ಗವರ್ನಮೆಂಟ್ ಮತ್ತು ಮನುಷ್ಯರ ಕರ್ತವ್ಯ. ಇದನ್ನ ನಮ್ಮ ಪ್ರಧಾನಿ ಮೋದಿಯವರೂ ಹೇಳಿದಾರೆ. ನಾವು ಎಲ್ಲಾ ಪುಣ್ಯಕ್ಷೇತ್ರದಲ್ಲೂ ಗೆಸ್ಟ್ ಹೌಸ್ ಕಟ್ಟಿಸ್ಬೇಕು. ಆವಾಗ ನೋಡು ಈ ಟೆಂಪಲ್ ಟೂರ್ ಕೀರ್ತಿ ಎಲ್ಲಾ ಕಡೆ ಹಬ್ಬಿ ಇದನ್ನ ನೋಡೋದಕ್ಕೆ ದೇಶ ವಿದೇಶದಿಂದ ಬರ್ತಾರೆ'.

'ಆ ಹೆಂಗಸರಿಗೆ ಇದು ಕೊಡಲ್ಲಾ ಅಜ್ಜಿ.. ಇದು ಬರೀ ನಮ್ಮ ರಾಜ್ಯದಲ್ಲಿರೋ ಮಹಿಳೆಯರಿಗೆ ಮಾತ್ರ.'

'ನಿನ್ನ ಬುದ್ಧಿ ಇನ್ನೂ ಬೆಳೆದಿಲ್ಲ ರಾಮು... ಮುಂದೆ ಬೈಡನ್ ಹೆಂಡತಿ, ಸುನಾಕ್ ಹೆಂಡತಿ, ಮೈಕ್ರೋನ್ ಹೆಂಡತಿ ಬಂದ್ರೆ ಅವ್ರ ಹಿಂದೆ ಇಂಟರ್‌ನ್ಯಾಷನಲ್ ಮಹಿಳೆಯರ ಮೀಡಿಯ ದಂಡು ಓಡಿ ಬರುತ್ತೆ. ಅವ್ರಿಗೆ ಫ್ರೀ ಕೊಟ್ಟರೆ ಪ್ರಪಂಚದ ಎಲ್ಲಾ ಮಿಡಿಯಾದವರು ಹಾಡಿ ಹೊಗಳ್ತಾರೆ ನಮ್ಮ ಗವರ್ನಮೆಂಟನ್ನ. ಮುಂದೆ ಈ ಸ್ಕೀಮನ್ನ ಡೆಲ್ಲಿಲಿ ಆಲ್–ಇಂಡಿಯಾ ಲೆವಲ್ನಲ್ಲಿ ಮಾಡ್ಬಹುದಲ್ಲೋ! ಅಗ ವೈಷ್ಣೋದೇವಿ, ಕನ್ಯಾಕುಮಾರಿ, ಮಹಾಲಕ್ಷ್ಮಿ, ಮೀನಾಕ್ಷಿ, ಕಾಮಾಕ್ಷಿ, ವಿಶಾಲಾಕ್ಷಿ, ಕಾಳಿ, ದುರ್ಗ, ಅಂಬೆ ಜೊಗಾಯ್ ಅವೆಲ್ಲಾ ಪುಣ್ಯಕ್ಷೇತ್ರದಲ್ಲಿ ಸೇರ್ಕೊಳುತ್ತೆ'.

'ಅಜ್ಜಿ! ಯು ಆರ್ ಗ್ರೇಟ್ ಐ ಸೆ'.

'ಇನ್ನೊಂದು ಮಾತು'.



'ನಿನ್ದು ಇನ್ನೂ ಮುಗಿದಿಲ್ವಾ?'

'ದಸರಾ ಹಬ್ಬ ಮುಖ್ಯವಾಗಿ ಮಹಿಳೆಯರ ಹಬ್ಬ. ಅದು ತಾಯಿ ಶಕ್ತಿ, ತಾಯಿ ಚಾಮುಂಡಿದೇವಿಯ ಹಬ್ಬ. 10 ದಿವಸವೂ ತಾಯಿಯ ಬೇರೆ ಬೇರೆ ಅಲಂಕಾರಗಳು ರಾಜ್ಯದ ಎಲ್ಲಾ ಕಡೆಯೂ ನಡೆಯುತ್ತೆ'.

'ಅದನ್ನೂ ಮಾಡ್ಬೇಕೂಂತಿಯಾ?'


'ಮತ್ತೇ! ವಿಜೃಂಭಣೆಯಿಂದ ಆಚರಿಸಬೇಕು. ಮೈಸೂರಿಗೆ ಬರೋ ಮಹಿಳೆಯರಿಗೆ ರಾಜ್ಯದಲ್ಲೇ ತಯಾರಿಸಿದ ಮೈಸೂರ್ ಸಿಲ್ಕ್ ಸೀರೆ ಕೊಡಬೇಕು. ಅವ್ರು ಹೇಗೇ ಬರ್ಲಿ – ಅದು ಮುಖ್ಯ ಅಲ್ಲ–ಕೆಎಸ್‌ಆರ್‌ಟಿಸಿ, ವಂದೇ ಭಾರತ್, ಶತಾಬ್ಧಿ, ಚಾಮುಂಡಿ ಎಕ್ಸ್‌ಪ್ರೆಸ್, ಎಲೆಕ್ಟ್ರಿಕ್ ಬಸ್, ಐರಾವತ, ಪ್ಯಾಸೆಂಜರ್ ನೈಟ್ ಟ್ರೈನ್, ಯಾವುದರಲ್ಲಿ ಬಂದ್ರೂ ಅವರನ್ನು ಬರಮಾಡಿಕೊಂಡು ಅವರಿಗೆ ಮೈಸೂರ್ ಸಿಲ್ಕ್ ಸೀರೆ ಮತ್ತು ಮ್ಯಾಚಿಂಗ್ ಬ್ಲೌಸ್ ಕೊಡ್ಬೇಕಪ್ಪ. ಆಮೇಲೆ..'

'ಅಯ್ಯೋ ಅಜ್ಜಿ! ಸಾಕು ನಿಲ್ಸು. ಇದೆಲ್ಲಾ ಮಾಡಿದ್ರೆ ಗವರ್ನಮೆಂಟು ಪಾಪರ್ ಆಗುತ್ತೆ!'

'ಈವಾಗ ನಿನ್ಗೆ ಗೊತ್ತಾಯ್ತಾ! ನೀನೆ ಪರ್ವಾಗಿಲ್ಲ ಕಣೋ... ಹ್ಹ,ಹ್ಹ..'.!

■

**ಮೈತ್ರಿ ಬಗ್ಗೆ ಬಾಯಿ ಬಿಡದಂತೆ ವರಿಷ್ಠರ ಸೂಚನೆ – ಸುದ್ದಿ** ಸುದ್ದಿ



# ದೊಡ್ಡವನಾದ ಮೇಲೆ ಏನು ಆಗುತ್ತೀಯ?

**ಡಾ. ಸಹನಾ ಪ್ರಸಾದ್**

ಪುಢಾರಿ ರಂಗಣ್ಣನವರು ಬಹಳ ಬೇಸರದಲ್ಲಿ ಇದ್ದರು. ಕಾರಣ ಅವರ ಸುಪುತ್ರ, ಕುಲಪುತ್ರ ಹಾಗೂ ವಂಶೋಧಾರಕ ನಿತಿನ್ "ನೀನು ದೊಡ್ಡವನಾದ ಮೇಲೆ ಏನು ಆಗುತ್ತೀಯ?" ಎನ್ನುವ ಪ್ರಶ್ನೆಗೆ ಕೊಟ್ಟ ಉತ್ತರ. ಸಾಲಾಗಿ 4 ಹೆಣ್ಣುಮಕ್ಕಳಾದ ಮೇಲೆ ಹುಟ್ಟಿದ ಗಂಡು, ಇವರಿಗೆ ಕಿರೀಟ ಹೊರೆಸಿದ್ದ. ಮಗನ ತಂದೆ ಎಂದು ಬೀಗಿದ್ದ ಇವರು ಎಲ್ಲೆಡೆ ಈ ಸಿಹಿ ಸುದ್ದಿ ಪ್ರಸಾರ ಮಾಡಿದ್ದರು, ಸಿಹಿ ಹಂಚಿ ಸಂಭ್ರಮಿಸಿದ್ದರು. ತಾನಂತೂ ಪುಢಾರಿ ಪಟ್ಟದಿಂದ ಮಂತ್ರಿ ಪದವಿ ಇರಲಿ, ಶಾಸಕ ಪಟ್ಟಕ್ಕೂ ಏರಲಿಲ್ಲ. ಮಗನಾದರೂ ತನ್ನ ಆಸೆ ಈಡೇರಿಸುವನು ಎಂದು ಬಹಳ ಕಾತರದಿಂದ ಅವನು ದೊಡ್ಡವನಾಗುವುದನ್ನೇ ಕಾಯುತ್ತಿದ್ದರು. ಆರನೇ ತರಗತಿಯಲ್ಲಿ ಓದುತ್ತಿದ್ದ ಸುಪುತ್ರ, ತನ್ನ ಅಕ್ಕಂದಿರನ್ನು ಮೀರಿಸುವಂತಹ ಅಂಕಗಳನ್ನು ಪಡೆದಾಗ, ಇವರಿಗಾದ ಖುಷಿ ಅಷ್ಟಿಷ್ಟಲ್ಲ. "ನಿಮ್ಮ ಹೆಣ್ಣು ಮಕ್ಕಳು ಗಳಿಸಿದ್ದು ಒಂದಂಕಿ ಮಾರ್ಕು. ಇವನು ಎರಡಂಕಿಯಲ್ಲಿ ಕಾಲಿರಿಸಿದ್ದಾನೆ, ಅಷ್ಟೇ!" ಹೆಂಡತಿ ಹತಾಶಳಾಗಿ ನುಡಿದಾಗ ಅವಳ ಮೇಲೆಯೇ ಹರಿಹಾಯ್ದರು." ಅಲ್ಲವೇ, ನಿನ್ನ ವಂಶಾವಳಿ ಹರಿದುಬಂದಿದೆ. ಮೂರು ಹೊತ್ತೂ ಮೊಬೈಲ್ ಹಿಡಿದು ಕುಳಿತರೆ, ಇನ್ನೆಷ್ಟು ಅಂಕಿ ಬಂದೀತು?". ಅವಳು ಚಂಡಿಯಾದಳು." ಎಂ.ಕಾಮ್ ಮಾಡಿದರೂ ಕೆಲಸಕ್ಕೆ ಹೋಗಲು ಬಿಡದೆ, ಅಪ್ಪ ನಿಮ್ಮ ಜತೆ ಮಾಡುವೆ ಮಾಡಿಸಿದರು. ನಿಮ್ಮಂತಹ 10ನೆ ತರಗತಿ ಪಾಸ್ ಮಾಡಿದವನನ್ನು ಕಟ್ಟಿಕೊಂಡು ಒದ್ದಾಡುತ್ತಿದ್ದೇನೆ. ನನ್ನ ಬಗ್ಗೆಯೇ ಮಾತನಾಡುತ್ತೀರಲ್ಲ. ಅದ್ಸರಿ, ಎಲ್ಲರಿಗೂ ಮೊಬೈಲ್ ತೆಗೆಸಿಕೊಟ್ಟಿದ್ದು ಯಾರು? "ಅವಳ ಮಾತಿಗೆ ಮೆತ್ತಗೆ ನುಡಿದರು.." ಆ ಮೊಬೈಲ್ ಶಾಪ್ ಓನರ್ ಬಾಡಿಗೆಗೆ ಕೊಟ್ಟಿದ್ದ ಬಂಗಲೆ ಖಾಲಿ ಮಾಡಿಸಿ ಕೊಟ್ಟಿದ್ದಕ್ಕೆ ಅವನು ಕೊಟ್ಟ ಗಿಫ್ಟ್ ಕಣೆ. 10ನೆ ಕ್ಲಾಸ್ ಕಷ್ಟಪಟ್ಟು ಪಾಸು ಮಾಡಿದೆ, ಒಪ್ಪುತ್ತೇನೆ. ಆದರೆ 10ಕ್ಕೆ ಬಹಳಷ್ಟು ಸೊನ್ನೆ ಸೇರಿಸಿ ಆಸ್ತಿಯೂ ಮಾಡಿದ್ದೇನೆ. ನೀನು ಒಪ್ಪಲೇಬೇಕು!".

ಇವರ ಪ್ರೇಮಕಲಹಕ್ಕೆ ಅಂತ್ಯ ಹಾಡಿದ್ದು, ಸುಪುತ್ರನನ್ನು ಟೀವಿ ಚ್ಯಾನೆಲ್‌ಗೆ ಕಳುಹಿಸುವ ಮಾತುಕತೆ. "ಬೆಳೆಯುವ ಸಿರಿ ಮೊಳಕೆಯಲ್ಲಿ" ಎಂಬ ಕಾರ್ಯಕ್ರಮ ಸಿಕ್ಕಾಪಟ್ಟೆ ಜನಪ್ರಿಯವಾಗಿದ್ದು, ಎಲ್ಲ ಮಾತೃಪಿತೃಗಳೂ ತಮ್ಮ ತಮ್ಮ ಕುಡಿಗಳನ್ನು ಆ ಚ್ಯಾನೆಲ್ಗೆ ಕಳುಹಿಸಲು ಹರಸಾಹಸ ಮಾಡುತ್ತಿದ್ದರು. ಡ್ಯಾನ್ಸ್, ಹಾಡು, ಸ್ಕಿಟ್ ಜತೆಗೆ ಪ್ರಶ್ನೋತ್ತರ ಕಾರ್ಯಕ್ರಮ. ತರಹಾವರಿ ಪ್ರಶ್ನೆಗಳು, ತರಲೆ, ಚೂಟಿ ಉತ್ತರ ನೀಡಿದ ಮಕ್ಕಳಿಗೆ ಬಹುಮಾನ. ಜಾಹೀರಾತಿನಲ್ಲಿ ಅಭಿನಯಿಸುವ ಅವಕಾಶ. ಮನೆಗೆ ಒಯ್ಯಲು ಉಡುಗೊರೆಗಳು, ಧಾರಾಳವಾಗಿ ಸಿಗುವ ಜನಪ್ರಿಯತೆ. ಹೇಗಾದರೂ, ಮಾಡಿ ತಮ್ಮ ಮಕ್ಕಳು ಭಾಗವಹಿಸಲು, ಹಣದ ಆಮಿಷ ನೀಡಿ, ಬೆದರಿಕೆ ಕರೆಗಳನ್ನು ಮಾಡಿ, ದೊಡ್ಡವರಿಂದ ಶಿಫಾರಸು ಪಾತ್ರ ತರುವುದರಿಂದ ಎಲ್ಲವೂ ನಡೆದಿತ್ತು. ಈಗ ನಿತಿನ್ ಆ ಕಾರ್ಯಕ್ರಮಕ್ಕೆ ಹೋಗಲೇ ಬೇಕು ಎಂದು ಗಂಡ ಹೆಂಡತಿಯರಿಬ್ಬರೂ ಒಮ್ಮತದಲ್ಲಿ ಕೆಲಸ ಮಾಡುತ್ತಿದ್ದರು. ಇವಳ ಸ್ನೇಹಿತೆ ಆ ಚ್ಯಾನಲ್ ಅಲ್ಲಿ ಕೆಲಸ ಮಾಡುತ್ತಿದ್ದಳು. ಅವಳಿಗೆ ಕಾಟ ಕೊಡುತ್ತಿದ್ದ ಮನೆ ಮಾಲೀಕನಿಗೆ ಗತಿ ಕಾಣಿಸಿದಾಗ, ಅವಳು ಕೃತಜ್ಞತೆಯಿಂದ ನಿತಿನ್ ಹೆಸರನ್ನು ಸೇರಿಸಿದಳು.



ಪ್ರೋಗ್ರಾಮ್ ರೆಕಾರ್ಡ್ ಆಗಿ ನಿತಿನ್ ಮನೆಗೆ ವಾಪಸ್ಸು ಬಂದಾಗ ಅವನಿಗೆ

ಹೀರೋಗೆ ಸಿಗುವ ಸ್ವಾಗತ. "ಏನಾಯ್ತು, ಏನೇನು ಪ್ರಶ್ನೆ ಕೇಳಿದರು, ಎಲ್ಲವೂ ಹೇಳು?" ಮನೆಯವರ ಪ್ರಶ್ನೆಗಳು ಅವನಿಗೆ ಕಾರ್ಯಕ್ರಮದ ಪ್ರಶ್ನೋತ್ತರಗಳಿಗಿಂತ ಹಿಂಸೆ ಅನಿಸಿದವು. "ಇನ್ನೇನು ಟೆಲಿಕಾಸ್ಟ್ ಆಗುತ್ತೆ, ಅಲ್ಲಿಯೇ ನೋಡಿ" ಎಂದು ಹೇಳಿ ಎಸ್ಕೇಪ್ ಆದ. ಟೆಲಿಕಾಸ್ಟ್ ಆಗುವ ದಿನ ಇವರ ಮನೆಯ ಮುಂದೆ ಶಾಮಿಯಾನ. ಎಲ್ಲರೂ ನೋಡಲು ಅನುಕೂಲವಾಗಲೆಂದು ಅಳವಡಿಸಿದ್ದ ದೊಡ್ಡ ಗಾತ್ರದ ಟೀವಿ ಸೆಟ್. ರಂಗಣ್ಣನವರ ಚೇಲಾಗಳು ನೆರೆದಿದ್ದರು." ಮುಂದಿನ ನಾಯಕನಿಗೆ ಜಯವಾಗಲಿ" ಎಂದು ಘೋಷಣೆ ಕೂಗಿದ್ದು ಸಹ ಆಯ್ತು. ಹುಚ್ಚು ಕುಣಿತ (ಡ್ಯಾನ್ಸ್), ಕರ್ಕಶ ಸದ್ದು (ಹಾಡು) ಮುಗಿದು ಪ್ರಶ್ನೋತ್ತರ ಶುರುವಾಯಿತು.

"ನಿಮ್ಮಪ್ಪನ ಕೆಲಸ?"

"ಗೂಂಡಾಗಿರಿ" (ಹೌಹಾರಿದರು ರಂಗಣ್ಣ, ಮರ್ಯಾದೆ ಮಣ್ಣುಪಾಲಾಯಿತು ಎನ್ನಲು, ಮರ್ಯಾದೆ ಇದ್ದರೆ ತಾನೇ, ಎಂಬ ವ್ಯಂಗ್ಯ ಬಾಣ ತೋರಿ ಬಂತು)

"ನಿಮ್ಮಮ್ಮನ ಬಗ್ಗೆ ಒಂದು ವಾಕ್ಯ"

"ನನ್ನಪ್ಪನ ಕೈಗೊಂಬೆ"

"ನಿನ್ನ ಒಡಹುಟ್ಟಿದವರು"

"ಮೊಬೈಲ್ ಫೋನ್ ಬಂಡಿಗಳು"

ಪ್ರಶ್ನೋತ್ತರ ಅವನ ಹವ್ಯಾಸ, ಓದು ಇತ್ಯಾದಿ ಬಗ್ಗೆ ಮುಂದುವರಿದು," ದೊಡ್ಡವನಾದ ಮೇಲೆ ಏನು ಮಾಡುತ್ತೀಯಾ" ಎಂದಾಗ ರಂಗಣ್ಣ ಅಪೇಕ್ಷಿಸಿದ್ದು" ವಿಜ್ಞಾನಿ ಆಗುವೆ. ಇಲ್ಲಿಯವರೆಗೂ ಯಾರೂ ತಲುಪದ ಗ್ರಹಗಳಿಗೆ ರಾಕೆಟ್ ಬಿಡುವೆ". ಏಕೆಂದರೆ ಈಗ ವಿಜ್ಞಾನಿ ಎಂದರೆ ಬಹಳ ಮೌಲ್ಯದ ಪದನಾಮ. ಆದರೆ ಅವನು ನುಡಿದದ್ದು "ನನ್ನಪ್ಪನಿಗಿಂತ ದೊಡ್ಡ ರೌಡಿ ಆಗುವೆ".

"........."ಮಾತೆ ಹೊರಡಲಿಲ್ಲ ಕಾರ್ಯಕ್ರಮದ ನಿರೂಪಕನಿಗೆ.

"ಏಕೆ ಅಂತ ಕೇಳುವುದೇ ಬೇಡ. ಈಗಿನ ಕಾಲದಲ್ಲಿ ದುಡ್ಡೇ ದೊಡ್ಡಪ್ಪ. ನನ್ನಪ್ಪನ ಹಣವೆಲ್ಲವೂ ಅಕ್ಕಂದಿರಿಗೆ ಮದುವೆ ಮಾಡುವುದಕ್ಕೆ ಖರ್ಚಾಗುತ್ತದೆ. ನಾನೂ ಸಂಪಾದಿಸಬೇಕಲ್ಲ!" ■



# ಪ್ರಾಣ ತಿನ್ನುವ ಮಹಾಪ್ರಾಣಗಳು

✍ **ಸೂರ್ಯನಾರಾಯಣ ಕೆದಿಲಾಯ**

ಇನ್ನೇನು ಹಬ್ಬಗಳ ಸೀಸನ್ ಶುರು. ಪತ್ರಿಕೆಗಳಲ್ಲಿ, ಟಿವಿಗಳಲ್ಲಿ ಶುಭಾಶಯ ಕೋರುವ ಜಾಹಿರಾತುಗಳ ಸಾಲೇ ಇರುತ್ತದೆ. ಅಲ್ಲೇ ಇರೋದು ನೋಡಿ ಸಮಸ್ಯೆ. ಹಾರ್ದಿಕವೋ, ಹಾರ್ಧಿಕವೋ, ಆರ್ಥಿಕವೋ ಎಂಬ ಗೊಂದಲ ಜಾಹಿರಾತುದಾರರಿಗೆ ಇರುತ್ತದೆ. ಜಾಹಿರಾತು ಸಂಸ್ಥೆಗಳು (ad agencies) ಇಂಗ್ಲಿಷಿನಲ್ಲಿ ಬರೆದುದನ್ನು ಕನ್ನಡಕ್ಕೆ ರೂಪಾಂತರಿಸುವಾಗ ಗೊಂದಲಗಳುಂಟಾಗಿ ಏನೇನೋ ಆಗಿಬಿಡುತ್ತದೆ. ಕೊನೆ ಕೊನೆಗೆ ಈ ತಪ್ಪುಗಳೇ ಸರಿಯಾಗಿಬಿಡುತ್ತವೆ. ಇಲ್ಲವಾದರೆ ಕನ್ನಡದಲ್ಲಿ ರುಂಡ ಮುಂಡಗಳು ಅದಲು–ಬದಲಾಗಿದ್ದು ಹೇಗೆ? ತಾಯಿ ಅಪ್ಪನಾಗಿ, ತಂದೆ ಅಮ್ಮನಾಗಿ ಬದಲಾಗಿದ್ದು ಹೇಗೆ? ನನಗೆ ಒಂದು ದುರಭ್ಯಾಸವಿದೆ, ಪತ್ರಿಕೆಗಳನ್ನು ತೆರೆದರೆ, ಫಲಕಗಳನ್ನು ಓದಿದರೆ ಅಲ್ಲೇನಿದೆ ಎನ್ನುವುದಕ್ಕಿಂತ ಎಷ್ಟು ದೋಷಗಳಿವೆ ಎಂದು ಹುಡುಕುವುದೇ ಜಾಸ್ತಿ. ಅದರಲ್ಲಿಯೂ ಅಲ್ಪಪ್ರಾಣ ಮತ್ತು ಮಹಾಪ್ರಾಣಗಳನ್ನು ಬಳಸುವಾಗ ನಾವು ಸಿಕ್ಕಾಪಟ್ಟೆ ತಪ್ಪು ಮಾಡುತ್ತೇವೆ. ಹಬ್ಬಗಳು ಬಂತೆಂದರೆ ಮೆಗಾ, ಅಲ್ಲಲ್ಲ, ಮೆಘಾ ಸೇಲ್‌ಗಳು ಕಾಣಿಸಿಕೊಳ್ಳುತ್ತವೆ. ಸಣ್ಣ ಮಾರಾಟವಾದರೆ ಮೆಗಾ, ದೊಡ್ಡ ಪ್ರಮಾಣದಲ್ಲಿ ಆದರೆ ಮೆಘಾ ಎಂದು ನಾನು ಭಾವಿಸಿದ್ದೆ.

ಕೆಲ ದಿನಗಳ ಹಿಂದೆ ಆಡುಗೋಡಿಯಲ್ಲಿ ಒಂದು ದೊಡ್ಡ ಹೋರ್ಡಿಂಗ್ ಇತ್ತು. ಅದರಲ್ಲಿ ಸುಮಾರು ಮೂವತ್ತು ಜನರ ಫೋಟೋಗಳಿದ್ದವು, ಕೆಳಗೆ ಚಿಕ್ಕ ಅಕ್ಷರಗಳಲ್ಲಿ 'ನಗರದ ಎಲ್ಲಾ ಜನರಿಗೆ ನವರಾತ್ರಿಯ, ದೀಪಾವಳಿಯ, ಕ್ರಿಸ್‌ಮಸ್‌ನ, ಹೊಸ ವರ್ಷದ ಹಾರ್ಧಿಕ ಶುಭಾಷಯಗಳು,' ಎಂದು ಸ್ಪಷ್ಟವಾಗಿ ಬರೆದಿತ್ತು. ದೇವರ ದಯೆ, ನಾನು ಆಡುಗೋಡಿಗೆ ಹೋಗಬೇಕಾಗಿ ಬಂದಿತ್ತಾದ್ದರಿಂದ ಈ ಮೂವತ್ತು ಪ್ಲಸ್ ಜನರು ನನಗೆ ಶುಭಾಶಯ ಬಯಸಿದ್ದು ತಿಳಿಯಿತು.

ಇಂದಿಗೂ ನನಗೆ ತೊಂದರೆ ಕೊಡುವ ಕೆಲ ಪದಗಳಿವೆ. ಅವುಗಳನ್ನು ಪಟ್ಟಿ ಮಾಡಿದರೆ ಮುಖ್ಯವಾಗಿ ಬ ಮತ್ತು ದ ಅಕ್ಷರಗಳು ಕಾಡಿಸುತ್ತವೆ. ಬೇಧಿ ಸರಿಯೋ, ಭೇದಿಯೋ, ಅಲ್ಲಾ ಭೇಧಿಯೋ, ಬೇದಿಯೋ ಇವತ್ತಿಗೂ ನನಗೆ ಸ್ಪಷ್ಟವಾಗಿಲ್ಲ. ಈ ಕನ್‌ಫ್ಯೂಷನ್ ಬೇಡವೆಂದು ನಾನು ತಮಾಷೆಯೂ, ಗಂಭೀರವೋ ಆಗಿ ಅದನ್ನು 'ದಿಬೇ' ಎಂದು ಕರೆಯುತ್ತೇನೆ.ಏನಾದರೂ ಕರೆದುಕೊಳ್ಳಲಿ, ದೇಹದ ಭಾರ ಇಳಿಯುವುದು ಮುಖ್ಯ.

ಟಿವಿಗಳಲ್ಲಿ ವಿದ್ಯಾರ್ಥಿಗಳಿಲ್ಲ, ವಿಧ್ಯಾರ್ತಿಗಳೇ ಇರೋದು, ಜ್ಯೋತಿಷಿಗಳೆಲ್ಲಾ ರೂಪಾಂತರಿಗಳಾಗಿ 'ಜ್ಯೋತಿಷರು' ಆಗಿಲ್ಲವೇ, ಹಾಗೆ. ಅದ್ದೂರಿ ಎಂಬ ಸಿನೆಮಾ ಬಂದ ಮೇಲೆ ಅದು ಸರಿಯೋ, ಅದ್ಧೂರಿಯೋ ಎಂಬ ಗೊಂದಲ ನನಗಿದೆ. ಪ್ರಧಾನ ಮಂತ್ರಿಗಳು ಪ್ರಾಧಿಕಾರದ ಕಚೇರಿ ಅರ್ಥಾತ್ ಕಛೇರಿಯಲ್ಲಿ ಪ್ರಶಸ್ತಿಯನ್ನು ಪ್ರಧಾನವಾಗಿ ಪ್ರದಾನ ಮಾಡಿದರು ಎಂಬಾಗಲೆಲ್ಲಾ ಪ್ರದಾನ ಮತ್ತು ಪ್ರಧಾನಗಳ ನಡುವಿನ ವ್ಯತ್ಯಾಸ ಗೊಂದಲಮಯ. ಈಗ ಟಿವಿಗಳಲ್ಲಿ ಬರುತ್ತಿರುವುದು ಧಾರಾವಾಹಿ ಅಲ್ಲ, ದಾರಾವಾಹಿಗಳೇ.



ಬಾಧೆ, ಭಾದೆ, ಬಾಧಿಸು, ಭಾದಿಸು, ದಭಾಯಿಸು, ಧಬಾಯಿಸು, ದಿಢೀರನೆ, ಧಿಡೀರನೆ, ಈ ಪದಗಳ ಬಗ್ಗೆ ನನಗೆ ಇಂದಿಗೂ ಗೊಂದಲಗಳಿವೆ. ಚತುರೋಪಾಯಗಳಲ್ಲಿ ಸಾಮ, ದಾನ, ದಂಡದ ಜೊತೆಗೆ ಇನ್ನೊಂದಿದೆ, ಅದು ಭೇದವೇ, ಬೇಧವೇ ತಿಳಿಯದು. ಹಾಗಾಗಿ ನಾನು ಇಂತಹ ಸಂದರ್ಭಗಳಲ್ಲಿ ಈ

ಪದಗಳನ್ನು ಬಳಸದೇ ಪರ್ಯಾಯವನ್ನು ಹುಡುಕುತ್ತೇನೆ.

ಸಿಂಹಗಳು, ಹುಲಿಗಳು ಗರ್ಜಿಸುತ್ತವೆಯೋ, ಘರ್ಜಿಸುತ್ತವೆಯೋ? ಅಷ್ಟು ದೊಡ್ಡ ಪ್ರಾಣಿಗೆ ಅಲ್ಪ ಪ್ರಾಣದ 'ಗ' ಅಕ್ಷರ ಬಳಸಿದರೆ ಅವಮಾನ ಮಾಡಿದಂತೆ ಎಂದು ತಿಳಿದುಕೊಂಡ ಅನೇಕರು 'ಘರ್ಜಿಸಿಯೇ' ಬಿಡುತ್ತಾರೆ. ಹುಲಿಯ ಗರ್ಜನೆಯ ದನಿ ಜೋರಾಗಿಯೇ ಇರುತ್ತದೆ. ಹಾಗಾದರೆ ಚಿರತೆ? ಇಲ್ಲ ಸ್ವಾಮಿ, ಅದು ಬಾಯಿಯಿಂದ ಸದ್ದನ್ನು ಹೊರಡಿಸದು. ಹಾಗಾಗಿ ಈ ಗೊಂದಲಗಳಿಂದ ಅದು ಮುಕ್ತವಾಗುತ್ತದೆ.

ಚಲನಚಿತ್ರ, ಟಿವಿ ಕಲಾವಿದರು, ವಾರ್ತಾ ವಾಚಕರು, ಇವರೆಲ್ಲಾ ಮಹಾಪ್ರಾಣವನ್ನು ಬಳಸಿ ಯಾಕೆ ತಮ್ಮ ಉಸಿರನ್ನು ವ್ಯರ್ಥ ಮಾಡಿಕೊಳ್ಳಬೇಕೆಂದು ಬಯಸುತ್ತಾರೆ. ಪ್ರಖ್ಯಾತ, ಕ್ಯಾತ ಅಲ್ಲ, ಸಿನೆಮಾ ನಟನೊಬ್ಬ 'ಅಮ್ಮಾ, ಎದರಿಕೆನಾ? ಬಯಾನಾ?' ಎಂದೇ ಮಾತನಾಡುತ್ತಾನೆ. 'ಅ' ಹೇಳಲು ಬೇಕಾಗುವ ಉಸಿರಿಗಿಂತ ಹೆಚ್ಚು ಉಸಿರು 'ಹ' ಹೇಳಲು ಬೇಕಾಗುವುದರಿಂದ ಹೆಚ್ಚಿನ, ಅಲ್ಲಲ್ಲ ಎಚ್ಚಿನ ಜಿಮಣ ಜನರು ಹ ಎನ್ನಬೇಕಾದಲ್ಲೆಲ್ಲಾ ಅ ಎಂದೇ ಉಚ್ಚರಿಸುತ್ತಾರೆ. ಬೇಂದ್ರೆಯವರ ಹಾಡು, ಅಲ್ಲಲ್ಲ, ಆಡು, 'ಅಕ್ಕಿ ಆರುತಿದೆ ನೋಡಿದಿರಾ,' ಎಂದೇ ಆಗುತ್ತದೆ. ಕೆಲ ಧಾರಾಳಿಗಳು ಅ ಎನ್ನಬೇಕಾದಾಗಲೆಲ್ಲಾ 'ಹ' ಎಂದು ಉಚ್ಚರಿಸಿ ತಮ್ಮ ದೊಡ್ಡತನ ತೋರಿಸುತ್ತಾರೆ.

ಹೆದ್ದಾರಿಯ ಪಕ್ಕಗಳಲ್ಲಿ ಭೋಜನಗೃಹಗಳಿರುತ್ತವೆ. ಅಲ್ಲಿ ಕುರ್ಚಿ (ಖುರ್ಚಿಯೋ?) ಗಳು ಇರುವುದಿಲ್ಲ, ಬದಲಿಗೆ ಹಗ್ಗದ ಒಂದು ಮಂಚ ಇರುತ್ತದೆ. ಅವನ್ನು ಡಾಭಾ, ಢಾಬಾ, ಢಾಭಾ, ಡಾಬಾ, ದಾಬಾ ಎಂದೆಲ್ಲಾ ಕರೆಯುತ್ತಾರೆ. ಯಾವುದು ಸರಿಯೆಂದು ಪ್ರಾಜ್ಞರೇ ಹೇಳಬೇಕು. ಅದು ಏನಾದರೇನು, ನಮ್ಮ ಹೊಟ್ಟೆ ತುಂಬಿಸುತ್ತದೆಯಲ್ಲ, ಅಷ್ಟು ಸಾಕು. ಒಂದೆಡೆ ಅತಿಥಿ ರೆಸ್ಟೋರೆಂಟ್ ಇದೆ, ಅದನ್ನು ಅಥಿತಿ ಎಂದೇ ಬರೆದಿದ್ದಾರೆ. ಏನಾದರಾಗಲಿ, ಎರಡೂ ಅಕ್ಷರಗಳಿವೆಯಲ್ಲ, ಅಷ್ಟೇ ಸಾಕು. ದಾಸರೇ ಹೇಳಿಲ್ಲವೇ, ಲೋಕದ ಡೊಂಕ ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ಎಂದು!

ಪ್ರಸಾದನ ಮಾಡುವ ಜನಾರ್ಧನ, ಅರ್ಥಾತ್, ಪ್ರಸಾಧನ ಮಾಡುವ ಜನಾರ್ದನ ಧನಕ್ಕಾಗಿಯೇ ದುಡಿಯುವುದು. ಧನ ಇದ್ದರೆ ದನ ಖರೀದಿಸಬಹುದು, ದನ ಸಾಕಿದರೆ ಧನ ಮಾಡಬಹುದು. ದನಕ್ಕೆ ಬಾಲವಿಲ್ಲ, ಧನಕ್ಕಿದೆ. ಹಾಗಾದರೆ ದನದ ಬಾಲ ಎಲ್ಲಿಗೆ ಹೋಯಿತು? ಎಂತೆಂಥವರು ಇದ್ದಾರಲ್ಲ, ಅಂತಹವರಿಗೆ, ಅಲ್ಲಲ್ಲ, ಅಂಥವರಿಗೆ ನಮನಗಳು. ನಮ್ಮ ರಾಜ್ಯ ಮುಖ್ಯಮಂತ್ರಿಗಳು ಸಿದ್ಧರಾಮಯ್ಯ ಎಂದೇ ಮೊದಲು ಭಾವಿಸಿದ್ದೆ, ಅಲ್ಲಲ್ಲ, ಸಿದ್ಧತೆಗೂ ಹೆಸರಿಗೂ ಸಂಬಂಧವಿಲ್ಲ, ಅದು ಸಿದ್ದರಾಮಯ್ಯ.

ಯಾವುದೋ ಸಂದರ್ಭದಲ್ಲಿ ತುಸುವೇ ಜನ ಇದ್ದು ಚಪ್ಪಾಳೆ ತಟ್ಟಿದರೆ ಅದು ಕರತಾಡನ, ಜಾಸ್ತಿ ಜನ ಇದ್ದು, ಚಪ್ಪಾಳೆಯ ಸದ್ದು ಜೋರಾಗಿದ್ದರೆ ಅದು ಖರತಾಡನ. ಇಲ್ಲಿ ಮಧ್ಯಪಾನ ಮಾಡಬಾರದು ಎಂಬ ಬೋರ್ಡಿರುತ್ತದೆ. ಮಧ್ಯ ಎಂದರೆ ಮದ್ಯ. ಗೊಂದಲಬೀಳಬೇಡಿ.

ಗಾಸಿ ಸರಿಯೋ, ಘಾಸಿಯೋ? ಹೇಗಾದರೂ ಆಗುತ್ತದೆ ಎಂಬುದನ್ನು ಸೋಷಿಯಲ್ ಮೀಡಿಯಾಗಳು ಒಪ್ಪುತ್ತವೆ. ಮರಳು ಮರುಳು ಆಗಿ, ಮರುಳು ಮರಳಾಗಿಬಿಟ್ಟರೂ ತಪ್ಪಿಲ್ಲ. ಜನಕ್ಕೆ ಅರ್ಥವಾಗುವುದು ಮುಕ್ಯವೇ, ಅಲ್ಲಲ್ಲ, ಮುಖ್ಯವೇ ಹೊರತು ಹೇಳುವ ಅಕ್ಷರಗಳಲ್ಲ ಎಂದುಕೊಂಡರೆ ನಮ್ಮ ನೋವು ಸ್ವಲ್ಪವಾದರೂ ಕಡಿಮೆಯಾದೀತು. ■



# ವೀಕೆಂಡ್ ವಿತ್ ಉಮೇಶ್

**ಕುಮುದಾ ಪುರುಷೋತ್ತಮ್**

ನಾನು ನಡೆಯುತ್ತಿದ್ದ ಹಾದಿಯ ಎರಡೂ ಬದಿ ಮತಾಪುಗಳು ಬಣ್ಣಬಣ್ಣದ ಕಿಡಿಗಳನ್ನು ಎತ್ತರಕ್ಕೆ ಚಿಮ್ಮಿಸುತ್ತಿದ್ದವು. ಸಿಂಥಿಟಿಕ್ ಸೀರೆಯುಟ್ಟಿದ್ದ ನಾನು ದಿಗಿಲಿನಿಂದ ಸೀರೆಯನ್ನು ಮುದುರಿಕೊಂಡೇ ನಡೆದು ವೇದಿಕೆ ಪ್ರವೇಶಿಸಿದೆ. ಕಣ್ಣು ಕೋರೈಸುವ ಬೆಳಕಿನಿಂದ ಒಂದರೆಕ್ಷಣ ಕಣ್ಣುರುಡಾದರೂ ಸುಧಾರಿಸಿ ಕಣ್ತೆರೆದಾಗ ಚಪ್ಪಾಳೆ ತಟ್ಟುತ್ತಿದ್ದ ಪ್ರೇಕ್ಷಕವರ್ಗ ಕಣ್ಣಿಗೆ ಕಾಣಿಸಿದರು. ಆದರದಿಂದ ಬರಮಾಡಿಕೊಂಡ ಉಮೇಶ್ ಎಡಗಡೆಯತ್ತ ಕೈದೋರಿದರು. ಅಲ್ಲಿ ಸ್ವಲ್ಪ ಎತ್ತರದಲ್ಲಿ ಸಾಧಕರ ಕೆಂಪು ಕುರ್ಚಿಯೊಂದು ವಿರಾಜಮಾನವಾಗಿತ್ತು. ಅದನ್ನು ತುಸು ಶ್ರಮಪಟ್ಟೇ ಏರಬೇಕಿತ್ತು. ಯೋಗ್ಯತೆ ಪಡೆಯಲು ಮಾಡಬೇಕಾದ ಸಾಧನೆ ಸುಲಭವಲ್ಲ ಎಂದು ಸೂಚಿಸುವಂತಿತ್ತು. ಪ್ರೇಕ್ಷಕರ ಕರತಾಡನಕ್ಕೆ ಕೈಮುಗಿಯುತ್ತಾ ಶ್ರಮಪಟ್ಟುಕೊಂಡೇ ಹತ್ತಿ ಕುಳಿತೆ. ಉಮೇಶ್ ನನ್ನ ಜೀವನ ಚರಿತ್ರೆಯನ್ನು ಉರುಹೊಡೆದವರಂತೆ ಹೇಳುತ್ತಾ ನನ್ನ ಕುರ್ಚಿ ಪ್ರದಕ್ಷಿಣೆ ಮಾಡಲಾರಂಭಿಸಿದರು. ಮುಗುಳ್ನಗುತ್ತಾ ಪ್ರೇಕ್ಷಕರಿಗೆ ಮತ್ತೆ ಮತ್ತೆ ಕೈಮುಗಿದೆ.

ಉಮೇಶ್: ಮೇಡಂ, ಮೊದಲು ನಿಮ್ಮ ಬಾಲ್ಯದತ್ತ ಬೆಳಕು ಬೀರೋಣ. ನಿಮ್ಮ ಪ್ರೈಮರೀ ಶಾಲೆಯ ಸಹಪಾಠಿಯೊಬ್ಬರು ಮಾತನಾಡಿದ್ದಾರೆ. ಕೇಳೋಣ ಬನ್ನಿ.

ಎದುರಿಗಿದ್ದ ಪರದೆಯ ಮೇಲೆ ನಡುವಯಸ್ಸಿನ ಮಹಿಳೆಯೊಬ್ಬಳು ಮೂಡಿಬಂದಳು. ಯಾರೀಕೆ? ತಲೆ ತುರಿಸಿಕೊಂಡೆ. ಪ್ರಯೋಜನವಾಗಲಿಲ್ಲ.

ಶಾರದ: ನಾನು ಶಾರದ. ಗುರುತು ಸಿಗಲಿಲ್ವೇ? ಒಂದನೇ ಕ್ಲಾಸಿನಿಂದ ನಿನ್ನ ಜೊತೆ ಒಂದೇ ಬೆಂಚಿನಲ್ಲಿದ್ದೆ. ಒಂದೇ ವಠಾರದ ಅಕ್ಕಪಕ್ಕದ ಮನೇಲಿ ಇದ್ವಿ. ನೆನಪಿದೆಯೇ? ನೀನು ಆಗ್ಲಿಂದ ಬಲು ಜೋರಿನವಳು. ಜೊತೆಗೆ ಜಗಳಗಂಟಿಬೇರೆ. ನಮ್ಮ ಮನೆಯಿಂದ ಎರಡು ಮೈಲಿ ಇದ್ದ ಶಾಲೆಗೆ ವಠಾರದ ಮಕ್ಕಳೆಲ್ಲಾ ಒಟ್ಟಿಗೆ ಹೋಗತಿದ್ವಿ, ನೀನೆ ನಮ್ಮ ಲೀಡರ್ರು. ದಾರೀಲಿ ಸಾಲುಮರದ ಕೆಳ್ಗೆ ಬಿದ್ದಿದ್ದ ಹೂವುಗ್ಳು,ನೇರಳೇ ಹಣ್ಣು ಎಲ್ಲಾ ಆರಿಸಿಕೊಂಡು ಸ್ಕೂಲಿಗೆ ಲೇಟಾಗಿ ಹೋಗಿ ಏಟು ತಿಂತಿದ್ವಿ. ಹೀಗೆಲ್ಲಾ ಲೇಟಾಗಿ ಹೋಗೋದು ಬೇಡಕಣೇ ಅಂತ ನಾವು ಏನಾದ್ರು ಹೇಳಿದ್ರೆ ಹೇಡಿಗ್ಳು ಅಂತ ಹಂಗಿಸುತ್ತಿದ್ದೆ. ಒಂದ್ಸಲ ನಾವೂ ಸೇವಾದಳದವ್ರಥರ ಒಬ್ಬರಹಿಂದೆ ಒಬ್ಬರು ಮಾರ್ಚ್ಫಾಸ್ಟ್ ಮಾಡ್ಕೊಂಡು ಹೋಗೋಣ ಅಂತ ಆರ್ಡರ್ ಮಾಡ್ದೆ. ನಿನ್ನ ಮಾತು ಎಲ್ಲಾದ್ರೂ ಮೀರೋದುಂಟೇ? ರಸ್ತೆ ಎರಡೂ ಪಕ್ಕ ಜನ ನಿಂತು ಏಲು ಅಂತ ನಗತಿದ್ರು. ನೆನಪಿದೆಯಾ? ಇದಕ್ಕೆ ನಾನೇನು ಜವಾಬು ನೀಡಲಿ? ಪ್ರೇಕ್ಷಕರ ನಗು ಮುಗಿಲು ಮುಟ್ಟಿತು. ಪಚ್ಚು ಪೆಚ್ಚಾಗಿ ನಕ್ಕೆ ಅಷ್ಟೆ.

ಉಮೇಶ್: ನಿಮ್ಮ ಅಂದಿನ ಶಾಲಾ ಟೀಚರ್ ಗೌರಮ್ಮಮೇಡಂ ಹಾಗೂ ಪುಷ್ಪಾವತಮ್ಮ ಮೇಡಂ ಬಂದಿದ್ದಾರೆ. ಇಬ್ಬರಿಗೂ ವೆಲ್ ಕಂ ಟು ದಿ ಶೋ.



ಶಾಲಾ ಗುರುಗಳು ಬಂದಿದ್ದಾರೆ. ಎದ್ದು ಗೌರವ ತೋರದಿದ್ದರೆ ಪ್ರೇಕ್ಷಕರು ಏನೆಂದುಕೊಂಡಾರು? ಶ್ರಮಪಟ್ಟು ಕೆಳಗಿಳಿದು ಕಾಲ್ಮುಟ್ಟಿ ಮತ್ತೆ ಶ್ರಮಪಟ್ಟು ಮೇಲೇರಿ ಕುಳಿತೆ.

ಗೌರಮ್ಮ: ನನ್ನ ನಲ್ವತ್ತು ವರ್ಷ ಸರ್ವೀಸಿನಲ್ಲಿ ಇವಳಂತಹ ವಿದ್ಯಾರ್ಥಿನಿಯನ್ನು ನೋಡಿರಲಿಲ್ಲ.

ಉಮೇಶ್: ಅಂದ್ರೆ ನೀವನ್ನೋದು ಮಾದರಿ ವಿದ್ಯಾರ್ಥಿನಿ ಅನ್ನೋ ಅರ್ಥದಲ್ಲಿ ಹೇಳ್ತೀರಾ?

ಗೌರಮ್ಮ: ನೀವೂ ಸರಿ. ಮಾದರಿಯಂತೆ ಮಾದರಿ. ಶುದ್ಧ ತರ್ಲೆ ಅಂತನ್ನಿ. ಗಾದೆ ಇಲ್ವೇ ಹಿರಿಯಕ್ಕನ್ ಚಾಳಿ ಮನೆಮಂದಿಗೆಲ್ಲಾ ಅಂತ.ಇದಕ್ಕೆ ಇವ್ಳು ಜ್ವಲಂತ ಉದಾಹರಣೆ. ನಾನು ಪಾಠ ಮಾಡ್ತಾ ಬೋರ್ಡಿನತ್ತ ತಿರುಗಿದರೆ ಸಾಕು. ಇವ್ಳ ಮುಂದಾಳತ್ವದಲ್ಲಿ ಗಲಾಟೆ, ನೂಕಾಟ, ಗುದ್ದಾಟ ಎಲ್ಲಾ ಶುರುವಾಗೋದು. ನೋಡುವಷ್ಟು ನೋಡಿ ಒಂದು ದಿನ ಸಂಯಮ ಕಳ್ಕೊಂಡು ಕ್ಲಾಸಿನಿಂದ ಹೊರಗಟ್ಟಿ ಅಲ್ಲೇ ನಿಂತಿರು ಅಂತ ಪಾಠ ಮುಂದುವರೆಸಿದೆ. ಕ್ಲಾಸು ಮುಗೀತ್ಲೂ ಹೊರಬಂದು ನೋಡ್ತೀನಿ ಅಲ್ಲಿಂದ ಮಾಯವಾಗಿ ಬಿಟ್ಟಿದ್ಳು! ಶಾಲೆಯ ಜವಾನನ್ನು ಹುಡುಕಲು ಕಳಿಸ್ದೆ. ಶಾಲೆಯ ಹಿಂಬದಿ ಇದ್ದ ಹೊಂಗೆ ಮರದಡಿ ಆರಾಮವಾಗಿ  ಯಾವ್ದೋ ಹುಡ್ಗೀಜೊತೆ ಕಲ್ಲಾಟ ಆಡ್ತಿದ್ಲಂತೆ! ಕಿವಿ ಹಿಂಡಿ ಕರ್‍ಕೊಂಡು ಬಂದ. ಅಂದಿನಿಂದ ತರ್ಲೆ ಮಾಡಿದ್ರೆ ಗೋಡೆ ಕಡೆ ಮುಖಮಾಡಿ ಕೂತ್ಕೋ ಅಂತ ಕಡೇ ಬೆಂಚಿನ ಪಕ್ಕ ಕುಳ್ಳಿರಿಸಿ ನನ್ನ ಕಣ್ಮುಂದೇ ಇಟ್ಕೋತಿದ್ದೆ.

ಉಮೇಶ್: ಇದ್ರಿಂದ ಅವರ ತರ್ಲೆ ಬುದ್ಧಿ ಕಡಿಮೆಯಾಯ್ತಾ?

ಗೌರಮ್ಮ: ನಿಮಗೆಲ್ಲೋ ಭ್ರಾಂತು. ಗೋಡೆ ಮೇಲೆ ನನ್ನದೊಂದು ಚಿತ್ರಬರೆದು ತಲೆಗೆರಡು ಕೊಂಬು ಸೇರಿಸಿದ್ಲು.

ಪುಷ್ಪಾವತಮ್ಮ: ಮತ್ತೊಂದು ಘಟನೆಯನ್ನು ಹೇಳಲೇ ಬೇಕು. ನಮ್ಮ ಶಾಲೆಯ ಹಿಂದೆ ಮುಸಾಫಿರ್‌ಖಾನೆಯೊಂದಿತ್ತು. ಒಮ್ಮೆ ಸರ್ಕಸ್ ಕಂಪೆನಿಯವರು ಅಲ್ಲಿ ಮೊಕ್ಕಾಂ ಹೂಡಿದ್ದರು. ಇವ್ಳ ಪಟಾಲಂಗೆ ಸದಾ ಅಲ್ಲೇ ಕೆಲ್ಸ. ಶಾಲೆ ತಪ್ಪಿಸಿ ಗೇಟಿನ ಹೊರಗೆ ನಿಲ್ಲೋದು, ಅವರ ಚಲನವಲನಗಳನ್ನೆಲ್ಲಾ ಗಮನಿಸೋದು. ಒಂದು ದಿನ ಸರ್ಕಸ್ಸಿನಲ್ಲಿ ಬಫೂನನ ಪಾತ್ರಮಾಡುವ ಕುಳ್ಳನೊಬ್ಬ ಬೀಡಿ ಸೇದುತ್ತಾ ಕುಳಿತಿದ್ದ. ಇವ್ಳು ಅವನ ಪಾತ್ರದಂತೆ ಸೊಟ್ಟು ಸೊಟ್ಟಾಗಿ ನಡೆದು ತೋರಿಸಿ" ಕುಳ್ಳಾ..ಕುಳ್ಳಾ..ಅಂತ ಕೂಗಿದ್ಲು ನೋಡಿ. ಅವ್ನು ಅಟ್ಟಿಸ್ಕೊಂಡು ಹೊಡ್ಯೋಕ್ಕೆ ಬಂದ. ಅಲ್ಲಿಂದ ಓಡಿ ಬಂದೋವ್ಳು ಮತ್ತೆ ಆಪಕ್ಕ ತಲೆ ಹಾಕಿದ್ರೆ ಕೇಳಿ!

ಉಮೇಶ್; ಇದಿಷ್ಟು ನಿಮ್ಮ ಶಾಲಾದಿನಗಳ ವರದಿಯಾಯಿತು. ಮುಂದೆ ನೀವು ಬರಹಗಾರ್ತಿಯಾದಿರಿ. ನೀವು ಯಾವಾಗಿನಿಂದ ಬರೆಯೋಕ್ಕೆ ಆರಂಭಿಸಿದಿರಿ?

ನಾನು: ಇದಕ್ಕೆ ನಿಖರವಾಗಿ ಉತ್ತರ ಹೇಳೋದು ಕಷ್ಟ. ಎಲ್ಲರೂ ಶಾಲೇಗೆ ಹೋದ್ಮೇಲೆ ತಾನೆ ಬರೆಯೋಕ್ಕೆ ಕಲ್ಯೋದು? ಮೊದಮೊದಲು ತಪ್ಪು ತಪ್ಪಾಗಿ, ತರುವಾಯ ಸರಿಯಾಗಿ ಕಲಿಯೋದು. ನಾನೂ ಹಾಗೇ ಕಲಿತದ್ದು.ಕ್ರಮೇಣ ಅದೇ ಚಟವಾಗಿ ಬಿಡ್ತು. ಬರೆಯೋದಕ್ಕೆ ಯಾವ್ದೇ ವಿಷಯವಿಲ್ದಿದ್ರೆ ಎಕ್ಸೈಸ್ ಪುಸ್ತಕದಲ್ಲಿ ಶ್ರೀರಾಮಜಯರಾಮ ಬರೀತಿದ್ದೆ.

ಉಮೇಶ್: ಪತ್ರಿಕೆಯ ಸಂಪಾದಕರೊಬ್ಬರು ಬಂದಿದ್ದಾರೆ. ಬನ್ನಿ ಸಾರ್, ನಮಸ್ಕಾರ. ನಿಮಗೆ ನಮ್ಮ ಇಂದಿನ ಅತಿಥಿ ಯಾವಾಗಿನಿಂದ ಪರಿಚಯ?



ಸಂಪಾದಕ: ಪರಿಚಯ ಎಲ್ಲಾ ಅವರ ಲೇಖನಗಳ ಮೂಲಕ ಅಷ್ಟೇ. ಅವರು ತುಂಬಾ ಬರೀತಾರೆ. ನಮ್ಮ ಕಛೇರಿಗೆ ಇವರಿಂದ ವಾರಕ್ಕೆ  ಒಂದಾದ್ರೂ ಲೇಖನ ಬರತ್ತೆ. ಮೊದ್ಲೆಲ್ಲಾ ಇದ್ರಿಂದ ತುಂಬಾ ಸಮಸ್ಯೆಗಳಾಗುತ್ತಿತ್ತು. ಕಸದಬುಟ್ಟಿ ತುಂಬಿ ತುಳುಕಿ ಅಟೆಂಡರುಗಳು ಗಲಾಟೆ ಮಾಡ್ತಿದ್ರು. ಈಗ ಎಲ್ಲಾ ಆನ್ಲೈನ್ ಅಂತ ಆದ್ಮೇಲೆ ತುಂಬಾ

ಸರಾಗ ಆಗಿದೆ. ಒಂದ್ಸಲ 'ಡಿಲೀಟ್' ಒತ್ತಿದ್ರೆ ಆಯ್ತು.

ಉಮೇಶ್: ಮೇಡಂ, ಇನ್ನು ನಿಮ್ಮ ವೈಯಕ್ತಿಕ ಜೀವನದ ಬಗ್ಗೆ ತಿಳಿದುಕೊಳ್ಳೋಣ. ನಿಮ್ಮದು ಲವ್ ಮ್ಯಾರೇಜೋ ಅರ್ರೇಂಜ್ಡ್ ಮ್ಯಾರೇಜೋ?

ನಾನು: ಲವ್ವು ಗಿವ್ವು ಅಂತಂದ್ರೆ ನಮ್ಮಪ್ಪ ಕೆನ್ನೆಗೆರಡು ಕೊಡೋರು. ಹಿರೇರು ಕುಲಗೋತ್ರ, ಕುಂಡಲಿ ನೋಡಿ ಗುರು ಹಿರಿಯರ ಸಮ್ಮುಖದಲ್ಲಿ ಸುಮೂರ್ತದಲ್ಲಿ ನಡೆದ ಮದುವೆ. ಇಷ್ಟು ವರ್ಷಗಳಾದ್ರೂ ನಾನಾಗ್ಲೀ ನನ್ನಗಂಡನಾಗ್ಲೀ ಪರಸ್ಪರ ಐ ಲವ್ ಯೂ ಅಂತ ಕೂಡ ಹೇಳಿದ್ದೇ ಇಲ್ಲ.

ಉಮೇಶ್: ಈಗ್ಲೂ ಕಾಲಮಿಂಚಿಲ್ಲ. ಎಲ್ಲರ ಮುಂದೆ 'ಐ ಲವ್ ಯೂ' ಅಂತ ಹೇಳ್ಬಹುದು.

ಎಂದು ಹೇಳುತ್ತಾ ಕೆಂಪು ಕುರ್ಚಿ ಹಿಡಿದು ತಿರುಗಿಸಿದರು. ಎದುರಿಗೆ ಉಗ್ರ ನರಸಿಂಹಾವತಾರ ತಾಳಿದ ನನ್ನ ಗಂಡ ಬೆಂಕಿಯುಗುಳುತ್ತಾ ನಿಂತಿದ್ದರು.

"ನೀನು ಹೊರಗೆಲ್ಲಾದರೂ ಹೋಗ್ಬೇಕಾದರೆ ಮನೆಯ ಬೀಗದ ಕೈಯನ್ನು ಪಕ್ಕದ ಮನೇಲಿ ಕೊಟ್ಟು ಹೋಗು ಅಂತ ಎಷ್ಟುಸಲ ಹೇಳಿಲ್ಲ? ನೀನು ಊರೆಲ್ಲಾ ಸುತ್ಕೊಂಡು ಮನೇಗೆ ಬರೋವರ್ಗೂ ಪರದೇಶಿಯಂತೆ ಬಾಗಿಲು ಕಾಯ್ತಾ ನಿಲ್ಬೇಕಾ?" ಎಂದು ಗುಡುಗಿದರು.

ಅಲ್ಲಾ, ಅಷ್ಟು ಜನರ ಮುಂದೆ , ಕಣ್ಣು ಕೋರೈಸುವ ದೀಪದ ನಡುವೆ ಹೀಗಾ ನಡೆದುಕೊಳ್ಳುವುದು?ಬಲು ಮುಜುಗರವಾಗಿಬಿಡ್ತು .ಎದ್ದು ಹೋಗಿಬಿಡೋಣ ಎಂದು ಎದ್ದೆ. ಯಾರೋ ಭುಜ ಹಿಡಿದು ಅಲ್ಲಾಡಿಸುತ್ತಿದ್ದರು. ಕಣ್ಬಿಟ್ಟೆ.

"ವೀಕೆಂಡ್ ವಿತ್ ಉಮೇಶ್ ನೋಡ್ತೀನಿ ಅಂತ ಕುಳಿತು ಹೀಗೆ ತೂಕಡಿಸೊ ಬದ್ಲು ಟಿ.ವಿ. ಆಫ್ ಮಾಡಿ ಮಲಗಬಾರ್ದೆ? ಕರೆಂಟ್ ಬಿಲ್ಲು ಎಷ್ಟು ಬರ್ತಿದೆ ಗೊತ್ತು ತಾನೇ?" ಎಂದು ಆಕ್ಷೇಪಿಸಿದರು. ಕಾರ್ಯಕ್ರಮ ಮುಗಿಯುವ ಹಂತದಲ್ಲಿತ್ತು. ಎದ್ದು ಹೋಗಿ ಆಫ್ ಮಾಡಿದೆ. ಹಿಂದೆ ತಿರುಗಿದೆ. ನನ್ನನ್ನೆಬ್ಬಿಸಿದವರು ತಾವು ಓದುತ್ತಿದ್ದ ಪತ್ರಿಕೆಯಲ್ಲಿ ಮುಖ ಹುದುಗಿಸಿ ಹಾಗೆಯೇ ನಿದ್ರೆಗೆ ಜಾರಿದ್ದರು! ■

**"ಅಯೋಧ್ಯೆಯಲ್ಲಿ ತಾಜ್....!"** –ವಿ. ವಿಜಯೇಂದ್ರ ರಾವ್

ಮಕ್ಕಳು ತಮ್ಮ ತಮ್ಮ ತಂದೆ ತಾಯಿಯ ಬಳಿ ಟೀಚರ್ ತಾಜ್ ಮಹಲ್ ಅಯೋಧ್ಯೆಯಲ್ಲಿದೆ ಅಂತ ತಪ್ಪು ತಪ್ಪಾಗಿ ಪಾಠ ಕಲಿಸುತ್ತಿದ್ದಾರೆ ಎಂದು ದೂರು ಹೇಳಿದಾಗ...ಎಲ್ಲಾ ಮಕ್ಕಳ ತಂದೆ ತಾಯಿಯರು ಒಟ್ಟಾಗಿ ಆ ಶಾಲೆಯ ಪ್ರಿನ್ಸಿಪಾಲ್ ಭೇಟಿ ಮಾಡಲು ಹೋದರು.

ಪ್ರಿನ್ಸಿಪಾಲ್ ಅವರೆಲ್ಲರನ್ನು ಸ್ವಾಗತಿಸಿ ಬಂದ ಕಾರಣವನ್ನು ಹೇಳಿದಾಗ, ತಂದೆ ತಾಯಿಯರು ನಿಮ್ಮ ಟೀಚರ್ ತಾಜ್ ಮಹಲ್ ಅಯೋಧ್ಯೆಯಲ್ಲಿದೆ ಅಂತ ತಪ್ಪು ತಪ್ಪಾಗಿ ಪಾಠ ಮಾಡುತ್ತಿದ್ದಾರೆ ಅಂತ ದೂರು ಹೇಳಿದಾಗ ಪ್ರಿನ್ಸಿಪಾಲ್ ನಾನು ಸಹ ನಿಮ್ಮೆಲ್ಲರನ್ನು ಅದೆಷ್ಟು ಬಾರಿ ಮೀಟಿಂಗ್ ಗೆ ಕರೆದಿದ್ದೆ, ಆದರೆ, ನೀವುಗಳು ಒಮ್ಮೆಯೂ ಬರಲಿಲ್ಲ. ನಿಮ್ಮಗಳಿಂದ ಆರು ತಿಂಗಳ ಫೀಸ್ ಇನ್ನೂ ಬಾಕಿ ಬರಬೇಕಿದೆ. ಆದರೆ, ನೀವು ಯಾರೂ ಕಿವಿಗೆ ಹಾಕಿಕೊಳ್ಳಲೇ ಇಲ್ಲ. ನೀವುಗಳು ಫೀಸ್ ಪೂರ್ತಿ ಕಟ್ಟುವವರೆಗೆ, ತಾಜ್ ಮಹಲ್ ಅಯೋಧ್ಯದಲ್ಲೇ ಇರುತ್ತೆ ಎಂದಾಗ, ಅವರೆಲ್ಲರು ಒಬ್ಬರೊಬ್ಬರ ಮುಖ ನೋಡಿಕೊಂಡು, ಇನ್ನು ಇವರ ಹತ್ತಿರ ಏನೂ ನಡೆಯಲ್ಲಾ ಎಂದುಕೊಂಡು, ಎಲ್ಲರೂ ಮನಸ್ಸಿಲ್ಲದ ಮನಸ್ಸಿನಿಂದ ಹಣ ಕಟ್ಟಲು ಫೀಸ್ ಕೌಂಟರಿನತ್ತ ನಡೆದರು.....!



● **ದಂನಆ**

- ✓ ವಾಗ್ದಾನ ಮಾಡಿದ್ದು ಅಂದಿನ ಅವಶ್ಯಕತೆಗಾಗಿ, ಅದನ್ನು ಮುರಿದಿದ್ದು ಇಂದಿನ ಅವಶ್ಯಕತೆಗಾಗಿ.
- ✓ ಬೆಳಕಿಲ್ಲದ ದಾರಿಯಲ್ಲಿ ನಡೆಯಬಹುದು ಆದರೆ ಕನಸಿಲ್ಲದ ದಾರಿಯಲ್ಲಿ ನಡೆಯಬಾರದು.
- ✓ ದಿ ಗ್ರೇಟೆಸ್ಟ್ ಸೋರ್ಸ್ ಆಫ್ ಹ್ಯಾಪಿನೆಸ್ ಈಸ್ ಟು ನೊ ದಿ ಸೋರ್ಸ್ ಆಫ್ ಅನ್‌ಹ್ಯಾಪಿನೆಸ್.
- ✓ ಮೌನದಲ್ಲೂ ಸುಳ್ಳು ಹೇಳಬಹುದು. ಅಸ್ಪಷ್ಟ ಮಾತಿನಿಂದಲೂ ಸುಳ್ಳು ಹೇಳಬಹುದು. ಸಣ್ಣ ಕಣ್ಸನ್ನೆಯಿಂದಲೂ ಸಾಧ್ಯ. ಇವೆಲ್ಲ ನೇರ ಮಾತಿನಿಂದ ಹೇಳುವ ಸುಳ್ಳುಗಳಿಗಿಂತ ಹೆಚ್ಚು ದುಷ್ಟತನದ್ದು.
- ✓ ಇಫ್ ಯು ಹ್ಯಾವ್ ಎ ಚಾಯ್ಸ್ ಚೂಸ್ ದಿ ಬೆಸ್ಟ್ ಇಫ್ ಯು ಡೋಂಟ್ ಹ್ಯಾವ್ ಎ ಚಾಯ್ಸ್ ಡು ದಿ ಬೆಸ್ಟ್.
- ✓ ಸತ್ಯವನ್ನು ಮರೆಮಾಚುವುದನ್ನೇ ಕಸಬು ಮಾಡಿಕೊಂಡಿರುವರ ಬಗ್ಗೆ ನಿಜ ಹೇಳುವುದು ಕಷ್ಟ.
- ✓ ಉಡುಗೊರೆಗಳನ್ನು ಪಡೆಯುವವರ ಬಗ್ಗೆ ಕೊಡುವವನಿಗೆ ಯಾವಾಗಲೂ ಒಳ್ಳೆಯ ಅಭಿಪ್ರಾಯ ಇರುವುದಿಲ್ಲ.
- ✓ ಹೆಣ್ಣು ನಿನ್ನ ಆಕರ್ಷಕ ವ್ಯಕ್ತಿತ್ವಕ್ಕೆ ಮಾರುಹೋಗಬೇಕು. ನಿನ್ನ ಹುದ್ದೆಗಲ್ಲ.
- ✓ ಇಟ್ ಈಸ್ ನಾಟ್ ಓನ್ಲಿ ವಾಟ್ ವಿ ಡು ಬಟ್ ಆಲ್ಸೊ ವಾಟ್ ವಿ ಡು ನಾಟ್ ಡು ಫಾರ್ ವಿಚ್ ವಿ ಆರ್ ಅಕೌಂಟಬಲ್.
- ✓ ಸುಮ್ಮನೆ ಗಡಿಯಾರವನ್ನು ನೋಡುತ್ತಾ ಕೂರಬೇಡ. ಅದು ಏನು ಮಾಡುತ್ತದೊ ಅದನ್ನು ಮಾಡು. ಮುಂದೆ ನಡೆ.
- ✓ ಬೇರೆಯವರನ್ನು ಅನುಕರಣೆ ಮಾಡುವ ಯತ್ನದಲ್ಲಿ ನಾವು ಯಾರು ಎಂಬುದನ್ನೇ ಮರೆಯುತ್ತೇವೆ.
- ✓ ಸ್ಟಾಂಡಿಂಗ್ ಬಿಸೈಡ್ ಎವೆರಿ ಗ್ರೇಟ್ ಮ್ಯಾನ್ ದೇರ್ ಈಸ್ ಆಫನ್ ಎ ವುಮನ್ ಕಾನ್‌ಸ್ಟಂಟ್ಲಿ ಟೆಲ್ಲಿಂಗ್ ಹಿಮ್ ವಾಟ್ ಹಿ ಈಸ್ ಡುಯಿಂಗ್ ಈಸ್ ರಾಂಗ್. ಅಂಡ್ ಶಿ ಈಸ್ ಯೂಶೂಯಲಿ ರೈಟ್.
- ✓ ವಿಶ್ವದಲ್ಲೇ ಅತಿ ಅಪಾಯಕಾರಿ ಆಯುಧ ಎಂದರೆ ನಾಲಿಗೆ.
- ✓ ನೀವು ನಿಧಾನವಾಗಿ ನಡೆದರೂ ಪರವಾಗಿಲ್ಲ, ಆದರೆ ನಿಲ್ಲಬೇಡಿ.
- ✓ ನಾನು ನೆನಪಿನ ಶಕ್ತಿಯನ್ನು ಕಳೆದುಕೊಳ್ಳುತ್ತಿದ್ದೇನೆ ಆದರೆ ಹಾಗಾಗುತ್ತಿದೆ ಎಂಬುದನ್ನು ಮರೆಯುತ್ತಿದ್ದೇನೆ.
- ✓ ದೇರ್ ಆರ್ ನೊ ರಿಪ್ಲೇಸ್ ಇನ್ ಲೈಫ್.



■

# ಚಹಾ ಪುರಾಣ

✍ ಗುಂಡುರಾವ್ ದೇಸಾಯಿ

ಅದೇನೋ ಮೇ 21 ಚಹಾ ದಿನವಂತೆ ಗೊತ್ತಿರಲಿಲ್ಲ... ಬೆಳಿಗ್ಗೆ ಬೆಳಿಗ್ಗೆ ಕನಸಲ್ಲಿ ಸಕ್ಕರಿ, ಹಾಲು, ಚಹಾಪುಡಿ ಓಡಾಡಕತಿದವು. ನಿತ್ಯವೂ ಚಂದದ ಕನಸು ಕಾಣುತಿದ್ದ ನನಗ 'ಇವೇನು ಖೋಡಿ ಇವತ್ತು ಚಹಾಪುಡಿ ಸಕ್ಕರಿ ಬಂದು ಕಾಡಕತಾವ' ಅಂತ ಅನಕೊಂಡೆ... 'ಗುಗ್ಗು ನಾನು' ಎಂದು ಅರ್ಥೈಸಿಕೊಂಡವೊ? ಏನೊ? ಕಪ್ಪು ಸಾಸರ್‌ನೂ ಬಂದವು.... 'ಹೂಂ ಹೂಂ... ಅಧಮ ಅಧಮ ಕೃತಘ್ನ' ಎಂದು ಚೀರಿದ ಆ ವಸ್ತುಗಳು ಗ್ಯಾಸ ಹಚ್ಚಿ ಪಾತ್ರೆಯನ್ನಿಟ್ಟು ಚಹಾ ಮಾಡುವ ವಿಧಾನ ತಿಳಿಸಕತಿದ್ವು... ಬರಿ ಫೈವ್ ಸ್ಟಾರ್ ಹೋಟಲ್ ನಲ್ಲಿ ಪಾರ್ಟಿ ಮಾಡುವ ಕನಸು ಬೀಳುತ್ತಿದ್ದ ನನಗೆ 'ಇವತ್ತೇನು ಅಸಹ್ಯ ಚಹಾದ್ದು ಕನಸು ಬಿದ್ದದ' ಎಂದಿದ್ದೆ ತಪ್ಪಾಯ್ತೇನೊ...? ಕನಸಿನ್ಯಾಗ ಕೊತಕೊತ ಕುದಿಯುವ ಆ ಚಹಾ ಪಾತ್ರೇನೆ ಮೇಲೆ ಹಾರತಾ ಬಂದು ಮುಖದ ಮೇಲೆ ಚೆಲ್ಲಿದಂಗಾತು. "ಅಮ್ಮಾ.....!" ಎಂದು ಒದರಿ ಎದ್ದು ನೋಡತೀನಿ...ಪುಣ್ಯ ವಾಸ್ತವವಲ್ಲ.

ಬೆಳಿಗ್ಗೆ ಎದ್ದು.....ಬ್ರಶ್ ಮಾಡಿದ ಕೂಡಲೆ 'ಚಹಾ ಮಾಡೆ' ಅಂದೆ. ನನ್ನವಳಿಂದ ನೋ ಸೌಂಡ್! ಎಲ್ಲ ಕಡೆ ಹುಡುಕಾಡಿದೆ... ಮನ್ಯಾಗ ಇರಲಿಲ್ಲ. ನಾನೇ ಮಾಡಿಕೊಂಡರಾಯಿತೆಂದು ಗ್ಯಾಸ ಹಚ್ಚಲಿಕ್ಕೆ ಹೋಗ್ತಿನಿ.... ಹತ್ತತಾ ಇಲ್ಲ! ಒದ್ದಾಡಿ ಒದ್ದಾಡಿ ಹಚ್ಚಿದೆ... ನೀರು ಕಾಯಿಸಲಿಟ್ಟೆ. ಚಹಾಪುಡಿ ಸಿಗುತಿಲ್ಲ...ಕೋಪ ನೆತ್ತಿಗೇರಿತ್ತು.. ಬೆಳಿಗ್ಗೆ ಎದ್ದು ಚಹಾ ಕುಡಿಯದೆ ಒಂದು ಕೆಲಸ ಮಾಡೋ ಜಾಯಮಾನದವಲ್ಲ. ಈಕಿ ಇರಲಾರದಕ್ಕ, ಸ್ಟವ್ ಗೊಳಾಡಿಸಿದದಕ, ಹ್ಯಾಂಗರ ಮಾಡಿ ಚಹಾ ಮಾಡಬೇಕಂತ ಯತ್ನಿಸಿದರೂ ಚಹಾಪುಡಿ ಸಿಗಲಾರರದದಕ. ಬ್ರಹ್ಮಾಂಡ ಕೋಪನ ಬಂತು. ಮಕ್ಕಳು ಎದ್ದಿರಲಿಲ್ಲ. ಹೊರಗೆ ಹೋಗಿ ಕುಡಿಯೋಣ ಎಂದು ಸರ್ಕಲ್‌ನಲ್ಲಿ ಇರೋ ನಮ್ಮ ಶೆಟ್ರ ಹೋಟಲ್‌ಗೆ ಹೋದರೆ ಅವನು ಬಂದು ಮಾಡಿದ್ದ. ಮನೆಗೆ ಬಂದೆ ನಿರಾಶೆಯ ಭರದಲ್ಲಿ. ಈಕಿನೂ ಬಂದಿದ್ಲು... "ಎಲ್ಲಿ ಹಾಳಾಗಿ ಹೋಗಿದ್ದಿ? ಬೆಳಿಗ್ಗೆ ಚಹಾ ಇರಲ್ಲ ಅಂದ್ರ ನಡಿಯಲ್ಲ ಅಂತ ಗೊತ್ತಿಲ್ಲ ನಿನಗ......"ಎಂದೆ

"ಏನ್ರಿ ಅಷ್ಟು ಜೋರು ಮಾಡಕತೀರಿ. ನಾನು ನೀರು ತರೋಕೆ ಹೋಗಿದ್ದೆ. ಒಂದು ದಿವಸ ಮಾಡಿಕೊಂಡು ಕುಡಿದ್ರ ಕೈ ಸವಿಯುತ್ತಾ?" ಎಂದು ಮರು ಉತ್ತರಿಸಿದಳು. ಎದ್ದಿರುವ ಟೈಮೆ ಸರಿ ಇಲ್ಲ, ಮುಂದುವರೆಸೋದು ಬೇಡ ಅನಕೊಂಡು ಪ್ರೀತಿಯಿಂದ 'ಚಹಾ ಮಾಡೆ?' ಎಂದು ಕೇಳಿ ಬೆಳಿಗ್ಗೆ ನಡೆದದ್ದನ್ನು ಹೇಳಿದಾಗ "ಅಯ್ಯುಯ್ಯೊ? ಶಾಂತಂಪಾಪಂ ಶಾಂತಂಪಾಪಂ! ಆಚಾರ್ಯರನ್ನು ಕೇಳೋಣ ನಡಿರಿ...! ಏನು ಕಾದಿದೆಯೋ? ಸುಡಸುಡಾ ಚಹಾ ಮುಖದ ಮೇಲಿ ಬಿದ್ದಿದೆ ಎಂದ್ರೆ..... ಎಲ್ಲೆರ ಆಸಿಡ್ ಗಿಸಿಡ್ ಬೀಳಬಹುದೇನೋ?" ಎಂದು ಗಾಬರಿಯಾಗುತ್ತಿದ್ದನ್ನು ನೋಡಿ "ಅಯ್ಯೊ! ಒಳ್ಳೆ ಹೇಳಿದೆನಪ ಈಕೆಗೆ?" ಎಂದು ಹಣೆ ಹಣೆ ಬಡಕೊಂಡೆ..



"ಮೊದಲು ಚಹಾ ಮಾಡು ಆಮೇಲೆ ಆಚಾರ್ಯರನ್ನು ಕೇಳೋಣ" ಎನ್ನುತ್ತಿರುವಾಗಲೆ ಮಾಡಿಕೊಂಡು ಬಂದು ಕೈಗೆ ಕೊಟ್ಟಳು. ಈಕಿ ಮಾಡುವ ಚಹಾ ಮುಂದೆ ಎಲ್ಲವೂ ಎಡ. ಚಹಾ ಕುಡದೆ, ಆದರೆ ಯಾಕೋ ನಿತ್ಯದ ಚಹಾದಂತಿರಲಿಲ್ಲ... 'ಏನೇ.. ಇದು ಕಲಗಚ್ಚು ಇದ್ದ ಹಾಗಿದೆ' ಅಂತ

ಬಯ್ಯಬೇಕೆನ್ನುವಷ್ಟರಲ್ಲಿ ಫೇಸಬುಕ್ನಲ್ಲಿ..ವ್ಯಾಟ್ಸಪ್ ನಲ್ಲಿ, ಇನಸ್ಟಗ್ರಾಂ ನಲ್ಲಿ, ಟೆಲಿಗ್ರಾಂನಲ್ಲಿ 'ಚಹಾ ದಿನದ ಶುಭಾಶಯಗಳು' ಅಂತ ಯಾರ್‍ಯಾರೋ ವಿಶ್ ಮಾಡಿದ್ದು ಮೊಬೈಲ್ ಸ್ಕ್ರೀನ್ ಮೇಲೆ ಬರತಿದ್ವು. ಅದರಳಗಿನಿಂದ ಚಹಾ ಗ್ಲಾಸು ಹೊರಗೆ ಬಂದು "ಮುಂಡೆದೆ ಮುಂಡೆದೆ ಈಗಲಾದ್ರೂ ಅರ್ಥ ಆಯಿತಾ?" ಅಂತು..

"ಏನು?" ಎಂದೆ

"ಇವತ್ತು ಬೆಳಿಗ್ಗೆ ಬೆಳಿಗ್ಗೆ ಕನಸಲ್ಲಿ ಕಾಡಿದ್ದಕ್ಕೆ ಕಾರಣವೇನು ಅಂತ..?"

"ಓಹೊ ಇವತ್ತು ಚಹಾ ದಿನನಾ..ಇವತ್ತೇನು ಡೇಟು? ಮೇ21.. ಹ್ಞಾಂ...! ಹೌದು ಯಾವಗಿನಿಂದ ಆರಂಭವಾಯಿತು..? ನಾನು ಹುಟ್ಟಿದಾಗಿನಿಂದ ಇಂತಹ ದಿನ ಅದ ಅಂತ ಗೊತ್ತೆ ಇಲ್ಲಲ..?" ಎಂದೆ.

"ಇಡಿಯಟ್.... ನಿತ್ಯ ಕುಡಿಯೋರಿಗಂತೂ ಬುದ್ಧಿ ಇಲ್ಲ ಯಾರೊ ಪುಣ್ಯಾತ್ಮರು ನಮ್ಮ ಹೆಸರಲ್ಲಿ 'ಡೇ' ಸೆಲೆಬ್ರೇಶನ್ ಮಾಡುತಿದ್ದಾರೆ. ನೀವಂತೂ ಮಾಡಲಿಲ್ಲ.. ಮಾಡೋರನ್ನ ಫಾಲೋ ಮಾಡಕಾಗಲ್ಲ..ನಿನ್ನ ಹಣೆ ಬರಹದಗಂತೂ ನಾನು ಬಿಟ್ರ ಗತಿಯಿಲ್ಲ. ಯಾರ್‍ಯಾರೊ ಬಗ್ಗೆ ಬರಿತಿರಿ ನಾವು ನಿಮಗ ಲೆಕ್ಕಕ್ಕ ಇಲ್ಲ" ಎಂದಾಗ ಬುದ್ದಗ ಜ್ಞಾನೋದಯ ಆದಂಗ ನನಗೂ 'ಆಯ್ಯೋ ಹೌದಲ್ಲ! ಚಹಾದ ಬಗ್ಗೆ ನನಗೆ ಬರಿಯೋಕೆ ಆಗಿಲ್ಲ' ಎನ್ನುವ ನೋವು ಆಯ್ತು. ನಾನು ಸ್ವಾರಿ ಹೇಳಿ 'ಬರಿತಿನಪಾ' ಅಂದಾಗಲೆ ಕನಸಲ್ಲಿ ಮೇಲೆ ಬಿದ್ದಿದ್ದ ಸುಡ-ಸುಡ ಚಹಾ ಹಿಂದಕ್ಕ ಹೋದಂಗ ಆಗಿದ್ದು... ಕ್ರಿಕೇಟ್‌ನಲ್ಲಿ ವಿಕೆಟ್ ಬಿದ್ದಾಗ ರಿಪ್ಲೇ ತೋರಿಸಿದಾಂಗ. ಫಿಲ್ಮನಲ್ಲಿ ಪ್ಲಾಶ್‌ಬ್ಯಾಕಿಗೆ ಹೋದಂಗ!

ಕತ್ತಲು ಕರಗಿ ಬೆಳಕು ಹರಿಯುವ ನಸು ಹೊತ್ತಿನಲ್ಲಿ ಎಲ್ಲರೂ ಬಯಸೋದು... ಹೋಟೆಲ್‌ನವ, ಅಂಗಡಿ ಆರಂಭಿಸಿದ ಕೂಡಲೆ ಮೊದಲು ಇಳಿಸೋದು ಚಹಾವನ್ನೆ...! ಪ್ರಯಾಣ ಮಧ್ಯದಲ್ಲಿ ಸ್ವಲ್ಪ ವಿರಾಮಕ್ಕಾಗಿ ಗಾಡಿ ನಿಲ್ಲಿಸೋದು ಚಹಾ ಕುಡಿಯೋದಕ್ಕಾಗಿಯೇ. ತರಬೇತಿ, ಸಭೆ, ಮಾತುಕತೆ ಯಾವುದೇ ಇರಲಿ ನಡುವೆ ವಿರಾಮದಲ್ಲಿ ಚಹಾವೇ ರಿಲ್ಯಾಕ್ಸ ನೀಡುವ ಔಷಧಿ. ಮನೆಯಲ್ಲಿ ಬಂದ ಅತಿಥಿಗಳಿಗೆ ಸತ್ಕರಿಸೋದು ಚಹಾ ಮೂಲಕವೆ. ಮದುವೆ ಮುಂಜುವಿ ಏನೇ ಸಮಾರಂಭವಿರಲಿ ಮೊದಲಿಗೆ ಆಪೇಕ್ಷಿಸುವುದ ಇದನ್ನೇ. ಒಂದು ಹೋಟಲ್‌ಗೆ ಹೋದ ಮೇಲೆ ಸ್ನೇಹಿತರನ್ನ ಬಂಧುಗಳನ್ನ ಅಥವಾ ಯಾರನ್ನಾದರೂ ಸಂಬೋಧಿಸೋದು 'ಚಹಾ ಕುಡಿಯೋಣ ಬನ್ನಿ' ಎಂದೆ. ಆಕಸ್ಮಾತ ಏನೇ ತಿಂದರೂ ಕುಡಿದರೂ ಕೊನೆಗೆ ಚಹಾ ಬೇಕು...ಅದರಲ್ಲಿ ಚೂಡಾ ಮಂಡಾಳು ಖಾರಾ ಭಜಿ ಮಿರ್ಚಿ ತಿಂದಾಗಲಂತೂ ಚಹಾ ಕುಡಿಯದಿದ್ದರೆ ಏನೊ ಕಳೆದುಕೊಂಡಂತೆ.

ಚಹಾ ಎನ್ನುವುದು ಇಂದು ನಿನ್ನೆಯದಲ್ಲ. ಹಿಂದೆ ಮನೆಗಳಲ್ಲಿ ದೊಡ್ಡ ದೊಡ್ಡ ಕಿತ್ಲಿಗಳು ಒಲೆಯ ಮೇಲೆ ದಿನಪೂರ್ತಿ ಜೀವಂತವಾಗಿರುತ್ತಿದ್ದವು.. ನೀರು ಕುಡಿದಂತೆ ಕುಡಿಯುವ ಜನಗಳು ಇದ್ದರು, ಈಗಲೂ ಇದ್ದಾರೆ. ನಮ್ಮವ್ವ ಚಹಾದ ಹುಳ... 85 ವರ್ಷದಾಟಿದ್ದರೂ..... ಇನ್ನೂ ಗಟ್ಟಿಗಿತ್ತಿ... ಸಿಟ್ಟು ಬಂದರೆ ನಾಲ್ಕು ದಿನ ಉಪವಾಸ ಬಿದ್ದುಬಿಡೋಳು..ಆದರೆ ಆ ಸಿಟ್ಟಿನಲ್ಲೂ ಬದುಕಿಸೋದು ಅವಳು ನಿತ್ಯ ಆರೇಳು ಸಾರಿ ಕುಡಿಯುವ ಚಹಾ. ಶುಗರ್ ಬಂದರೂ ಬಿಡದ ವ್ಯಾಮೋಹ ಚಹಾದ್ದು..ಕೆಟ್ಟು ಕಹಿಯಾಗಿರುವ ಶುಗರ್ ಲೆಸ್ ಚಹಾವನ್ನು 'ವಾಹ್ ವಾಹ್' ಎಂದು ಕುಡಿಯವುದನ್ನು ನೋಡಿದಾಗ.. ಎಂತಹ ಆನಂದವೆನಿಸುತ್ತದೆ.



ಚಹಾವಿಲ್ಲದ ದಿನ ಊಹಿಸಿಕೊಳ್ಳುವುದು ಕಷ್ಟ. ಅತಿ ಹೆಚ್ಚು ಕೆಲಸ ಮಾಡಿದರೆ, ದಣಿದಾಗ, ತಲೆ ನೋವು ಬಂದಾಗ, ಬ್ಯಾಸರಾದಾಗ, ಒತ್ತಡದಲ್ಲಿರುವಾಗ ರಿಫ್ರೇಶ್ ಆಗಲು ಚಹಾ ಬೇಕೇ ಬೇಕು. ನಾನಂತೂ ಕಂಪ್ಯೂಟರ್ ಮುಂದೆ ಕುಳಿತರೆ, ಓದಲು ಕುಳಿತರೆ ಇವಳಿಗೆ ಎಲ್ಲಿಲ್ಲದ ತೊಂದರೆ...ಮುಗಿಯವುದರೊಳಗಾಗಿ ಮೂರುನಾಲ್ಕು ಸಾರಿ ಉತ್ತೇಜಕ ಪಾನೀಯ ಬೇಕು. ಒಂದು ವೇಳೆ ರಜಾ ಬಂದರಂತೂ ಇವಳು ಹೆದರಿಬಿಡುತ್ತಾಳೆ. ಖರ್ಚಾಗುವ ಹಾಲು ಚಹಾಪುಡಿ ಸಕ್ಕರೆ ಬಗ್ಗೆ ಅಲ್ಲ...! ತಿಂಗಳಾದ ಮೇಲೆ ಎರಡು ಸಾವಿರ ರೂಪಾಯಿ ಹಾಲಿನ ಬಿಲ್ಲು ಕೊಡುವಾಗ ನನ್ನ ಪ್ರತಿಕ್ರಿಯೆ ಕಂಡು.

ಹೆಣ್ಣು ನೋಡುವ ಶಾಸ್ತ್ರದಲ್ಲಿ ಒಳ್ಳೆ ಮೀಡಿಯೇಟರ್ ಈ ಚಹಾನೆ...ಚಹಾದ ರುಚಿಗೆ ಮಾರು ಹೋಗಿ ಮದುವೆ ಕುದರಿದ ಉದಾಹರಣೆಗಳಿಗೆ ಲೆಕ್ಕ ಇಲ್ಲ. ಎಲ್ಲಿ ಚಹಾ ಫೇಲಾತೊ ಚಂದದ ಹುಡುಗಿ ಇದ್ದರೂ 'ಅಡುಗೆ ಮಾಡಲು ಬರಲಿಕ್ಕಿಲ್ಲ' ಎನ್ನುವ ಅನುಮಾನದಿಂದ ಕ್ಯಾನ್ಸಲ್ ಆಗಿರುವ ಕಥೆಗಳು ಇವೆ. ಹಾಗೆ ನೋಡಿದರೆ ನೋಡುವ ಶಾಸ್ತ್ರದಲ್ಲಿ ಆ ಹೆಣ್ಣು ಮಾಡಿರುವ ಸಾಧ್ಯತೆಗಳೆ ಇರೋಲ್ಲ. ಒಂದು ಹೆಣ್ಣಿನ ಮದುವೆಯನ್ನು ನಿರ್ಧರಿಸುವ ಶಕ್ತಿ ಯಕಶ್ಚಿತ್ ಚಹಾಕ್ಕಿದೆ ಎಂದರೆ....ಅದು ಸಣ್ಣ ಮಾತೆ?

ಇಡಿ ಪ್ರಪಂಚದಲ್ಲಿ ಸರಾಸರಿ ಒಬ್ಬ ವ್ಯಕ್ತಿಗೆ ಒಂದು ಕೆ.ಜಿಯಷ್ಟು ಅತಿ ಹೆಚ್ಚು ಚಹಾಪುಡಿ ಬಳಸುವ ದೇಶ ನಮ್ಮದು.. ಇರಬಹುದು, ಚಹಾ ಇಲ್ಲದ ಯಾವುದೆ ಕಾರ್ಯಕ್ರಮಗಳು ನಮ್ಮಲ್ಲಿ ಆರಂಭವಾಗುವುದಿಲ್ಲ ಅಥವಾ ಮುಕ್ತಾಯವಾಗುವುದಿಲ್ಲ. ಸ್ನೇಹವನ್ನು ಬಂಧುತ್ವವನ್ನು ವಿಶ್ವಾಸವನ್ನು ಬೆಸೆಯುವ ಪಾನೀಯ ಚಹಾ.. ಮನೆಗೆ ಬಂದ ಹೆಣ್ಣುಮಕ್ಕಳಿಗೆ ಕೊಡುವ ಕುಂಕುಮದಂತೆ ಗಂಡಸರಿಗೆ ಚಹಾ...ಬಂದವರಿಗೆ ಬರಿ ನೀರು ಕೊಟ್ಟು ಕಳಿಸಿ 'ಮನಿಗೆ ಹೋದ್ರ ಹಣೆಬರಹಕ್ಕ ಒಂದು ಕಪ್ ಚಹಾ ಕುಡಸಲ್ಲ..ಅವನದೇನು ಹೇಳತಿರಿ' ಎಂದು ನಿಮ್ಮ ಬಗ್ಗೆ ಬಿಟ್ಟಿಯಾಗಿ ಊರ ತುಂಬೆಲ್ಲ ಹೆಸರು ಪ್ರಚಾರ ಆಗಿರುತ್ತದೆ. ನಮ್ಮ ಮುಖ್ಯಗುರುಗಳೊಬ್ಬರು ಕೆಟ್ಟ ಜಿಪುಣಾಗ್ರೇಸರು. ಶಾಲೆಗೆ ಭೇಟಿ ಕೊಡುವ ಅಧಿಕಾರಿಗಳಿಗೆ ಯಾಕೆ ಚಹಾ ಕುಡಿಸಬೇಕು? ಎಂಬುದು ಅವರ ಭಾವ. ನಾನು 'ಅವರು ಮನೆಗೆ ಬಂದ ಅತಿಥಿಗಳು ಇದ್ದ ಹಾಗೆ... ಸೌಜನ್ಯಗೋಸ್ಕರವಾದರೂ ತರಸಬೇಕು ಸರ್' ಎಂದೆ. ಅವರು ಕ್ಯಾರೆ ಅನ್ನಲಿಲ್ಲ. ಚಹಾಪ್ರಿಯ ಆ ಅಧಿಕಾರಿಗಳು ಎಲ್ಲಾ ಸರಿ ಇದ್ದರೂ ತಪ್ಪು ಕೆದುಕಿ ಕೆದುಕಿ ರಿಪೋರ್ಟ ಬರೆದು ಕಛೇರಿ ಅಲೆಯುವಂಗ ಮಾಡಿದ್ರು. ನಾವು ತರಿಸಬೇಕೆಂದಿದ್ದರೂ ಮುಖ್ಯಗುರುಗಳ ಕೋಪಕ್ಕೆ ಗುರಿಯಾಗುವೆವು ಎನ್ನುವ ಭಯದಲ್ಲಿದ್ದ ನಮಗೂ ಚಹಾ ತರಸದ ಎಫೆಕ್ಟ್ ಕಛೇರಿಗೆ ಅಲೆಯುವಂತೆ ಮಾಡಿತ್ತು.

ಒಂದರ್ಥದಲ್ಲಿ ಚಹಾ ವೆಜಿಟೇರಿಯನ್ ವೈನ್ ಇದ್ದಹಾಗೆ...ನಗಬೇಡಿ, ಯೋಚಿಸಿ ಹೇಳಿ.. ಚಹಾದಲ್ಲಿ ಅಲ್ಪಪ್ರಮಾಣದಲ್ಲಿ 'ಕೆಫಿನ್ ಇದೆ' ಅದು ಅಪಾಯಕಾರಿ ಎಂದರೂ ಹೆಂಡ ಕುಡಿದು ಸತ್ತವರಿದ್ದಾರೆ ಚಹಾ ಕುಡಿದು ಸತ್ತವರುಂಟೆ....? ಎಂತಹ ರಾಷ್ಟ್ರಪತಿಗಳು, ಮುಖ್ಯಮಂತ್ರಿಗಳು ಪ್ರಶಸ್ತಿ ಸತ್ಕಾರ ನೀಡುವ ಅಥವಾ ಬೇರೆ ದೇಶಗಳ ಅತಿಥಿಗಳನ್ನು ಗೌರವಿಸುವ ಸಂದರ್ಭದಲ್ಲಿ ಟೀಪಾರ್ಟಿ ಹಮ್ಮಿಕೊಳ್ಳುತ್ತಾರೆ..ಅದು ಅದಕ್ಕೆ ಕೊಟ್ಟ ಗೌರವ ತಾನೆ..? ಇತ್ತೀಚಿಗೆ ಕೆಲವು ವರ್ಷಗಳಿಂದ ಮಾನ್ಯ ಪ್ರಧಾನಿಯವರು 'ಚಾಯಪೇ ಚರ್ಚಾ' ಎನ್ನುವ ರೇಡಿಯೊ ಕಾರ್ಯಕ್ರಮವನ್ನು ಆರಂಭಿಸಿದ್ದಾರೆ ಅಂದರೆ......ಚಹಾವನ್ನು ಅಂಡರ್ ಎಸ್ಟಿಮೇಟ್ ಮಾಡುವುದು ತಪ್ಪಲ್ಲವೇ?



ಇಂತಹ ಚಹಾದಲ್ಲಿ ಎಷ್ಟು ಬಗೆಗಳು....? ಲಿಸ್ಟ ಕೇಳಿ ಗಾಭರಿಯಾಬೇಕು! ಗ್ರೀನ್, ಬ್ಲಾಕ್, ವೈಟ್, ಹರ್ಬಲ್,ಮಸಾಲ, ಲೆಮನ್, ಡಾರ್ಲಿಂಗ, ಜಿಂಜರ್, ನೀಲಗಿರಿ, ಮೀಟರ್, ಇರಾನಿ, ತಂದೂರಿ ಮೊದಲಾದ ಮೂವತ್ತಕ್ಕಿಂತಲೂ ಹೆಚ್ಚು ಬಗೆಯ ಟೀಗಳು ಅರ್ಥಾರ್ಥ ಚಹಾಗಳು ಇಂದು ಜಗತ್ತನ್ನ ಆಳತಿವೆ. ಹಿಂದಕ್ಕೆಲ್ಲ ಹೋಟೆಲ್‌ನಲ್ಲಿ ಉಪಹಾರಗಳಿಗೆ ಮಹತ್ವ ಇತ್ತು. ಚಹಾಗೆ ಅಷ್ಟಕಷ್ಟೆ ಸ್ಥಾನ. ಯಾವಾಗಲೋ ಸೋಸಿದ ಚಹಾ ಅನ್ನೆ ಕೊಡುತ್ತಿದ್ದರು. ಅದೆಲ್ಲ ಔಟ್ ಡೇಟ್ ಆಗಿದೆ. ಈಗ ಚಹಾಗಳಿಗಾಗಿಯೇ ಪ್ರತ್ಯೇಕ ರೋಡ್ ಸೈಡ್ ಸ್ಟ್ಯಾಂಡ್ಗಳಾಗಿವೆ. ಅಂಗಡಿಗಳಾಗಿವೆ. ಚಹಾದ್ದೆ ಆದ 'ಚಾಯ್ ತಲಬ್, ಟೀ ಮಚ್ಚಾ, ಕರವೀರ ಚಹಾ, ಚಾಯವಾಲಾ' ಮೊದಲಾದ ಫ್ರಾಂಚೇಸಿಗಳು ಸಣ್ಣ ಊರುಗಳಿಗೂ ಹರಡಿಕೊಳ್ಳುತ್ತಿವೆ. ದೇಶದಾದ್ಯಂತ ಸಾವಿರಾರು ಕೋಟಿ ವ್ಯವಹಾರದ ಉದ್ಯಮವಾಗಿ ಬೆಳೆದಿದೆ..

ನಮ್ಮ ಕಲ್ಯಾಣ ಕರ್ನಾಟಕದ ಭಾಗದಲ್ಲಿ 'ಜ್ಯೂಸ್ ಅಂಗಡಿ', 'ಐಸ್‌ಕ್ರಿಮ್ ಅಂಗಡಿ', ಹೋಟೆಲ್‌ನ್ನೂ ಮಾಡಿ ಹಾಳಾದವರಿದ್ದಾರೆ ಟೀ ಮಾರಿ ಹಾಳಾದವರು ಇಲ್ಲವೆ ಇಲ್ಲ.... ಬೀಚಿಯವರು ಹೇಳೊ ಹಾಂಗ ನಮ್ಮಲ್ಲಿ ಎರಡೆ ಕಾಲ 'ಬೇಸಿಗೆ ಕಾಲ, ಅತಿ ಬೇಸಿಗೆ ಕಾಲ' ಇಂತಹ ಬೇಸಿಗೆಯ ವೈಭವದ ಬಿಸಿಲಿನಲ್ಲಿ ತುಂಬು ತುಳುಕುವುದು ಜ್ಯೂಸ್ ಅಂಗಡಿಗಳಲ್ಲ... ಟೀ ಅಂಗಡಿಗಳೆ...! ಅಂತಹ ಹಾಟ್ ಸಮಯದಲ್ಲೂ ತಂಪು ಬೇಕು ಎಂದು ಯೋಚಿಸುವುದೆ ಇಲ್ಲ...ಸೂರ್ಯ ನಿಗಿ ನಿಗಿ ಕೆಂಡದಾಂಗ ಆಗಿ ನೆತ್ತಿಮ್ಯಾಗ ಭರತನಾಟ್ಯ ಮಾಡತಿದ್ರೂ ಈ ತಂಬೆಳಕಿನಲ್ಲೂ ಚಹಾನೆ ಬೇಕು, ಅದೂ ಸುಡುತಿರಲೇಬೇಕು. ಜೊತಿಗೆ ಸಿಗರೇಟ್ ಸೇದೋದು ಬೇರೆ..

ನನಗೂ ಚಹಾಕ್ಕೂ ಎಲ್ಲಿಲ್ಲದ ನಂಟು.. ಚಹಾಬಿಟ್ಟರೆ ಬದುಕಿಲ್ಲ ಎನ್ನುವಷ್ಟು ನನಗೆ ಅದರೊಂದಿಗೆ ಬಾಂಧವ್ಯ.. ಅದು ಜೀನ್ಸ್ ಮೂಲಕ ಬಂದಿದೆಯೇನೋ ಗೊತ್ತಿಲ್ಲ..? "ನಿನ್ನ ಹೆಣ್ಣು ತಾತನ ಆಸ್ತಿಯಲ್ಲ ಬರಿ ಸಕ್ಕರಿ ಚಹಾ ಪುಡಿಗಾಗಿಯೆ ಹೋಯ್ತು..ನೀನು ಅದ ರಕ್ತದವ ಅಷ್ಟು ಕುಡಿಬ್ಯಾಡವೋ?" ಎಂದು ನಮ್ಮಪ್ಪ ಬಯ್ತಿದ್ದ... ಅದನ್ನು ನೆನೆಸಿಕೊಂಡಾಗಲೆಲ್ಲ....ನಮ್ಮ ತಾಯಿಯ ತವರು ಮನೆಯವರು ಕಳೆದುಕೊಂಡ ಅಪಾರ ಪ್ರಮಾಣದ ಆಸ್ತಿ ನೋಡಿ ಕನಿಕರವಾಗುತ್ತದೆ..ನಾನು ಕುಡಿಯವುದು ಬಿಡಬೇಕು ಎಂದು ನಿರ್ಧಾರ ಮಾಡುತ್ತೇನೆ..... ಅವತ್ತಿನ ಪೂರ್ತಿ! ಮರುದಿನದಿಂದ ಯಥಾಪ್ರಕಾರ.... ತೀರ್ಥ ಸೇವನೆ ಸಾಂಗೋಪಾಂಗವಾಗಿ ನಡೆದಿರುತ್ತದೆ. ಒಂದು ರೀತಿ ಹೆಂಡಗುಡುಕರ ತರಹದ 'ಚಹಾಕುಡುಕ' ಅನ್ನಿ.

ಬಾಲ್ಯದಾಗ ಒಂದು ಮದುವೆಗೆ ಹೋಗಿದ್ದೆ. ಮನೆಯಲ್ಲಿ ನೀರು ಚಹಾ ಮಾಡತಿದ್ರು. ಅಂದಿನ ಆರ್ಥಿಕ ಪರಸ್ಥಿತಿಗೆ ಅನಿವಾರ್ಯ ಇತ್ತು. ಅಲ್ಲಿ ಗಟ್ಟಿ ಹಾಲಿನಿಂದ ಮಾಡಿದ ಚಹಾ ಕೇಳಬೇಕೆ....? ಬರೋಬ್ಬರಿ ತಂಬಿಗೆಗಿಂತ ಹೆಚ್ಚು ಕುಡಿದು ಬಿಟ್ಟಿದ್ದೆ...! ಕುಡಿಯುವಾಗ ಏನಾಗದಿದ್ದರೂ ರಾತ್ರಿ ಹೊಟ್ಯಾಗಿಂದು ಕೇಳಬೇಕಲ್ಲ.....? ಕೆಳಭಾಗದಿಂದ ಪಂಪಸೆಟ್ ಹಚ್ಚಿ ಹೊಡೆದ ಹಾಗೆ ಹೊಟ್ಟೆ ಝಾಡಿಸಿದ್ದೆ ಝಾಡಿಸಿದ್ದು.. ಮರುದಿನ ಫುಡ್ ಪಾಯಜನ್‌ನಿಂದ ಮನೆಯಲಿ ನಾಲ್ಕೈದು ಮಂದಿ ಆಸ್ಪತ್ರೆಗೆ ಅಡ್ಮಿಟ್ ಆದಾಗ ನಾನು ಆ ಲೆಕ್ಕದಲ್ಲಿ ಉಳಕೊಂಡಿದ್ದೆ... ನಿಜವಾದ ಕಾರಣ ಗೊತ್ತಾಗಿದ್ದರೆ!



ಇನ್ನೊಮ್ಮೆಯೂ ಹರ್ನಿಯಾ ಕಾರಣದಿಂದ ಶಸ್ತ್ರ ಚಿಕಿತ್ಸೆಗೆ ಒಳಗಾಗಿ ಅಡ್ಮಿಟ್ ಆಗಿ ಮನೆಗೆ ಬಂದಾಗ, ಮಾತಾಡಿಸಲು ಬಂದವರಿಗಾಗಿ ಮಾಡುತ್ತಿದ್ದ ಚಹಾವನ್ನು ಅವರು ಕುಡಿಯುವಾಗ 'ನೀವು ಕುಡಿಯಿರಿ ಒಬ್ಬರೆ ಹೇಗೆ ಕುಡಿಯೋದು?' ಎಂದು

ಎಲ್ಲರೂ ಒತ್ತಾಯಿಸುತ್ತಿದ್ದ ಪರಿಣಾಮವಾಗಿ ಪಿತ್ತ ಜಾಸ್ತಿ ಆಗಿ.... ಲೋಕವೇ ತಿರುಗುವಂತಹ ತಲೆಸುತ್ತು... ಬಂದು ಮತ್ತೊಮ್ಮೆ ಆಸ್ಪತ್ರೆಗೆ ದಾಖಲಾಗಿ... ಲೈಫನಲ್ಲಿ ಚಹಾ ಕುಡಿಯಬಾರದೆಂದು ಆ ಕ್ಷಣದಲ್ಲಿ ನಿರ್ಣಯಿಸಿದರೂ.....ಆರಾಮದ ಮೇಲೆ ಮತ್ತೆ ಮೊರೆಹೋಗುವ ಡ್ರಗ್ಸ್ ಅಡಿಕ್ಟರಂತೆ ಮರಳಿ ಶರಣಾಗಿದ್ದು ಸುಳ್ಳಲ್ಲ.

ಇಂತಪ್ಪ ವರ್ಣಿಸಿದ ಚಹಾದ ಉಗಮ ನೋಡಕೋದ್ರೆ ಹೊಟ್ಟೆ ಉರಿಲಿಕ್ಕೆ ಸ್ಟಾರ್ಟ ಆಗುತ್ತದೆ.. ಚಹಾದ ಬರ್ಥ ಪ್ಲೇಸ್ ಈಗಾಗಲೆ ಮೂರು ವರ್ಷದಿಂದ ಕಾಡುತ್ತಿರುವ ಕರೋನಾದ ಮೂಲ ಸ್ಥಳವೇ...! ಚೀನಿ ಮಂದಿ, ಏನಾ ಮಾಡಲಿ ಅಟ್ರಾಕ್ಟ ಆಗೋಂಗಾ ಮಾಡತಾರ. ಕರೋನಾ ಅದು ವೈರಸ್ಸು. ಅಲಕ್ಷ ಮಾಡಿದ್ರ ಸಾಯಸೊತನ ಬಿಡಲ್ಲ. ಆದರೆ ಚಹಾ ಒಂದು ವೈರಸ್ ತರಹನ ಅನ್ನಿ. ಚಟ ಅಂಟಿಕೊಂಡ್ರ ಸಾಯೋವರೆಗೂ ಬಿಡೊಕಾಗಲ್ಲ.

ಚೈನಾದ ಶೆನ್ನಾಂಗ ಎನ್ನುವವನು ಚೈನಾದ ಪುರಾಣ ಕಾಲದ ರಾಜ. ಅವನೊಬ್ಬ ಕೃಷಿ ಸಂಶೋಧಕ ಹಾಗೂ ವೈದ್ಯ.. ಕ್ರಿ.ಪೂ 2700ರಲ್ಲಿ ಕುಡಿಯುವ ನೀರನ್ನು ಕುದಿಸುತ್ತಿದ್ದಾಗ ಅದರಲ್ಲಿ ಎರಡು ಎಲೆಗಳು ಬಿದ್ದು ನೀರನ್ನು ಕಂದುಬಣ್ಣಕ್ಕೆ ತಿರುಗಿಸಿದವಂತೆ. ಕುತೂಹಲದಿಂದ ಕುಡಿದಾಗ ಅವನಲ್ಲಿ ಒಂದು ಬಗೆಯ ಚೈತನ್ಯ ಬಂತಂತೆ...ಅದನ್ನು ಅವನು ಮುಂದೆ ಅಭಿವೃದ್ಧಿ ಪಡಿಸಿದ ಎಂಬ ಮಾತಿದೆ... ಹದಿನೆಂಟನೆ ಶತಮಾನದಲ್ಲಿ ಚೈನಾದ ಚಹಾ ಬೆಳೆಯ ಪ್ರಾಬಲ್ಯವನ್ನು ಮುರಿಯಲೆಂದೆ ಬ್ರಿಟೀಷರು....ಚಹಾ ಬೆಳೆಯಲೂ ಪೂರಕವಾದ ನಮ್ಮ ನೆಲದ ಆಸ್ಸಾಂ ಕಣಿವೆಗಳಲ್ಲಿ ಚಹಾದ ಕೃಷಿಯನ್ನು ಆರಂಭಿಸಿದರು ಎನ್ನುವ ಮಾತು ಇದೆ. ಅಲ್ಲಿಂದಲೇ ಅಧಿಕೃತವಾಗಿ ಚಹಾ ಭಾರತವನ್ನು ಪ್ರವೇಶಿಸಿತು ಎನ್ನುವುದಾದರೂ ಅದನ್ನು ಪೂರ್ಣವಾಗಿ ನಂಬಲಿಕ್ಕಾಗದು. ಕಷಾಯ ಕುಡಿಯುವ ಸಂಪ್ರದಾಯ ಅನಾದಿ ಕಾಲದಿಂದಲೂ ನಮ್ಮಲ್ಲಿ ಇದೆ.... ಐತಿಹ್ಯಗಳ ಪ್ರಕಾರ ಗೌತಮ ಬುದ್ಧ ಮೊದಲ ಬಾರಿಗೆ ಚಹಾ ಸೇವಿಸಿದನೆಂಬ ಪ್ರತೀತಿ ಇದೆ. ಅದೇನೆ ಇರಲಿ 'ಕೆಮಿಲಿಯಾ ಸಿನೆನ್ಸಿಸ್' ಎನ್ನುವ ಕಾಡು ಸಸ್ಯದ ಪೇಯವನ್ನು ಔಷಧಿ ರೂಪದಲ್ಲಿ ಕೊಡುತ್ತಿದ್ದ ಬಗೆಗೆ ನಮ್ಮ ಆಯುರ್ವೇದದಲ್ಲಿ ಉಲ್ಲೇಖವಿದೆ. ಎಲೆಗಳನ್ನು ಕುದಿಸಿಕೊಂಡು ಕುಡಿಯುವ ಪದ್ಧತಿ ನಿಜವಾದ ಚಹಾ ಪದ್ಧತಿ...ಆದರೆ ಬ್ರಿಟೀಷರ ಅವಧಿಯಲ್ಲಿ ಅದಕ್ಕೆ ಹಾಲು ಸೇರಿಸಿ ಕುಡಿಯುವ ಪದ್ಧತಿ ತಂದರು. ಈಗ ಅದು ಜನಜನಿತವಾಗಿದೆ...

ಬಾಲ್ಯದಲ್ಲಿ ಟಿವಿಯಲ್ಲಿ ಬರುತ್ತಿದ್ದ ಜಾಹಿರಾತೊಂದರಲ್ಲಿ ಮಲೆಯಾಳಿ ನಟ ಮೋಹನ್‌ಲಾಲ್ ಚಂದಾಗಿ 'ಉಯರಂ ಕೂಡುಂದೋರುಂ ಚಾಯಯುಡೆ ಸ್ವಾದಂ ಕೂಡುಂ' ಎಂದು ಹೇಳುತ್ತಿದ್ದರು. ಆ ಚಹಾ ಜಾಹಿರಾತನ್ನು ಊರು ಹೊಡೆದಿದ್ದ ನನಗೆ ಅರ್ಥ ಗೊತ್ತಾಗಿದ್ದು ಕಳೆದ ಎರಡು ವರ್ಷಗಳ ಹಿಂದೆ ಕೊಚ್ಚಿಗೆ ಪ್ರವಾಸಕ್ಕೆ ಹೋದಾಗ ನನಗೂ ಮಲಯಾಳಿ ಬರುತ್ತದೆ ಎಂದು ಬಟ್ಲರ್ ಭಾಷೆಯಲ್ಲಿ ಕೊಚ್ಚಿಕೊಂಡಿದ್ದೆ. ಅದರ ಅರ್ಥ 'ಎತ್ತರ ಹೆಚ್ಚಾದಂತೆ ಚಹಾದ ರುಚಿಯೂ ಹೆಚ್ಚಾಗುತ್ತದೆ' ಎಂದು ಮಿತ್ರರೊಬ್ಬರು ಹೇಳಿದ್ದ ನೆನಪು. ಅದಕ್ಕೆ ಪೂರಕವಾಗಿ ಆಸ್ಸಾಂ ಕಣಿವೆಗಳಲ್ಲಿ, ಡಾರ್ಜಲಿಂಗ್, ನೀಲಗಿರಿ ಬೆಟ್ಟಗಳಲ್ಲಿ, ನಮ್ಮ ಪಶ್ಚಿಮ ಘಟ್ಟಗಳಲ್ಲಿ ಬೆಳೆಯುವ ಚಹಾದ ಬಗೆಗೆ ಚಹಾಪುಡಿ ತಯಾರಿಕಾ ಕಂಪನಿಗಳು 'ನಮ್ಮದು ಹೆಚ್ಚು ಸ್ವಾದ.. ನಮ್ಮದು ಹೆಚ್ಚು ಸ್ವಾದ' ಎಂದು ಪೈಪೋಟಿ ನಡೆಸುವವೇನೊ? ಬಲ್ಲವರು ಹೇಳಬೇಕಷ್ಟೆ.....



ಚಹಾ ಜಾಹಿರಾತುಗಳಲ್ಲೂ ಎಂತಹ ವೈವಿಧ್ಯ.....ತಬಲಾ ಮಾಂತ್ರಿಕ ಝಾಕೀರ್

ಹುಸೇನ್ ಸೊಗಸಾಗಿ ತಬಲ ಬಾರಿಸುತ್ತಾ 'ವಾಹ್ ತಾಜ್' ಎನ್ನುತ್ತಾನೆ ನನಗೆ ಸ್ಫೂರ್ತಿ ಎನ್ನುವಂತೆ...ಇನ್ನೊಂದರಲ್ಲಿ ರೂಪದರ್ಶಿಯೊಬ್ಬಳು 'ಬಣ್ಣ ರುಚಿ ಶಕ್ತಿ' ಎಲ್ಲವೂ ಇದರಲ್ಲಿದೆ ಎಂದು ಚಹಾವನ್ನು ಬಿಂಬಿಸುತ್ತಾಳೆ....ಮತ್ತೊಂದರಲ್ಲಿ ಟಿ.ವಿ ನೋಡುತ್ತ ಕುಳಿತಿದ್ದ ಸೊಸೆ ನೋಡಿ ಅತ್ತೆ ಬೈಯ್ಯುತ್ತಿರುವಾಗಲೆ ಚಹಾ ಕುಡಿದು ಎನರ್ಜಿ ಬಂದು ಅತ್ತೆ ಚಾಳಿಸು ಒರೆಸಿಕೊಂಡು ಹಾಕಿಕೊಳ್ಳುವುದರೊಳಗಾಗಿ ಕೆಲಸ ಮಾಡಿ ಮುಗಿಸಿ ವಿಸ್ಮಯ ಹುಟ್ಟಿಸುತ್ತಾಳೆ. ಇನ್ನೂ ಕೆಲವು ಜಾಹಿರಾತುಗಳಲ್ಲಿ 'ಚಾಹಾ ಪೀಯೆ ಅಪನಾಪನ್ ಬಡಾಯಿಯೆ' 'ತೊಡಾಸ ವಕ್ತ ಚುರಾಕೆ ರಖೊ' 'ರಿಶತೊಮೆ ಗರ್ಮಾಹಟ್ ಲಾಯೆ' ಅನ್ನುವಂತಹ ಕಾವ್ಯಾತ್ಮಕ ಸಾಲುಗಳು ಕೇಳಿಸುತ್ತವೆ. ಇತ್ತೀಚಿಗೆ ವಿಭಿನ್ನ ಧರ್ಮಗಳ ನಡುವೆ ಬಾಂಧವ್ಯ ಬೆಸೆಯುವ, ತೃತೀಯ ಲಿಂಗಿಗಳ ಬಗ್ಗೆ ಗೌರವ ಮೂಡಿಸುವ, ಗಂಡ–ಹೆಂಡರಲ್ಲಿ ಬಾಂಧವ್ಯ ಬೆಸೆಯುವ, ಚಹಾ ಜಾಹಿರಾತುಗಳು ಗಮನ ಸೆಳೆಯುತ್ತಿವೆ. ಹಲವು ಜಾಹಿರಾತುಗಳು ಪ್ರಚಾರ ವಿಭಿನ್ನವಾಗಿ ಮಾಡಿದರೂ ಚಹಾದ ರುಚಿ ನೀರು, ಸಕ್ಕರಿ, ಚಹಾಪುಡಿ, ಹಾಲು ಹಾಕಿ ಕುದಿಸಿದರಷ್ಟೆ ಆಗೊಲ್ಲ, ಮಾಡುವ ಕೈಗಳ ಮೇಲಿರುತ್ತದೆ ಎಂಬುದಂತೂ ಅಂತಿಮ ಸತ್ಯ. ಚಹಾದ ವೆರಾಟಿ ಅವರವರ ಭಾವ ಬಕುತಿಯಂತೆ...

ಚಹಾದ ಬಗ್ಗೆ ಅನೇಕರು ಕಥೆಗಳನ್ನು ಬರೆದಿದ್ದಾರೆ ಪದ್ಯಗಳನ್ನು ಗೀಚಿದ್ದಾರೆ.. ಚಹಾ ಟೈಟಲ್ ಮ್ಯಾಲಿನ ಸಾಕಷ್ಟು ಪುಸ್ತಕಗಳು ಬಂದಿವೆ. ಬೀಚಿಯವರ ಕೃತಿ 'ಆರದ ಚಹಾ' ಸಿದ್ಧಲಿಂಗ ಪಟ್ಟಣಶೆಟ್ಟಿಯವರ 'ಚಹಾದ ಜೋಡಿ ಚುಡಾದಂಗ' ಪ್ರಸಿದ್ಧ ಅಂಕಣ.

ಚಹಾ ಕ್ಯಾಲೋರಿ ಇಳಿಸುತ್ತದೆ, ಸಂಧಿವಾತ, ಸೋರಿಯಾಸಿಸ್, ಹೃದಯ ಸಂಬಂಧಿ ಕಾಯಿಲೆ ಬರದಂತೆ ನೋಡಿಕೊಳ್ಳುತ್ತದೆ. ಹಾಗೆ ಹೀಗೆ ಎನ್ನುವ ಲಾಭಗಳು ಇವೆ ಎಂದರೂ ಆಸಿಡಿಟಿ ಮಾಡುತ್ತೆ ಎಂದು ಚಹಾವನ್ನು ದ್ವೇಷಿಸುವವರು ಇದ್ದಾರೆ. ಏನೇ ಇರಲಿ ಚಹಾ ಹಲವರಿಗೆ ಅನಿವಾರ್ಯತೆಗಳಲ್ಲಿ ಒಂದು. ಊಟ ನಾಷ್ಟ ಇರದಿದ್ದರೂ ಚಹಾ ಇದ್ದರೆ ಅದರ ಗತ್ತೆ ಬೇರೆ..ಸ್ವಲ್ಪ ಪೆಟ್ರೋಲ್ ಇದ್ರೂ ಕಿ.ಮಿ ಓಡುವ ಬೈಕನಂಗೆ....ಎರಡು ತಾಸು ಊಟವನ್ನು ಮುಂದಕ್ಕೆ ಹಾಕುವ ಶಕ್ತಿ ಇದೆ. ಅಂದ ಹಾಗೆ ನನಗೂ ಬಹಳ ಹೊತ್ತು ಆಯ್ತು ಚಹಾ ಸೇವಿಸದೆ...ಬರಲೇ....?

■

## ಸ್ವಾತಂತ್ರ್ಯ "ಬಂದ್"

ಆ ದಿನ ಮದುವೆಯ ಮಂಟಪದಲ್ಲಿ. ಇನ್ನೇನು ವರ ವಧುವಿಗೆ ತಾಳಿ ಕಟ್ಟಬೇಕು.. ಅಲ್ಲಿದ್ದ ಹಿರಿಯ ರೊಬ್ಬರು.. ವರನನ್ನು ಕೇಳಿದರು.. ಹ್ಞೂ.. ಮದುಮಗನೇ.. ಸುಲಗ್ನಾ ಸಾವಧಾನ.. ಇವತ್ತು ತಾರೀಕು ಏನು. ವರ ಹೇಳಿದ ಆಗಸ್ಟ್ ಹದಿನೈದು..ಆಗ ಹಾಸ್ಯ ಪ್ರಿಯರಾಗಿದ್ದ ಹಿರಿಯರು ಅಂದರು.. ಹೌದು, ಈ ದಿನ ನಮಗೆಲ್ಲಾ ಸ್ವಾತಂತ್ರ್ಯ ಬಂದ ದಿನ. ಆದರೆ ನಿನಗೆ ಸ್ವಾತಂತ್ರ್ಯ ಬಂದ್ "ಆದ ದಿನ ಇನ್ನು ನಿನಗೆ ಯಾವ ರೀತಿಯ ಸ್ವಾತಂತ್ರ್ಯವೂ ಇಲ್ಲಪ್ಪಾ.. ಹ್ಞೂ.. ಆಗಲಿ ಆಗಲಿ ತಾಳಿ ಕಟ್ಟು.. ಅಂದಾಗ ವಧುವಿನಾದಿಯಾಗಿ ಅಲ್ಲಿದ್ದವರೆಲ್ಲಾ ಹೊಟ್ಟೆ ಹುಣ್ಣಾಗುವಂತೆ ನಕ್ಕರು.. ಹಾಗೇ ಅಕ್ಷತೆ ಹಾಕಿ ಶುಭ ಹಾರೈಸಿದರು.ಪ್ರತಿ ವರ್ಷದ ವಿವಾಹ ವಾರ್ಷಿಕೋತ್ಸವದ ದಿನ ಹೃದಯಗಳು ಬೆಸೆದ "ಬಂಧನ"ದ ದಿನವಾಯ್ತು....

**–ಸುಮನಾ**



# ಎಂಕ್ಟನ ಯಶೋಗಾಥೆ

ಅರವಿಂದ. ಜಿ. ಜೋಷಿ

"ಏಯ್..ಎಂಕ್ಟಾ.., ಎಂಕ್ಟಾ. ಒಸಿನಿಂತ್ಕೋಳ್ಲಾ" ಎಂದು ಪಕ್ಕದಲ್ಲಿಯೇ ನಿಧಾನವಾಗಿ ಬರುತ್ತಿದ್ದ ಕಾರಿನೊಳಗಿಂದ ಧ್ವನಿ ತೂರಿ ಬಂದರೂ, ಬೈಕ್ ಓಡಿಸುತ್ತಿದ್ದ ಎಂಕ್ಟ ಅಲಿಯಾಸ್ ವೆಂಕಟರಮಣ, ಅತ್ತನೋಡಿಯೂ, ನೋಡದವನಂತೆ, ಕೇಳಿದರೂ ಕೇಳದವನಂತೆ ಹೊರಟಿದ್ದ. ಕಾರು ಯಾವಾಗ ಆತನ ಬೈಕ್ ಎದುರು ಬಂದು ನಿಂತಿತ್ತೋ, "ಗಕ್" ಎಂದು ಬ್ರೇಕ್ ಹಾಕಿ ನಿಲ್ಲಿಸಿದ. ಕಾರು ಚಾಲನೆ ಮಾಡುತ್ತಿದ್ದ ಕಂಟ್ರಾಕ್ಟರ್ ಸೋಮ, ತನ್ನ ಕರ್ಕಶ ಸ್ವರದಲ್ಲಿ" ಏಯ್, ಎಂಕ್ಟಾ.. ಯಾಕ್ಲಾ. ಎಷ್ಟ ದಪಾ, ಕೂಗಬೇಕ್ಲಾ?. ಎಂಗ್ ಕೂಗಿದ್ರೂ ಕೆಪ್ಪನಂಗೆ ಓಂಟೋಯ್ತಿದ್ದಿಯಲ್ಲಾ? ಎಷ್ಟಲಾ ಪೊಗ್ರು ನಿಂಗೆ..." ಎನ್ನುತ್ತಿದ್ದಂತೆ ಒಮ್ಮೆ ಎಂಕ್ಟ ಅವನತ್ತ ಗುರಾಯಿಸಿ ನೋಡಿ, "ರೀ..ಸ್ವಾಮೀ.. ಇಲ್ಲಿ ಎಂಕ್ಟಾ ಸಂಕ್ಟಾ ಅಂತ ಯಾರೂ ಇಲ್ಲ ಕಣ್ರೀ ನನ್ನ ಹೆಸ್ರು ವೆಂಕಟರಮಣ ಅಂತ ಗೊತ್ತಾ"? ಎಂದ, ಅವನಿಗಿಂತ ಎತ್ತರದ ಸ್ವರದಲ್ಲಿ. "ಓಹ್ಹೋ..ಏನ್ಲಾ ಮಗಾ.. ಈಟೊಂದು ಮಾತಾಡೋಕೆ ಕಲ್ತುಬಿಟ್ಯಾ ನನ್ನ ಮಗನೇ.."

"ರೀ... ಸ್ವಾಮಿ..ಮರ್ವಾದೆ, ಒಸಿ ಮರ್ವಾದೆ ಕೊಟ್ಟು ಮಾತಾಡಿ..."

"ಲೇ.. ಕಂಡೀದಿನಿ ಸುಮ್ಕಿರ್ಲಾ.. ಮರ್ವಾದೆ ಅಂತ ಮರ್ವಾದೆ"

"ರೀ... ಮಿಸ್ಟರ್. ಮತ್ತೊಂದ ದಫಾ ಏಳ್ತಾಅವ್ನಿ ನೀವ್ಯಾರೋ ನಂಗೊತ್ತಿಲ್ಲ, ಸುಮ್ಕೆ, ಬೆಳ್ಳಂ ಬೆಳಗ್ಗೆ ನನ್ನ ಟೈಂ ವೇಸ್ಟ್ ಮಾಡ್ಬೇಡಿ, ರೈಟ್ ಹೇಳಿ" ಎನ್ನುತ್ತ ಮುಂದಿನ ಪ್ರತಿಕ್ರಿಯೆಗೂ ಕಾಯದೇ, ವಾಚ್ ನೋಡಿಕೊಂಡವ ಬೈಕ್ ಸ್ಟಾರ್ಟ್ ಮಾಡಿ ಅಲ್ಲಿಂದ ಹೊರಟೇ ಬಿಟ್ಟ.

ಹಾಗೇ ಅನತಿ ದೂರ ಹೊರಟಾಗ ಅವನ ಚಡ್ಡಿ ದೋಸ್ತ, ದ್ಯಾವಾ ತಲೆ ಬಗ್ಗಿಸಿಕೊಂಡು ಹೋಗುತ್ತಿದ್ದವನನ್ನು ಕಂಡ. ನಿಧಾನವಾಗಿ ಆತನ ಪಕ್ಕ ಬಂದು, "ಇದ್ಯಾಕ್ಲಾ... ದ್ಯಾವಾ.. ಈಸೊತ್ನಾಗೆ ಎಲ್ಲಿಗ್ ಹೊಂಟೀ" ಎಂದು ಪ್ರಶ್ನಿಸಿದ. ಅದಕ್ಕೆ ದ್ಯಾವ"ಇನ್ನೇನು ಮಾಡ್ಲಿ ಹೇಳು ಎಲ್ಲೂ ಕೆಲ್ಸಾ ಸಿಕ್ನಿಲ್ಲಾ, ಎಲ್ಲಾದ್ರೂ ಕೂಲೀ ಗೀಲೀ ಮಾಡಾವಾ ಅಂತ ಹೊಂಟಿವ್ನಿ" ಎಂದ ಬೇಸರದಿಂದ. ದೋಸ್ತನ ಮಾತು ಕೇಳಿಸಿಕೊಂಡ ಎಂಕ್ಟನಿಗೆ ಯಾಕೊ ಪಿಚ್ಚೆನಿಸಿತು.

"ಬಾರ್ಲಾ.., ಕುಂತ್ಕೋ." ಎನ್ನುತ್ತ ದ್ಯಾವನನ್ನು ಕರೆದು ತನ್ನ ಬೈಕ್ ಮೇಲೆ ಕೂರಿಸಿಕೊಂಡ.

"ಎಲ್ಲಿಗೆ..." ಎಂದು ಪ್ರಶ್ನಿಸಿದ ದ್ಯಾವ.

"ಆಮ್ಯಾಕೆ ಹೇಳ್ತೀನಿ, ನಾಷ್ಟಾ ಮಾಡ್ದಾ.?"

"............. ........."



"ಊಂ, ಸರೀ ಬಾ ಮತ್ತೆ ನಂದೂ ಆಗಿಲ್ಲಾ"ಎನ್ನುತ್ತ ನಗರದ ಪ್ರಸಿದ್ಧ ಹೋಟೆಲ್ ಎದುರು ಬೈಕ್ ಪಾರ್ಕ್ ಮಾಡಿ, ಇಬ್ಬರೂ ಹೋಟೆಲ್ ಪ್ರವೇಶಿಸಿ ತಿಂಡಿಗೆ ಆರ್ಡರ್ ಮಾಡಿ ಕಾಯುತ್ತ ಕುಳಿತರು.

ಎಂಕ್ಟನ ಕೈಯಲ್ಲಿನ ಚಿನ್ನದ ಬ್ರೆಸ್ಲೇಟ್, ಕತ್ತಿನಲ್ಲಿ ಎರಡು ದಪ್ಪದ ಬಂಗಾರದ

ಸರ, ಕೈ ಬೇರಳಿನಲ್ಲಿ ಧರಿಸಿದ ದಪ್ಪ ಉಂಗುರ ಗಳನ್ನೇ ಬೆಕ್ಕಸ ಬೆರಗಾಗಿ ನೋಡುತ್ತಿದ್ದ ದ್ಯಾವ–"ಎಂಕ್ಟಾ. ನಾ. ಹಿಂಗ್ ಕೇಳ್ತೀನೀ ಅಂತ ತೆಪ್ಪ ತಿಳೀಬ್ಯಾಡಾ" ಎಂದು ಮಾತು ಆರಂಭಿಸಿದ.

"ಏಯ್ ಕೇಳ್ಲಾ.. ನೀ ಕೇಳದೇ ಇನ್ಯಾರ್ಲಾ ಕೇಳೋಕಾಯ್ತದೆ" ಎಂದ

"ಇನ್ನೇನಿಲ್ಲಾ. ಈಗ್ ಎಲ್ದು ವರ್ಸದ ಕೆಳ್ಗೆ, ನೀನೂನೂ.. ನನ್ನಾಂಗೆ ಯಾವ ಕೆಲ್ಸಾ ಇಲ್ದೆನೇ ಇದ್ದಾವಾ, ಈಗ ನೋಡಿದ್ರೆ..."ಎಂದು ಆಶ್ಚರ್ಯ ಮತ್ತು ಅನುಮಾನ ಮಿಕ್ಸ್ ಮಾಡಿದ ನುಡಿ ಹೇಳಹೊರಟಾಗ, ಎಂಕ್ಟ.. "ಓ.. ಅದಾ.. ಅದೆಲ್ಲಾ, ಸ್ವ–ಉದ್ಯೋಗ ಕಣ್ಲಾ, ಯಾವ ಬಂಡವಾಳಾನೂ ಬ್ಯಾಡಾ ಗಿಂಡವಾಳಾನೂ ಬ್ಯಾಡಾ, ಅದೊಂಥರಾ ಬಿಸಿನೆಸ್ಸು ಕಣ್ಲಾ.." ಎಂದ ಹುಸಿನಗೆ ಸೂಸುತ್ತ. ದ್ಯಾವನಿಗೆ ಅರ್ಥವಾಗಲಿಲ್ಲ. ಪುನ: ಆತ "ಏಯ್ ಇಂಗೆ ಒಗಟ್ ಒಗಟಾಗಿ ಏಳಿದ್ರೆ ಯಾವನಿಗ್ಲಾ ತಿಳೀತೈತೆ, ಒಸೀ ಬಿಡ್ಸಿ ಹೇಳ್ಲಾ..."ಎಂದ.

ಮುಂದುವರೆದ ಎಂಕ್ಟ, "ದಿಟಾ ಕಣ್ಲಾ,ಈ ಎಲ್ಲೆಡೆ ವರ್ಸದ್ ಕೆಳ್ಗೆ ನಂಗೂವೇ ಯಾವ ಕೆಲ್ಸಾ ಇಲ್ದೇನೆ ಸಾನೇ ಬ್ಯಾಸ್ರಾ ಆಗಿತ್ತು.ಇತ್ತಾಗ ಮನ್ಯಾಗ ಇರೋಕಾಗ್ದೆನೆ ಅತ್ತಾಗ ಫ್ರೆಂಡ್‌ಗಳ ಜೊತೆಗೂ ಸೇರೋಕ್ಕಾಗ್ದೆನೆ ಈ ಬದ್ಕೇ ಬ್ಯಾಡಾ ಅಂದ್ಕೊಂಡು ಊರ ಮುಂದಿನ ಕೆರ್ಯಾಗೆ ಹಾರ್ಕೊಳ್ಳುವಾ ಅಂತ ಹೋಗಿದ್ದೆ. ಅದೆ ಟೇಮಿನ್ಯಾಕೆ ಅದೆಲ್ಲಿಂದ್ಲೋ ಒಂದು ಮುದಕಮ್ಮ ಬಂದು, ನನ್ನ ವಿಚಾರ ಕೇಳ್ಸಕೊಂಡು ಹಿಗ್ಗಾಮುಗ್ಗಾ ಬಾಯಿಗೆ ಬಂದಾಂಗೆ ಉಗ್ದು ಉಪ್ಪಿನಕಾಯಿ  ಹಾಕಿ ಕೊನ್ಯಾಕೆ" ಮಗಾ.. ಈಗ್ಲೇ ಮನೀಕಡೆಗೆ ಹೊಗು ಎಲ್ಲಾ ಒಳ್ಳೆದಾಗ್ತದೆ" ಅಂತು. ಅದ್ಯಾಕೋ ಆ ಮುದಕಮ್ಮನ ಮಾತು ನಂಗೊಂಥರಾ ಮೋಡೀನೇ ಮಾಡ್ದಾಂಗ ಆತು. ಅದಾದ ಮ್ಯಾಕೆ ಒಂದರ್ಧ ಗಂಟೆ ಬಿಟ್ಟು ಮನಿ ಕಡೆ ಬಂದ್ನಾ..

ಆಗ ಮನಿ ಎದುರು  ಒಂದು ಜೀಪ್ ನಿಂತಿತ್ತು. ಅದ್ರಲ್ಲಿ ಕೂತಿದ್ದ ಡ್ರೈವರ ಅಣ್ಣ ನನ್ನ ನೋಡ್ತಿದ್ದಾಂಗೆ" ಲೋ.. ಎಂಕ್ಟಾ, ಊರು ಪಟೇಲ್ರು ಕೂಗ್ತಾವ್ರೆ ಬಾರ್ಲಾ ಹೋಗಾಮಾ" ಅಂತ ಹೇಳಿ ನನ್ನ ಜೀಪನ್ಯಾಗ ಕೂರಸ್ಕೊಂಡು ಆ ಪಟೇಲ್ರ ಮನಿಗೆ ಕರ್ಕೊಂಡು ಬಂದ. ನನ್ನ ಕಂಡು ಪಟೇಲ್ರು ಭೋ ಸಂತೋಸದಿಂದ" ಬಾ..ಬಾ.. ಎಂಕ್ಟಾ ಅಂತ ಕರ್ದು ಜಗಲಿ ಮ್ಯಾಕೆ ಕೂರ್ಸಿ ಎರಡ ಲೋಟಾ ತಣ್ಣಗಿರೋ ಮಜ್ಜಿಗೆ ಕೊಟ್ಟು" ನೋಡ್ ಎಂಕ್ಟಾಇಂದ ಸಂಜೆ ಕಾಲೇಜ್ ಮೈದಾನದಾಗೆ ನಮ್ಮ ಪಕ್ಷದ ಮುಖಂಡರ ಭಾಸಣಾ ಐತೆ, ನಿನ್ನ ಕಡಿಯಿಂದ ಒಂದು ನೂರೈವತ್ತು–ಇನ್ನೂರು ಜನಾನ್ನ ಕರ್ಕೊಂಡು ಬಾ, ಅವ್ರಿಗೆಲ್ಲಾ ಕಾಫೀ, ತಿಂಡಿ, ಊಟಾ ನಾವೇ ನೋಡ್ಕೋತೀವಿ, ಅವ್ರು ಬಂದು ಭಾಸಣಾ ಮಾಡಾವ್ರ ಮುಂದೆ ನಿಂತು ಕೈ ಎತ್ತಿ "ಜೈ..ಜೈ." ಅಂತ ಜೋರಾಗಿ ಕೂಗ್ಬೇಕು ಅಷ್ಟೆಯಾ" ಅಂತ ಹೇಳಿ ಕೈಗೆ ಐದುಸಾವಿರ ತುರುಕಿ ಮರೀಬ್ಯಾಡಾ ಅಂತ ಕಳ್ಸಕೊಟ್ರು. ನಾನು ಫಸ್ಟ್ ಟೈಂ ಆಟೊಂದು ಕಂಡಿದ್ದು.

ದುಡ್ಡೇನೋ ಇಸ್ಕೊಂಡು ಹೂಂ ಅಂದೆ, ಆದ್ರೆ ಆಮ್ಯಾಕೆ ಅಷ್ಟೊಂದು ಜನಾನಾ ಹ್ಯಾಂಗ್ ಹೊಂದ್ಸೋದು ಅನ್ಕೊ ತಾ ಭಗವಂತಾ ನೀನೇ ಕಾಪಾಡು ಅಂತ ಅಂದು ಅವನ ಮ್ಯಾಲೆ ಭಾರಾ ಹಾಕಿ, ಕಷ್ಟ ಪಟ್ಟು ದೊಡ್ಡ ಹೈಕ್ಳು, ಸಣ್ಣ ಹೈಕ್ಳು, ಎಂಗಸ್ರು ಒಟ್ಟ ಎಲ್ಲಾ ಒಂದಿನ್ನೂರ ಜನಾನ, ಸೇರ್ಸಿ ಕರ್ಕೊಂಡು ಹೋಗಿ ಸೈ ಎನ್ನಿಸಿಕೊಂಡು ಬಂದೆ. ಆವತ್ತಿಂದ ನೋಡ್ಲಾ.




ನನ್ನ ದಿಸೆ ತಿರಗ್ತು. ಈಗೀಗ ಪ್ಯಾಟೆ ಊರಾಗಂತೂ ಆ ಸೂಸೈಟಿದೂ,

ರಾಜಕೀಯ ಪಕ್ಷದ್ದು, ಸಂಘದ್ದು ಚುನಾವಣೆ ಸಭೆ, ಪ್ರಚಾರ ಸಭೆ ಇದ್ದೇ ಇರ್ತಾವೆ ಹಿಂಗಾಗಿ ನಮ್ಮೂರಿನ ಸುತ್ತ ಮುತ್ತಲಿನ ಜನಾನ ಕರ್ಕೊಂಡು ಹೋಗೋದು ಬರಾದು, ಮಾಡಾಕೆ ಶುರು ಮಾಡ್ದೆ.ನಾ ನಂಬಿದ ದ್ಯಾವ್ರು ಕೈ ಬಿಡಲಿಲ್ಲ. ಅಂಗಾಗೇ ಊರಾಗ ಒಂದೈದು ಎಕ್ರೆ ಜಮೀನು, ಪ್ಯಾಟ್ಯಾಗೊಂದು ಮಾಡಿ ಮನೆ ಕಟ್ಟಿಸಿ ಕೆಳಕ್ಕೆ ನಾ ಇದ್ದು, ಮಾಡಿ ಮನೆ ಬಾಡಿಗೆಗೆ ಕೊಟ್ಟೀನಿ, ಮುಂದ್ಲ ವಾರ.." ಅಂತ ಹೇಳುತ್ತಿದ್ದಾಗ ಆತನ ಮೊಬೈಲ್ ರಿಂಗಿಣಿಸಿತು.

"ಹಲ್ಲೋ" ಎಂದ. ಆ ಬದಿಯಿಂದ "ನಾನು ಕಣ್ಎಂಕ್ಟಾ, ಮಿನಿಸ್ಟರ್ ಪಿ.ಎ.ಮಾತಾಡೊದು, ಮುಂದಿನ ವಾರ ನಮ್ಮ ಪಕ್ಷದ್ದು ದೊಡ್ಡ ಸಮಾರಂಭ ಇದೆ, ಈ ಸಂಬಂಧ ನಮ್ಮ ಸಾಹೇಬ್ರು ನಿನ್ನ ಬರಹೇಳಿದ್ದಾರೆ ಬರ್ತಿಯಾ?" ಎಂದಾಗ ಎಂಕ್ಟ "ಆಯ್ತು ಸ್ವಾಮೀ ಬರ್ತೇನೆ" ಎನ್ನುತ್ತ, ಜೇಬಿನಿಂದ ಐನೂರರ ಒಂದು ನೋಟು ದ್ಯಾವನಿಗೆ ಕೊಡುತ್ತ ಬಿಲ್ ಕೊಟ್ಟು ಚಿಲ್ಲರೆ ನೀನೇ ಮಡಿಕ್ಕೋ "ಎಂದು ಹೇಳಿ ಬೈಕ್ ಏರಿ ಹೊರಟು ಬಿಟ್ಟ."

■

**ಬ್ಯಾರೆಲ್ ಸ್ಫೋಟಗೊಂಡು ಪೋರ್ಚುಗಲ್ ರಸ್ತೆ ಮೇಲೆ ಹರಿದ 20 ಲಕ್ಷ ಲೀಟರ್ ರೆಡ್ ವೈನ್** — ಸುದ್ದಿ



# ಒಡೆದ ಹಾಲು ಮತ್ತು ಬಟಗಡಲೆಯ ಪಲ್ಯ!

ಸುಚಿತ್ರಾ ಹೆಗಡೆ, ಮೈಸೂರು

ಇಂದಿನ ಮಕ್ಕಳು ಕನ್ನಡ ಕಲಿಯುವ ರೀತಿ ನೋಡಿ ನನಗೆ ನಾವು ಇಂಗ್ಲಿಷ್ ಮತ್ತು ಹಿಂದಿಯನ್ನು ಕಲಿತ ಬಗೆ ನೆನಪಿಗೆ ಬಂತು. ಕಳೆದ ಮೂವತ್ತು ವರ್ಷಗಳಲ್ಲಿ ನಮ್ಮ ಕಲಿಕೆಯ ವಿಧಾನಗಳಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದು ಖುಷಿಯಾಗಬೇಕೋ ಬೇಸರವೋ ಗೊತ್ತಾಗಲಿಲ್ಲ. ನಾವು ಹೇಗೆ ಇಂಗ್ಲಿಷ್ ಮತ್ತು ಹಿಂದಿಯನ್ನು ನಮ್ಮ ಮಾತೃಭಾಷೆಯಲ್ಲಿ ಕಲಿತಿದ್ದೆವೋ ಹಾಗೇ ನಮ್ಮ ಮಕ್ಕಳು ನಮ್ಮ ತಾಯಿಭಾಷೆಯನ್ನು ಪರತಾಯಿ ಭಾಷೆಯಲ್ಲಿ ಕಲಿಯುತ್ತಿದ್ದಾರೆ! ಇಲ್ಲಿ ಸಾಧಿಸುವ ದಾರಿಯೊಂದೇ, ಗುರಿ ಮಾತ್ರ ಬೇರೆ.

ನಾನು ಕನ್ನಡ ಶಾಲೆಯಲ್ಲಿರುವಾಗ ಐದನೆಯ ತರಗತಿ ಮುಗಿದು ಆರನೆಯದಕ್ಕೆ ಕಾಲಿಟ್ಟ ಸಂದರ್ಭದಲ್ಲಿ ನಮ್ಮ ಮೇಲೆ ರಾಷ್ಟ್ರಭಾಷೆಯೆಂದು ಹಿಂದಿ ಹೇರಿಕೆಯಾಗುತ್ತಿತ್ತು. ಆಗಿನ್ನೂ ಟಿವಿಯೆಂಬ ಮಾಯಾಪೆಟ್ಟಿಗೆ ಮನೆ ಮನೆಗೆ ಬಂದಿರಲೇ ಇಲ್ಲ. ಹಿಂದಿ ಭಾಷೆಯ ಗಂಧಗಾಳಿಯೂ ಇರದ ನಮಗೆ ಅದಾಗಲೇ ಮೆಟ್ಟಿಕೊಂಡಿದ್ದ ಇಂಗ್ಲಿಷ್ ಎಂಬ ಭೂತದ ಉಚ್ಚಾಟನೆಯೇ ಆಗಿರದಿದ್ದ ಸಮಯದಲ್ಲಿ ಈ ಹೊಸ ಪಿಶಾಚಿ ತಗುಲಿಕೊಂಡಿದ್ದು ನಮ್ಮ ಸಂಕಟವನ್ನು ದ್ವಿಗುಣಗೊಳಿಸಿತು. 'ಉಸ್ಕಾ, ಇಸ್ಕಿ, ಉಸ್ಕೆ, ಇಸ್ಕೊ, ಉಸ್ಕೊ... ಎಲ್ಲಿ ಕ ಕಾ ಕಿ ಕೊ ಹಾಕಬೇಕು..ಮೇರಿ, ಮೇರಾ, ಮೇರೆ ಎಲ್ಲಿ ರ ರಾ ರಿ ರೆ ಬಳಸಬೇಕು ಎನ್ನುವ ಗೊಂದಲ ಮೆದುಳನ್ನೇ ಹಿಂಡಿ ಅರೇ ಇಸ್ಕಿ ಎನ್ನುವಂತಾಯಿತು.. ಸುಶೀಲಕ್ಕೋರು ಹಿಂದಿ ಕಾಗುಣಿತ ಹೇಳಿಕೊಡುವಾಗ ಹಿಂದಿ ಅಷ್ಟೇನು ಕಷ್ಟವಲ್ಲ ಅನ್ನಿಸಿತ್ತು. ಆದರೆ ಅವರು ಅಪ್ಪಟ ದಕ್ಷಿಣ ಭಾರತೀಯ ಉಚ್ಚಾರದಲ್ಲಿ ಹಿಂದಿ ಪಾಠಮಾಡಲು ಶುರು ಮಾಡಿದಾಗ ನಮ್ಮ ಪೇಚಾಟ ಹೇಳತೀರದು. ಇನ್ನು ಹಿಂದಿ ಭಾಷೆಯ ಲಿಂಗಗಳನ್ನು ಕಲಿಯುವಾಗಲಂತೂ ನಮ್ಮ ಗೋಳು ಆಸ್ಮಾನ್ ಛೂಲಿಯಾ.

ಈ ಹಿಂದಿಯಲ್ಲಿರುವಷ್ಟು ಲಿಂಗ ತಾರತಮ್ಯ ಇನ್ನಾವ ಭಾಷೆಯಲ್ಲೂ ಇಲ್ಲ ಕಣ್ರಿ. ಪುಲ್ಲಿಂಗ ಮತ್ತು ಸ್ತ್ರೀಲಿಂಗಗಳನ್ನು ಹಿಡಿಯುವವರೇ ಇಲ್ಲ. ಬೊಟ್ಟು, ತಾಳಿ, ಕಾಲುಂಗುರ ಯಾವುದು ಇಲ್ಲದಿದ್ದರೂ ಕುಟಿಯಾ (ಗುಡಿಸಲು) ಸ್ತ್ರೀಲಿಂಗವಾಗಿ ಬಿಡುತ್ತದೆ. ಬಸ್ಸಿನ ಅಡಾವುಡಿ ವೇಗ ಮತ್ತು ಎಲ್ಲೆಂದರಲ್ಲಿ ನಿಲ್ಲುವ ದುರಭ್ಯಾಸಕ್ಕಾಗಿ ಬಸ್ಸು ಪುಲ್ಲಿಂಗವಾಗಿರಬೇಕು. ಹೆಣ್ಣಿನ ನಾಲಿಗೆಯಷ್ಟೇ ಹರಿತವಾಗಿರುವ ಕಾರಣಕ್ಕೆ ಕೀಂಚಿ (ಕತ್ತರಿ) ಸ್ತ್ರೀಲಿಂಗವಂತೆ. ಎಲ್ಲವನ್ನೂ ತಾಳಿಕೊಂಡು ಸ್ಥಿರವಾಗಿರುವ ಮಕಾನ್ (ಮನೆ) ಗಂಡೇ ಆಗಿರಬೇಕೆಂದು ಪುಲ್ಲಿಂಗ.

ಉತ್ತರ ಭಾರತದಲ್ಲಿರುವಾಗ ಒಂದು ಫರ್ನೀಚರ್ ಅಂಗಡಿಯಲ್ಲೊಮ್ಮೆ 'ಭಯ್ಯಾ, ಯೇ ಕುರ್ಸೀ ಕಾ ಕ್ಯಾ ದಾಮ್ ಹೆ?' ಎಂದು ನನ್ನ ಹಿಂದಿಯ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುತ್ತ ಕೇಳಿದೆ. 'ಭಾಭೀಜಿ, ಕುರ್ಸೀ 'ಕಾ' ನಹೀ.. 'ಕೀ' ಹೋತಾ ಹೆ.. ಕುರ್ಸೀ ಫೀಮೇಲ್ ಹೆ' ಅಂದುಬಿಟ್ಟ. ನಾನು 'ಕುರ್ಸೀ ಕಾ ಅಲ್ಲ ಕುರ್ಸೀ ಕೀ ಪೀಚೆ ಐಸಾ ಕ್ಯಾ ಹೆ ಕೀ ಯೆ ಸ್ತ್ರೀಲಿಂಗ್ ಹೋ ಜಾತಾ ಅಲ್ಲಲ್ಲ ಜಾತೀ ಹೆ' ಎಂದು ತಲೆಕೆಡಿಸಿಕೊಂಡಿದ್ದೆ.



ಬರೆದದ್ದು ಪತ್ರವಾದರೆ ಪುಲ್ಲಿಂಗ, 'ಚಿಟ್ಟೀ'ಯಾದರೆ ಸ್ತ್ರೀಲಿಂಗ. ಗಜಗಂಭೀರ ಹಾಥೀ ಪುಲ್ಲಿಂಗ, ಬೇಚಾರಾ ಗಾಯ್ ಸ್ತ್ರೀಲಿಂಗ. ಇಷ್ಟೇ ಅಲ್ಲ, ಸುಖ, ದುಃಖ, ಪ್ರೇಮಗಳಂತ ಭಾವನಾತ್ಮಕ ವಿಷಯಗಳು ಪುಲ್ಲಿಂಗ! ಗುಸ್ಸಾ, ಆಶಾ, ಹವಾ ಮುಂತಾದ ಕ್ಷಣಭಂಗುರಗಳು ಸ್ತ್ರೀಲಿಂಗಗಳಾಗುತ್ತವೆ. ಸಚ್ಚಾಯಿ ಇಮಾಂದಾರೀಗಳಂತೂ ಪಕ್ಕಾ

ಸ್ತ್ರೀಲಿಂಗಗಳೇ. ಈ ವಿಪರೀತ ವ್ಯಾಕರಣದಿಂದ ಬಂದ ವ್ಯಾಕುಲತೆಯಿಂದ ಹಿಂದಿ ಭಾಷೆಯ ಕುರಿತು ವೈರಾಗ್ಯ ಬಂದ ಕಾಲದಲ್ಲಿ ನಮ್ಮ ಕೈ ಹಿಡಿದದ್ದು ಗದಗಿನ ಶಾಬಾದಿಮಠ ಬುಕ್ ಡಿಪೊ. ಅವರು ಹೊರತಂದ ಕನ್ನಡ ಭಾಷೆಯಲ್ಲಿದ್ದ ಇಂಗ್ಲಿಷ್ ಮತ್ತು ಹಿಂದಿ ಗೈಡುಗಳು ನಮ್ಮ ಸಂಕಟಮೋಚನಕ್ಕೇ ಬಂದವುಗಳಾಗಿದ್ದವು. ಈ ಗೈಡುಗಳಲ್ಲಿ ಪ್ರತಿ ಪಾಠ ಮತ್ತು ಅವುಗಳ ಅನುವಾದ ಅಚ್ಚ ಕನ್ನಡದಲ್ಲಿ ಕೊಟ್ಟಿರುತ್ತಿದ್ದರು. ಒಂದೊಂದೇ ಅಕ್ಷರ ಹೆಕ್ಕಿ ಓದುತ್ತಿದ್ದ ನಾವು ಒಮ್ಮೆಲೇ ಸರಾಗವಾಗಿ ಹಿಂದಿ ಪಾಠಗಳನ್ನು ಓದಿ ಮನೆಯವರಿಂದ ಭೇಷ್ ಅನ್ನಿಸಿಕೊಂಡೆವು. 'ಮೇ' ಅನ್ನಲು 'ಮೈ' ಎಂದು, 'ಹೆ' ಯನ್ನು 'ಹೈ' ಮಾಡಿ ಓದಿದ್ದೇ ಓದಿದ್ದು. ಅಲ್ಲದೇ ಅವುಗಳ ಅನುವಾದವನ್ನು ನಮ್ಮ ಭಾಷೆಯಲ್ಲಿ ಕೊಟ್ಟಿದ್ದರಿಂದ ಅರ್ಥವೂ ಗೊತ್ತಾಗತೊಡಗಿತು. ಆರನೆಯದೋ ಏಳನೆಯದೋ ತರಗತಿಯಿರಬೇಕು. ಅಲ್ಲೊಂದು ಪಾಠದಲ್ಲಿ ಒಂದು ಹೊಸರುಚಿಯನ್ನು ಮಾಡುವ ಬಗ್ಗೆ ವಿವರಣೆ. ಯಥಾಪ್ರಕಾರ ಪುಸ್ತಕದಲ್ಲಿ ಏನೇನೂ ಅರ್ಥವಾಗದ ಕಾರಣ ಶಾಬಾದಿಮಠಕ್ಕೆ ಶರಣುಹೋಗಬೇಕಾಯಿತು. ಅಲ್ಲಿದ್ದದ್ದು ಹಿಂದೆಂದೂ ತಿಂದಿರದ ಹಾಗೂ ನೋಡಿರದ ಒಡೆದ ಹಾಲು ಮತ್ತು ಬಟಗಡಲೆಯ ಪಲ್ಯ! ದಕ್ಷಿಣ ಭಾರತದ ಮೂಲೆಯ ಕರಾವಳಿ ತೀರದ ನಮಗೆ ತೀರ ಸೆಖೆಯಾದಾಗ ಹಾಲು ಒಡೆಯುವುದು ಮತ್ತು ಚೌತಿ ಹಬ್ಬದಲ್ಲಿ ನೈವೇದ್ಯ ಮಾಡುವ ನೆನೆಸಿದ ಕಡಲೆ ಕಾಳು ಮಾತ್ರ ಗೊತ್ತು. ಇದೇನಿದು ಈ ಒಡೆದ ಹಾಲು!? ಇದೇನಿರಬಹುದು ಈ ಬಟಗಡಲೆ!? ಎಂದು ಅರಿಯಲು ಸಾಧ್ಯವಿರುವ ಎಲ್ಲಾ ನೆಲೆಗಳಲ್ಲಿ ಅಂದರೆ ವೈಯಕ್ತಿಕವಾಗಿ, ಗುಂಪಿನಲ್ಲಿ ಮತ್ತು ಹಿರಿಯರ ಮೇಲುಸ್ತುವಾರಿಯಲ್ಲಿ ಪ್ರಯತ್ನಿಸಿದರೂ ಉತ್ತರ ಸಿಗಲೇ ಇಲ್ಲ. ಇಲ್ಲಿಯವರೆಗೆ ಹಿಂದಿ, ಇಂಗ್ಲಿಷುಗಳು ಮಾತ್ರ ಬರದು ಎಂದುಕೊಂಡಿದ್ದ ನಮಗೆ ಈಗ ಕನ್ನಡವೂ ಕಬ್ಬಿಣದ 'ಬಟಗಡಲೆ'ಯಾಗಿತ್ತು.

ಇಂಥದ್ದೇ ಸಂದಿಗ್ಧ ಪರಿಸ್ಥಿತಿಯಲ್ಲಿ ಕನ್ನಡ ಶಾಲೆ ಮುಗಿಸಿ, ಹೈಸ್ಕೂಲಿಗೆ ಕಾಲಿಟ್ಟು ಹಿಂದಿಯನ್ನು ಹಿಂದೆ ಬಿಟ್ಟಾಯ್ತು. ಕಾಲೇಜಿನ ಹುಡಿ ಹಾರಿಸುವಷ್ಟರಲ್ಲಿ ಮದುವೆಯಾಗಿ ಕನ್ನಡದ ನರಪಿಳ್ಳೆಯೂ ಇರದೇ ಬರೀ ಹಿಂದಿಯೇನು ನಮ್ಮ ದೇಶದ ಅಷ್ಟೂ ಭಾಷೆಗಳಲ್ಲಿ ಮಾತಾಡುವವರ ಜೊತೆಗೆ ಏಗುವಂತಾಯ್ತು. ಆಗ ಅವೆಲ್ಲ ಭಾಷೆಗಳನ್ನು ಪ್ರತ್ಯೇಕವಾಗಿ ಕಲಿಯುವ ಬದಲು ಒಂದು ಹಿಂದಿಯನ್ನಾದರೂ ಕಲಿಯದಿದ್ದರೆ ಹಿಂದುಳಿಯುವುದು ಅನಿವಾರ್ಯವೆಂದು ಅನಿಸತೊಡಗಿದಾಗ ಮತ್ತೆ ಶಾಬಾದಿಮಠದ ನೆನಪಾಗತೊಡಗಿತು. ಹಾಗೂ ಹೀಗೂ ಹಿಂದಿಯ ಹಿಂದು ಮುಂದನ್ನು ಅರಿಯಲು ಮುಂದಾಗಬೇಕಾಯ್ತು.

ಒಮ್ಮೆ ಪಕ್ಕದ ಮನೆಯವರು ಊಟಕ್ಕೆ ಕರೆದಾಗ ರೋಟಿ, ದಾಲ್ ಜೊತೆಯಲ್ಲಿ ರುಚಿಯಾದ ಮಟರ್ ಪನೀರ್ ಸಬ್ಜಿ ಬಡಿಸಿದಾಗ ಒಡೆದ ಹಾಲು ಮತ್ತು ಬಟಗಡಲೆಯ ಚಿದಂಬರ ರಹಸ್ಯವೂ ತಟಕ್ಕನೇ ಬಯಲಾಯಿತು. ಯುರೇಕಾ ಎಂದು ಕಿರುಚುವ ಮನಸ್ಸಾದರೂ ಮತ್ತೆ 'ಭಾಭೀಜಿ ಯುರೇಕಾ ನಹೀ ಯುರೇ'ಕಿ' ಹೋತಾ ಹೆ' ಅಂದುಬಿಟ್ಟರೇನೆಂದು ಸುಮ್ಮನಾದೆ. ಪನೀರ್ ಎನ್ನುವುದು ಒಡೆದ ಹಾಲಾಗಿ, ಮಟರ್ ಬಟಗಡಲೆಯಾಗಿ ನಮ್ಮ ಮೆದುಳಿಗೆ ಸವಾಲಾಗಿತ್ತು. ಈಗ ನಾನೂ ಒಡೆದ ಹಾಲು ಮತ್ತು ಬಟಗಡಲೆಯ ಪಲ್ಯ ಮಾಡುತ್ತೇನೆ. ನನ್ನ ಹಿಂದಿ ಭಾಷಿಕ ಮಿತ್ರರು ನಮ್ಮ ಇಡ್ಲಿ ಜೊತೆಗೆ ಸಾಂಬಾರ್ ಅಲ್ಲಲ್ಲ 'ಸಾಂಬರ್' ಮಾಡಿ ಚಪ್ಪರಿಸಿ ತಿನ್ನುತ್ತಾರೆ. ನಾನಿಲ್ಲದೇ ಅವರ ಹೋಳಿಯಾಗುವುದಿಲ್ಲ. ನನ್ನ ವರಮಹಾಲಕ್ಷ್ಮೀ ಪೂಜೆಗೆ ಅವರದ್ದೇ ಅಲಂಕಾರ. ಹಿಂದಿ ವ್ಯಾಕರಣದಲ್ಲಿ ನನ್ನ ಲೆಕ್ಕಾಚಾರ ಆಗೀಗ ತಪ್ಪಿದರೂ ಅವರ ಕನ್ನಡ ಮಾತ್ರ ತುಂಬ ಚೊಕ್ಕವಾಗಿದೆ.



■

# ಬಿಟ್ಟಿ ಭಾಗ್ಯದ ಬವಣೆ

ಡಾ. ಸಿ.ಕೆ. ರೇಣುಕಾರ್ಯ

ಜಾನಕಿ, ಕಲ್ಯಾಣಿ ಅಕ್ಕಪಕ್ಕದ ಮನೆಯವರು. ಇಬ್ಬರೂ 60ರ ಆಸುಪಾಸಿನವರು. ಅವರಿಬ್ಬರ ಪತಿವರ್ಯರೂ ಕೈಲಾಸ ವಾಸಿಗರಾಗಿ ಸುಮಾರು ವರ್ಷಗಳೇ ಆಗಿವೆ. ಜಾನಕಿಗೆ ಇಬ್ಬರು ಗಂಡು ಮಕ್ಕಳು. ಕಲ್ಯಾಣಿಗೂ ಇಬ್ಬರು ಗಂಡು ಮಕ್ಕಳು. ಇಬ್ಬರಿಗೂ ಸುಮಾರಾಗಿರುವ ಸ್ವಂತ ಮನೆಗಳು. ಜಾನಕಿಯ ಮೊದಲನೆ ಮಗ ಅಮೆರಿಕಾದಲ್ಲಿ ಕೆಲಸದಲ್ಲಿರುವವನು. ಎರಡನೆಯ ಮಗ ಮೈಸೂರಿನಲ್ಲೇ ಮುದ್ರಣಾಲಯದಲ್ಲಿ ಮೇಲ್ವಿಚಾರಕ. ಅವನಿಗೆ ಇಬ್ಬರು ಪುಟ್ಟ ಮಕ್ಕಳು. ಕಲ್ಯಾಣಿಯ ಇಬ್ಬರು ಮಕ್ಕಳೂ ಮೈಸೂರಿನಲ್ಲೇ ಉದ್ಯೋಗ. ಇಬ್ಬರಿಗೂ ಒಂದೊಂದು ಗಂಡು ಮಗು. ಎಲ್ಲ ಮಕ್ಕಳಿಗೂ ಸೇಂಟ್ ಜೋಷೆಫ್ ಕಾನ್ವೆಂಟಿನಲ್ಲಿ ಕಲಿಕೆ.

ವಿಧಾನಸಭೆ ಚುನಾವಣೆಯ ಹಿಂದಿನ ದಿನ ಅವರ ಮನೆಗಳಲ್ಲಿ ಯಾವ ಪಕ್ಷಕ್ಕೆ ಓಟು ಹಾಕಬೇಕೆಂಬುದರ ಬಗ್ಗೆ ಚರ್ಚೆ. ಇದುವರೆಗೆ ಎಲ್ಲರ ಓಟೂ ಬಿಜೆಪಿ ಪಕ್ಷಕ್ಕೆ ಬೀಳುತ್ತಿತ್ತು. ಈ ಬಾರಿ ಸ್ವಲ್ಪ ಗೊಂದಲ. ಜಾನಕಿ, ಕಲ್ಯಾಣಿಯ ಗಂಡು ಮಕ್ಕಳು ತಮ್ಮ ಓಟು ಈ ಬಾರಿಯೂ ಬಿಜೆಪಿಗೆ ಎಂದು ಘೋಷಿಸಿದರೆ, ಕಲ್ಯಾಣಿ, ಜಾನಕಿ ಮತ್ತು ಅವರಿಬ್ಬರ ಸೊಸೆಯರೂ ಸಹ ತಮ್ಮ ಓಟು ಕಾಂಗ್ರೆಸ್ಸಿಗೆ ಎಂದು ಗಟ್ಟಿವಾದ. ಕಾರಣ ಬಿಟ್ಟಿ ಭಾಗ್ಯ. ಜಾನಕಿಯ ವಾದ ಹೀಗೆ ; ಕಾಂಗ್ರೆಸ್ಸಿಗರು ಗೆದ್ದರೆ ನಮಗೆ ಉಚಿತ ವಿದ್ಯುತ್, ನನಗೆ ತಿಂಗಳಿಗೆ ರೂ.2000/– ದೊರೆಯುತ್ತದೆ. ಜೊತೆಗೆ ಮನೆಗೆಲಸವಳಿಗೆ ಉಚಿತವಾಗಿ ದೊರೆಯುವ 40 ಕೆ.ಜಿ ಅಕ್ಕಿಯಲ್ಲಿ 20 ಕೆ.ಜಿ ನಮಗೆ ಕಡಿಮೆ ಬೆಲೆಯಲ್ಲಿ ಕೊಡುತ್ತೇನೆ ಎಂದು ಹೇಳಿದ್ದಾಳೆ. ಬಸ್ಸಿನಲ್ಲಿ ಉಚಿತ ಪ್ರಯಾಣ, ಯಾರಿಗೆ ಉಂಟು, ಯಾರಿಗೆ ಇಲ್ಲ ಕಾಂಗ್ರೆಸ್ಸಿಗೆ ಓಟು ಹಾಕಿ ನೋಡೋಣ. ಬಿಜೆಪಿಯವರು ದೇಶ, ದೇಶ ಅನ್ನುತ್ತಾರೆ. ದೇಶ ತೆಗೆದುಕೊಂಡು ನಾವೇನು ಮಾಡುವುದು ? ನಮಗೆ ಬೇಕಾದ್ದು ಅನ್ನ, ನೀರು, ವಿದ್ಯುತ್ ತಾನೇ ?

ಕೊನೆಗೆ ಎರಡೂ ಮನೆಯ ಗಂಡಸರು, ಬಿಜೆಪಿಗೂ ಅತ್ತೆ ಸೊಸೆಯರೆಲ್ಲಾ ಕಾಂಗ್ರೆಸ್ಸಿಗೂ ಓಟು ಹಾಕಿದರು. ಕಾಂಗ್ರೆಸ್ ಪ್ರಚಂಡ ಬಹುಮತದಿಂದ ಗೆದ್ದು ಬಂತು. ಎರಡೂ ಮನೆಯ ಹೆಂಗಸರ ವಿಜಯೋತ್ಸಾಹ ಹೇಳತೀರದು.

ಇಲ್ಲಿಂದ ಮುಂದೆ ನಡೆಯುತ್ತಿರುವುದೇ ಸ್ವಾರಸ್ಯವಾದ ಪ್ರಸಂಗಗಳು. ಒಂದು ದಿನ ಸೊಸೆಯಂದಿರಿಬ್ಬರೂ, ಅತ್ತೆಯರಿಗೆ ಘೋಷಿಸಿದರು; ನಾವು ಈಗ ಟ್ರಿಪ್ ಹಾಕಿಕೊಳ್ಳುತ್ತಿದ್ದೇವೆ; ಮೊದಲು ಕಾರವಾರ, ನಂತರ ಗೋಕರ್ಣ, ಆಮೇಲೆ ಮಹದೇಶ್ವರ ಬೆಟ್ಟ. ಪ್ರತಿಟ್ರಿಪ್‌ಗೆ ಸುಮಾರಾಗಿ ಒಂದು ವಾರ. ಆಗ ನೀವು ನಮ್ಮ ಮಕ್ಕಳನ್ನು, ನಿಮ್ಮ ಮಕ್ಕಳೊಂದಿಗೆ ನೋಡಿಕೊಳ್ಳಬೇಕು. ಅಡುಗೆ ಕೆಲಸ, ಮಕ್ಕಳನ್ನು ಶಾಲೆಗೆ ಕಳುಹಿಸುವುದು ಎಲ್ಲ ಜವಾಬ್ದಾರಿ ನಿಮ್ಮದೇ. ಇನ್ನೊಂದು ವಿಷಯ, ನಿಮ್ಮ ಅಕೌಂಟ್‌ಗೆ ಬರುವ ರೂ.2000/– ದಲ್ಲಿ ನಮಗೆ ಒಂದೊಂದು ಸಾವಿರ ಕೊಡಬೇಕು. ಅದು ಸ್ತ್ರೀ ಶಕ್ತಿಗೆ ಸಂಬಂಧಿಸಿದ ವಿಷಯವಾದ್ದರಿಂದ ನಮಗೂ ಅದರಲ್ಲಿ ಹಕ್ಕಿದೆ. ಅತ್ತೆದಿರು ಏನೂ ಮಾತಾಡುವುದಕ್ಕಾಗಲಿಲ್ಲ. ಏಕೆಂದರೆ ಇಲ್ಲಿಯವರೆಗೆ ಇವರ ಮಕ್ಕಳನ್ನೊಳಗೊಂಡಂತೆ ಮಕ್ಕಳನ್ನೆಲ್ಲಾ ಸೊಸೆಯರೇ ಸಂಭಾಳಿಸಿದ್ದಾರೆ.



ಒಂದು ವಾರದಲ್ಲಿ ಸೊಸೆಯರು ಟ್ರಿಪ್ ಹೊರಟೇ ಬಿಟ್ಟರು. ಹೊರಟ ದಿನ ಅವರು ಮಾಡಿಕೊಂಡ ಅಲಂಕಾರಕ್ಕೆ ಅತ್ತೆಯಂದಿರೇ ಬೆರಗಾದರು. ಅತ್ತೆಯಂದಿರಿಗೆ

ಅವರು ನಾವು ಕಾರವಾರಕ್ಕೆ ಹೊರಟಿದ್ದೇವೆ. ಇದು 'ಅರೇಂಜಡ್' ಟ್ರಿಪ್. ಬರೀ ಹೆಂಗಸರಿಗೆ. ಪ್ರಯಾಣ ಉಚಿತ. ಎಷ್ಟು ಒಳ್ಳೆಯ ಸರ್ಕಾರ ನೋಡಿ. ಈ ತಿಂಗಳು ಕರೆಂಟ್ ಬಿಲ್ ಬಂದಿದೆ. ನಾವು ಏನೂ ದುಡ್ಡು ಕಟ್ಟಬೇಕಾಗಿಲ್ಲ. 200 ಯೂನಿಟ್ ಒಳಗೆ ಉಪಯೋಗಿಸಿರುವುದರಿಂದ ಪೂರ್ತಿ ಉಚಿತ. ಎಷ್ಟು ಒಳ್ಳೆ ಸರ್ಕಾರ.

ಜಾನಕಿಗೆ ಮಂಡಿನೋವು. ಸೊಸೆಯಂದಿರು ಟ್ರಿಪ್ ಹೊರಟ ರಾತ್ರಿಯಿಂದಲೇ ನೋವು ಹೆಚ್ಚಾಯಿತು. ಮಕ್ಕಳನ್ನು ಸುಧಾರಿಸುವುದು ತುಂಬಾ ಕಷ್ಟವಾಯಿತು. ಅಮೆರಿಕಾದಲ್ಲಿರುವ ತನ್ನ ಹಿರಿಯ ಮಗನಿಗೆ ವೀಡಿಯೋಕಾಲ್ ಮಾಡಿ "ಗೋಪಾಲ, ನನಗೆ ವೀಸಾ ಏರ್ಪಾಟು ಮಾಡು, ನಾನು ನಿನ್ನ ಮನೆಗೆ ಬಂದು ಒಂದು ತಿಂಗಳು ಇರುತ್ತೇನೆ" ಎಂದು ಹೇಳಿದಳು. ಗೋಪಾಲನಿಗೆ ಆಶ್ಚರ್ಯ, 'ಏನಮ್ಮಾ, ಎಷ್ಟು ಕರೆದರೂ, ನಮ್ಮ ದೇಶ, ನಮಗೆ, ಅಮೆರಿಕಾ ನಿಮಗೆ, ನಿನ್ನ ಹೆಂಡತಿ ಲೀಸಾಳಿಗೆ ಆಚಾರ ವಿಚಾರ ಇಲ್ಲ ಎಂದು ಹೇಳುತ್ತಿದ್ದವರು, ಈಗ ತಕ್ಷಣ ಬರುವುದಕ್ಕೆ ಏರ್ಪಾಟು ಮಾಡು ಎಂದು ಹೇಳುತ್ತಿದ್ದೀಯಲ್ಲಾ ?" ಎಂದು ಕೇಳಿದ. "ಪರವಾಗಿಲ್ಲಪ್ಪ. ಆಚಾರ–ವಿಚಾರವಿಲ್ಲವೆಂದು ಸೊಸೆಯನ್ನು ಬಿಟ್ಟು ಬಿಡುವುದಕ್ಕಾಗುತ್ತದೆಯೇ? ತಕ್ಷಣ ವೀಸಾಗೆ ಏರ್ಪಾಡು ಮಾಡು" ಎಂದರು ಜಾನಕಿ. 'ಸರಿ' ಎಂದ ಗೋಪಾಲ.

ಕಲ್ಯಾಣಿಗೆ ಬೇರೆ ರೀತಿಯ ಸಮಸ್ಯೆ. ಅವಳಿಗೆ ಯಾವಾಗಲೂ ಸೊಂಟ ನೋವು. ಸೊಸೆ ಕಾರವಾರಕ್ಕೆ ಟ್ರಿಪ್ ಹೋದ ಮೇಲೆ ಮಕ್ಕಳನ್ನು ಸಂಭಾಳಿಸುವುದೇ ಅಸಾಧ್ಯವಾಗಿತ್ತು ಅವಳಿಗೆ. ಈ ಬಿಟ್ಟಿ ಭಾಗ್ಯ ಯಾಕಾದರೂ ಬಂತೋ ಅನಿಸಿತು. ತನ್ನ ಮಗನ ಹತ್ತಿರ ಅವಳು 'ಸುಭಾಷ, ಯಾರಾದರೂ ಹೆಂಗಸನ್ನು ಸಹಾಯಕ್ಕೆ ಗೊತ್ತು ಮಾಡು, ನನಗೆ ಸುತರಾಂ ಅಡಿಗೆ, ಮಕ್ಕಳನ್ನು ಸಂಭಾಳಿಸುವುದು ಕಷ್ಟ' ಎಂದು ಹೇಳಿದಳು. ಸುಭಾಷ್ ಬಹಳ ಕಷ್ಟಪಟ್ಟು ತಿಂಗಳಿಗೆ ರೂ.6000/– ಸಂಬಳದಲ್ಲಿ ಒಬ್ಬ ಸಹಾಯಕಿಯನ್ನು ಗೊತ್ತು ಮಾಡಿದ. ಸುಭಾಷನ ತಾಯಿಗೆ ತುಂಬಾ ಸಂತೋಷವಾಯಿತು. ಆದರೆ ಈ ಸಂತೋಷ ಎರಡೇ ದಿನ. ಬಂದ ಎರಡನೇ ದಿನವೇ ಸಹಾಯಕಿ ಕೈಗೆ ಸಿಕ್ಕಿದ ನಗದನ್ನು ಕದ್ದು ಮಾಯವಾದಳು.

ಸೊಸೆಯಂದಿರು ಟ್ರಿಪ್‌ನಿಂದ ಹಿಂದೆ ಬಂದರು. ತುಂಬಾ ಸಂತೋಷದಲ್ಲಿದ್ದರು. ಮುಂದಿನ ತಿಂಗಳು ಗೋಕರ್ಣಕ್ಕೆ ಟ್ರಿಪ್ ಹಾಕಿರುವುದಾಗಿ ಅತ್ತೆಯಂದಿರಿಗೆ ತಿಳಿಸಿದರು ಮತ್ತು ಸರ್ಕಾರ ಅತ್ತೆಯಂದಿರ ಅಕೌಂಟ್‌ಗೆ ಹಣ ಹಾಕಿದ್ದಾರೆಯೇ ಎಂದು ವಿಚಾರಿಸಿದರು.

ಅತ್ತೆಯಂದಿರ ಕಷ್ಟ ಹೇಳತೀರದಾಗಿದೆ. ಅಂದು ಸಂಜೆ ಮತ್ತೆ ಚುನಾವಣೆ ಚರ್ಚೆ ಪ್ರಾರಂಭವಾಯಿತು. ಗಂಡು ಮಕ್ಕಳು, ಲೋಕ ಸಭೆ ಎಲೆಕ್ಷನ್‌ನಲ್ಲಿ ಯಾರಿಗೆ ಓಟು ಹಾಕುತ್ತೀರಿ ಎಂದು ಹೆಂಗಳೆಯರನ್ನು ಕೇಳಿದರು. ಸೊಸೆಯಂದಿರು, ಲೋಕಸಭೆಯಲ್ಲೂ ನಾವು ಕಾಂಗ್ರೆಸ್ಸಿಗೆ ಮತ ಹಾಕುತ್ತೇವೆ. ಈ ಸಾರಿ ಗ್ಯಾಸ್ ಉಚಿತ ಮಾಡುತ್ತಾರಂತೆ ಎಂದು ಹೇಳಿದರು. ಅತ್ತೆಯಂದಿರು ಮಾತ್ರ. ನಾವು ಯಾವ ಕಾರಣಕ್ಕೂ ಏನೇ ಉಚಿತ ಕೊಟ್ಟರೂ, ಕಾಂಗ್ರೆಸ್ಸಿಗೆ ಮತ ಹಾಕುವುದಿಲ್ಲ. ನಮಗೆ ಯಾವುದೂ ಉಚಿತ ಬೇಡ, ಮೊದಲಿನಂತಾದರೆ ಸಾಕು ಎನ್ನುತ್ತಿದ್ದಾರೆ. ■



ಪ್ರೇಮಿಗಳು ಮಾತನಾಡುವಷ್ಟು ಗಂಡ ಹೆಂಡತಿ ಮಾತನಾಡುವುದಿಲ್ಲವೇಕೆ?
ಮಗು ಎದ್ದುಬಿಡುತ್ತದೆಂಬ ಭಯ! –ರಾಮ್‌ಬಾಣ

# ಯಾರ ಹೋಲಿಕೆ

ನ. ರತ್ನ

“ಗೌರಮ್ಮ ಅಜ್ಜಿ, ಗೌರಮ್ಮ ಅಜ್ಜಿ ನಿನ್ನೆ ನಿಮ್ಮಿಗೆ”, ಡೆಲಿವರಿಯಾಯ್ತು,” ಸುಮತಿ ಓಡಿ ಬಂದು ಹೇಳಿದಳು. “ಯಾರೇ ಅದು”? “ಅದೇ ಅಜ್ಜಿ, ಮೂರನೆಯ ಮನೆ ನಿರ್ಮಲಂಗೆ ಡೆಲಿವರಿಯಾಯ್ತು” ಗೌರಮ್ಮ ಗೊಣಗಿದಳು, “ನಿರ್ಮಲಾಂತ ಒಳ್ಳೆ ಹೆಸರಿಟ್ಟುಕೊಂಡು ಕರೆಯೋದು ಬಿಟ್ಟು ನಿಮ್ಮಿ–ಗಿಮ್ಮಿ ಅಂತ ಒಳ್ಳೆಯ ನಾಯಿಯ ಹೆಸರ ಹಾಗೆ”. “ಅದೇ ಅಜ್ಜಿ ನಿರ್ಮಲಕ್ಕಂಗೆ ನಿನ್ನೆ ಹೆರಿಗೆಯಾಯ್ತು”. ಗೌರಮ್ಮ, “ಏನು?” “ಗ್ಯಾಸ್” ಲಕ್ಷ್ಮಿ ನಾರಾಯಣ ರಾವ್ ಗಹಗಹಿಸುತ್ತಾ ಬಾಯಿ ತುರುಕುದ್ರು, “ಗೌರ ಆ ವಿಜಯ ಅಂದದ್ದು ಇನ್ನೂ ಜ್ಞಾಪಕ ಇದೆಯೇ ಎಂದರು?” “ಏನಜ್ಜಿ ಅದು” ಸುಮತಿ ಕೇಳಿದಳು. “ಏನೂ ಇಲ್ಲಮ್ಮ, ಅದು ಯಾವಾಗಲೂ ಅವರದೊಂದು ಕುಹಕ, ನಮ್ಮ ಹಿತ್ತಲ ಮನೆ ಭಾಗೀರಥಿ ಹೆರಿಗೆ ಆಸ್ಪತ್ರೆಗೆ ಹೋಗಿದ್ದರು, ಮನೆಯಲ್ಲಿ ವಿಜಯ ಮಾತ್ರ ಇದ್ದರು. ಆಗ ಪಕ್ಕದ ಮನೆ ಕನಕಮ್ಮ ವಿಜಯನ್ನ ಕೇಳಿದರು, “ಡೆಲಿವರಿ ಆಯ್ತೇ?” ವಿಜಯ “ಆಯ್ತು” ಅಂದ್ರು “ಏನು” ಅಂತ ಕೇಳಿದರೆ “ಗ್ಯಾಸ್” ಅನ್ನೋದೆ! “ಯಾಕಂದ್ರೆ ಆಗ ತಾನೇ ವಿಜಯ ಗ್ಯಾಸ್ ಸಿಲಿಂಡರ್ ಡೆಲಿವರಿ ಪಡೆದುಕೊಂಡಿದ್ರು!” “ಅದಾದ ಎರಡು ದಿನಕ್ಕೆ ಹೆರಿಗೆಯಾಯ್ತು. ಆ ಮಗುವಿಗೆ ಅನಿಲ ಅಂತ ಹೆಸರಿಟ್ಟರು”, ಲಕ್ಷ್ಮಿ ನಾರಾಯಣ ರಾಯರು ಮತ್ತೆ ನಕ್ಕರು. ಗೌರಮ್ಮ ಸುಮತಿಯನ್ನು ನೋಡಿ ಹೇಳಿದರು, “ಅವರದೊಂದು ಯಾವಾಗಲೂ ಒಂದೇ ಪುರಾಣ”.

ಗೌರಜ್ಜಿ ಕೇಳಿದರು, ಮಗು “ಗಂಡೊ ಹೆಣ್ಣೊ?” “ಹೆಣ್ಣು ಮಗು ಅಂತ ಹೇಳಿದ್ರು”. “ಒಳ್ಳೆಯದೇ ಆಯ್ತು ಮನೆಗೆ ಸರಸ್ವತಿ ಬಂದಳು” ಅಂದರು ಗೌರಜ್ಜಿ. “ಎಲ್ಲರೂ ಮನೆಗೆ ಮಹಾಲಕ್ಷ್ಮಿ ಬಂದ್ಲೂಂತಾರೆ” ಅಂದಳು ಸುಮತಿ. “ಲಕ್ಷ್ಮಿ ಚಂಚಲೆ. ಬರ್ತಾಳೆ, ಹೋಗ್ತಾಳೆ. ಆದರೆ ಸರಸ್ವತಿ ಹಾಗಲ್ಲ, ಒಂದು ಸಲ ಬಂದ್ಲುಂದ್ರೆ ಗಟ್ಟಿಯಾಗಿ ಅಲ್ಲೇ ನೆಲಸಿ ಬಿಡ್ತಾಳೆ. ಒಂದೊಂದು ಸಲ ಸ್ವಲ್ಪ ಕ್ಷೀಣಿಸಬಹುದು ಅಷ್ಟೇ, ಬಿಟ್ಟು ಹೋಗೋ ಮಾತೇ ಇಲ್ಲ” ಅಂದರು ಗೌರಜ್ಜಿ. ಲಕ್ಷ್ಮಿ ನಾರಾಯಣರು ಬಹಳ ಉತ್ಸಾಹದಿಂದ “ಮಗು ಯಾರನ್ನು ಹೋಲುತ್ತೋ?” ಎಂದರು. “ನನಗೆ ತಿಳಿಲಿಲ್ಲಾ”, ಅಂದಳು ಸುಮತಿ, “ಎಲ್ಲ ಮಕ್ಕಳನ್ನು ಸಾಲಾಗಿ ಮಲಗಿಸಿದ್ದರು, ಕೆಲವು ಪಿಳಿಪಿಳಿಂತ ಕಣ್ಣು ತೆಗೆದು ನೋಡುತ್ತಿದ್ದವು. ಇನ್ನೂ ಕೆಲವು ನಿದ್ದೆ ಮಾಡುತ್ತಿದ್ದವು. ಒಂದೇ ತರಹ ಕಂಡವು, ಬಿಳಿ ಬೆಣ್ಣೆ ಮುದ್ದೆಯಂತೆ, ಇನ್ನು ಕೆಲವು ಸ್ವಲ್ಪ ಕಂದು ಅಷ್ಟೇ ವ್ಯತ್ಯಾಸ”.

ಅದು ಯಾಕೆ ಎಲ್ಲರೂ ಯಾವಾಗಲೂ ಮಗು ಯಾರನ್ನು ಹೋಲುತ್ತೇಂತ ಪ್ರಶ್ನಿಸುತ್ತಾರೆ? ಬೆಳಿತಾ, ಬೆಳಿತಾ ಅವರ ಮುಖದಲ್ಲಿ ಯಾರದೋ ಹೋಲಿಕೆ ಕಾಣುತ್ತೆ. ನನಗೆ ಚೆನ್ನಾಗಿ ಜ್ಞಾಪಕ ಇದೆ. ನಮ್ಮ ಮಗಳು ಕವಿತಾ 2–3 ವರ್ಷ ಇದ್ದಾಗ ನನ್ನ ಕಡೆ ನೆಂಟರೆಲ್ಲಾ “ಮಗು ಎಷ್ಟು ಮುದ್ದಾಗಿದೆ, ಎಲ್ಲಾ ತಂದೆ ತರಹ ನಮ್ಮ ರತ್ನನೇ” ಅಂದರು. ಇನ್ನೂ ಲತನ ಕಡೆಯವರೋ, “ಎಲ್ಲಾ ನಮ್ಮ ಲತ ಇದ್ದ ಹಾಗೇ ಸಣ್ಣ ವಯಸ್ಸಿನಲ್ಲಿ. ಲತನ ಮಗೂಂತ ಚೆನ್ನಾಗಿ ಗೊತ್ತಾಗುತ್ತೆ” ಅಂದರು.



ನಿಜ, ಕವಿತಾ ನಮ್ಮ ಇಬ್ಬರನ್ನೂ ಹೋಲುತ್ತಿದ್ದಳು. ಅದಕ್ಕೆ, ನನ್ನ ಉತ್ತರ ಏನೆಂದರೆ ಕವಿತಾ ಕವಿತಾಳನ್ನೇ ಹೋಲುತ್ತಾಳೆ. ಎಲ್ಲಾ ಮಕ್ಕಳೂ ‘ಏಕಮೇವದ್ವಿತೀಯ’. ನಮ್ಮ ಮಗನ ಬಗ್ಗೆಯೂ ಹಾಗೆಯೇ ಆಯಿತು. ಮಕ್ಕಳು ಬೆಳಿತಾ

ಬೆಳಿತಾ ತಂದೆ, ತಾಯಿ, ಅಥವಾ ಅವರಲ್ಲೊಬ್ಬರ ಲಕ್ಷಣಗಳನ್ನು, ನಡವಳಿಕೆಯನ್ನು, ಆಸಕ್ತಿ ಮುಂತಾದವುಗಳನ್ನು ಕಲಿಯುತ್ತಾರೆ. ನಮ್ಮ ಮಗ ಬೆಳಿತಾ ಬೆಳಿತಾ ಆಟದಲ್ಲಿ ಆಸಕ್ತಿ, ಸ್ನೇಹಪರತೆ ಮುಂತಾದವುಗಳನ್ನು ಬೆಳೆಸಿಕೊಂಡು ನನ್ನನ್ನು ಸ್ವಲ್ಪ ಮಟ್ಟಿಗೆ ಹೋಲುತಿದ್ದ. ಮಗಳು ನನ್ನ ಕೆಲವು ಆಸಕ್ತಿಗಳನ್ನು ಬೆಳೆಸಿಕೊಂಡಳು. ಹಾಗೆಯೇ ತಾಯಿಯ ನಡವಳಿಕೆಯನ್ನು ಹೆಚ್ಚು ಅನುಕರಿಸುತ್ತಾಳೆ. ಅದು ಒಡನಾಟದ ಮಹಿಮೆ ಅಷ್ಟೇ. ನಾನು ಎಲ್ಲೋ ಓದಿದ್ದೆ, ಅನೇಕ ವರ್ಷ ಒಬ್ಬರೇ ಮಾಲೀಕರ ಜೊತೆ ಇದ್ದ ಪ್ರಾಣಿಗಳೂ ಸಹ ಅದರ ಮಾಲೀಕರ ತರಹ ಸ್ವಭಾವ ಬೆಳೆಸಿಕೊಳ್ಳುತ್ತೇಂತ, ಅದೇನು ನಿಜವೋ, ಸುಳ್ಳೋ ನನಗೆ ತಿಳಿಯದು. ನಾನಂತೂ ಯಾವುದೇ ಪ್ರಾಣಿಗಳನ್ನು ಸಾಕಿಲ್ಲ.

ನನ್ನ ಮಗ ಚಿಕ್ಕವನಾಗಿದ್ದಾಗ ಗುಂಗುರು ಕೂದಲಿತ್ತು. ಬರುತ್ತಾ ಬರುತ್ತಾ ಅವನು ಬೇಗ ಬೋಳಾಗುತ್ತಾ ಬಂದಾಗ ನನಗೆ ದಟ್ಟ ಕೂದಲಿತ್ತು. ಕ್ರಮೇಣ ನಾನು ಅವನನ್ನು ಹೋಲುತ್ತಾ ನನ್ನ ತಲೆಯಲ್ಲಾ ಬೋಳಾಗಲು ಶುರುವಾಯಿತು. ಮಗು ತಂದೆಯನ್ನು ಹೋಲುವ ಬದಲು ತಂದೆಯೇ ಮಗನನ್ನು ಹೋಲುವಂತಾಯಿತು.

ಕೆಲವು ಸಲ ದೀರ್ಘಕಾಲ ಮನೆಯಲ್ಲಿ ಗಂಡ, ಹೆಂಡತಿ ಇಬ್ಬರೇ ಇದ್ದು, ಇಬ್ಬರೂ ಗುಣದಲ್ಲಿ, ನಡವಳಿಕೆ, ಅಭಿಪ್ರಾಯ ಮುಂತಾದವುಗಳನ್ನು ಅವರಿಗೆ ತಿಳಿಯದೆಯೇ ಸ್ವಲ್ಪ ಮಟ್ಟಿಗೆ ಹೋಲುವುದೂ ಇದೆ. ನಾನು ಇನ್ನೇಲ್ಲೋ ಓದಿದ್ದು ಇಡೀ ಪ್ರಪಂಚದಲ್ಲಿ ಒಬ್ಬರಂತೆಯೇ ಇರುವವರು ಮತ್ತೂ ಏಳು ಜನರಿರುತ್ತಾರಂತೆ. ಹಾಗಾದರೆ ನನ್ನಂತೆ ಇರುವ ಮತ್ತೂ ಏಳು ಜನರು ಇರಬಹುದೇನೋ? ಆದರೆ ನನ್ನ ಈ 88 ವರ್ಷದಲ್ಲಿ ನಾನು ಇಲ್ಲಿಯವರೆಗೆ ಎಲ್ಲೂ ನನ್ನ ಒಂದು ಪ್ರತಿರೂಪವನ್ನು, ಪ್ರತಿಬಿಂಬವನ್ನು ಇನ್ನೂ ಕಂಡಿಲ್ಲ, ನಿಮಗೆ ಯಾವಾಗಲಾದರೂ ಕಂಡರೆ ತಿಳಿಸಿ.

ಈಗ ಮಗ ಒಳ್ಳೆಯ ಗಡ್ಡ ಬಿಟ್ಟಿದ್ದಾನೆ. ನಾನು ಇತ್ತೀಚಿನ ತನಕ ಮುಖ ಕ್ಷೌರ ಮಾಡಿಕೊಳ್ಳುತ್ತಿದ್ದೆ ಗಡ್ಡ, ಮೀಸೆ ಬಿಟ್ಟಿದ್ದು ನಾಟಕಕ್ಕೋಸ್ಕರ ಮಾತ್ರ.

ಮೊನ್ನೆ ನಾನು ಬಿದ್ದು, ಎದೆಗೂಡು ಬಿರುಕು ಬಿಡ್ತು, ಹಾಸಿಗೆಯಲ್ಲೇ ಸ್ವಲ್ಪ ಇರುವಂತಾಗಿದೆ. ಆರೇಳು ದಿನದಿಂದ ಕ್ಷೌರವಿಲ್ಲ ನಾನು ಗಡ್ಡ ಬಿಟ್ಟಿದ್ದೀನಿ. ನನಗೆ ಅನ್ಸುತ್ತೆ ನಾನು ನನ್ನ ಮಗನ ತರಹ ಅವನನ್ನು ಹೋಲೋಕೆ ಗಡ್ಡ ಬಿಡಬಹುದೇನೋಂತ. ನನ್ನ ಗಡ್ಡ ಸಾಧು ಸಂತರ ತರಹ ಹುಲುಸಾಗಿ ಬೆಳೆಯುತ್ತಾ ಇದೆ, ನನ್ನ ಮಗನ ಗಡ್ಡ ಮಧ್ಯೆ ಮಧ್ಯೆ ಬಿಳಿಕೂದಲಿದ್ದು ಒಳ್ಳೆಯ ಕಲಾಕೃತಿಯಂತೆ ಕಾಣುತ್ತದೆ. ನಾನು ನನ್ನ ಮಗನನ್ನು ಹೋಲುವುದು ಒಂದು ಕನಸೇಂತ ಕಾಣುತ್ತೆ. ಕಾಲಾಯ ತಸ್ಮೈ ನಮಃ

■



ಸರ್ಕಾರಿ ಕೆಲಸ ದೇವರ ಕೆಲಸ. ಮನೆ ಕೆಲಸ?

ಅದೂ ದೇವರ ಕೆಲಸವೇ. ಪತಿದೇವರ ಕೆಲಸ.

* * * *

ನಾನು ಮದುವೆಯಾಗಬೇಕೆಂದಿದ್ದ ಹುಡುಗಿಯರೆಲ್ಲ ಮದುವೆಯಾಗಿ ಗಂಡನ ಮನೆಗೆ ಹೊರಟುಹೋದರು, ಈಗ ನಾನೇನು ಮಾಡಲಿ?

ಪ್ಲೇ ಹೋಂ ತೆರೆದು ಅವರ ಮಕ್ಕಳನ್ನು ನೋಡಿಕೊಳ್ಳಿ!

–ರಾಮ್‌ಬಾಣ

# ಜಡೆ ಎಳೆಯೋ ಮುನ್ನ....

ಮಂಗಳ ಎಂ ನಾಡಿಗ್

ಜಡೆ ಎಳೆಸಿಕೊಂಡ, ಹೆಣೆಸಿಕೊಂಡ, ಹೆಣೆದ ಮೂರು ಅನುಭವವೂ ನನಗಿದೆ. ಮೊದಲನೆಯದು (ಎಳೆಸಿಕೊಂಡ) ನೀವಂದುಕೊಂಡಂತೆ ಅಲ್ಲ ಮಾರಾಯ್ರೆ, ಅದನ್ನು ಮುಂದೆ ಹೇಳುವೆ (ಬರೆಯುವೆ).

ಆಗೆಲ್ಲಾ ಪ್ರತಿದಿನ ಎರಡು ಜಡೆಯನ್ನು ಹೆಣೆದು ರಿಬ್ಬನ್ ನಿಂದ ಅದನ್ನು ಮೇಲಕ್ಕೆತ್ತಿ ಕಟ್ಟಿಕೊಂಡೇ ಶಾಲೆಗೆ ಹೋಗಬೇಕಿತ್ತು. ಮನೆಯ ಅಂಗಳದಲ್ಲಿ ಬೆಳಗಿನ ಎಳೆಬಿಸಿಲಿಗೆ ಚಾಪೆ ಹಾಸಿ ಅದರ ಮೇಲೆ ಕುಳಿತು ಅಮ್ಮನಿಂದ ಜಡೆಹೆಣಿಸಿಕೊಳ್ಳುತ್ತಿದ್ದೆ. ಬೆಳಿಗ್ಗೆ ಮತ್ತು ಸಂಜೆ ಓದುವುದು, ಬರೆಯುವುದನ್ನೂ ಸಹ ಅಂಗಳದಲ್ಲೇ ಚಾಪೆಯ ಮೇಲೆ ಕುಳಿತು ಮಾಡುವುದು ರೂಢಿ. ಮನೆಯ ಸುತ್ತಮುತ್ತ ಹಸಿರು ಕಾಡು, ಕೋಗಿಲೆಗಳ ಗಾನ, ಹಕ್ಕಿಗಳ ಚಿಲಿಪಿಲಿ ಎಲ್ಲವೂ ಮನಸ್ಸಿಗೆ ಬಹಳ ಆನಂದ ನೀಡುತ್ತಿತ್ತು. ಅಮ್ಮ ತಲೆಗೆ ಎಣ್ಣೆ ಹಚ್ಚಿ ಮಧ್ಯಕ್ಕೆ, ಕೆಲವೊಮ್ಮೆ ಎಡಬದಿಗೆ ಬೈತಲೆ ತೆಗೆದು ಎರಡು ಜಡೆ ಹೆಣೆದು ರಿಬ್ಬನ್‌ನಿಂದ ಮೇಲೆತ್ತಿ ಕಟ್ಟುತ್ತಿದ್ದರು. ಆಗೆಲ್ಲಾ ಅಮ್ಮ, ತನ್ನ ಬಾಲ್ಯದ ದಿನಗಳ ಸವಿ ನೆನಪುಗಳನ್ನೋ, ಕಥೆಗಳನ್ನೋ ಹೇಳುತ್ತಿದ್ದರು. ಏಕೆಂದರೆ, ಹಳ್ಳಿಯ ಮನೆಯ ಕೆಲಸದ ಜೊತೆಗೆ ಅವರಿಗೆ ನಮ್ಮೊಂದಿಗೆ ಕುಳಿತು ಹರಟೆ ಹೊಡೆಯುವಷ್ಟು ಬೇರೆ ಸಮಯವೂ ಸಿಗುತ್ತಿರಲಿಲ್ಲ.

ಒಮ್ಮೆ 'ಗಡ್ಡ ಎಳೆದವನಿಗೆ ಮಿಠಾಯಿ' ಎಂಬ ಪಾಠದ ನೆನಪನ್ನು ಮಾಡಿಕೊಂಡು ಅಮ್ಮ ಜಡೆ ಹೆಣೆದು ಮುಗಿಸಿದ ತಕ್ಷಣ ಪ್ರೀತಿಯಿಂದ ಅಮ್ಮನ ಗಲ್ಲವನ್ನು ಎಳೆದು, 'ಗಡ್ಡ ಎಳೆದವನಿಗೆ ಮಿಠಾಯಿ' ಎಂದಿದ್ದೆ. ಅಮ್ಮ ನಿಜವಾಗಲೂ ಅಜ್ಜನ ಮನೆಯಿಂದ ಕಳುಹಿಸಿದ್ದ ಕೇಸರಿ ಮಿಶ್ರಿತ ಕೆಂಪು ಬಣ್ಣದ ಮಿಠಾಯಿಯನ್ನು ನೀಡಿ ಬಾಯಿ ಸಿಹಿ ಮಾಡಿದ್ದಳು. ತಮ್ಮಂದಿರ ಮದುವೆಯೆಂದು ಅಮ್ಮ ಏನಾದರೂ ತವರಿಗೆ ಹೋದರೆ, ಅಪ್ಪ ಜಡೆ ಹೆಣೆಯುತ್ತಿದ್ದರು. ಅದೋ, ಅಲ್ಲಲ್ಲೇ 'ಚುಪ್ಪಚುಪ್ಪ' (ಜಡೆ ಹೆಣೆದಲ್ಲಿಂದ ಸ್ವಲ್ಪ ಸ್ವಲ್ಪ ಕೂದಲು ಬಿಟ್ಟುಕೊಂಡು ಜಡೆಯಿಂದ ಆಚೆ ಬಂದಿರುವುದು) ಬಂದಿರುತ್ತಿತ್ತು. ಕೆಲವೊಮ್ಮೆ ರಿಬ್ಬನ್ ಅನ್ನು ಮೇಲೆತ್ತಿ ಕಟ್ಟಲು ಹೋದಾಗ ರಿಬ್ಬನ್ನೇ ಕೈಗೆ ಬರುತ್ತಿತ್ತು. ತಕ್ಷಣ ಕಿಸಕ್ಕನೇ ನಕ್ಕು ಬೈಸಿಕೊಳ್ಳುತ್ತಿದ್ದೆ. ಆಮೇಲೆ ನನಗೆ ತಿಳಿದಂತೆ ಜಡೆ ಹೆಣೆದುಕೊಂಡು ಶಾಲೆಗೆ ಹೋಗುತ್ತಿದ್ದೆ. ಅಮ್ಮ ಜಡೆ ಹೆಣೆದರೆ ಅದನ್ನು ಬಿಚ್ಚುತ್ತಿದ್ದುದು ಮಾರನೆಯ ದಿನ ಶಾಲೆಗೆ ಹೋಗಲು ತಲೆಬಾಚುವಾಗಲೇ. ಒಂಚೂರೂ ಕೆದರದೇ ಅಷ್ಟು ಚೆಂದ ಇರುತ್ತಿತ್ತು. ಇನ್ನು ಅಮ್ಮನ ತಿಂಗಳ ಮೂರು ದಿನದ ರಜೆಯಲ್ಲೂ ಜಡೆ ಹೆಣೆಯುವ ಪರಿಪಾಟಲು ಬೇಡ. ಮುಂದೆ ನಾನೇ ಜಡೆ ಹೆಣೆದುಕೊಳ್ಳುವಾಗ, ಜಡೆ ತುದಿಗೆ ರಿಬ್ಬನ್ನು ಗಂಟುಹಾಕಿ, ರಿಬ್ಬನ್ನನ್ನೇ ಸುಮ್ಮನೆ ಹೆಣೆದ ರೀತಿ ಮುಂದುವರೆಸಿ ಮತ್ತೆ ಅದಕ್ಕೆ ಗಂಟು ಹಾಕಿ ಆಮೇಲೆ ಮೇಲಕ್ಕೆತ್ತಿ ಕಟ್ಟಿಕೊಳ್ಳುತ್ತಿದ್ದೆ. ಹೇಗೂ ಬರೀ ರಿಬ್ಬನ್ನನ್ನು ಹೆಣೆದ ಭಾಗ ಅಡಿಯ ಭಾಗಕ್ಕೆ ಬರುತ್ತದೆ. ನಮ್ಮ ಜಡೆ ಇನ್ನೂ ಸ್ವಲ್ಪ ಉದ್ದ ಕಾಣಲಿ ಎಂಬುದು ನಮ್ಮ ಉದ್ದೇಶ. ಆಗ ಜೊತೆಗಿನವರೆಲ್ಲಾ ಒಮ್ಮೊಮ್ಮೆ ಹೀಗೇ ಮಾಡುತ್ತಿದ್ದುದು.



ಇನ್ನು ಅಜ್ಜನ ಮನೆಯಲ್ಲಿ ಅಜ್ಜನೇ ನನಗೆ ಜಡೆ ಹೆಣೆಯುತ್ತಿದ್ದುದು.

ತಲೆಗೆ ಎಣ್ಣೆ ಹಚ್ಚಿ, ಮಧ್ಯೆ ಬೈತಲೆ ತೆಗೆದು ಒಂದು ಜಡೆ ಹೆಣೆಯುತ್ತಿದ್ದರು.

ನಂತರ ಮುಡಿಯಲು ಯಾವುದಾದರೊಂದು ಹೂವು ಇದ್ದೇ ಇರುತ್ತಿತ್ತು. ಮಲ್ಲಿಗೆಯ ಕಾಲದಲ್ಲಂತೂ ತಟ್ಟೆ ತುಂಬಾ ಹೂವು. ಮೊಳಗಟ್ಟಲೆ ಹೂವು ಮುಡಿಯುತ್ತಿದ್ದ ಕಾಲವೂ ಇತ್ತು. ಆಗ ಅದೇ ಸಂಭ್ರಮ, ಖುಷಿ.

ಇನ್ನು ಜಡೆ ಎಳೆಸಿಕೊಂಡ ಕಥೆ. ಶಾಲೆಯಲ್ಲಿ ಒಬ್ಬಳು ಗೆಳತಿ ಇನ್ನೊಬ್ಬಳೊಂದಿಗೆ ಜಗಳವಾಡುವಾಗ ಅವಳ ಜಡೆ ಎಳೆದಿದ್ದಳು. ಆದರೂ ಅವಳು ನನಗೇನೂ ನೋವಾಗಲಿಲ್ಲ ಎಂದು ಪೋಸು ಕೊಟ್ಟಿದ್ದಳು. ಆಗ ಎಲ್ಲರೂ ಅವಳಿಗೆ ಜಡೆ ಎಳೆದರೆ ನೋವೇ ಆಗುವುದಿಲ್ಲವಂತೆ ಎನ್ನುತ್ತಾ ಮತ್ತೆ ಮತ್ತೆ ಜಡೆ ಎಳೆಯಲು ಪ್ರಾರಂಭಿಸಿದರು. ಆಗ ಇನ್ನೊಬ್ಬಳು ನನಗೂ ನೋವಾಗುವುದಿಲ್ಲ ಎಂದಳು. ಹೀಗೆ ಎಲ್ಲರೂ ನನಗೂ ನೋವಾಗುವುದಿಲ್ಲ, ನನಗೂ ನೋವಾಗುವುದಿಲ್ಲ ಎಂದು ಹೇಳುತ್ತಾ ಒಬ್ಬರ ಜಡೆ ಒಬ್ಬರು ಎಳೆದಾಗ ಕತ್ತು ಬಗ್ಗಿಸಿ ಅವರ ಹತ್ತಿರಕ್ಕೆ ಹೋಗುತ್ತಿದ್ದೆವೇ ಹೊರತು ಯಾರೂ ನೋವಾಯಿತೆಂದು ಒಪ್ಪಿಕೊಳ್ಳುತ್ತಿರಲಿಲ್ಲ. ನಿಜವಾಗಲೂ ನೋವಾಗಿ ಎಲ್ಲರ ಕಣ್ಣುಗಳಲ್ಲೂ ನೀರು ತುಂಬಿದ್ದರೂ ನೋವಾಗುತ್ತಿದೆಯೆನ್ನಲು ಏನೋ ಅವಮಾನ. ಜಟ್ಟಿ ಮಣ್ಣಿಗ್ ಬಿದ್ರೂ ಮೀಸೆ ಮಣ್ಣಾಗ್ಲಿಲ್ಲ ಎಂಬಂಥಾ ಕತೆ ನಮ್ಮದು.

ನನ್ನ ಮಕ್ಕಳಿಗೆ ಜಡೆ ಹೆಣೆಯುವಾಗ ಬಹಳ ಖುಷಿಯಾಗುತ್ತಿತ್ತು. ಆದರೆ ಅವರಿಗೆ ಎಣ್ಣೆ ಹಚ್ಚಿ, ರಿಬ್ಬನ್ ಕಟ್ಟಿ ಇದಕ್ಕೆಲ್ಲ ಅವಕಾಶವಿರಲಿಲ್ಲ. ಬೈತಲೆ ತೆಗೆದು ಎರಡು ಜಡೆ ಹೆಣೆದು ದೃಷ್ಟಿ ತೆಗೆಯುತ್ತಿದ್ದೆ. ಇನ್ನೊಂದು ವಿಷಯ ನಿಮ್ಮೊಡನೆ ಹಂಚಿಕೊಳ್ಳಬೇಕೆಂಬ ಆಸೆ ಈ ಜಡೆ ಎಳೆಯುವುದರ ಬಗ್ಗೆ. ಅಕ್ಕನ ಜಡೆ ಎಳೆದು ತಮ್ಮ ತುಂಬಾ ಗೋಳು ಹೊಯ್ದುಕೊಳ್ಳುತ್ತಿದ್ದ. ಅವಳಿಗೆ ನೋವಾಗಿ ಕಷ್ಟಪಡುತ್ತಾ ಬಿಡೋ, ಬಿಡೋ, ಎಳೀಬೇಡ ಎನ್ನುತ್ತಿದ್ದಳು. ಆಗ ನೋಡುತ್ತಿದ್ದವರೊಬ್ಬರು ಅವಳಿಗೆ ನೀನೂ ಅವನ ಕೂದಲನ್ನು ಹಿಡಿದು ಜೋರಾಗಿ ಎಳಿ ಎಂದು ಹೇಳಿಕೊಟ್ಟರು. ಆಗ ಆ ಹುಡುಗಿ, ಇಲ್ಲ ಪಾಪ, ಅವನು ನನ್ನ ತಮ್ಮ, ನನಗಿಂತ ಚಿಕ್ಕವನು, ಅವನಿಗೆ ತಿಳಿಯುವುದಿಲ್ಲ ಎಂದಳು. ಇಲ್ಲಿ ನಾನು ಹೇಳಹೊರಟಿರುವುದು ಆ ಹುಡುಗಿಯ ಮನೆಯಲ್ಲಿ ಅವರ ಹಿರಿಯರು ಅವಳಿಗೆ ಕಲಿಸಿದ ಸಂಸ್ಕಾರ, ಪ್ರೀತಿ– ವಿಶ್ವಾಸ ಸಂಬಂಧದ ಅರ್ಥವನ್ನು. ಬೇರೆಯವರು ಏನಾದರೂ ಕೆಟ್ಟದ್ದನ್ನು ಹೇಳಿಕೊಟ್ಟರೂ ಅದರಂತೆ ಮಾಡದೇ ತಮ್ಮನನ್ನು ಪ್ರೀತಿಯಿಂದ ನೋಡಿದ ಆ ಹುಡುಗಿಯ ನಡತೆ ನನಗೆ ಬಹಳ ಮೆಚ್ಚುಗೆಯಾಯಿತು.

ಇನ್ನೊಂದ್ಸಲ ಚಿಕ್ಕ ಮಕ್ಕಳಿಬ್ರು ಜಗಳ ಆಡುವಾಗ ಒಬ್ಬರ ಕೂದಲನ್ನು ಇನ್ನೊಬ್ಬರು ಹಿಡ್ಕೊಂಡು ಎಳೀತಾ ಇದ್ರು. ಇಬ್ರಿಗೂ ನೋವಂತೂ ಆಗ್ತಿತ್ತು. ಆದ್ರೂ ಯಾರೂ ಬಿಡಕ್ ತಯಾರಿಲ್ಲ. ಬಿಡು, ಬಿಡು ಅಂದ್ರೆ, ನೀನ್ ಬಿಟ್ರೆ ನಾನ್ ಬಿಡ್ತೀನಿ ಅಂತ ಇಬ್ಬರದೂ ಕರಾರು. ಅಂತೂ ಇಂತೂ ಕೊನೇಗೊಂದ್ ಒಪ್ಪಂದಕ್ ಬಂದು ವನ್, ಟು, ತ್ರಿ ಹೇಳಿ ಇಬ್ಬರೂ ಒಟ್ಟಿಗೇ ಬಿಟ್ಟದ್ದಾಯಿತು. ನಂತರ ಗೊತ್ತಾಯ್ತು, ಇದು ಬೇಕೆಂದೇ ಅವರಿಬ್ಬರೂ ಆಗಾಗ ಆಡುತ್ತಿದ್ದ ಒಂದು ರೀತಿಯ ಮಕ್ಕಳಾಟ ಎಂದು.



ಪ್ರಾಥಮಿಕ ಶಾಲೆಯಲ್ಲಿ ಒಂದು ಹುಡುಗ, ಪಕ್ಕದಲ್ಲಿ ಕೂತಿದ್ದ ಹುಡುಗಿಯ ಪುಟ್ಟ ಜಡೆಯನ್ನು ಆಗಾಗ ಎಳೆಯುತ್ತಿದ್ದ. ಆ ಹುಡುಗಿ ಏ ಬಿಡೋ, ನೋವಾಗುತ್ತೆ ಅಂತ ಎಷ್ಟ್ ಹೇಳಿದ್ರೂ ಮತ್ತೆ ಮತ್ತೆ ಜಡೆ ಎಳೆದು ಖುಷಿಪಡುತ್ತಿದ್ದ. ಶಿಕ್ಷಕರು ಬಂದು, ಬಿಡು ಹಾಗೆಲ್ಲ ಎಳೀಬಾರ್ದು, ಅವ್ಳಿಗ್ ನೋವಾಗುತ್ತೆ ಅಂದ್ರು. ಮತ್ತೊಂದ್ಸಲ ಎಳ್ದು,


ಎಳ್ಳಕ್ ಚೆನ್ನಾಗಿದೆ ಎಂದು ನಗುತ್ತಾ ಹೇಳಿದ ಆ ಹುಡುಗನ ಮುಗ್ಧತೆಗೆ ಏನು ಹೇಳಬೇಕೋ ತಿಳಿಯದೇ ಕೊನೆಗೆ ಇಬ್ಬರನ್ನೂ ಬೇರೆ ಬೇರೆ ಕಡೆ ಕೂರಿಸಿದ್ದಾಯಿತು.

ಮೂರು ಕಾಲಿನ ಜಡೆ (ಮಾಮೂಲಿ ಜಡೆ), ಒಂದು ಜಡೆ, ಎರಡು ಜಡೆ, ತಲೆ ತುಂಬಾ ಪುಟ್ಟ ಪುಟ್ಟ ಜಡೆಗಳು, ತಿರುಗಾಮುರುಗಾ ಜಡೆ, ಮೊಗ್ಗಿನ ಜಡೆ, ತುದಿಗೆ ಗೊಂಡೆ, ನಾಲ್ಕು ಕಾಲಿನ ಜಡೆ, ಫ್ರೆಂಚ್ ಪ್ಲೇಟ್, ಹೀಗೆ ತರಾವರಿ ಜಡೆಗಳು.

ನೀರ್ಜಡೆ : ಇದು ಹಿಂದೆಲ್ಲಾ ತಲೆಗೆ ಸ್ನಾನ ಮಾಡಿದ ದಿನ ಹಾಕಿಕೊಳ್ಳುತ್ತಿದ್ದದ್ದು ರೂಢಿ. ಮಧ್ಯದಿಂದ ಸ್ವಲ್ಪ ಕೂದಲು, ಕಿವಿ ಹತ್ತಿರ ಎರಡು ಬದಿಯಿಂದ ಸ್ವಲ್ಪ ಕೂದಲು ತೆಗೆದು ಮೂರು ಕಾಲು ಮಾಡಿಕೊಂಡು ಮಧ್ಯಕ್ಕೆ ಚಿಕ್ಕದಾಗಿ ಹೆಣೆಯುತ್ತಿದ್ದ ಜಡೆ. ನಂತರ ಉಳಿದ ಕೂದಲನ್ನು ಸ್ವಲ್ಪ ಬಿಟ್ಟು ತುದಿಗೆ ಒಂದು ರಬ್ಬರ್ ಬೆಂಡನ್ನೋ, ರಿಬ್ಬನ್ನನ್ನೋ ಹಾಕಿ ಕಟ್ಟುತ್ತಿದ್ದರು. ಆಗೆಲ್ಲ ಎಲ್ಲರ ಮನೆಯಲ್ಲಿ ಹೇರ್ ಡ್ರೈಯರ್ ಇರಲಿಲ್ಲ. ಬೆಳಿಗ್ಗೆ ಮುಂಚೆ ಅಷ್ಟೊಂದು ಬಿಸಿಲೂ ಇರುತ್ತಿರಲಿಲ್ಲ. ಸ್ನಾನದ ಪಂಚೆಯಲ್ಲಿ (ಇದೊಂದು ಟವಲ್ ತರಾನೆ, ಚೆನ್ನಾಗಿ ನೀರನ್ನು ಹೀರಿಕೊಳ್ಳುತ್ತದೆ) ಚೆನ್ನಾಗಿ ಒರೆಸಿ ಅದನ್ನೇ ತಲೆಗೆ ಕಟ್ಟಿ, ಸ್ವಲ್ಪ ಹೊತ್ತಿನ ನಂತರ ಈ ರೀತಿ ನೀರ್ಜಡೆ ಹಾಕುತ್ತಿದ್ದರು. ಬಿಗಿಯಾಗಿ ಹೆಣೆಯದೆ ಸ್ವಲ್ಪ ಕೂದಲನ್ನು ಹಾಗೇ ಸಡಿಲವಾಗಿ ಬಿಟ್ಟಿರುತ್ತಿದ್ದುದರಿಂದ ಚೆನ್ನಾಗಿ ಒಣಗುತ್ತಿತ್ತು. ಆಗೆಲ್ಲ ಈಗಿನ ತರ ದಿನಬೆಳಗಾದರೆ ತಲೆಗೆ ಸ್ನಾನ ಮಾಡುತ್ತಿರಲಿಲ್ಲ. ವಾರದಲ್ಲಿ ಒಂದು, ಹೆಚ್ಚೆಂದರೆ ಎರಡು ದಿನ. ಅದರಲ್ಲೂ ಮಕ್ಕಳಿಗಂತೂ ಭಾನುವಾರ ಅಂದ್ರೆ ತಲೆಗೆ ಸ್ನಾನ ಅಂತಲೇ ಅರ್ಥ. ಏಕೆಂದರೆ, ಬೇರೆ ದಿನ ಶಾಲೆಗೆ ಎರಡು ಜಡೆ ಹೆಣೆದುಕೊಂಡೇ ಹೋಗಬೇಕಿತ್ತು. ಬೇಗ ಕೂದಲು ಒಣಗುತ್ತಿರಲಿಲ್ಲ, ಅಷ್ಟು ಸಮಯವೂ ಇರುತ್ತಿರಲಿಲ್ಲ.

ಪರ್ಸ್ ಜಡೆ: ಇದನ್ನು ಅಮ್ಮ ಹಾಕುತ್ತಿದ್ದರು. ಮಧ್ಯ ಬೈತಲೆ ತೆಗೆದು ಬಲಬದಿಯಿಂದ ಚಿಕ್ಕದಾದ ಒಂದು ಜಡೆ ಹೆಣೆದು ಅದನ್ನು ಎಡಬದಿಗೆ ತಂದು ಅಲ್ಲಿಂದ ಪ್ರತಿಬಾರಿ ಹೆಣೆಯುವಾಗಲೂ ಸ್ವಲ್ಪ ಸ್ವಲ್ಪ ಕೂದಲನ್ನು ಸೇರಿಸುತ್ತಾ ಬರುತ್ತಿದ್ದರು. ಕೊನೆಗೆ ಅದು ಪರ್ಸಿನ ಆಕಾರಕ್ಕೆ (U ಶೇಪ್) ಬರುತ್ತಿತ್ತು. ಅದರ ತುದಿಗೆ ರಿಬ್ಬನ್ ಕಟ್ಟಿ ಹೆಣೆದು, ಬಲಬದಿಯಲ್ಲಿ ಮೊದಲು ಹೆಣೆದಿದ್ದ ಜಡೆಯ ಬುಡಕ್ಕೆ ಸೇರಿಸಿ ಕಟ್ಟುತ್ತಿದ್ದರು. ನಂತರ ಎಡಬಾಗದ ಜಡೆಗೂ ಇನ್ನೊಂದು ರಿಬ್ಬನ್ ಹಾಕಿ ಕಟ್ಟುತ್ತಿದ್ದರು. ಒಂದು ಕಡೆ ರಿಬ್ಬನ್ ಇದ್ದು ಇನ್ನೊಂದು ಕಡೆ ಹಾಗೇ ಬಿಟ್ಟರೆ ಚೆನ್ನಾಗಿರುವುದಿಲ್ಲವೆಂದು.

ಮದುವೆ ಮುಂತಾದ ವಿಶೇಷ ಸಂದರ್ಭಗಳಲ್ಲಿ ಮೊಗ್ಗಿನ ಜಡೆ ಹಾಕುವುದು ರೂಢಿ. ಆಗೆಲ್ಲಾ ಹೆಣ್ಣು ಮಕ್ಕಳ ಸಂಭ್ರಮ ದುಪ್ಪಟ್ಟು. ಜಡೆಬಿಲ್ಲೆ, ಗೊಂಡೆ, ಮುತ್ತಿನ ಜಡೆ (ಪೋಣಿಸಿದ ಮುತ್ತುಗಳ ಒಳಗೆ ಜಡೆ ಬರುವಂತೆ), ಮಲ್ಲಿಗೆ, ಕನಕಾಂಬರ ಸುತ್ತಿದ ಜಡೆ, ಮೇಲೆ ತುರುಬು, ಅದಕ್ಕೂ ಸುತ್ತಿದ ಮಲ್ಲಿಗೆ ದಂಡೆ ಹೀಗೆ ನಾನಾ ವಿಧಗಳು. ಇದು ಹೆಣ್ಣಿಗೆ ತನ್ನ ಜೀವನದ ಖುಷಿಯ ಕ್ಷಣಗಳ ಸೆರೆಯಲ್ಲಿ ಸೇರುವಂಥದ್ದು.



ಹಿಂದೆಲ್ಲ ಉದ್ದದ ಎರಡು ಜಡೆ ಹಾಕಿಕೊಂಡು ಪುಸ್ತಕ ಎದೆಗವಚಿಕೊಂಡು ಹೋಗುವುದೇ ಒಂದು ರೀತಿಯ ಟ್ರೆಂಡ್ ಆಗಿತ್ತೆಂದರೆ ತಪ್ಪಲ್ಲ. ಸಿನಿಮಾದಲ್ಲಂತೂ ಜಡೆ ಎಳೆಯುವುದು, ಅದರ ತುದಿಯನ್ನು ಕೈ ಬೆರಳಿಗೆ ಸುತ್ತಿಕೊಂಡು ಆಟವಾಡುವುದು, ಜಗಳ ಮಾಡುವಾಗ ಮುಂದಿರುವ ಜಡೆಯನ್ನು ಬೀಸಿ ಎತ್ತಿ ಒಮ್ಮೆ


ಹಿಂದಕ್ಕೆ ಎಸೆಯುವುದು ಇದೆಲ್ಲಾ ಮಹಿಳಾಮಣಿಗಳ ಗತ್ತಿನ ಪ್ರತೀಕವಾಗಿತ್ತು. ಅಲ್ವಾ ಮತ್ತೆ, ಅಷ್ಟುಷ್ಟುದ್ದ ಜಡೆ ಇದ್ಮೇಲೆ ಇಷ್ಟಾದ್ರು ....

ಇನ್ನು ಯಾರನ್ನಾದ್ರು ಹಿಡೀಬೇಕೂಂತ ಓಡ್ತಿದ್ರೆ, ಅವ್ರು ಸಿಗ್ದೆದ್ರೂ ಅವ್ರ್ ಜಡೆ ಅಂತೂ ಸಿಗುತ್ತೆ. ಆಗ ಅವ್ರೂ ಸಿಕ್ದಂಗೆ ಅಂದ್ಕೊಂಡ್ರೆ ಅಲ್ಲೂ ಕೆಲವೊಮ್ಮೆ ಲೆಕ್ಕಾಚಾರ ತಪ್ಪಾಗುತ್ತೆ. ಯಾಕ್ಗೊತ್ತಾ, ಅದೇನಾದ್ರೂ ಚೌಲಿ ಆಗಿದ್ರೆ ಹಲ್ಲಿ ಬಾಲ ಕಳುಚ್ದಂಗೆ ಎಳೆದವರ ಕೈಗೇ ಬರುತ್ತೆ. ಅವರಂತೂ ಎಸ್ಕೇಪ್.

ಇನ್ನು ಜಡೆ ಬಗ್ಗೆ ಬಂದ ಹಾಡುಗಳೂ ಪ್ರಸಿದ್ಧವಾದವುಗಳೇ. ಎರಡೂ ಜಡೆಯನ್ನು ಎಳೆದೂ ಕೇಳುವೆನು, ನೀ ಸ್ವಲ್ಪ ನಿಲಬಾರದೇ.. ಇದು ಬಹಳ ಜನಪ್ರಿಯವಾದ ಮಧುರವಾದ ಗೀತೆ. ನಮ್ಮೂರ ಜಾತ್ರೇಲಿ, ಮುಸ್ಸಂಜೆ ಹೊತ್ತಲ್ಲಿ, ನಿನ್ನ ಜಡೆಯನು ಎಳೆದೋನು ನಾಂತಾನೆ.. ಈ ಹಾಡು ಮಾಡಿದ ಮೋಡಿ ಅಷ್ಟಿಷ್ಟಲ್ಲ.

ಇನ್ನು ಜಗಳಕ್ಕೂ ಜಡೆಗೂ ಬಿಡದ ನಂಟು. ಹೇಗೆ ಗೊತ್ತಾ? ನೇರವಾಗಿ ಇಬ್ಬರು ಹೆಂಗಸರು ಇರುವಲ್ಲಿ ಜಗಳ ಕಟ್ಟಿಟ್ಟ ಬುತ್ತಿ ಎನ್ನುವ ಬದಲು, ಎರಡು ಜಡೆ ಇದ್ದಲ್ಲಿ ಹೊಂದಾಣಿಕೆ ಇಲ್ಲ ಅಂತ ಸುತ್ತೀ, ಬಳಸೀ, ಸುತ್ಗೆ ತಗಂಡು ಮೊಳೆ ಹೊಡ್ದಿಟ್ಟಂಗೆ ಇವತ್ತಿಗೂ ಅದೇ ಮಾತು ಫಿಕ್ಸ್.

■






# ಅಬ್ಬಭ್ಬಾ..ಅಬ್ಬ..ಅಬ್ಬ..ದೇವರೇ....

✍ ಸುಮನಾ

ಏನೋ ರಾಮು, ಇಷ್ಟೊಂದು ಡ್ವಢಾಂ, ಡ್ವಾಢಂ ಡಬ್  ಡಬ್ ಡಬ ಡಬ ಡಬ್ಬ್ ಢಭ್ಬ್..ಸ್ಸುಯ್..ಧಾಂ ಧಾಂ..ಧಡ ಧಡ್ ಭೂಂ  ಭೂಂ ರೋಯ್ ರೋಯ್.. ..ಕಿವಿ ಗಡಚಿಕ್ಕೋ ಹಾಗೇ ಶಬ್ದ ನಿಲ್ತಾನೇ ಇಲ್ವಲ್ಲೋ.. ನಂಗೆ ಕಣ್ಣು ಬೇರೆ  ಸರಿಯಾಗಿ ಕಾಣಲ್ಲಾ, ಕಿವಿ ಮಂದವಾಗಿ ಬಿಟ್ತು, ಆದ್ರೂ ಕಿವಿ ತೂತಾಗುವಷ್ಟು ,ಕಾದ ಸೀಸ ಹುಯ್ದಷ್ಟು, ಈ ಕಿವಿಯಿಂದ ಆ ಕಿವಿಗೆ ಹೊಕ್ಕು ಧಾಂಧಲೆ ಎಬ್ಬಿಸ್ತಿರೋ ಹಾಗೆ ಈ ಪಾಟಿ.ಶಬ್ದ..ಆಕಾಶ ಕಳಚಿ ಕೆಳಗೆ ಬಿತ್ತೋ, ಏನೋ ಇದು?? ಯುಗಾದಿ ಗೆ ಮುಂಚೇನೇ ದೀಪಾವಳಿ ಹಬ್ಬ ಬಂದುಬಿಡ್ತೇನೋ.?? ಅಮೇರಿಕಾ ದಿಂದ ನಿನ್ನ ಮಗಳು ಅಳಿಯ ಮೊದಲ ದೀಪಾವಳಿಗೆ ಬರ್ತಾರೆ ಅಂತಿದ್ವಲ್ಲೋ...?? ಹೊಸ ಪಂಚಾಂಗ ಬಂತೇನೋ, ಯುಗಾದಿ ತಾರೀಕು ಸರಿಯಾಗಿ ನೋಡಿದಿರೇನೋ?? ಅಥವಾ ಪಂಚಾಂಗದಲ್ಲಿ ತಪ್ಪು ಪ್ರಿಂಟ್ ಆಗಿಬಿಟ್ಟಿದೆಯೇನೋ??  ಧಡಿ ಜಡಿ ಆಲಿಕಲ್ಲಿನ ಮಳೆಯಂತೆ ಆರ್ಭಟ, ಗುಡುಗು, ಮಿಂಚು, ಸಿಡಿಲು, ಬಿರುಕು ಬಿಡುವಂತೆ ಮಳೆಯ  ಶಬ್ದ..ಎಲ್ಲರೂ ಅರ್ಜುನ, ಫಲ್ಗುಣ ಹೇಳ್ರಪ್ಪಾ.

ನಮ್ಮಮ್ಮ ಇಂಥಾ ಸಮಯದಲ್ಲಿ ಅರ್ಜುನನ ಹತ್ತು ಹೆಸರುಗಳನ್ನೂ ಹೇಳುತ್ತಿದ್ದರು.. ಆ ಪಂಚಾಂಗ ಬರೆಯುವ ಶಾರದಾ ಶಾಸ್ತ್ರಿಗಳನ್ನು ಒಂದು ಸರ್ತಿ ಕೇಳಪ್ಪಾ..ಏನೂಂತ ಗೊತ್ತಾಯ್ತಾ?? ಅಂತ.... ಬಿಡುವಿಲ್ಲದೇ ಬಂದ ಅಮ್ಮನ ಪ್ರಶ್ನೆ ಗಳ ಬಾಣಬಿರುಸುಗಳು ಪುತಿನ್ ಬಿಡುತ್ತಿರುವ ದೊಡ್ಡ ದೊಡ್ಡ ಏರ್ ಅಟ್ಯಾಕ್ ಗಿಂತ ಜೋರಾಗಿ ಬಂದು ಬೀಳುತ್ತಿದ್ದವು.

ಅಯ್ಯೋ ಅಮ್ಮ..ಇನ್ನೂ ಯುಗಾದಿಗೆ ತಿಂಗಳು ಇದೆ.. ಇದು ದೀಪಾವಳಿ ಅಲ್ಲಮ್ಮ, ಈಗ ಮಾರ್ಚ್ ತಿಂಗಳು..

ರಷ್ಯಾದವರು ಪಕ್ಕದ ದೇಶದ ಮೇಲೆ ಯುದ್ಧ ಸಾರಿದಾರೆ ಅದನ್ನು ಟಿ.ವಿ.ನಲ್ಲಿ ತೋರಿಸ್ತಿದಾರೆ.. ಅದರದೇ ಶಬ್ದ ಅಂದದ್ದು ಕೇಳಿ.. ಭಯಭೀತರಾಗಿ ಹೌದೇನೋ ಯುದ್ಧನಾ??.. ಅಬ್ಬಬ್ಬಾ ನೆನಸಿಕೊಂಡರೆ ಭಯವಾಗುತ್ತೆ ಆಗ ನಾನು ಬಹಳ ಚಿಕ್ಕವಳು.. ಅಪ್ಪ, ಅಮ್ಮ, ಅಜ್ಜಿ ಅವರುಗಳು ಎರಡನೇ ಮಹಾಯುದ್ಧದ ಬಗ್ಗೆ ಮಾತಾಡ್ತಿದ್ದಿದ್ದು ಜ್ಞಾಪಕವಿದೆ.. ಸ್ವತಂತ್ರ ಸಮರದಲ್ಲಿ ಉಪ್ಪು ಸತ್ಯಾಗ್ರಹ ನಡೆದದ್ದು, ಸ್ವದೇಶಿ ಚಳುವಳಿ ಸಮಯದಲ್ಲಿ ದೇಶಭಕ್ತರು ಮನೆಮನೆಗೂ ಬಂದು ಸ್ವದೇಶಿ ವಸ್ತ್ರವನ್ನೇ ತೊಡಬೇಕೆಂದು ಹೇಳಿದಾಗ ನಮ್ಮ ತಾತ ಮತ್ತು ಕುಟುಂಬದ ಎಲ್ಲರೂ ವಿದೇಶಿ ವಸ್ತ್ರಗಳನ್ನು ಸುಟ್ಟು ಹಾಕಿದ್ದರಂತೆ.. ಹೀಗೇ ಎಷ್ಟೋ ದೇಶಭಕ್ತಿಯ ಕಥೆಗಳು.. ಕಣಪ್ಪಾ... ಆಗೆಲ್ಲಾ ಹೀಗೆ ಇಷ್ಟೊಂದು ವಿವರವಾಗಿ ಗೊತ್ತಾಗ್ತಿರ್ಲಿಲ್ಲ ಬಿಡು.. ಅಲ್ಲಾ ಯಾಕಪ್ಪಾ ಯುದ್ಧಗಳು.. ಇಡೀ ಪ್ರಪಂಚಾನೇ ಒಂದು "ದೇಶ"ವಾಗಿದ್ರೆ ಎಷ್ಟೋ ಚೆನ್ನಿತ್ತು ನಮ್ಮ ಪ್ರಧಾನಿ ಮೋದೀನೇ ನೋಡಿಕೊಳ್ತಿದ್ರು... ಹರೇ ಕೃಷ್ಣಾ.. ಹರೇ ಕೃಷ್ಣಾ  ಎನ್ನುತ್ತಾ ಎದ್ದು ಒಳಹೊರಟಳು ಅಜ್ಜವ್ವ..



ಮಗನ ರೂಮಿನೊಳಗಿಂದ ಸೊಸೆ ಇದೇ ಈಗ 2 ತುಂಬಿ ಮೂರನೇ ವರ್ಷಕ್ಕೆ ಕಾಲಿಟ್ಟ ಮಗನನ್ನು ಮಲಗಿಸುವ ಪ್ರಯತ್ನ ನಡೆಸಿದ್ದಳು..

ಅದ್ಯಾಕೋ ಮಗು ಮಲಗ್ತಾನೇ ಇಲ್ಲ ಅಜ್ಜವ್ವ.. ಏನ್ ಮಾಡಿದ್ರು ಅಷ್ಟೇ..

ಅಂದವಳನ್ನು .ಇಲ್ಲಿ ಕೊಡು ನಾನು ಮಲಗಿಸ್ತೀನಿ ಅಂದ ಅಜ್ಜವ್ವನ ಕೈಗೆ ಮಗುವನ್ನು ದಾಟಿಸಿ, ಅಡಿಗೆ ಮನೆಗೆ ಹೊರಟಳು ಸೊಸೆ ಸವಿತಾ, ಮಗು ಯಾಕೋ ಇನ್ನೂ ರಚ್ಚೆ ಹಿಡೀತು.ಅಜ್ಜವ್ವನ ಕೈಲೂ ಮಲಗಲಿಲ್ಲ. ಅಜ್ಜವ್ವನೂ ಗೊಣಗುತ್ತಾ ಇನ್ನೂ ಎಷ್ಟು ದಿನಾನೋ ಈ ಯುದ್ಧ ಮಗಾ ಅಂತ ಕೇಳಿದಾಗ ಗೊತ್ತಿಲ್ಲ, ಅಂದವನಿಗೆ ಭವಿಷ್ಯ ಬೇರೆ ಹೇಳಿದಳು ನೋಡೂ ಮಹಾಭಾರತ ಯುದ್ಧ ಹದಿನೆಂಟು ದಿನ ಆಯ್ತಂತೆ.. ಇದು "ಮುವ್ವತ್ತಾರು "ದಿನಗಳು ಆಗುತ್ತೆ ಅಂತ...ಅಜ್ಜವ್ವನ ಲೆಕ್ಕಾಚಾರ ಏನೋ?? ಮಗದೊಬ್ಬ ಮೊಮ್ಮಗಳು ಅಲ್ಲಾ ಅಜ್ಜವ್ವ, ಶಸ್ತ್ರಾಸ್ತ್ರಗಳು ಇರೋ ತನಾ ಅಷ್ಟೇ ಈ ಯುದ್ಧ ಅಷ್ಟೇ ಅಂದಾಗ' ಓಹೋ, ನಿನಗೆ ಸೇನಾ ಚೀಫ್ ಫೋನ್ ಮಾಡಿ ಹೇಳಿದ್ರೂ ಅಂತ ತಮ್ಮ ಕೀಟಲೆ ಮಾಡಿದ..... ಈ ಮಧ್ಯೆ ಮಗು ಕೊಸ ಕೊಸ ಅಂತ ನಿದ್ದೆ ಮಾಡದೇ ಕೊಸರಾಡಿದ್ದು ನೋಡಿ, ಕೋಪ ಹತ್ತಿದ ಸೊಸೆ ದಡಾರನೆ ಬಂದು ಬೇಗ ಮಲಗು ಇಲ್ಲಾಂದ್ರೆ ಪುತಿನ್ ಗುಮ್ಮ ಬರ್ತಾನೆ ನೋಡು ಎಂದಾಕ್ಷಣ ಬಾಯಿಗೆ ಬೀಗ ಜಡಿದಂತೆ ಮಲಗಿದ ಗಮ್ಮತ್ತಿನ ಟೈಮಿಂಗ್ ಮತ್ತು ಪೋಸ್ ಬಲೇ ತಮಾಷೆ ಎನಿಸಿತು..

ಮಾಧ್ಯಮಿಕ ತರಗತಿಯಲ್ಲಿದ್ದ ಮಗನ ಟೀಚರ್ ಬೇರೆ ಅವನ ಹೋಂ ವರ್ಕ್ ನೋಟ್ ಬುಕ್ ನಲ್ಲಿ ದೊಡ್ಡದಾಗಿ ಸೊನ್ನೆ ಸುತ್ತಿ ಪೋಷಕರು ಬಂದು ಭೇಟಿ ಯಾಗ ಬೇಕೆಂದು ಬರೆದಿದ್ದರು...ಯಾಕೋ ಹೀಗೇ ಅಂದಾಗ ಇಲ್ಲಮ್ಮಾ ಟೀಚರ್ಗೆ ಎಷ್ಟೋ ವಿಷಯಗಳೇ ಗೊತ್ತಿಲ್ಲ..ಪುತಿನ್ ಯಾರು?? ಅಂತ ಕೇಳಿದ್ರು "ಪೂತನಿಯ ಅಣ್ಣ" ಅಂತ ಬರೆದಿದ್ದೆ... ಅಂದಾಗ ನಗೆಚಿಲುಮೆಯುಕ್ಕಿ ಮಗನನ್ನು ಹೊಡೆಯಲು ಎತ್ತಿದ್ದ ಕೈ ಹಾಗೇ ನವಿರಾಗಿ ಮಗನ ಕೆನ್ನೆ ಸವರಿ ತುಂಟ್ ಮುಂಡೇದೇ.. ಅಂತ ಹೊಟ್ಟೆ ಹುಣ್ಣಾಗುವಂತೆ ನಕ್ಕರು. ಅಷ್ಟೇ ಅಲ್ಲದೆ ಹೋಗ್ಲಿ ಬಿಡು. ಪೂತನಿಯನ್ನು ಕೊಂದ "ಕೃಷ್ಣ"ನೇ ಪುನಃ ಅವತರಿಸಿ ಇವನಿಗೂ ಪಾಠ ಕಲಿಸ್ತಾನೆ ಅಂದಳು. ಮುಂದಿನ ಪೇಜ್‌ನಲ್ಲಿರುವ ಪ್ರಶ್ನೆಗೆ ಉತ್ತರ ಬರೀಲಿಲ್ವಾ ಅಂತ ಕೇಳಿದಳು. ಇಲ್ಲಮ್ಮ ಪು.ತಿ.ನೋ.. ಅಂತ ಇತ್ತು..ನಂಗೆ ಇದ್ದ ಪುತಿನ್ ಮೇಲಿನ ಕೋಪಕ್ಕೆ ನೋಡಲಿಲ್ಲ..ಅಂದ ಮಗ..

ಅದೇ ಸಮಯಕ್ಕೆ ಕಸಿನ್ ರವಿ ಬಂದ ಇಲ್ಲಿ ನೋಡು ಅಕ್ಕಾ, ವಾಟ್ಸಪ್ ಮೆಸೇಜ್..ಅಂತ ತೋರಿಸಿದ. "ಸಧ್ಯ ಇನ್ನೂ ಯಾವ ನ್ಯೂಸ್ ಚಾನೆಲ್ ನವರು ಪುತಿನ್ ಮನೆ ಇರೋದು ಇಲ್ಲೇ ಮೇಲುಕೋಟೆಯಲ್ಲೇ ಅಂತ ಬ್ರೇಕಿಂಗ್ ನ್ಯೂಸ್ ಹೊಡೆದಿಲ್ಲ,!!! ಅದು ನಮ್ಮ ಪು.ತಿ.ನ. ಅವರ ಮನೆ ಈಗಲೇ ಹೇಳಿ ಬಿಡೋಣ" ಅಂತ ಯಾರೋ ಭರ್ಜರಿ ನಗೆ ಪಟಾಕಿ ಹಾರಿಸಿದ್ರು..ಅದನ್ನು ಓದಿ ಇನ್ನಷ್ಟು ಗಾಳಿ ತುಂಬಿದ ಬಲೂನಿನಂತೆ ಓಲಾಡುತ್ತಾ.. ನಗೆ ಹೂರಣದ ಸಿಹಿ ತಿಂದಷ್ಟೇ ಖುಷಿ ಯಿಂದ ನಗೆಯಲ್ಲಿ ತೇಲಾಡಿದರು.. ಅದೇನೇ ಹಾಗೆ ನಗ್ತಿದೀಯಾ.. ಅಜ್ಜವ್ವ ಕೇಳಿದಕ್ಕೆ ಬಾಯಿಬಿಟ್ಟು ಹೇಳಲೂ ಆಗಲಿಲ್ಲ, ಸಾಲದ್ದಕ್ಕೆ ಮತ್ತೊಬ್ಬ ಮರಿಮಗ ವಾಟ್ಸಪ್ ನಲ್ಲಿ ಬಂದ ಮತ್ತೊಂದು ಮೆಸೇಜ್ ತೋರಿಸಿದ..ನೋಡು ಪ್ರಪಂಚದ ದೊಡ್ಡಣ್ಣನೇ ಯುದ್ಧ ನಿಲ್ಲಿಸಲು ಹೇಳಿದ್ರೂ ಪುತಿನ್ ಕೇಳ್ತಿಲ್ಲಾ ಅದಕ್ಕೇ ಲಾಸ್ಟ್ ಹೋಪ್ ಅಂತ ನಮ್ಮ ರಜನಿ ಸರ್ ಯುದ್ಧಕ್ಕೆ "ಸ್ಟಾಪ್" ಅಂದಿದಾರೆ ಅದಕ್ಕೆ ಪುತಿನ್ "ಓಕೆ" ಅಂದಿದಾರೆ,.. ಅಂತ ಓದಿ ಹೇಳಿದಾಗ ಮತ್ತೂ ನಗೆಯ ಸಿಹಿ ಭೂರಿ ಭೋಜನದ ಫೀಲಿಂಗ್.




ಯಜಮಾನರು ಎಂಟ್ರಿ ಕೊಡ್ತಾ..

ಏನೇ ಆಗಲಿ ಕಣೆ "ವೆನ್ ರೋಂ ವಾಸ್ ಬರ್ನಿಂಗ್ ನೀರೋ ವಾಸ್

ಫಿಡ್ಲಿಂಗ್" ಅಂತಾರಲ್ಲ ಹಾಗೆ ಪಾಪ ಯಾರೋ ಸೈನಿಕ ಯುದ್ಧ ಭೂಮಿ ಯಲ್ಲೇ ಅವನ ಪ್ರಿಯತಮೆಗೆ ಹೂಗುಚ್ಛ ಕೊಟ್ಟು  ಪ್ರಪೋಸ್ ಮಾಡಿರುವ ರೀತಿ..ನೋಡಿದರೆ ಪ್ರಪಂಚದಲ್ಲಿ ಪ್ರೀತಿಗೂ, ಪ್ರೀತಿಸುವವರಿಗೂ ಕೊರತೆ ಇಲ್ಲ ಅಂತ ಸಾಬೀತು ಮಾಡ್ತಿದೆ ನೋಡು ಈ ವೀಡಿಯೋ..ಅಂತ ಯಜಮಾನರು ವೀಡಿಯೋ ತೋರಿಸಿದಾಗ ಎಲ್ಲರ ಕಣ್ಣಾಲಿಗಳು ತೇವವಾದವು.. ನೋಡೋಣ. ಅಂತ ಮುಂದುವರಿಸಿ ಯಜಮಾನರು ಚಕ್ರವರ್ತಿ ಅಶೋಕ ಕಳಿಂಗ ಯುದ್ಧದಲ್ಲಿ ಆದ ಅಪಾರ ಸಾವು ನೋವುಗಳ ಕಂಡ ನಂತರ ಶಸ್ತ್ರಾಸ್ತ್ರಗಳನ್ನು ನದಿಗೆ ಎಸೆದು "ದಿಗ್ವಿಜಯ"ದ ಬದಲು "ದಮ್ಮ ವಿಜಯದ" ಶಾಂತಿ ಸ್ಥಾಪನೆಗೆ ಶರಣಾದಂತೆ.. ಪುತಿನ್ ಕೂಡಾ ಶರಣಾಗಬಹುದು.. ಅಂತ ಭಾವಿಸೋಣ..ಅಂದಾಗ ಅನಿಸಿದ್ದು ಪವಿತ್ರ ಪ್ರೀತಿಯಿಂದ ಹೊಂದಿಕೊಂಡು ಮನುಕುಲವೇ" ನೀನೂ ಬಾಳು, ಮತ್ತೊಬ್ಬರನ್ನೂ ಬಾಳಲು ಬಿಡು "ಎಂಬಂತೆ ಬಾಳಿದರೆ ಬದುಕು ಅದೆಷ್ಟು" ಸುಂದರ....

■



# ಬಾರಾ...ಜಿಗಿಜಿಗಿದು ಹಾರಾ...

ನಳಿನಿ ಟಿ. ಭೀಮಪ್ಪ, ಧಾರವಾಡ

ಇತ್ತೀಚೆಗೆ ಗೂಗಲ್ ಸರ್ಚ್ ಮಾಡುವಾಗ 'ಹಂಪ್ ಡೇ' ಎನ್ನುವ ಪದ ನೋಡಿದೆ. ಕನ್ನಡದಲ್ಲಿ ಅದಕ್ಕೆ 'ಗೂನುದಿನ' ಎನ್ನುವ ಅರ್ಥವನ್ನೂ ತೋರಿಸಿತು. ನಮ್ಮ ವಾಹನ ಸವಾರರು, ಅದರಲ್ಲೂ ದ್ವಿಚಕ್ರ ವಾಹನ ಸವಾರರು, ಬೆನ್ನು ಗೂನು ಮಾಡಿಕೊಂಡು ಹಂಪ್‌ಗಳನ್ನು ಸಿಕ್ಕಾಪಟ್ಟೆ ಹಾರಿಸಿ ಹಾರಿಸಿ ಗೂನುಬೆನ್ನಾಗಿರುವ ಸಾಧ್ಯತೆಗಳು ಹೆಚ್ಚಾಗಿರುವುದರಿಂದ, ಹಂಪ್‌ಗಳ ಬಗ್ಗೆ ಎಚ್ಚರಿಸುವ ಸಲುವಾಗಿ ಆಚರಿಸುವ ದಿನ ಇರಬಹುದು ಎಂದು ಲೆಕ್ಕ ಹಾಕಿದ್ದೆ. ಪ್ಚ್...ಲೆಕ್ಕಾಚಾರ ತಪ್ಪಾಯಿತು ನೋಡಿ. ಅದು ವಾರದ ಮಧ್ಯದ ದಿನವಾದ ಬುಧವಾರವನ್ನು 'ಹಂಪ್ ಡೇ' ಎಂದು ಕರೆಯುತ್ತಾರಂತೆ.

ಅದು ಬಿಡಿ. ಚಿಕ್ಕವರಿದ್ದಾಗ ಯಾರಾದರೂ ಸ್ನೇಹಿತರು ಜೋರಾಗಿ ಓಡಿ ಬರುತ್ತಿದ್ದರೆ ಕಾಲನ್ನು ಅಡ್ಡ ಹಾಕಿ ಬೀಳಿಸಿ ಕೇಕೆ ಹಾಕಿ ನಗುತ್ತಿದ್ದೆವು. ಈಗಿನ ರಸ್ತೆಗಳಲ್ಲಿ ವಾಹನಗಳ ವೇಗಕ್ಕೆ ಕಡಿವಾಣ ಹಾಕಲೆಂದು ಇರುವ ಹಂಪುಗಳು ಅದೇ ಕೆಲಸ ಮಾಡುತ್ತಿವೆ. ಹಳೆಯ ಕಾಲದ ಎತ್ತಿನ ಗಾಡಿ, ಜಟಕಾ ಗಾಡಿಗಳ ಪ್ರಯಾಣವೇ ಎಷ್ಟೋ ಚೆನ್ನಾಗಿರ್ತಿತ್ತು. ಎತ್ತು, ಕುದುರೆ ಟಕ್ಕಾ...ಟಕ್ಕಾ...ಅಂತಾ ಜಿಗಿಜಿಗಿದು ಓಡುತ್ತಿದ್ದರೆ, ಟಾಂಗಾದಲ್ಲಿ ಕುಳಿತವರು ಅಲ್ಲಲ್ಲೇ ತೈಯ್ಯಾ, ತಕ್ಕಾ ಅಂತಾ ಡಾನ್ಸ್ ಮಾಡುತ್ತಿದ್ದರು. ಈಗ ಅದೆಂತೆಂತಹ ಸೌಕರ್ಯವಿರುವ ದೊಡ್ಡ ದೊಡ್ಡ ವಾಹನಗಳಲ್ಲೇ ಪ್ರಯಾಣಿಸಿದರೂ, ಅಲ್ಲಲ್ಲಿ ಸಿಗುವ ಹಂಪುಗಳು, ಬಂಪುಗಳು ಎತ್ತಿ ಎತ್ತಿ ಕುಕ್ಕುತ್ತಿರುತ್ತವೆ. ಬಂಪ್‌ಗಳಿಗೆ 'ಸ್ಲೀಪಿಂಗ್ ಪೋಲೀಸ್‌ಮನ್', 'ಸ್ಪೀಡ್ ಕುಶನ್ಸ್' ಇನ್ನೂ ಏನೇನೋ ಹೆಸರುಗಳಿವೆಯಂತೆ. ಇವೆಲ್ಲ ಹೆಸರುಗಳಿಗಿಂತ 'ಅಡ್ಡಗಾಲು' ಎನ್ನುವ ಹೆಸರಿಟ್ಟರೆ ಚೆನ್ನಾಗಿ ಒಪ್ಪುತ್ತದೆ ನೋಡಿ.

ಕಣ್ಣನ್ನು ಎಷ್ಟೇ ನಿಚ್ಚಳವಾಗಿ ಬಿಟ್ಟುಕೊಂಡು ವಾಹನ ಚಲಾಯಿಸಿದರೂ ಹಂಪಿನ ಮಾಯಾಜಾಲಕ್ಕೆ ಸಿಲುಕಿಯೇ ತೀರುತ್ತೀರಿ. ಧರ್ಮರಾಯ ಹಸ್ತಿನಾವತಿಯಲ್ಲಿ ಕಟ್ಟಿಸಿದ ವೈಭೋಗದ ಅರಮನೆಯಲ್ಲಿ ದುರ್ಯೋಧನ ಪ್ರವೇಶಿಸಿ ಗಾಬು ಹೊಡೆದ ಹಾಗೆ. ನೀರಿದೆ ಎಂದುಕೊಂಡು ಹುಷಾರಾಗಿ ನಡೆದು ಪೆಚ್ಚಾದುದು, ನೀರಿಲ್ಲ ಎಂದು ಬೀಡುಬೀಸಾಗಿ ನಡೆದು ದುಡುಂ ಅಂತ ನೀರಿನಲ್ಲಿ ಬಿದ್ದು, ದ್ರೌಪದಿ ನೋಡಿ ಅಪಹಾಸ್ಯ ಮಾಡಿ ಕೊನೆಗೆ ಮಹಾಭಾರತ ಯುದ್ಧಕ್ಕೆ ಕಾರಣವಾಗಿದ್ದು ಎಲ್ಲರಿಗೂ ಗೊತ್ತಿದೆ. ಹಾಗೆಯೇ ಈ ಹಂಪ್‌ಗಳೂ ಮನುಷ್ಯರಿಗೆ ಕಣ್ಣುಮುಚ್ಚಾಲೆಯಾಟ ಆಡಿಸುತ್ತವೆ. ಕೆಲವು ಕಡೆ ಪಟ್ಟಿ ಬಳಿಯದೇ ಹಾಗೇ ಬಿಟ್ಟಿರುವ ಹಂಪ್‌ಗಳು ಇರುವ ಸುಳಿವು ಸಿಗದೇ ದ್ವಿಚಕ್ರ ವಾಹನ ಚಲಾಯಿಸುವವರು ಎಗರೆಗರಿ ಬಿದ್ದ ಎಷ್ಟೋ ಉದಾಹರಣೆಗಳಿವೆ. ಮತ್ತೆ ಕೆಲವು ಕಡೆ ಹಂಪ್ ಇದೆ ಎಂದು ನಿಧಾನವಾಗಿ ವಾಹನ ಚಲಾಯಿಸಿದರೆ ಇರುವುದೇ ಇಲ್ಲ, ಅಥವಾ ತುಂಬ ಸಣ್ಣ ಗಾತ್ರದಿರುತ್ತವೆ. ಒಂದು ರೀತಿ ಮರೀಚಿಕೆಯಂತೆ ಕಾಡುತ್ತದೆ. ಮುಂದಿನವರು ಹಲ್ಲು ಮುರಿದುಕೊಂಡಿದ್ದು, ಹಿಂದಿನವರು ತಲೆ ಒಡೆದುಕೊಂಡಿದ್ದು, ಬೆನ್ನಿನ ಡಿಸ್ಕು, ಡಿಸ್ಕೋ ಡಾನ್ಸ್ ಮಾಡಿ ಜರುಗಿ ಸವಾರರು ಹಾಸಿಗೆಗೆ ಅಂಟಿಕೊಂಡಿದ್ದು, ಕೈಕಾಲು ಫ್ರಾಕ್ಚರ್ ಆಗಿದ್ದು, ಸೊಂಟನೋವು, ಬೆನ್ನುನೋವು ಖಾಯಂ ಸಂಗಾತಿಯನ್ನಾಗಿ ಮಾಡಿಕೊಂಡಿದ್ದು ಎಲ್ಲ ಹಂಪಿನ ಜಂಪಿನ ಉದಾಹರಣೆಗಳೇ. ರಸ್ತೆಯುದ್ದಕ್ಕೂ ಅಲ್ಲಲ್ಲಿ ಹಂಪ್‌ಗಳಿವೆ ಎಂದು ಫಲಕವನ್ನೇನೋ ಹಾಕಿರುತ್ತಾರೆ, ಬಹುತೇಕರು ನೆತ್ತಿಯ ಮೇಲೆಯೇ ಕಣ್ಣಿಟ್ಟುಕೊಂಡು



ಗಾಡಿ ಓಡಿಸುತ್ತಿರುತ್ತಾರೆ, ಕೆಲವರಿಗೆ ನೋಡುವಷ್ಟು ಪುರುಸೊತ್ತಿರುವುದಿಲ್ಲ, ಮತ್ತೆ ಕೆಲವರಿಗೆ ಅಸಡ್ಡೆ, ಇನ್ನೂ ಕೆಲವರಿಗೆ ನೋಡಿದರೂ ಅವುಗಳ ಮೇಲೆ ವಾಹನ ಹಾರಿಸುವ ಸಾಹಸ ಪ್ರವೃತ್ತಿ ಹೆ(ಹು)ಚ್ಚು.

ಮೊದಲನೆಯದಾಗಿ ನಮ್ಮ ರಸ್ತೆಗಳೇ ಸುಸ್ಥಿತಿಯಲ್ಲಿಲ್ಲ, ಎಲ್ಲೆಲ್ಲಿ ತಗ್ಗು ಗುಂಡಿಗಳು ಬಾಯಿ ಬಿಟ್ಟು ನಿಂತಿರುತ್ತವೆಯೋ ಗೊತ್ತೇ ಆಗುವುದಿಲ್ಲ. ಜೊತೆಗೆ ಕಾಮಗಾರಿ ನೆಪದಲ್ಲಿ ಕಿತ್ತೋದು, ಮೆತ್ತೋದು ನಡೆದೇ ಇರುತ್ತದೆ, ಜೊತೆಗೆ 'ಸೋನೇ ಪೇ ಸುಹಾಗಾ' ಎನ್ನುವ ಹಾಗೆ ಈ ಹಂಪಿನ ದಿನ್ನೆಗಳು ಬೇರೆ. ಹೈಜಂಪ್, ಲಾಂಗ್ ಜಂಪ್ ಅಭ್ಯಾಸ ಮಾಡುವುದೇ ಬೇಕಿಲ್ಲ, ವಿವಿಧ ಅಳತೆಯ ಎತ್ತರದ, ಅಗಲದ ಹಂಪುಗಳನ್ನು, ಬಂಪುಗಳನ್ನು ಜಂಪ್ ಮಾಡಿದರೆ ಸಾಕು ಎಲ್ಲ ಅಭ್ಯಾಸವಾಗುತ್ತದೆ. ವ್ಹೀಲಿಂಗ್ ಕಲಿಯುವವರಿಗೂ ಸ್ವಲ್ಪಮಟ್ಟಿಗೆ ಅನುಕೂಲ. ವಾಹನಗಳ ಟಯರ್ ಟಿಯರ್ ಆಗದೆ ಉಳಿದರೆ ಪುಣ್ಯ ಎನಬೇಕು. ದ್ವಿಚಕ್ರ ವಾಹನಗಳು ಹಂಪ್ ಎಗರಿಸಿದಾಗ ಹಿಂದೆ ಕುಳಿತವರು ಬೀಳುತ್ತಾರೋ, ಮುಂದೆ ಕುಳಿತವರು ಬೀಳುತ್ತಾರೋ ಎಂದು ಟಾಸ್ ಹಾಕಿ ನೋಡಬೇಕಷ್ಟೇ. ಹೇಗಾದರಾಗಲಿ ಚಲಾಯಿಸುತ್ತಿರುವವರು ಹಂಪ್ ಜಿಗಿದಾಕ್ಷಣ ಹಿಂದೆ ಕುಳಿತವರು ಇದ್ದಾರೆಂದು ಕನ್ಫರ್ಮ್ ಮಾಡಿಕೊಳ್ಳುವುದೊಳಿತು. ಮೊದಲೇ ಹೆಲ್ಮೆಟ್ ಹಾಕುವುದೆಂದರೆ ನಮ್ಮ ಜನಕ್ಕೆ ಅಲರ್ಜಿ, ಹಾಕುವವರು ಕಡಿಮೆ, ಹಾಕಿದರೂ ಅರ್ಧಬಂರ್ಧ ಹಾಕಿರುತ್ತಾರೆ, ಹಿಂದಿನವರು ಹಾಕಿದ್ದರೆ ಅವರ ಪುಣ್ಯ, ಕೆಲವರು ಹಾಕಿದ್ದರೂ ಯಾವುದೋ ಡಕೋಟಾ ಕಂಪನಿಯ ಹೆಲ್ಮೆಟ್ ಅನ್ನು ನಾಮ್‌ಕೆ ವಾಸ್ತೆ ಎನ್ನುವ ಹಾಗೆ ಇಟ್ಟುಕೊಂಡಿರುತ್ತಾರೆ. ಹೀಗಿರುವಾಗ ತಲೆ ಉಳಿಯುವುದಾದರೂ ಹೇಗೆ ಹೇಳಿ. ತಲೆಗೂ ಇನ್ಶೂರನ್ಸ್ ಮಾಡಿಸಬೇಕು ಅಷ್ಟೇ. ಜೊತೆಗೆ ಗಾಡಿಯ ಮಡ್‌ಗಾರ್ಡ್ ಕಿತ್ತು ಹೋಗದಿದ್ದರೆ ಅದೃಷ್ಟವಂತರು ಎಂದುಕೊಳ್ಳಬಹುದು. ಹಗಲು ಹೊತ್ತಿನಲ್ಲಿಯೇ ಈ ಕತೆಯಾದರೆ ಕತ್ತಲಿನಲ್ಲಿ ಹಂಪ್ ಹಾರಿಸುವವರ ಗತಿ ದೇವರಿಗೇ ಪ್ರೀತಿ.

ಎಂತೆಂತಹ ಹಂಪುಗಳು ಇರುತ್ತವೆ ಅಂತೀರಿ. ಅವುಗಳನ್ನು ರಸ್ತೆಯಲ್ಲಿ ಹಾಕಲೂ ಏನೇನೋ ವೈಜ್ಞಾನಿಕ ನಿಯಮಗಳಿವೆಯಂತೆ. ಅದರಲ್ಲೂ ನಮ್ಮ ದೇಶದಲ್ಲಿ ಪಾಲಿಸುವುದು ಕಡಿಮೆ ಎಂದು ಎಲ್ಲರಿಗೂ ಗೊತ್ತೇ ಇದೆ. ಒಂದು ಕಡೆ ಲಟ್ಟಣಿಗೆಯ ಹಾಗೆ ದುಂಡಗೆ ಇದ್ದರೆ, ಮತ್ತೊಂದು ಕಡೆ ಸೀದಾ ಮಣ್ಣಿನ ದಿಬ್ಬದಷ್ಟು ದೊಡ್ಡದಿದ್ದು, ಸವಾರರಿಗೆ ಹಿಲ್ ಕ್ಲೈಂಬ್ ರೇಸಿಂಗ್ ತರಹದ ಅನುಭವ ನೀಡದಿದ್ದರೆ ಕೇಳಿ. ಇನ್ನೂ ಕೆಲವು ಕಡೆ ಬಹುಸಂಖ್ಯೆಯ ಹಂಪುಗಳು ಕಪ್ಪೆಜಿಗಿತ ಮಾಡಿಸುತ್ತವೆ. ನಮ್ಮ ಜನರೂ ಏನು ಕಡಿಮೆ ಬುದ್ಧಿವಂತರಿಲ್ಲ ಬಿಡಿ. ಹಂಪ್ ಬರುತ್ತಿದ್ದಂತೆ ಹಂಪ್‌ನ ತುದೀಗೆ ಹೋಗಿ ಗಾಡಿ ಇಳಿಸಿ, ಮತ್ತೆ ರಸ್ತೆಗೆ ಏರುವವರಿದ್ದಾರೆ. ಕೆಲವರು ಹಂಪ್‌ನ ನಡುವೆಯೇ ಸ್ವಲ್ಪ ಕೆತ್ತಿಹೋಗಿರುವ ಕಡೆ ಚಾಲಕರು, ಸವಾರರು ಗಾಲಿಗಳನ್ನು ತೂರಿಸಿ ತೂರಿಸಿ, ಗಾಯವನ್ನು ಕೆರೆದು ಕೆರೆದು ದೊಡ್ಡ ಹುಣ್ಣಾದಂತೆ ಮತ್ತಷ್ಟು ಅಗಲ ಮಾಡುವಲ್ಲಿ ಎತ್ತಿದ ಕೈ. ನಾಲ್ಕು ಚಕ್ರ ಹಾಗೂ ದೊಡ್ಡ ದೊಡ್ಡ ವಾಹನಗಳಲ್ಲಿ ಪ್ರಯಾಣಿಸುವವರಿಗೆ ಅಷ್ಟಾಗಿ ಹಂಪ್‌ಗಳು ಬಾಧಿಸುವುದಿಲ್ಲ.

ಹಂಪ್ ಸರಿಯಾಗಿ, ಸರಾಗವಾಗಿ ದಾಟಿಸಲಿಕ್ಕೆ, ಜಿಗಿಸಲಿಕ್ಕೆ ಬಂತೂ ಎಂದರೆ ನಿಮ್ಮ ಡ್ರೈವಿಂಗ್ ಪರ್ಫೆಕ್ಟ್ ಇದೆ ಎಂದರೆ ಕಣ್ಮುಚ್ಚಿಕೊಂಡು ಲೈಸೆನ್ಸ್ ಸರ್ಟಿಫಿಕೇಟ್ ಕೊಡಬಹುದು. ಹಾಗಾಗಿ 'ಹಂಪಿಗೂ...ಜಂಪಿಗೂ...ಬಿಡಿಸದಾ ಚಿರಬಾಂಧವ್ಯ' ಎನ್ನುವ ಹಾಡನ್ನು ಗುನುಗದೆ ವಿಧಿಯಿಲ್ಲ.

■



# ಮುಸುಕಿದೀ ಮಬ್ಬಿನಲಿ ಮಾಸ್ಕು ನೆನೆದು.........

ತುರುವೇಕೆರೆ ಪ್ರಸಾದ್

"ಎನಿತು ಜನ್ಮದಲಿ ಎನಿತು ಜೀವರಿಗೆ ಎನಿತು ನಾವು ಋಣಿಯೋ? ತಿಳಿದು ನೋಡಿದರೆ ಬಾಳು ಎಂಬುದಿದು ಋಣದ ರತ್ನಗಣಿಯೋ!" ಎಂದು ಜಿ.ಎಸ್.ಎಸ್. ಹೇಳಿದ್ದಾರೆ. ಬದುಕಿನುದ್ದಕ್ಕೂ ನಾವು ಬರೀ ಆಸೆಗಳ ಪಟ್ಟಿ ಮಾಡುತ್ತೇವೆ. ಆದರೆ ನಮ್ಮಲ್ಲಿ ಕೃತಕೃತ್ಯತೆಗಳ ಪಟ್ಟಿಯೇ ಇಲ್ಲ, ದೇವ ಋಣ, ಋಷಿ ಋಣ, ಮಾತೃ ಋಣ, ಪಿತೃಋಣ ಎಂದೆಲ್ಲಾ ನೋಡುತ್ತಾ ಹೋದರೆ ಈ ಪಟ್ಟಿ ಮುಗಿಯುವುದೇ ಇಲ್ಲ. ಪಟ್ಟಿಯಿರಲಿ, ಈಗ  ನಮಗೆ ಕಾಣುವುದು ಇದ್ಯಾವುದೇ ಋಣವಲ್ಲ, ನಮಗೆ ಕಾಣುವುದು, ನಮ್ಮನ್ನು ಕಾಡುವುದು ಬ್ಯಾಂಕ್ ಋಣ ಮಾತ್ರ. ಆ ಋಣವನ್ನು ಬಲವಂತವಾಗಿ ತೀರಿಸಲೇ ಬೇಕಿರುವುದರಿಂದ ಮತ್ತು ಅದಕ್ಕಾಗಿ ಪದೇ ಪದೇ ನೋಟೀಸ್ ಬರುವುದರಿಂದ ಅದೊಂದು ಸ್ಮರಣೆಯಲ್ಲಿ ಉಳಿಯುತ್ತದೆಯೇ ವಿನಃ ಮಿಕ್ಕಾವ ಹಣದ ಸೋಂಕಿಲ್ಲದ ಬಾದರಾಯಣ ಋಣಗಳು ನಮ್ಮ ಸ್ಮೃತಿಯಲ್ಲಿ ಉಳಿಯುವುದೇ ಇಲ್ಲ.

ಇದಕ್ಕೊಂದು ತಾಜಾ ನಿದರ್ಶನ ಎಂದರೆ ಮೊನ್ನೆ ಮೊನ್ನೆಯಿನ್ನೂ ನಮ್ಮೆಲ್ಲಾ ಜೀವಕಾಪಾಡಿದ ಮಾಸ್ಕ್ ಅರ್ಥಾತ್ ಮುಖಗವಸು. ಈ ಮಾಸ್ಕ್ ಎನ್ನುವ ಒಂದು ಸಾದಾ ಸೀದ ವಸ್ತು ಕಳೆದೆರಡು ವರ್ಷಗಳಲ್ಲಿ ನಮಗೆ ಎಷ್ಟೆಲ್ಲಾ ಉಪಕಾರ ಮಾಡಿತು. 'ತುಂಡು ಬಟ್ಟೆ ಸಾಕು ನನ್ನ ಮಾನ ಮುಚ್ಚೋಕೆ 'ಅನ್ನೋತರವೇ' ತುಂಡು ಮಾಸ್ಕ್ ಸಾಕು ನನ್ನ ಜೀವ ಉಳಿಸೋಕೆ' ಎಂಬಂತೆ ಅನಿವಾರ್ಯದಲ್ಲಿ ಅನಿವಾರ್ಯ ಎನ್ನುವಂತಾಗಿತ್ತು. ಈ ಮಾಸ್ಕ್ ಮಾಡಿದ ಉಪಕಾರಗಳು ಒಂದೇ ಎರಡೇ. ಅದರ ಉಪಕಾರವನ್ನು ಸ್ಮರಿಸುವುದೇ ಒಂದು ಋಣ ತೀರಿಸಿದ ಹಾಗೆ. ಒಂದು ಚಿಕ್ಕ ಫ್ಲಾಶ್ ಬ್ಯಾಕ್‌ಗೆ ಹೋಗಿ ನಡೆದು, ನರಳಿ, ಹೊರಳಿ ಬಂದ ಆ ದಾರಿಯ ದರ್ಶನವನ್ನೊಮ್ಮೆ ಮಾಡೋಣ ಬನ್ನಿ ಜನರಿಗೆ ಮುಖವಾಡ, ಮಾಸ್ಕ್‌ಗಳೆಂದರೆ ಅಷ್ಟಕ್ಕಷ್ಟೇ! ಹಾಗೇ ಒಳಗೊಂದು ಹೊರಗೊಂದು ತೋರುವವನನ್ನು ಮುಖವಾಡಗಳಡಿ ಬದುಕೋ ಮನುಷ್ಯ ಎಂದು ಜನ ದೂರನೇ ಇಟ್ಟಿರುತ್ತಾರೆ. ಮಾಸ್ಕ್ ಎಂದರೆ ಒಳಗೊಂದು ಅಸಲಿತನವಿಲ್ಲದ ಧೂರ್ತತನ ಇದ್ದೇ ಇರುತ್ತದೆ ಎಂಬುದು ಫಕ್ಕಾ  ನಂಬಿಕೆ. ಕವಿಯೊಬ್ಬರು 'ಕನ್ನಡಿ ಹಿಂದೊಂದು ಲೋಕವಿದೆ, ಮುಖವಾಡದ ಹ್ಯಾಲೋವಿನ್ ಹಬ್ಬವಿದೆ' ಎಂದು ಮುಖವಾಡದ ಹಿಂದಿನ ಪೈಶಾಚಿಕ ಲೋಕವನ್ನು ಅನಾವರಣಗೊಳಿಸುವ ಪ್ರಯತ್ನ ಮಾಡುತ್ತಾರೆ. ಅದನ್ನು ಪಕ್ಕಾ ಸುಳ್ಳು ಮಾಡಿ ಮಾಸ್ಕಿಗೂ ಒಂದು ಘನತೆ, ಗೌರವ ತಂದುಕೊಟ್ಟಿದ್ದೇ ನಮ್ಮ ಕಾಲದ ಮಾಸ್ಕ್‌ಗಳ ಹೆಗ್ಗಳಿಕೆ.

ಎರಡು ಮೂರು ವರ್ಷಗಳ ಹಿಂದೆ ಕೇವಲ  ಆಪರೇಶನ್ ಥಿಯೇಟರ್‌ನಲ್ಲಿ ಡಾಕ್ಟರ್‌ಗಳು, ವಿಜ್ಞಾನಿಗಳು, ಕಾರ್ಪೊರೇಶನ್ ಕರ್ಮಚಾರಿಗಳು ಧರಿಸುತ್ತಿದ್ದ ಮಾಸ್ಕ್ ಕೊರೊನಾ ದೆಸೆಯಿಂದ ಎಲ್ಲರ ಜೀವನದ ಅವಿಭಾಜ್ಯ ಅಂಗವಾಗಿ ಹೋಗಿತ್ತು. ಮಾಸ್ಕ್ ಇಲ್ಲದೆ ಜೀವನವೇ ಇಲ್ಲ ಎನ್ನುವ ಸ್ಥಿತಿಗೆ ತಲುಪಿ ನಿಂತಿದ್ದೆವು. ಜೇಬಿನೊಳಗಿನ ಕರ್ಚೀಫು, ಹೆಗಲ್ ಮೇಲಿನ ಟವಲ್, ಎಷ್ಟೋ ವೇಳೆ ಸೊಂಟಕ್ಕೆ ಸುತ್ತಿದ ಲುಂಗಿ, ಶಲ್ಯ, ಮಫ್ಲರ್, ವೇಲ್‌ಗಳು ಸಾಂದರ್ಭಿಕವಾಗಿ ಮಾಸ್ಕ್ ಅವತಾರ ತಳೆದು ನಮ್ಮ ಜೀವ ಉಳಿಸಿದವು. ಮಾಸ್ಕ್ ಹಾಕಿಕೊಂಡ ನಂತರ ನಮ್ಮ ಉಸಿರನ್ನು ನಾವೇ



ಕುಡಿದುಕೊಂಡು, ಎಲ್ಲಂದರಲ್ಲಿ ತುಪಕ್ಕನೆ ಉಗಿಯುತ್ತಿದ್ದ ನಮ್ಮ ಉಗುಳನ್ನು ನಾವೇ ನುಂಗಿಕೊಂಡು, ನಮ್ಮ ಸೀನನ್ನು ನಾವೇ ನಿಗ್ರಹಿಸಿಕೊಳ್ಳುವ ಸಂಯಮವನ್ನು ಕಲಿತಿದ್ದೆವು. ನಮ್ಮ ನಿಟ್ಟುಸಿರು, ಕೆಟ್ಟುಸಿರು ಸಹ ಬೇರೆಯವರಿಗೆತಾಗದಂತೆ ಮಾಸ್ಕ್ ಒಳಗೇ ಇಂಗಿ ಹೋಗುತ್ತಿತ್ತು.

ಇನ್ನು ಮುಖಕ್ಕೆ ಮಾಸ್ಕ್ ಮೆತ್ತಿಕೊಂಡಿರುವುದರಿಂದ ನಮ್ಮ ಮೂಗಿಗೂ ಅಂತಹ ವಿಶೇಷ ಕೆಲಸಗಳೇನೂ ಇರಲಿಲ್ಲ. ಅದು ಸಲೀಸಾಗಿ ವಾಸನೆ ಕುಡಿಯುವಂತಿರಲಿಲ್ಲ. ವಾತಾವರಣದಲ್ಲಿ ಸುವಾಸನೆ ತುಂಬಿರುವುದು ಅಷ್ಟಕ್ಕಷ್ಟೇ ಬಿಡಿ. ಆದರೆ ಎಲ್ಲೆಲ್ಲೂ ದುರ್ವಾಸನೆಯೇ! ಚರಂಡಿ, ತಿಪ್ಪೆ, ಅವರಿವರ ಬೆವರು ಮಿಶ್ರಿತ ಸೆಂಟು, ವಾಹನಗಳ ಹೊಗೆ, ಅಕ್ಕ ಪಕ್ಕದವರ ಸೆಕೆಂಡ್ ಹ್ಯಾಂಡ್ ಸಿಗರೇಟು ಹೊಗೆ ಇವುಗಳನ್ನು ಕುಡಿಯುವುದು ತಪ್ಪಿ ನಮ್ಮ ಆರೋಗ್ಯ ಎಷ್ಟೋ ಸುಧಾರಿಸಿತ್ತು. ಮೂಗು ವಾಸನೆಯನ್ನೇ ಗ್ರಹಿಸುವ ಶಕ್ತಿ ಕಮ್ಮಿಯಾಗಿದ್ದರಿಂದ ಅದಕ್ಕೇ ನೇರ ಸಂಬಂಧ ಹೊಂದಿರುವ ನಾಲಗೆ ಮಂಕಾಗಿ ಕಂಡಕಂಡಲ್ಲಿ ಬೋಂಡ, ಬಜ್ಜಿ, ವಡೆ, ಆಂಬೊಡೆ, ಗೋಬಿ ತಿನ್ನುವ ಜಿಹ್ವಾಚಾಪಲ್ಯವೇ ಕಡಿಮೆಯಾಗಿ ಎಷ್ಟೋ ಜನರ ಬಿಪಿ, ತೂಕ ಎರಡೂ ಇಳಿದಿತ್ತು. ಕಂಡಕಂಡದ್ದನ್ನೆಲ್ಲಾ ಮೇಯುತ್ತಿದ್ದ ಮಾನವನಿಗೆ ಆಡು, ಕರುಗಳಿಗೆ ಹಾಕುವಂತೆ ಬೇಲಿ ಹಾಕಿಟ್ಟಿತ್ತು ಈ ಮಾಸ್ಕ್. ಎದುರಿರುವವರು ಎಷ್ಟೇ ಉರಿಹತ್ತಿಸುವಂತೆ ನಡೆದುಕೊಂಡರೂ ಮೂಗು ಮುರಿಯುವಂತಿರಲಿಲ್ಲ, ಎಷ್ಟೇ ಆಶ್ಚರ್ಯದ ಘಟನೆಯಾದರೂ ಮೂಗಿನ ಮೇಲೆ ಥಟ್ಟನೆ ಬೆರಳಿಟ್ಟು ಕೊಳ್ಳುವಂತಿರಲಿಲ್ಲ. ಮೀಸೆ ಬಿಟ್ಟರೆಷ್ಟು, ಬೋಳಿಸಿದರೆಷ್ಟು, ಯಾರೂ ನೋಡುವವರಿಲ್ಲ. ಮೂತಿ ತಿರುಗಿಸಿದರಂತೂ ಯಾರೂ ಕ್ಯಾರೇ ಅನ್ನುವವರಿರಲಿಲ್ಲ.. ಎಲ್ಲಾ ವರ್ತನೆಗಳೂ ಯಾರೂ ಸ್ವೀಕರಿಸದಿರುವುದರಿಂದ ನಮ್ಮ ಬಾಣ ನಮಗೇ ತಿರುಮಂತ್ರವಾಗಿ ವಾಪಸ್ ಬಂದಂತಾಗಿತ್ತು. ಇನ್ನು ಮಾಸ್ಕ್ ಹಾಕಿಕೊಂಡು ಗೊಯಗೊಯ ಅಂದರಂತೂ ಅದು ಶಬ್ಧಭೇದಿ ಬಾಣದ ಹಾಗಿರುತ್ತಿತ್ತು. ಪದೇ ಪದೇ ಬಾಯಿ ಬಿಟ್ಟು ಬಣ್ಣಗೇಡಾಗುತ್ತಿದ್ದವರೆಲ್ಲಾ ಮಾಸ್ಕ್ ದೆಸೆಯಿಂದ ಮಾನ ಉಳಿಸಿಕೊಂಡರು. ಹೀಗಾಗಿ ಮಾಸ್ಕ್ ನಮಗೆ ಮೂಗು, ಬಾಯಿಯ ಮೇಲೆ ನಿಯಂತ್ರಣ ಹೇರಿ ನಮಗೊಂದು ಶಿಷ್ಟ ನೈತಿಕತೆ ರೂಢಿಸಿದ್ದಂತೂ ಸುಳ್ಳಲ್ಲ.

’ಹಾಳು ಮುಖವಾಡ ಧರಿಸಿ ನಂಬಿಸಬೇಡ, ಮೋಸದ ಮುಖವಾಡ ಹಾಕಬೇಡ, ಕಿತ್ತೊಗೆ ಒಮ್ಮೆ ಆ ಮುಖವಾಡದ ಬದುಕನ್ನು, ನಕ್ಕು ಬಿಡು ಜಗತ್ತೇ ಬೆರಗಾಗುವಂತೆ’ ಎಂದೊಬ್ಬರು ಕವಿ ಹೇಳಿದ್ದಾರೆ. ಮೋಸದ ಮುಖವಾಡ ಎಷ್ಟು ಜನ ಕಿತ್ತೆಸೆದರೋ ಗೊತ್ತಿಲ್ಲ, ಆದರೆ ಕೊರೊನಾ ಮುಖವಾಡ ಧರಿಸಿದ ಮೇಲೆ ನಗುವಿನ ಪರಿಕಲ್ಪನೆ, ಭಾಷ್ಯ ಎಲ್ಲವೂ ಬದಲಾಯಿತು. ಎಲ್ಲರೂ ನಗುವಿನ ಬಗ್ಗೆ ಪುಂಖಾನುಪುಂಖವಾಗಿ ಭಾಷಣ ಕುಯ್ಯುತ್ತಿದ್ದರು. ನಕ್ಕರೆ 64 ಸ್ನಾಯುಗಳು ಅರಳಿ ನಮ್ಮ ಮುಖಾರವಿಂದ ಪ್ರಪುಲ್ಲವಾಗಿ ಎದುರಿಗಿದ್ದವರು ಹಾಗೇ ಫಿದಾ ಆಗ್ತಾರೆ ಅಂತ ಹೇಳುತ್ತಿದ್ದರು. ಆದರೆ ಅದಕ್ಕಿಂತ ಹೆಚ್ಚಾಗಿ ಅಟ್ಟಹಾಸ, ಪುಷ್ಠಹಾಸ (ಹಿಂದೆ ಬಡಿದುಕೊಂಡು ನಗುವುದು) ಕೇಕೆ ಹಾಕುವುದು, ಇವೇ ಹೆಚ್ಚಾಗಿತ್ತು. ಮಾಸ್ಕ್ ಬಂದ ಮೇಲೆ ಅದಕ್ಕೊಂಡು ಕಡಿವಾಣ ಬಿತ್ತು. ನಮ್ಮನ್ನು ನೋಡಿ ನಾವು ನಗುವುದು ಶ್ರೇಷ್ಠವೇ! ಆದರೆ ಇತರರನ್ನು ನೋಡಿ ನಗುವದು ಇನ್ನೂ ಶ್ರೇಷ್ಠ. ಆದರೆ ಹಾಗೆ ನಕ್ಕರೆ ಸುಮ್ಮನಿರುತ್ತಾರಾ? ಹಲ್ಲು ಉದುರಿಸಿಬಿಡುತ್ತಾರೆ. ಮಾಸ್ಕ್ ಮರೆಯಲ್ಲಿ ಎದುರಿಗಿದ್ದವನ ಎಡಬಿಡಂಗಿತನ ನೋಡಿ ಕಾಣದಂತೆ ಕಿಸಕ್ಕನೆ ನಕ್ಕು ಖುಷಿ ಪಡಬಹುದಿತ್ತು. ಈ ಹುಚ್ಚು ಜಗತ್ತನ್ನು ನೋಡಿ ಒಳಗೊಳಗೇ ನಗಬಹುದಿತ್ತು. ಹಾಗೆ ಮಾಸ್ಕಡಿ



ನಗುವುದರಿಂದ ಸದ್ಯ ಬೇರೆಯಾರೂ ನಮ್ಮನ್ನು ಹುಚ್ಚ ಎಂದು ರೆಕಗ್ನೈಸ್ ಮಾಡುವುದಿಲ್ಲ ಎಂಬ ಖಾತರಿಯೂಇತ್ತು.

ಹೆಣ್ಣುಮಕ್ಕಳ ಬಾಯಿಗೆ ಮಾಸ್ಕ್ ಸಿಗಿಸಿದ್ದರಿಂದ ಅದು ಅವರ ಪಾಲಿಗೆ ನುಂಗಲಾದ ತುತ್ತಾಗಿದ್ದೇನೋ ನಿಜ. ಅವರು ಟನ್‌ಗಟ್ಟಲೆ ಲಿಪ್‌ಸ್ಟಿಕ್ ಮೆತ್ತಿಕೊಳ್ಳಲಾಗದೆ ಅವೆಲ್ಲಾ ಫ್ರಿಜ್‌ನಲ್ಲೇ ಒಣಗಿ ಮುರುಟಿ ಹೋದವು. ಮೊದಲೇ ಮಧು ತುಂಬಿದ ಅದರಗಳಿಗೆ ಇನ್ನೊಂದೆರಡು ಕೋಟು ಲಿಪ್‌ಜೆಲ್ ಬಳಿದು ಒಂದು ತುಟಿಯಂಚಿನ ನಗು ಬಿಸಾಕಿದ್ದರೆ ಎದುರುಗಿದ್ದ ಗಂಡುಗಳು ಕೊರೋನಾ ಬಂದಂತೆ ಹಾಗೇ ಧರೆಗುರುಳುತ್ತಿದ್ದರು. ನಮ್ಮ ಖ್ಯಾತ ಕವಯತ್ರಿ ಪ್ರತಿಭಾ ನಂದಕುಮಾರ್ ಅವರಂತೂ 'ಮನದೊಳಗೊಂದು ಹೊರಗೊಂದು ಅಂತರವೆದ್ದು, ಮುಖವಾಡದ ಹುಡುಗಿಯರು ಕದ್ದು ಬರುತ್ತಾರೆ, ಅಲ್ಲೇ ಬಿಟ್ಟು ಅಂತರಾತ್ಮದ ಗುಟ್ಟು' ಎನ್ನುತ್ತಾರೆ. ಒಮ್ಮೆ ಮಾದಕವಾಗಿ ನೋಡಿ ಕೆಳ ಎಡತುಟಿ ಕಚ್ಚಿದ್ದರೆ ಅದೆಷ್ಟೋ ಹುಡುಗರು ನಿಂತಲ್ಲೇ ಕಿಚಡಿ ಆಗುತ್ತಿದ್ದರು. ಬರಿ ಕೈ ತೊಳೆದಲ್ಲ, ಸ್ಯಾನಿಟೈಸರ್ ಹಾಕಿ ಕೈ ತೊಳೆದು ಮುಟ್ಟಬೇಕು ಎನ್ನುವಂತಿದ್ದ ಹುಡುಗೀರೂ ಮುಖಕ್ಕೆ ಮಾಸ್ಕ್ ಹಾಕಿಕೊಳ್ಳುವಂತಾಗಿ ಮೊದಲೇ ನಿಗೂಢವಾಗಿದ್ದ ಹೆಣ್ಣು ಮತ್ತೂ ನಿಗೂಢವಾಗಿ ಹೋದಳು.


ಸೃಷ್ಟಿಯೇ ನಿಗೂಢ. ಹಾಗಾಗಿ ನಿಗೂಢವಾಗಿದ್ದರಲ್ಲೇ ಹೆಚ್ಚು ಆಸಕ್ತಿ, ಕುತೂಹಲ. ಮಾಸ್ಕ್ ನಮಗೆ ಈ ವಿಷಯದಲ್ಲೂ ಸೌಂದರ್ಯವನ್ನು ಎಕ್ಸ್‌ಪ್ಲೋರ್ ಮಾಡುವ ಅವಕಾಶ ಕೊಟ್ಟಿತು. ಅಲ್ಲದೆ ನಮ್ಮ ಸೌಂದರ್ಯಾನುಭೂತಿಯ ಕಲ್ಪನೆಯನ್ನು ವಿಸ್ತರಿಸಿತು. ಮೂಗು, ಬಾಯಿ ತುಟಿ, ಹಲ್ಲುಗಳು ಎಲ್ಲೆಲ್ಲಿ ಯಾವ ಯಾವ ಪ್ರಮಾಣದಲ್ಲಿರಬೇಕೋ ಹಾಗಿದ್ದರೇ ಸೌಂದರ್ಯ. ಹಾಗಾಗಿ ಒಮ್ಮೆ ಸೌಂದರ್ಯವನ್ನು ಸವಿಯುವ ಅಥವಾ ತಿರಸ್ಕರಿಸುವ ಪ್ರಕ್ರಿಯೆ ತಟ್ಟನೆ ನಡೆದು ಹೋಗುತ್ತಿತ್ತು. ಆದರೆ ಮಾಸ್ಕ್ ಅಡಿ ಈ ಮೂಗು, ತುಟಿ, ಬಾಯಿ, ಹಲ್ಲುಗಳೆಲ್ಲಾ ಅವಿತು ಕುಳಿತು ಕಣ್ಣೆರಡು ಕಮಲಗಳಂತೆ ಮುಖದ ತುಂಬಾ ಹೊಳೆಯುತ್ತಿದ್ದಾಗ ನಮ್ಮ ಭಾವನೆ, ಪ್ರತೀಕ್ಷೆ, ಕಲ್ಪನೆಗಳೆಲ್ಲಾ ಎತ್ತರೆತ್ತರಕ್ಕೆ ಉದ್ದೀಪನಗೊಳ್ಳುತ್ತಿದ್ದವು. ಮುಚ್ಚಿಟ್ಟಿರುವುದರಲ್ಲೇ ಅನನ್ಯ ಕುತೂಹಲ, ಆಸಕ್ತಿ. 'ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ' ಎಂಬಂತೆ ಈ ಸೌಂದರ್ಯಕ್ಕೂ ನಾವು ಪರ ವಾರಸುದಾರರು ಎಂಬ ಆತ್ಮವಿಶ್ವಾಸವಿತ್ತು. ಸೌಂದರ್ಯದ ಹಂಬಲವೋ, ಚಾಪಲ್ಯವೋ ಅಥವಾ ನಮ್ಮಜೀನ್ ಮ್ಯಾಪಿನ ರೂಢಿಗತ ಸ್ವಭಾವವೋ ನಮಗೆ ಸೌಂದರ್ಯಾರಾಧನೆಯ ಪರಾಕಾಷ್ಠೆಯ ನಿರೀಕ್ಷೆಯೇ ಹೆಚ್ಚು. ಹೀಗಾಗಿ ಮುಚ್ಚಿದೆಲ್ಲಾ ಮಾಸ್ಕುಗಳಡಿ ತೊಂಡೆ ಹಣ್ಣಿನ ತುಟಿ, ಸಂಪಿಗೆ ಮೂಗು, ನೀಳ ನಾಸಿಕವೇ ಇರಬಹುದು ಎಂಬ ಬೆಚ್ಚನೆಯ ಭಾವನೆ ಪುಳಕ ಮೂಡಿಸುತ್ತಿತ್ತು. ಕೊಂಕು ನಗು, ಮುಗುಳ್ನಗು, ಮಲ್ಲಿಗೆ ಚೆಲ್ಲಿದ ನಗು, ತಾವರೆ ಅರಳಿದ ನಗು, ದಾಳಿಂಬೆ ಬಿರಿದ ನಗು ಮೊದಲಾಗಿ ಕೆ.ಎಸ್.ನಅವರು ಬಣ್ಣಿಸಿದ ಹೆಣ್ಣಿನ ನಗೆಯೆಲ್ಲಾ 'ಮೋಡದ ಮರೆಯ ಚಂದಿರನಂತೆ 'ಮಾಸ್ಕ್ ಹಿಂದೆ ಅವಿತು ಕುಳಿತು ಲಾಸ್ಯವಾಡುತ್ತಿವೆಯೇನೋ ಎನಿಸುತ್ತಿತ್ತು.. 'ಓ ಮಾಸ್ಕೇ, ಒಮ್ಮೆ ಸರಿದು ಕೆಳಗೆ ಇಳಿಯಬಾರದೇ?' ಎಂದು ಪರಿತಪಿಸುತ್ತಾ ಸದಾ ಹೆಂಗೆಳೆಯರ ಅಧರಾಮೃತವನ್ನು ಅನವರತ ಸವಿಯುವ ಮಾಸ್ಕ್ ನಾನಾಗಬಾರದೇ ಎನಿಸುತ್ತಿತ್ತು.



ಆಗಂತೂ ಮೂಗು ಬಾಯಿಯ ಕೆಲಸವನ್ನು ಕಣ್ಣೇ ಮಾಡಬೇಕಿತ್ತು. ಹೇಳುವುದು ಕೇಳುವುದು ಎಲ್ಲಾ ಕಣ್ಸನ್ನೆಯಲ್ಲೇ ನಡೆಯಬೇಕಿತ್ತು. ಯಾರನ್ನಾದರು ಕಣ್ಣು ನೋಡೇಗುರುತು ಹಿಡಿಯಬೇಕು. ಕಣ್ಣಲ್ಲೇ ಮೆಚ್ಚುಗೆ ವ್ಯಕ್ತಪಡಿಸಬೇಕು, ಕಣ್ಣಲ್ಲೇ

ಬಯ್ಯಬೇಕು (ಇದೂ ಒಂಥರಾ ಬಯ್ಯೋ ಮೆಟ್ರಿಕ್ ವಿಧಾನ!) ಸಕಲ ಭಾವನೆಗಳೂ ಕಣ್ಣಲ್ಲೇ ಭೋರ್ಗರೆಯಬೇಕು. ಸಾಮಾಜಿಕ ಅಂತರ ಬೇರೆ ಇದ್ದುದರಿಂದ ಈ ಭಾವನೆಗಳೂ ಅಸ್ಪಷ್ಟವೇ! ಅದನ್ನು ಗುರುತಿಸುವುದೂ ಕಷ್ಟವೇ ಆಗಿತ್ತು. ಹೆಂಡತಿಯ ಕಣ್ಣಿನ ಭಾಷೆಗಷ್ಟೇ ರೂಢಿಯಾಗಿದ್ದ ನಮಗೆ ಸಾರ್ವತ್ರಿಕ ಕಣ್ಣಿನ ಸಂವಹನವನ್ನು ಕಲಿಸಿದ್ದೇ ಮಾಸ್ಕ್!

ಇಷ್ಟೆಲ್ಲಾ ಮಾಡಿದ ಮಾಸ್ಕ್ ಬಗ್ಗೆ ನಮಗೆ ಕೃತಜ್ಞತೆಯೇ ಇಲ್ಲ. ಗುಟುಕು ಅನ್ನವನಿತ್ತವನನ್ನು ಸದಾ ಸ್ಮರಿಸಬೇಕಂತೆ. ಅಂತದ್ದರಲ್ಲಿ ಗೊಟಕ್ ಎನ್ನುವಂತಿದ್ದ ನಮ್ಮನ್ನು ಉಳಿಸಿದ ಮಾಸ್ಕ್‌ಗೆ ನಾವು ಒಂದಿಷ್ಟು ಋಣಿಯಾಗಿರಬಾರದೇ? ತಾನು ವೈರಸ್‌ಗೆ ಎದೆಯೊಡ್ಡಿ ನಮ್ಮಜೀವ ಉಳಿಸಿದ ಮಾಸ್ಕ್ ಬಗ್ಗೆ ಎಳ್ಳಷ್ಟೂ ಸ್ಮರಣೆ ಇಲ್ಲದಿರುವುದೇ ಮನುಷ್ಯನ ಆತ್ಮವಂಚನೆಗೆ ಸಾಕ್ಷಿ. ಉಪಯೋಗಿಸದ ಕಾಲು ಚೀಲಗಳು, ವೇಲುಗಳು, ಚಡ್ಡಿ, ಬನಿಯನ್, ಲೋಯರ್‌ಗಳು ಮನೆ ತುಂಬಾ ಎಲ್ಲಂದರಲ್ಲಿ ಬಿದ್ದಿರುತ್ತವೆ. ಈ ಜೀವ ಉಳಿಸಿದ ಮಾಸ್ಕ್‌ಗಳಿಗೆ ಸೀರೆಗಳ ಸಂದಿಯೋ, ಹ್ಯಾಂಗರ್ ಒಳಗೋ, ಚೂಡಿ ಸಲ್ವಾರ್‌ಗಳ ಅಡಿಯಲ್ಲೋ ನೇತಾಡಿಸಿ ಕೃತಕೃತ್ಯತೆ ಮರೆಯುವಒಂದು ಸೌಜನ್ಯ ಬೇಡವೇ? ಜೀವ ಉಳಿಸಿದ ಮಾಸ್ಕ್ ಧರಿಸಿ ರಾಜಕೀಯ ಯಾತ್ರೆ ಮಾಡ್ತೀನಿ ಎಂದು ಯಾವ ನಾಯಕನೂ ಹೇಳಲಿಲ್ಲ. ಮಾಸ್ಕ್ ಕಟ್ಟಿಕೊಂಡು ತಿರುಪತಿಗೆ ಪಾದಯಾತ್ರೆ ಮಾಡ್ತೀನಿ ಎಂದು ಯಾವ ಭಕ್ತನೂ ಮೇಲೇಳಲಿಲ್ಲ. ಮನುಕುಲವನ್ನೇ ಉಳಿಸಿದೆ ಎಂದು ಯಾರೂ ತಿಮ್ಮಪ್ಪನಿಗೆ ಒಂದು ಚಿನ್ನದ ಮಾಸ್ಕನ್ನು ಮಾಡಿಸಿಕೊಡುವ ಹರಕೆಯ ರಿಸ್ಕ್ ತೆಗೆದುಕೊಳ್ಳಲಿಲ್ಲ. ಯಾರೊಬ್ಬರೂ ಈ ಬಡಪಾಯಿ ಮಾಸ್ಕ್‌ಗಾಗಿ ಮಾಸ್ಕಮ್ಮನ ಗುಡಿಕಟ್ಟಿಸಲಿಲ್ಲ, ಮಾಸ್ಕಪ್ಪನ ಪರಿಶೆ, ಜಾತ್ರೆ ಮಾಡಲಿಲ್ಲ. ನಮ್ಮ ಪುರಾಣಗಳಲ್ಲಿ ರಾಕ್ಷಸರ ವಧೆ ಮಾಡಿ ಶಿಷ್ಟರನ್ನು ರಕ್ಷಿಸಿದ ರಾಮ, ಕೃಷ್ಣ ಮೊದಲಾದ ಅವತಾರ ಪುರುಷಗಳನ್ನು ಆರಾಧಿಸುತ್ತೇವೆ. ಅಂತೆಯೇ ಅವರ ಆಯುಧಗಳಾದ ಬಾಣ, ಗದೆ, ಚಕ್ರ, ತ್ರಿಶೂಲ ಮುಂತಾದವುಗಳನ್ನು ಸಾಂಕೇತಿಕವಾಗಿ ಮನೆಯಲ್ಲಿಟ್ಟು ಪೂಜೆ ಮಾಡುತ್ತೇವೆ. ಹಾಗೆ ಯಾರೂ ಮಾಸ್ಕನ್ನು ಮನೆಯಲ್ಲಿಟ್ಟು ಜೀವ ಉಳಿಸಿದ ವಸ್ತು ಎಂದು ಪೂಜೆ ಮಾಡಿದ್ದನ್ನು ನಾನಂತೂ ಕಾಣಲಿಲ್ಲ. ಅದಕ್ಕೆಂದೇ ಒಂದು ದಿನ ನಿಗದಿಪಡಿಸಿ ಮಾರ್ಣೋಮಿ, ಪಿತೃಪಕ್ಷದಲ್ಲಿ 'ಮಾಸ್ಕ್ ನವಮಿ' ಎಂದು ಯಾರೂ ಆಚರಣೆಗೆ ತರಲಿಲ್ಲ. ಕನಿಷ್ಠ ಆಯುಧ ಪೂಜೆಯಲ್ಲೋ, ದಸರ ಬೊಂಬೆಗಳ ಜೊತೆಯಲ್ಲೋ ಒಂದು ಮಾಸ್ಕ್ ಇಡುವ ಔದಾರ್ಯ ನಮಗಿಲ್ಲ. ನಮ್ಮ ಘನಸರ್ಕಾರಗಳು ಮಾಸ್ಕ್‌ಗಳ ಒಂದು ಸ್ಟಾಂಪನ್ನೋ, ನಾಣ್ಯವನ್ನೋ ಬಿಡುಗಡೆ ಮಾಡಲಿಲ್ಲ. ಭೀಮ, ಅರ್ಜುನರು ತಮ್ಮ ರಥಕ್ಕೆ ಕಟ್ಟಿದ ಸಿಂಹ, ಕಪಿ ಧ್ವಜಗಳಂತೆ ಮಾಸ್ಕನ್ನು ಯಾರೂ ತಮ್ಮ ಕಾರು, ಗಾಡಿಗಳಿಗೆ ಲಾಂಚನವಾಗಿ ಬಳಸಲಿಲ್ಲ. ಹಾಗೇ ಈ ಮಾಸ್ಕ್ ಹೆಸರಿನಲ್ಲಿ ಒಂದು ಎರಾ ಅಂದರೆ ಕ್ರಿಸ್ತಶಕೆ, ಶಾಲಿವಾಹನ ಶಕೆ ತರ ಮತ್ತೊಂದು ಮಾಸ್ಕ್ ಶಕೆಯನ್ನೇ ಪ್ರಾರಂಭಿಸಬಹುದಿತ್ತು. ಮಾಸ್ಕ್ ಹಾಕಲು ಪ್ರಾರಂಭಿಸಿದ ನಂತರ ಹುಟ್ಟಿದ ಮಕ್ಕಳು ಆಫ್ಟರ್ ಮಾಸ್ಕ್ (ಎಂಎಂ) ಎಂದೂ, ಮಾಸ್ಕ್ ಹಾಕುವ ಮುಂಚೆ ಹುಟ್ಟಿದ ಮಕ್ಕಳು ಬಿಎಂ (ಬಿಫೋರ್ ಮಾಸ್ಕ್) ಎಂದು ಮಾಡಿ ಮಾಸ್ಕನ್ನು ಇತಿಹಾಸ ಪುರುಷ/ಸ್ತ್ರೀಯನ್ನಾಗಿಸಬಹುದಿತ್ತು. ಈವರೆಗೆ ಅದೂ ಆಗಿಲ್ಲ.



ಇದೆಲ್ಲಾ ಹಾಗಿರಲಿ, ಅಕಸ್ಮಾತ್ ಈಗ ಅಪರೂಪಕ್ಕೆಯಾರಾದರೂ ಮೂತಿಗೆ ಮಾಸ್ಕ್ ಸಿಕ್ಕಿಸಿಕೊಂಡು ಹೋದರೆ ಅವರಕತೆ ಮುಗಿದು ಹೋಯಿತು. ಅದಕ್ಕಿಂತ ದೊಡ್ಡ ನಗೆಪಾಟಲಿನ ಸಂಗತಿ ಇನ್ನೊಂದಿಲ್ಲ. ಅನ್ಯಗ್ರಹದ ಜೀವಿಯೆಂಬಂತೆ, ಪರಮ

ಅಸ್ಪೃಶ್ಯನೆಂಬಂತೆ ನೋಡುತ್ತಾರೆ. ಅಂಜುಕುಳಿ, ಹೆದರು ಪುಕ್ಕಲ, ರೋಗಿಷ್ಟ, ಎಂದು ಕಿಚಾಯಿಸಿ ಲೇವಡಿ ಮಾಡುತ್ತಾರೆ. ಇದು ಆ ಮಹಾ ಮಾಸ್ಕ್‌ಗೆ ಮಾಡುವ ಅವಮಾನವಲ್ಲವೇ? ಇಷ್ಟು ಸಾಲದೆಂಬಂತೆ ಮನುಷ್ಯನ ಕೃತಘ್ನತೆಯ ಮಟ್ಟ ಎಲ್ಲಿಗೆ ಮುಟ್ಟಿದೆಯೆಂದರೆ ತನ್ನಜೀವ ಉಳಿಸಿದ ಅಮೂಲ್ಯ ವಸ್ತು ಎನ್ನುವುದನ್ನೂ ಮರೆತು ಅದರ ವಿರುದ್ಧ ಕತ್ತಿಮಸೆಯುತ್ತಾ ಹೋರಾಟ ಮಾಡುವುದು. ಪಾಪ! ಮಾಸ್ಕ್ ಜೀವ ಉಳಿಸಲು ಮೂತಿಗಂಟಿ ಕುಳಿತಿದ್ದೇ ಮಹಾಪರಾಧವಾಯ್ತು. ಬ್ರಿಟನ್, ಅಮೇರಿಕಾಗಳಲ್ಲಿ 'ನನ್ನದೇಹದ ಮೇಲೆ ನನಗೆ ಹಕ್ಕು' ಎಂದು ಮಾಸ್ಕ್ ವಿರುದ್ಧ ಭಾರೀ ಪ್ರತಿಭಟನೆಯೇ ನಡೆಯಿತು. ಮಾಸ್ಕ್‌ಧರಿಸುವ ನಿರ್ಬಂಧ ತೆಗೆದ ದಿನವನ್ನು ಸ್ವಾತಂತ್ರ್ಯ ದಿನದಂತೆ ಸಂಭ್ರಮಿಸಿ ಹುಚ್ಚೆದ್ದು ರಸ್ತೆ ರಸ್ತೆಗಳಲ್ಲಿ ಜನಕುಣಿದರು. ಪಾಪ! ಆ ಮಾಸ್ಕ್‌ಗಳಿಗೆ ಎಷ್ಟು ನೋವಾಯಿತೋ ಏನೋ? ತನ್ನ ಜೀವನವನ್ನು ಸಾರ್ಥಕ ಮಾಡಿಕೊಂಡ ಆತ್ಮತೃಪ್ತಿಯೊಂದಿಗೆ ಜೀರ್ಣಗೊಂಡ ಮಾಸ್ಕ್‌ಗಳಿಗೆ ನಾವೊಂದು ದೀಪ ಹಚ್ಚಿ ಕೃತಜ್ಞತೆ ಹೇಳುವುದು ಬೇಡವೆ? ಹೇಗೋ ಇನ್ನೊಂದು ಜನ್ಮವಿದ್ದರೆ ನಾನು ಮಾಸ್ಕಾಗಿ ಜೀವಗಳನ್ನು ಕಾಪಾಡಬೇಕು, ಚಾರ್ಲ್ಸ್‌ರಸಲ್‌ನ ಮಾಸ್ಕ್ ಸಿನಿಮಾದಲ್ಲಿ ನಡೆಯುವ ಹಾಗೆ ಮಾಸ್ಕ್ ಹಾಕಿಕೊಂಡೊಡನೆ ಪರಿವರ್ತನೆ (ಟ್ರಾನ್ಸ್‌ಫಾರಮ್) ಆಗಿ ಇಡೀ ಪ್ರಪಂಚದ ವೈರಸ್ ಭಸ್ಮ ಮಾಡುವ 'ಮಿರಾಕಲ್ ಮಾಸ್ಕ್' ಆಗಬೇಕು ಎನಿಸಬಾರದೇ? "ವ್ಯರ್ಥವೀಜೀವನದ ಬಡಿದಾಟವೆನ್ನದಿರು! ಅರ್ಥವಹುದು ನಿನಗೆ ಪೂರ್ಣ ದರ್ಶನದಿಂ! ನರ್ತಿಪನು ಜಡಜೀವ ರೂಪಂಗಳಲಿ ಬೊಮ್ಮ! ಪೂರ್ತಿಯಿದ ನರಿಯೆ ಸೊಗ–ಮಂಕುತಿಮ್ಮ!" ಎಂಬ ಮಾತಿನಂತೆ ಚೀನಾ ಎಂಬ ನಮ್ಮ ಬಗಲಲ್ಲೇ ವೈರಸ್ ತಾಂಡವ ವಾಡುತ್ತಿರುವಾಗ ಆ ಬೊಮ್ಮ ಜಡ ಮಾಸ್ಕ್ ರೂಪದಲ್ಲಿ ಶಿವತಾಂಡವ ಗೈದು ಕೊರೋನಾಸುರನನ್ನು ಸಂಹರಿಸಿ ನಮ್ಮನ್ನು ರಕ್ಷಿಸಿದ್ದಾನೆಂಬ ಕೃತಕೃತ್ಯತೆ ನಮಗೆ ಬೇಕಲ್ಲವೇ? ■

